# ಅಧ್ಯಾಯ-೦೯

# ಆಡಳಿತ



ಪ್ರಸ್ತುತ ಜಾರಿಯಲ್ಲಿರುವ ಅನೇಕ ಆಡಳಿತ ಸಂಸ್ಥೆಗಳು ಸಾಮಾನ್ಯವಾಗಿ ಪ್ರಾಚೀನ ಕಾಲದಿಂದಲೂ ಜಾರಿಯಲ್ಲಿರುವ ಪದ್ಧತಿಗಳ ಮುಂದುವರಿಕೆಯಾಗಿದೆ. ಪ್ರಾಚೀನ ಭಾರತದಲ್ಲಿ, ಅಂದರೆ ವೇದಗಳ ಕಾಲದಿಂದಲೂ ಹಿಂದೂ ಆಡಳಿತ ಪದ್ಧತಿಗಳನ್ನು ಅಧ್ಯಯನ ಮಾಡಿದರೆ ಅನೇಕ ಆಡಳಿತ ಸಂಸ್ಥೆಗಳ ಪರಿಚಯವಾಗುತ್ತದೆ. ಕೌಟಿಲ್ಯನ ಅರ್ಥಶಾಸ್ತ್ರ, ಮನುವಿನ-ಮನುಸ್ಮೃತಿ, ಕಮಂಡಕನ ನೀತಿಶಾಸ್ತ್ರ, ವರಾಹಮಿಹಿರನ ಬೃಹತ್ ಸಂಹಿತಾ ಹಾಗೂ ಮುದ್ರಾಮಂಜೂಷಗಳಲ್ಲಿ ನಿರೂಪಿಸಿರುವ ಪ್ರಾಚೀನಭಾರತದಆಡಳಿತವ್ಯವಸ್ಥೆಗಳನ್ನುಪರಿಶೀಲಿಸಿದರೆಅವುಗಳ ಅನಾದಿಕಾಲದ ಮುಂದುವರಿಕೆಯು ಸ್ವಯಂವೇದ್ಯವಾಗುತ್ತದೆ. ಭಾರತದಲ್ಲಿದ್ದಂತಹ ಆಡಳಿತ ವ್ಯವಸ್ಥೆಯು ಕರ್ನಾಟಕದಲ್ಲೂ ಪ್ರಾಚೀನಕಾಲದಿಂದ ಮುಂದುವರೆದಿರುವುದು ವ್ಯಕ್ತವಾಗುತ್ತದೆ. ಕರ್ನಾಟಕದಲ್ಲಿ ಲಭ್ಯವಿರುವ ೧೨೦೦ ವರ್ಷಗಳ ಹಿಂದಿನ ಶಾಸನಗಳಲ್ಲಿ ವ್ಯಕ್ತವಾಗಿರುವ ಮುಖ್ಯ ಆಡಳಿತ ಘಟಕವಾದ 'ನಾಡು' ಬಗ್ಗೆ ಹಲವಾರು ಉಲ್ಲೇಖಗಳಿವೆ.

ಸಾಮಾನ್ಯವಾಗಿ ಒಂದು ನಾಡಿನಲ್ಲಿ ೧೨ ರಿಂದ ೩೦ ಹಳ್ಳಿಗಳು ಇರುತ್ತಿದ್ದವು. ಉದಾಹರಣೆಗೆ ಕಿಸುವೊಳಲ್-೦೬, ಮುಳುಗುಂದ-೧೨, ಹೊನ್ನತ್ತಿ-೧೨, ಕೋಳನೂರು-೩೦, ನವಿಲುಗುಂದ-೩೦, ಮೊದಲಾದ ಆಡಳಿತ ವಿಭಾಗ (ನಾಡು)ಗಳ ಬಗ್ಗೆ ಉಲ್ಲೇಖಗಳನ್ನು ಪ್ರಾಚೀನ ಶಾಸನಗಳಲ್ಲಿ ಗುರುತಿಸಲಾಗಿದೆ. ಇದಲ್ಲದೆ, ಅತ್ಯಂತ ದೊಡ್ಡ ಆಡಳಿತ ಘಟಕಗಳಾದ ನಾಗರಖಂಡ-೭೦, ರಟ್ಟಪಳ್ಳಿ-೭೦, ಹಾನುಂಗಲ್-೫೦೦, ಪುರಿಗೆರೆ-೩೦೦ ಬೆಳ್ವೊಲ-೩೦೦, ತರ್ದವಾಡಿ-೧೦೦೦, ಮತ್ತು ಕುಹುಂಡಿ-೩೦೦೦ ಇತ್ಯಾದಿ ವಿಭಾಗಗಳನ್ನೂ ಗುರುತಿಸಲಾಗಿದೆ. ಸುಮಾರು ೧೨ಕ್ಕೂ ಮೀರಿ ಪ್ರಾಂತಗಳನ್ನೊಳಗೊಂಡ ಬನವಾಸಿ-೧೨,೦೦೦, ನೊಳಂಬವಾಡಿ-೩೨,೦೦೦ ಮತ್ತು ಗಂಗವಾಡಿ-೯೬,೦೦೦ ಎಂಬ ಬೃಹದಾಕಾರದ ಆಡಳಿತ ಕೇಂದ್ರಗಳು ಅಸ್ತಿತ್ವದಲ್ಲಿದ್ದವೆಂದು ಶಾಸನಗಳಿಂದ ವೇದ್ಯವಾಗುತ್ತದೆ.

ಪ್ರಾಚೀನ ಕಾಲದಲ್ಲಿ ರಾಜ ಮನೆತನಗಳು ಆಳ್ವಿಕೆ ಮಾಡುತ್ತಿದ್ದಾಗ ಸಾಮ್ರಾಜ್ಯವನ್ನು 'ಮಹಾರಾಷ್ಟ್ರ' (ವಲಯಗಳು) ಮತ್ತು ರಾಷ್ಟ್ರಗಳು ಅಥವಾ ದೇಶಗಳು ಅಥವಾ ಮಂಡಲಗಳು ಮತ್ತು ಪ್ರಾಂತಗಳನ್ನಾಗಿ ವಿಭಜಿಸಲಾಗುತ್ತಿತ್ತು. ಈ ರೀತಿಯ ಕೇಂದ್ರೀಕೃತ ಆಡಳಿತದ ಬಗ್ಗೆ ಹಲವಾರು ಸಾಹಿತ್ಯಿಕ ಮತ್ತು ಶಾಸನೋಕ್ತ ಉಲ್ಲೇಖಗಳಿರುವುದು ಸ್ವಯಂವೇದ್ಯವಾಗುತ್ತದೆ. ಸಾಮಾನ್ಯವಾಗಿ ಪ್ರಾಂತಗಳನ್ನು 'ನಾಡು' ಅಥವಾ 'ವಿಷಯ'ಗಳನ್ನಾಗಿ ಪುನರ್ ವಿಂಗಡಿಸಲಾಗುತ್ತಿತ್ತು. ಇವುಗಳ ಕೆಳಗೆ ಜಿಲ್ಲೆಗಳು (ಮಹಲ್‌ಗಳು), ಮತ್ತು ಮಹಲ್‌ಗಳನ್ನು ಹಲವಾರು ಗ್ರಾಮಗಳಾಗಿ ವಿಭಜಿಸಲಾಗಿತ್ತು. ಪ್ರತಿಯೊಂದು ಪ್ರಾಂತದಲ್ಲಿ ಆಡಳಿತ ನಿರ್ವಹಣೆಗೆ ಒಬ್ಬ ವೈಸರಾಯ್ ಅಥವಾ ರಾಜ್ಯಪಾಲರನ್ನು ನೇಮಿಸಲಾಗುತ್ತಿತ್ತು. ಹಲವು ವೇಳೆ ಈ ನೇಮಕಗಳು ವಂಶ ಪಾರಂಪರ್ಯವಾಗಿದ್ದವು. ಜಿಲ್ಲೆ ಅಥವಾ ಮಹಲ್‌ಗಳಲ್ಲಿ ಅಧಿಕಾರಿಗಳನ್ನು ನೇಮಿಸಿ ಅವರಿಗೆ ಆಡಳಿತಾತ್ಮಕ ಅಧಿಕಾರಗಳನ್ನು ನೀಡಲಾಗುತ್ತಿತ್ತು. ಹಿಂದೂ ಸಂಪ್ರದಾಯದಂತೆ ಗ್ರಾಮಗಳ ಆಡಳಿತವನ್ನು 'ಗೌಡ' ಅಥವಾ 'ಪಟೇಲ'ನ ಹಸ್ತದಲ್ಲಿ ಕೇಂದ್ರೀಕರಿಸಿ ಆತನಿಗೆ ಉತ್ತಮ ಸಲಹೆಗಳನ್ನು ನೀಡಲು ಹಿರಿಯ ಪ್ರಜೆಗಳನ್ನೊಳಗೊಂಡ 'ಗ್ರಾಮಕೂಟ'ವನ್ನು ರಚಿಸಲಾಗಿತ್ತು.

ಸಾಮಾನ್ಯವಾಗಿ ಗ್ರಾಮದ ಗೌಡ ಅಥವಾ ಪಟೇಲರು ಈಗಿನ ಪೊಲೀಸ್ ಕರ್ತವ್ಯಗಳನ್ನು ನಿರ್ವಹಿಸಬೇಕಾಗುತ್ತಿತ್ತು. ಕಂದಾಯ ದಾಖಲೆಗಳನ್ನು ತಯಾರಿಸುವುದು, ಪರಿಪಾಲಿಸುವುದು, ಶಾನುಭೋಗ ಅಥವಾ ಸೇನಬೋವ ಅಥವಾ ಕುಲಕರ್ಣಿಗಳ (ಗ್ರಾಮಕರಣಿಕ ಅಥವಾ ಗುಮಾಸ್ತ) ಮುಖ್ಯ ಕಾರ್ಯವಾಗಿತ್ತು. ಈ ಹುದ್ದೆಗಳ ಬಗ್ಗೆ ಕರ್ನಾಟಕದ ಹಲವಾರು ಶಾಸನಗಳಲ್ಲಿ ಪದೇ ಪದೇ ಉಲ್ಲೇಖಿಸಲಾಗಿದೆ. ಕಂದಾಯ ದಾಖಲೆಗಳನ್ನು 'ಕಡತ' ಎಂದು ಕರೆಯಲಾಗಿದ್ದು, ಅದನ್ನು ನಿರ್ವಹಿಸುವ ಅಧಿಕಾರಿಗೆ 'ಕಡತವೆರ್ಗಡೆ' ಎಂದು ಕರೆಯಲಾಗುತ್ತಿತ್ತು.

ರಾಷ್ಟ್ರದ ಮುಖ್ಯ ಆಡಳಿತವು ಪ್ರಧಾನವಾಗಿ ಕಂದಾಯ ವ್ಯವಸ್ಥೆ ಅಥವಾ ಆಡಳಿತದ ತಳಹದಿಯ ಮೇಲೆ ನಿರ್ಮಿತವಾಗಿರುವುದು ವ್ಯಕ್ತವಾಗುತ್ತದೆ. ಗ್ರಾಮದ ಮುಖ್ಯಸ್ಥನಿಗೆ ಆತನ ಆಡಳಿತದಲ್ಲಿ ಸಹಾಯಕವಾಗಲು ತೋಟಿಗಳು, ತಳಾರಿಗಳು ಅಥವಾ ತಲಾಟಿಗಳು ಅಥವಾ ಉಗ್ರಾಣಿಗಳು ಎಂದು ಕರೆಯಲ್ಪಡುವ ಅಧಿಕೃತ ಸಿಬ್ಬಂದಿಯೊಬ್ಬ ಮುಖ್ಯ ಸಹಾಯಕನಾಗಿರುತ್ತಿದ್ದ.

ಈ ಆಡಳಿತ ವ್ಯವಸ್ಥೆ ಬ್ರಿಟಿಷ್ ಆಡಳಿತಾವಧಿಯಲ್ಲೂ ಮುಂದುವರೆದುದು ಕಂಡುಬರುತ್ತದೆ. ಮುಂಬೈ ಕರ್ನಾಟಕ ಮತ್ತು ಮದರಾಸ್ ಕರ್ನಾಟಕ ಪ್ರಾಂತಗಳಲ್ಲಿ ಜಿಲ್ಲೆಯ ಅಧಿಕಾರಿಯನ್ನು ಕಲೆಕ್ಟರ್‌ಗಳೆಂದು ಕರೆಯುವುದು ರೂಢಿಯಲ್ಲಿತ್ತು. ಅದೇ ರೀತಿ ಮುಂಬಯಿ ಪ್ರಾಂತದಲ್ಲಿ ತಾಲೂಕಿನ ಅಧಿಕಾರಿಗಳಿಗೆ 'ಮಾಮ್ಲತ್‌ದಾರ್' ಅಥವಾ 'ತಹಸೀಲ್ದಾರ್'ಗಳೆಂದು ಕರೆಯಲಾಗುತ್ತಿತ್ತು. ಈ ಮಾಮ್ಲತ್‌ದಾರರಿಗೆ ಹಲವಾರು ಕಂದಾಯ ಗ್ರಾಮಗಳನ್ನೊಳಗೊಂಡ ಕಂದಾಯ ವೃತ್ತಗಳನ್ನು ಆಡಳಿತದ ನಿರ್ವಹಣೆಗಾಗಿ ನೀಡಲಾಗಿತ್ತು.

ಸಾಮಾನ್ಯವಾಗಿ ಗ್ರಾಮದ ಮುಖ್ಯಸ್ಥ ಹಾಗೂ ಇತರ ಕಂದಾಯಾಧಿಕಾರಿಗಳನ್ನು ವಂಶ ಪಾರಂಪರ್ಯವಾಗಿ ನೇಮಿಸುವ ಪದ್ಧತಿಯು ಬ್ರಿಟಿಷರ ಕಾಲದ ಲೂ ಮುಂದುವರೆದುದು ಸ್ವಾಭಾವಿಕವಾಗಿ ವ್ಯಕ್ತವಾಗುತ್ತದೆ. ಹಳೆಯ ಮೈಸೂರು ಪ್ರಾಂತದಲ್ಲಿ ಟಿಪ್ಪು ಸುಲ್ತಾನನ ನಿಧನಾನಂತರ ಮುಮ್ಮಡಿ ಕೃಷ್ಣರಾಜ ಒಡೆಯರ ಆಡಳಿತದ ಪರಿಣಾಮವಾಗಿ ಕ್ರಿ.ಶ. ೧೮೩೧ರಲ್ಲಿ ಬ್ರಿಟಿಷ್ ಸರ್ಕಾರವು ಕಮೀಷನರ್‌ಗಳ ಆಡಳಿತವನ್ನು ಜಾರಿಗೆ ತರುವುದರ ಮೂಲಕ ಕ್ರಮೇಣ ಆಡಳಿತದ ಸೂತ್ರವನ್ನು ತನ್ನ ಹತೋಟಿಗೆ ತೆಗೆದು ಕೊಂಡಿತು. ಕಮೀಷನರ್‌ಗಳ ಆಳ್ವಿಕೆಯಲ್ಲಿಯೂ (೧೮೩೧ – ೧೮೮೧) ಮೈಸೂರು ಪ್ರಾಂತದ ಆಡಳಿತ ವ್ಯವಸ್ಥೆಯಲ್ಲಿ ಪ್ರಥಮ ಬಾರಿಗೆ ಹಲವಾರು ಸುಧಾರಣೆಗಳೊಂದಿಗೆ ಆಧುನೀಕರಣಗೊಳಿಸುವ ಪ್ರಯತ್ನಗಳು ನಡೆದುದು ವ್ಯಕ್ತವಾಗುತ್ತವೆ. ಈ ಅವಧಿಯನ್ನು ಆಡಳಿತದ ಇತಿಹಾಸದಲ್ಲಿ ಅತ್ಯಂತ ಪ್ರಮುಖ ಘಟ್ಟವೆಂದು ಪರಿಗಣಿಸಲಾಗಿದೆ. ಮಹಾರಾಜರ ಹಲವಾರು ಅಹವಾಲುಗಳ ಕಾರಣದಿಂದಾಗಿ ಬ್ರಿಟಿಷ್ ಸರ್ಕಾರವು ಮೈಸೂರು ಪ್ರಾಂತದ ಆಡಳಿತವನ್ನು ಪುನಃ ಮಹಾರಾಜರಿಗೆ ಹಸ್ತಾಂತರಿಸಿತು. ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯಲ್ಲಿ ದಿವಾನರುಗಳ ಆಡಳಿತವನ್ನು ಪುನಃ ಜಾರಿಗೆ ತರಲಾಯಿತು. ಸಿ. ರಂಗಾಚಾರ್ಲು ಅವರಿಂದ ಆರಂಭಿಸಿ ೧೯೪೮ರ ವರೆವಿಗೂ ಹಲವಾರು ದಿವಾನರು ಮೈಸೂರು ಪ್ರಾಂತ್ಯದ ಆಡಳಿತವನ್ನು ಆಧುನೀಕರಣಗೊಳಿಸಲು ಪ್ರಯತ್ನಿಸಿದ ಬಗ್ಗೆ ಹಲವಾರು ದಾಖಲೆಗಳಿವೆ.

ದಿನಾಂಕ ೦೧-೦೮-೧೯೮೭ರ ವರೆಗೆ ಕರ್ನಾಟಕದಲ್ಲಿ ನಾಲ್ಕು ಆಡಳಿತದ ವಿಭಾಗಗಳು ಅಸ್ತಿತ್ವದಲ್ಲಿದ್ದವು. ಅವುಗಳೆಂದರೆ ಕಲಬುರಗಿ, ಬೆಳಗಾವಿ, ಮೈಸೂರು ಮತ್ತು ಬೆಂಗಳೂರು. ಇವಲ್ಲದೆ ೧೯ ಜಿಲ್ಲೆಗಳು ೪೯ ಉಪ ವಿಭಾಗಗಳು ಮತ್ತು ೧೭೫ ತಾಲೂಕುಗಳು ಅಸ್ತಿತ್ವದಲ್ಲಿದ್ದವು. ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು ಹೊಸದಾಗಿ ಸೃಜಿಸಿದ ಕಾರಣ ೧೯ ಜಿಲ್ಲೆಗಳಿಗೆ ಬದಲಾಗಿ ೨೦ ಜಿಲ್ಲೆಗಳು ಅಸ್ತಿತ್ವಕ್ಕೆ ಬಂದವು. ಹಳೆಯ ಮೈಸೂರು ಪ್ರಾಂತದಲ್ಲಿ ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಚಿಕ್ಕಮಗಳೂರು, ಚಿತ್ರದುರ್ಗ, ಹಾಸನ, ಕೋಲಾರ, ಮೈಸೂರು, ಮಂಡ್ಯ, ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಗಳಿದ್ದವು. ಈ ವ್ಯವಸ್ಥೆಯು ೧೭೯೯ ರಿಂದ ೧೯೫೬ರ ವರೆಗೆ ಜಾರಿಯಲ್ಲಿತ್ತು. ರಾಜ್ಯ ಏಕೀಕರಣದ ತರುವಾಯ ಮದ್ರಾಸ್ ಪ್ರಾಂತದಲ್ಲಿದ್ದ ಬಳ್ಳಾರಿ (ಸೊಂಡೂರು ಸಂಸ್ಥಾನವು ಆ ವೇಳೆಗಾಗಲೇ ಈ ಜಿಲ್ಲೆಯಲ್ಲಿ ವಿಲೀನವಾಗಿತ್ತು) ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ೧೯೫೬ರಲ್ಲಿ ಮೈಸೂರು ರಾಜ್ಯಕ್ಕೆ ವರ್ಗಾಯಿಸಲ್ಪಟ್ಟವು. ಕೊಡಗು ಜಿಲ್ಲೆಯು ಪ್ರತ್ಯೇಕವಾಗಿ 'ಸಿ' ವರ್ಗಕ್ಕೆ ಸೇರಿದ ರಾಜ್ಯವಾಗಿತ್ತು. ಕೊಳ್ಳೇಗಾಲ ತಾಲೂಕನ್ನು ಕೊಯಮತ್ತೂರು ಜಿಲ್ಲೆಯಿಂದ ಮೈಸೂರು ಜಿಲ್ಲೆಗೆ ವರ್ಗಾಯಿಸಲಾಯಿತು. ಮುಂಬಯಿ ಪ್ರಾಂತದಲ್ಲಿದ್ದ ಬೆಳಗಾವಿ, ವಿಜಯಪುರ, ಬಾಗಲಕೋಟೆ, ಧಾರವಾಡ, ಹಾವೇರಿ, ಗದಗ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ರಾಜ್ಯಕ್ಕೆ ವರ್ಗಾಯಿಸಲಾಯಿತು. ಇವಲ್ಲದೆ ಸ್ವತಂತ್ರ ರಾಜರ ಪ್ರಾಂತಗಳಾಗಿದ್ದ ರಾಮದುರ್ಗ, ಜಮಖಂಡಿ, ಹಿರಿಯ ಮೀರಜ್ ಮತ್ತು ಕಿರಿಯ ಮೀರಜ್, ಕೊಲ್ಹಾಪುರ, ಕುರುಂದವಾಡ ಜೂನಿಯರ್, ಸಾಂಗ್ಲಿ, ಔರಾದ್, ಮುಧೋಳ, ಸವಣೂರುಗಳನ್ನು ಬೆಳಗಾವಿ, ವಿಜಯಪುರ ಮತ್ತು ಧಾರವಾಡ ಜಿಲ್ಲೆಗಳಲ್ಲಿ ವಿಲೀನಗೊಳಿಸಲಾಯಿತು.

ಪ್ರಾರಂಭದಲ್ಲಿ ವಿಜಯಪುರ, ಬೆಳಗಾವಿ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಮುಂಬಯಿ ಪ್ರಾಂತದಲ್ಲಿದ್ದು, ಏಕೀಕರಣದ ತರುವಾಯ ಕರ್ನಾಟಕಕ್ಕೆ ವರ್ಗಾಯಿಸಲಾಯಿತು. ಈ ಜಿಲ್ಲೆಗಳನ್ನೊಳಗೊಂಡಂತೆ ಬೆಳಗಾವಿ ವಿಭಾಗವನ್ನು ಅಸ್ತಿತ್ವಕ್ಕೆ ತರಲಾಯಿತು. ಹಿಂದಿನ ಹೈದರಾಬಾದ್ ಪ್ರಾಂತದಲ್ಲಿದ್ದ ಕಲಬುರಗಿ, ಬೀದರ್ ಮತ್ತು ರಾಯಚೂರು ಜಿಲ್ಲೆಗಳನ್ನು ಕರ್ನಾಟಕಕ್ಕೆ ವರ್ಗಾಯಿಸಲಾಯಿತು. ಇವುಗಳ ಜೊತೆಗೆ ಮದ್ರಾಸ್ ಪ್ರಾಂತದಲ್ಲಿದ್ದ ಬಳ್ಳಾರಿಯನ್ನೊಳಗೊಂಡಂತೆ ಕಲಬುರಗಿ ವಿಭಾಗವನ್ನು ಅಸ್ತಿತ್ವಕ್ಕೆ ತರಲಾಯಿತು. 'ಸಿ' ರಾಜ್ಯವಾಗಿದ್ದ ಕೊಡಗನ್ನು ಕ್ರಮೇಣ ಮೈಸೂರು ವಿಭಾಗಕ್ಕೆ ವಿಲೀನಗೊಳಿಸಲಾಯಿತು. ಹೀಗಾಗಿ ಮೈಸೂರು ವಿಭಾಗಕ್ಕೆ ಮೈಸೂರು, ಮಂಡ್ಯ, ದಕ್ಷಿಣ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳನ್ನು ವಿಲೀನಗೊಳಿಸಲಾಯಿತು. ಕೊಳ್ಳೇಗಾಲ ತಾಲೂಕನ್ನು ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯಿಂದ ಮೈಸೂರು ಜಿಲ್ಲೆಗೆ ವಿಲೀನಗೊಳಿಸಲಾಯಿತು. ಬೆಂಗಳೂರು ವಿಭಾಗಕ್ಕೆ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳನ್ನು ವಿಲೀನಗೊಳಿಸಲಾಯಿತು.

ರಾಜ್ಯ ಪುನರ್ವಿಂಗಡಣೆಯ ನಂತರ ವಿವಿಧ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿದ್ದ ೫೭೩ ಗ್ರಾಮಗಳನ್ನು ಬೆಳಗಾವಿ, ವಿಜಯಪುರ(ವಿಜಯಪುರ) ಮತ್ತು ಧಾರವಾಡ ಜಿಲ್ಲೆಗಳಲ್ಲಿ ವಿಲೀನಗೊಳಿಸಿರುವುದು ವ್ಯಕ್ತವಾಗುತ್ತದೆ. ಸೊಂಡೂರು ಪ್ರಾಂತವನ್ನು ಬಳ್ಳಾರಿ ಜಿಲ್ಲೆಯೊಂದಿಗೆ ವಿಲೀನಗೊಳಿಸಲಾಯಿತು. ಈ ರೀತಿಯ ವಿವಿಧ ಆಡಳಿತ ವಿಭಾಗಗಳ ವಿಲೀನತೆಯ ಪರಿಣಾಮವಾಗಿ ಆಡಳಿತ ಸುವ್ಯವಸ್ಥೆ ಮತ್ತು ಕಾನೂನು ಪರಿಪಾಲನೆ, ಹಾಗೂ ಹಲವಾರು ಘಟಕಗಳ ಅಭಿವೃದ್ಧಿಗೆ ಸುಧಾರಣೆಗಳ ಮೂಲಕ ಚಾಲನೆ ನೀಡಿ ಅನೇಕ ಆಡಳಿತಾತ್ಮಕ ನಿರ್ಧಾರಗಳನ್ನು ಜಾರಿಗೊಳಿಸಬೇಕಾಯಿತು.

ಏಕೀಕೃತ ಪ್ರದೇಶಗಳಲ್ಲಿ ಸೇವೆ ಸಲ್ಲಿಸುತ್ತಿದ್ದ ಅಧಿಕಾರಿಗಳಿಗೆ ಹೊಸ ರಾಜ್ಯದಲ್ಲಿ ಉತ್ತಮ ಬಡ್ತಿ ಹಾಗೂ ಹುದ್ದೆಗಳ ಸೃಷ್ಟಿಯ ಜೊತೆಗೆ ಕಾರ್ಯ ಪದ್ಧತಿಗಳನ್ನು ಪರಿವರ್ತಿತ ರೀತಿಯಲ್ಲಿ ಪ್ರಥಮ ಬಾರಿಗೆ ಜಾರಿಗೊಳಿಸಬೇಕಾಯಿತು. ಇವಲ್ಲದೆ, ಕೇಂದ್ರ ಸರ್ಕಾರದ ಇಲಾಖೆಗಳು ರೈಲ್ವೆ, ಅಂಚೆ ಮತ್ತು ದೂರಸಂಪರ್ಕ ವ್ಯವಸ್ಥೆ, ಆಕಾಶವಾಣಿ, ಆದಾಯ ತೆರಿಗೆ ಮತ್ತು ಕೇಂದ್ರ ಅಬಕಾರಿ

ಇಲಾಖೆಗಳು ಕ್ರಮೇಣ ಅಸ್ತಿತ್ವಕ್ಕೆ ಬಂದವು. ಅಲ್ಲದೆ, ಕೇಂದ್ರ ಸರ್ಕಾರದ ಹತೋಟಿಯಲ್ಲಿದ್ದ ವಿವಿಧ ಇಲಾಖೆಗಳು ಕರ್ನಾಟಕದಲ್ಲಿ ಆರಂಭಗೊಂಡವು. ರಾಜ್ಯ ಪುನರ್ವಿಂಗಡಣಾ ಕಾಯ್ದೆಯ ಪ್ರಕಾರ ೧೯೫೬ರ ನವೆಂಬರ್ ಒಂದರಂದು ವಿಶಾಲ ಮೈಸೂರು ರಾಜ್ಯವು ಅಸ್ತಿತ್ವಕ್ಕೆ ಬಂದಿತು. ತರುವಾಯ ಎಲ್ಲಾ ಜಿಲ್ಲಾಧಿಕಾರಿಗಳನ್ನು ಡೆಪ್ಯುಟಿ ಕಮೀಷನರ್‌ಗಳೆಂದು, ಉಪ ವಿಭಾಗಾಧಿಕಾರಿಗಳನ್ನು ಅಸಿಸ್ಟೆಂಟ್ ಕಮೀಷನರ್ ಎಂದೂ ಮತ್ತು ತಾಲೂಕು ಅಧಿಕಾರಿಗಳನ್ನು ತಹಸೀಲ್ದಾರ್ ಎಂದೂ ಏಕಪ್ರಕಾರವಾಗಿ ಪುನರ್ ನಾಮಕರಣ ಮಾಡಲಾಯಿತು. ಆಗಸ್ಟ್ ೧೯೯೭ರಲ್ಲಿ ಕರ್ನಾಟಕ ರಾಜ್ಯವು ಹಲವು ಆಡಳಿತ ಸುಧಾರಣೆಗಳನ್ನು ಜಾರಿಗೆ ತಂದು ದೊಡ್ಡ ಜಿಲ್ಲೆಗಳನ್ನು ವಿಭಜಿಸಿ ಒಟ್ಟು ಏಳು ಹೊಸ ಜಿಲ್ಲೆಗಳನ್ನು ಸೃಜಿಸಿತು. ಹೀಗಾಗಿ ಒಟ್ಟು ಜಿಲ್ಲೆಗಳ ಸಂಖ್ಯೆ ೨೦ರಿಂದ ೨೭ಕ್ಕೆ ಏರಿತು. (ಕಂದಾಯ ಇಲಾಖೆಯ ಆದೇಶ ಸಂಖ್ಯೆ: ಆರ್‌ಡಿ. ೪೨ ಎಲ್‌ಆರ್‌ಡಿ ೮೭(ಪಿ-೩) ಬೆಂಗಳೂರು ದಿನಾಂಕ ೨ ಆಗಸ್ಟ್ ೧೯೯೭.). ಪುನಃ ಕಂದಾಯ ಇಲಾಖೆ ಆದೇಶ ಸಂಖ್ಯೆ: ಆರ್‌ಡಿ.೨೭ ಬುದಪು ೨೦೭ ಪಿ-೩, ಬೆಂಗಳೂರು ದಿನಾಂಕ ೩ನೇ ಆಗಸ್ಟ್ ೨೦೦೭ ರಂತೆ ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳನ್ನು ಹೊಸದಾಗಿ ಸೃಜಿಸಲಾಯಿತು. ೨೦೦೯ರ ಡಿಸೆಂಬರ್ ಮಾಹೆಯಲ್ಲಿ ಯಾದಗಿರಿ, ಶಹಾಪುರ, ಹಾಗೂ ಸುರಪುರ ತಾಲೂಕುಗಳನ್ನೊಳಗೊಂಡ ಯಾದಗಿರಿ ಜಿಲ್ಲೆಯನ್ನು, ಕಲಬುರಗಿ (ಗುಲಬರ್ಗಾ) ಜಿಲ್ಲೆಯಿಂದ ವಿಭಜಿಸಿ ರಚಿಸಲಾಗಿದ್ದು ಹಾಲಿ ೩೦ ಜಿಲ್ಲೆಗಳು ಅಸ್ತಿತ್ವದಲ್ಲಿವೆ.

ಕರ್ನಾಟಕ ಸರ್ಕಾರವು ೨೦೦೦ದಲ್ಲಿ, ಮಾಜಿ ಸಚಿವರಾಗಿದ್ದ ಹಾರನಹಳ್ಳಿ ರಾಮಸ್ವಾಮಿ ಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಆಡಳಿತ ಸುಧಾರಣೆಗಳ ಆಯೋಗವನ್ನು ರಚಿಸಿತು. ಈ ಸಮಿತಿಯು ೨೦೦೧ರ ಜನವರಿಯಲ್ಲಿ ಒಂದು ಹಂಗಾಮಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ನಂತರ ಅಂತಿಮ ವರದಿಯನ್ನು ಸಹ ಸರ್ಕಾರಕ್ಕೆ ನೀಡಿದ್ದು, ಅನೇಕ ಹಂತಗಳಲ್ಲಿ ಈ ಆಯೋಗದ ಶಿಫಾರಸ್ಸುಗಳನ್ನು ಜಾರಿಗೆ ತರುವಲ್ಲಿ ರಾಜ್ಯ ಸರ್ಕಾರವು ಯಶಸ್ವಿಯಾಗಿದೆ.ಹೊಸ ತಾಲೂಕುಗಳ ರಚನೆ ಬಗ್ಗೆ ಅಧ್ಯಯನ ಮಾಡಿ ಶಿಫಾರಸ್ಸುಗಳನ್ನು ಮಾಡಲು ಈ ಹಿಂದೆ ಶ್ರೀ ಹುಂಡೇಕಾರ್ ಸಮಿತಿ, ಶ್ರೀ ಗದ್ದಿಗೌಡರ್ ಸಮಿತಿ, ಶ್ರೀ ವಾಸುದೇವರಾವ್ ಸಮಿತಿ, ಶ್ರೀ ಎಂ.ಬಿ.ಪ್ರಕಾಶ್‌ರವರ ಸಮಿತಿಗಳನ್ನು ನೇಮಕ ಮಾಡಿದ್ದು, ಈ ಸಮಿತಿಗಳು ತಮ್ಮ ವರದಿಗಳನ್ನು ಸಲ್ಲಿಸಿವೆ. ಶ್ರೀ ಎಂ.ಬಿ.ಪ್ರಕಾಶ್ ಸಮಿತಿಯ ಶಿಫಾರಸ್ಸಿನಂತೆ ಹೊಸ ತಾಲೂಕುಗಳನ್ನು ರಚಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

**ಕಂದಾಯ ಇಲಾಖೆಯು ಸಾಮಾನ್ಯವಾಗಿ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುತ್ತಿದೆ.**

**ಅ. ಸಾಮಾನ್ಯ ಆಡಳಿತ:**

೧) ಕಾರ್ಯಾಕಾರಿ ದಂಡಾಧಿಕಾರತ್ವದ ಮೂಲಕ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು, ೨) ಸರ್ಕಾರಕ್ಕೆ ಸಂಬಂಧಿಸಿದಂತೆ ಎಲ್ಲ ರೀತಿಯ ಸಾರ್ವಜನಿಕ ದೂರು ನಿರ್ವಹಣೆ; ೩) ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಯ ನಿರ್ವಹಣೆ; ೪) ಎಲ್ಲಾ ರೀತಿಯ ಚುನಾವಣೆಗಳನ್ನು ನಡೆಸುವುದು; ೫) ಎಲ್ಲಾ ರೀತಿಯ ಗಣತಿ ಕಾರ್ಯವನ್ನು ನಡೆಸುವುದು (ಜನ ಗಣತಿ, ಜಾನುವಾರು ಗಣತಿ, ಕೃಷಿ ಗಣತಿ); ೬) ಎಲ್ಲಾ ಔಪಚಾರಿಕ ಸಮಾರಂಭಗಳಲ್ಲಿ ರಾಜ್ಯದ ಪರವಾಗಿ ಶಿಷ್ಟಾಚಾರ ಕಾರ್ಯ ನಿರ್ವಹಿಸುವುದು; ೭) ಪ್ರಕೃತಿ ವಿಕೋಪ ನಿರ್ವಹಣೆ, ನೈಸರ್ಗಿಕ ಮತ್ತು ಅನ್ಯೆಸರ್ಗಿಕ ವಿಕೋಪಗಳಿಂದ ಬಾಧಿತರಾದವರಿಗೆ ಪರಿಹಾರ, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾರ್ಯ ನಿರ್ವಹಣೆ; ೮) ಯೋಜನಾ ಸಂತ್ರಸ್ತ ಮತ್ತು ಬಾಧಿತ ಕುಟುಂಬಗಳಿಗೆ ಪುನರ್ ವಸತಿ ಮತ್ತು ಪುನರ್ ನಿರ್ಮಾಣ ನಿರ್ವಹಣೆ; ೯) ವೃದ್ಧಾಪ್ಯ ವೇತನ ಮತ್ತಿತರ ಸಾಮಾಜಿಕ ಸುರಕ್ಷತೆಯನ್ನು ನಿರ್ವಹಿಸುವುದು; ೧೦) ಅಲ್ಪಸಂಖ್ಯಾತರ ರಕ್ಷಣೆ; ೧೧) ಜನನ, ಮರಣ ಮತ್ತು ವಿವಾಹಗಳ ನೋಂದಣಿ; ೧೨) ಆದಾಯ, ಜಾತಿ, ಧರ್ಮ, ನಿವಾಸ, ರಾಷ್ಟ್ರೀಯತೆ, ಅಲ್ಪಸಂಖ್ಯಾತರ ಸ್ಥಾನಮಾನ ಮುಂತಾದ ೩೭ ತರಹದ ಪ್ರಮಾಣ ಪತ್ರ ನೀಡುವುದು; ೧೩) ಪೌರಾಡಳಿತ; ೧೪) ಗುಪ್ತನಿಧಿ (Treasure trove); ೧೫) ಮೋಟಾರು ವಾಹನಗಳ ಅಧಿನಿಯಮದಡಿಯಲ್ಲಿ ಸಾರಿಗೆ ವಿಷಯಗಳ ನಿರ್ವಹಣೆ (RTA's ಮಾತ್ರ); ೧೬) ಎಲ್ಲಾ ನ್ಯಾಯಾಲಯಗಳಲ್ಲಿ ಸರ್ಕಾರಿ ವ್ಯಾಜ್ಯ ನಿರ್ವಹಣೆ; ಮತ್ತು ೧೭) ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳ ಮತ್ತು ಕಾರ್ಯಕ್ರಮಗಳ ಸಮನ್ವಯ ಹಾಗೂ ಪರಿವೀಕ್ಷಣಾ ಕಾರ್ಯ ನಿರ್ವಹಣೆ.

**ಆ: ಕಂದಾಯ ಆಡಳಿತ**

ಕಂದಾಯ ಮತ್ತಿತರ ಕಾನೂನುಗಳಲ್ಲಿ ಸಾಂಪ್ರದಾಯಕವಾಗಿ ಕಂದಾಯ ಇಲಾಖೆಗೆ ವಹಿಸಲಾಗಿರುವ ಪ್ರಮುಖ ಕಾರ್ಯಗಳು ಕೆಳಕಂಡಂತಿವೆ: ೧) ರಾಜ್ಯದಲ್ಲಿನ ಭೂದಾಖಲೆಗಳ ನಿರ್ವಹಣೆ ಮತ್ತು ಎಲ್ಲ ಜಮೀನುಗಳ ಭೂಮಾಪನ; ೨) ಬಾಕಿ ವಸೂಲಾತಿ; ಭೂ ಕಂದಾಯ, ನೀರು ತೆರಿಗೆ, ಸಾಲ ಮತ್ತಿತರ ಸರ್ಕಾರಿ ಬಾಕಿ, ಉಪಕರ ಮತ್ತು ತೆರಿಗೆಗಳ ವಸೂಲಾತಿ; ೩) ಗ್ರಾಮಠಾಣ, ಗೋಮಾಳ, ಗುಂಡುತೋಪು, ಕೆರೆ ಅಂಗಳ, ಉಪವನಗಳು ಇತ್ಯಾದಿ ಸಾಮುದಾಯಿಕ ಜಮೀನುಗಳೂ ಸೇರಿದಂತೆ ಎಲ್ಲಾ ಸರ್ಕಾರಿ ಜಮೀನುಗಳ ನಿರ್ವಹಣೆ ಮತ್ತು ಪರಿಸರ ಸಂರಕ್ಷಣೆ; ೪) ಭೂ ಮಂಜೂರಾತಿ; ೫) ಭೂ ಸುಧಾರಣೆ ಮತ್ತು ಗೇಣಿದಾರಿಕೆಯ ನಿರ್ಬಂಧನೆಗಳ ನಿರ್ವಹಣೆ; ೬) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜಮೀನು ರಕ್ಷಣೆ; ೭) ಭೂ ಪರಿವರ್ತನೆ ಮತ್ತು ಸರಿಯಾದ ರೀತಿಯಲ್ಲಿ ಬಡಾವಣೆಗಳ ಅಭಿವೃದ್ಧಿ; ೮) ಸ್ಥಿರಾಸ್ತಿಗಳ ಮೇಲಿನ ಬಾಡಿಗೆ ನಿಯಂತ್ರಣ; ೯) ಸಾರ್ವಜನಿಕ ಉದ್ದೇಶಕ್ಕಾಗಿ ಖಾಸಗಿ ಆಸ್ತಿಗಳನ್ನು ಸ್ವಾಧೀನಪಡಿಸುವುದು; ೧೦) ಸ್ಥಿರಾಸ್ತಿಗಳ ವ್ಯವಹಾರ, ಉಯಿಲು (will) ಒಪ್ಪಂದ ಇತ್ಯಾದಿಗಳ ನೋಂದಣಿ ಮತ್ತು ಮುದ್ರಾಂಕ ಶುಲ್ಕ ವಸೂಲಾತಿ; ಮತ್ತು ೧೧) ಹಿಂದೂ ಧಾರ್ಮಿಕ ಸ್ಥಳಗಳ ನಿಯಂತ್ರಣ ಮತ್ತು ಅಭಿವೃದ್ಧಿ.

ಕಂದಾಯ ಇಲಾಖೆಗೆ ರಾಜ್ಯದ ಹಿಂದೂ ಧಾರ್ಮಿಕ ಮತ್ತು ಧರ್ಮದತ್ತಿಗಳ ಆಡಳಿತ ನಿರ್ವಹಣೆಯ ಜವಾಬ್ದಾರಿಯನ್ನೂ ಸಹ ವಹಿಸಿಕೊಡಲಾಗಿದೆ. ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ ಮೂಲಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ದತ್ತಿಗಳನ್ನು ನಿರ್ವಹಿಸಲಾಗುತ್ತಿದೆ. ಆ ಇಲಾಖೆಗೆ ಪ್ರತ್ಯೇಕವಾಗಿ ಒಬ್ಬ ಮುಜರಾಯಿ ಸಚಿವರೂ ಇದ್ದಾರೆ.

## ೩. ಕಾನೂನು ಆಡಳಿತ:

ಕಂದಾಯ ಇಲಾಖೆಯು ಇತರ ವಿಷಯಗಳ ಜೊತೆಗೆ ಕೆಳಕಂಡ ಪ್ರಮುಖ ಅಧಿನಿಯಮಗಳನ್ನು ನಿರ್ವಹಿಸುತ್ತದೆ.

| | | |
|---|---|---|
| ೧ | ಭಾರತೀಯ ಸಿಡಿಮದ್ದು ಅಧಿನಿಯಮ ೧೯೪೦ | Indian Explosive Act, 1940 |
| ೨ | ಭಾರತೀಯ ಶಸ್ತ್ರಾಸ್ತ್ರಗಳ ಅಧಿನಿಯಮ ೧೯೫೫ | Indian Arms Act, 1955 |
| ೩ | ಭಾರತೀಯ ಅನಿಲ & ತೈಲ ಅಧಿನಿಯಮ | Indian Petroleum Act |
| ೪ | ಕರ್ನಾಟಕ ಸಿನೆಮಾ (ನಿಯಂತ್ರಣ) ಅಧಿನಿಯಮ ೧೯೬೪ | Karnataka Cinema (Regulation) Act, 1964 |
| ೫ | ಕರ್ನಾಟಕ ಚಲನಚಿತ್ರಗಳ ಪ್ರದರ್ಶನ ಮತ್ತು ವಿಡಿಯೋ ಮುಖಾಂತರ ಟಿವಿ ಪರದೆಯ ಮೇಲೆ ಪ್ರದರ್ಶನ (ನಿಯಂತ್ರಣ) ಅಧಿನಿಯಮ ೧೯೮೪ | Karnataka Exhibition of Films on TV Screen through VCR (Regulation)Act, 1984 |
| ೬ | ಕರ್ನಾಟಕ ನೀರಾವರಿ ಅಧಿನಿಯಮ ೧೯೬೫ | Karnataka Irrigation Act, 1965 |
| ೭ | ಕರ್ನಾಟಕ ಭೂ ಕಂದಾಯ ಅಧಿನಿಯಮ ೧೯೬೪ ಮತ್ತು ನಿಯಮಗಳು ೧೯೭೪ | Karnataka Land Revenue Act, 1964 & Rules 1974 |
| ೮ | ಕರ್ನಾಟಕ ಭೂ ಸುಧಾರಣಾ ಅಧಿನಿಯಮ ೧೯೬೪ ಮತ್ತು ನಿಯಮಗಳು ೧೯೭೪ | Karnataka Land Reforms Act, 1961 & rules 1974 |
| ೯ | ಕರ್ನಾಟಕ ಭೂ ಮಂಜೂರಾತಿ ನಿಯಮಗಳು ೧೯೬೯ | Karnataka Land Grant Rules, 1969 |
| ೧೦ | ಕರ್ನಾಟಕ ಪುರಸಭೆಗಳ ಅಧಿನಿಯಮ ೧೯೬೪ | Karnataka Municipalities Act, 1964 |
| ೧೧ | ನೈಸರ್ಗಿಕ ವಿಕೋಪ ವ್ಯವಸ್ಥಾಪನಾ ಪ್ರಾಧಿಕಾರ ಅಧಿನಿಯಮ, ೨೦೦೫ | Natural Disaster Management Authority Act, 2005 |
| ೧೨ | ಕರ್ನಾಟಕ ಇನಾಂ ಮತ್ತು ಕೆಲವು ಇನಾಂ ರದ್ದಿಯಾತಿ ಅಧಿನಿಯಮ (೧೯೫೪, ೧೯೫೫, ೧೯೭೭) | Karnataka Inams and certain Inams Abolition Act ( 1954, 1955, 1977) |
| ೧೩ | ಕರ್ನಾಟಕ ಪ.ಜಾ/ಪ.ಪಂ & ಹಿಂದುಳಿದ ವರ್ಗಗಳ (ನೇಮಕಾತಿ, ಮೀಸಲಾತಿ ಇತ್ಯಾದಿ) ತಿದ್ದುಪಡಿ ಅಧಿನಿಯಮ ೧೯೯೩ | Karnataka SCs/STs and OBCs (Appointment, Reservation etc.,) Amendment Act, 1993 |
| ೧೪ | ಕರ್ನಾಟಕ ಭೂಸ್ವಾಧೀನ ಕಾಯಿದೆ, ೧೯೬೧ | Karnataka Land Acquisition Act, 1961 |
| ೧೫ | ಕರ್ನಾಟಕ ನಾಗರೀಕ ಸೇವಾ (ಸಿಸಿ&ಎ) ನಿಯಮಗಳು ೧೯೫೭ | Karnataka Civil Service (CC&A) rules, 1957 |
| ೧೬ | ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯದತ್ತಿಗಳ ಅಧಿನಿಯಮ ೧೯೯೭ ಮತ್ತು ನಿಯಮಗಳು, ೨೦೦೨ | Karnataka Hindu Religious Institutions and Charitable Endowments Act, 1997 and Rules, 2002 |
| ೧೭ | ನಿಕ್ಷೇಪ ನಿಧಿ ಅಧಿನಿಯಮ ೧೯೬೨ ಮತ್ತು ನಿಯಮಗಳು ೧೯೬೩ | Treasure Trove Act, 1962 & Rules 1963 |
| ೧೮ | ಕರ್ನಾಟಕ ಜಿಲ್ಲಾ ಪಂಚಾಯತ್, ತಾ ಲೂಕು ಪಂಚಾಯತ್ & ಗ್ರಾಮ ಪಂಚಾಯತಿ ಅಧಿನಿಯಮ ೧೯೯೩ | Karnataka ZP, TP and VP Act 1993 |
| ೧೯ | ಮೋಟಾರು ವಾಹನಗಳ ಅಧಿನಿಯಮ (ಆರ್ .ಟಿ.ಎ.ವಿಷಯಗಳು) | Motor Vehicle Act (RTA matters) |
| ೨೦ | ಕರ್ನಾಟಕ ಪ.ಜಾ. ಮತ್ತು ಪ.ಪಂ. (ಕೆಲವು ಜಮೀನುಗಳ ಪರಭಾರೆ ನಿಷೇಧ) ಕಾಯ್ದೆ ೧೯೭೮ ಮತ್ತು ನಿಯಮಗಳು, ೧೯೭೯ | Karnataka SCs and STs (Prevention of Transfer of Certain Lands ) Act 1978 and Rules, 1979 |
| ೨೧ | ಕರ್ನಾಟಕ ಇನಾಂ ಮತ್ತು ಕೆಲವು ಇನಾಂ ರದ್ದಿಯಾತಿ ಕಾಯ್ದೆ ೧೯೭೭ ಮತ್ತು ನಿಯಮಗಳು ೧೯೭೯ | The Karnataka Inams and certain Inam Abolition Act 1977 and Rules 1979 |
| ೨೨ | ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಕಾಯ್ದೆ ೧೯೭೪ ಮತ್ತು ನಿಯಮಗಳು ೧೯೭೭ | The Karnataka Public Premises (Eviction of Unauthorised Occupants) Act 1974 and Rules 1977 |
| ೨೩ | ನೋಂದಣಿ ಕಾಯ್ದೆ ೧೯೦೮ ಕರ್ನಾಟಕ ನೋಂದಣಿ ನಿಯಮಗಳು, ೧೯೬೫ | Registration Act 1908 Karnataka Registration Rules, 1965 |
| ೨೪ | ಭಾರತೀಯ ಪಾಲುದಾರಿಕೆ ಕಾಯ್ದೆ ೧೯೩೨ | Indian Partnership Act 1932 |
| ೨೫ | ಕರ್ನಾಟಕ ಮುದ್ರಾಂಕ ಕಾಯ್ದೆ ೧೯೫೭ ಮತ್ತು ನಿಯಮಗಳು ೧೯೫೮ | Karnataka Stamps Act 1957 & Rules 1958 |
| ೨೬ | ಕರ್ನಾಟಕ ಮುದ್ರಾಂಕಗಳ (ದಸ್ತಾವೇಜುಗಳ ಅಪಮೌಲ್ಯಗಳ ತಡೆ) ನಿಯಮಗಳು ೧೯೭೭ | Karnataka Stamps (Prevention of Under-Valuation of Instruments)Rules 1977 |
| ೨೭ | ಕರ್ನಾಟಕ ಮುದ್ರಾಂಕಗಳ (ಶುಲ್ಕವನ್ನು ಇ-ಸ್ಟಾಂಪಿಂಗ್ ಮೂಲಕ ಪಾತಿಸುವಿಕೆ) ನಿಯಮಗಳು ೨೦೦೯ | Karnataka Stamp (Payment of Duty by means of E-Stamping )Rules 2009 |
| ೨೮ | ಗ್ರಾಮ ಕಛೇರಿಗಳ ರದ್ದಿಯಾತಿ ಅಧಿನಿಯಮ ೧೯೬೧ | Village Offices Abolition Act 1961 |
| ೨೯ | ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ ಕಾಯ್ದೆ ೧೯೭೬ ಮತ್ತು ನಿಯಮಗಳು ೧೯೭೯ | Karnataka Appellate Tribunal Act 1976 and Rules 1979 |
| ೩೦ | ಕರ್ನಾಟಕ ಭೂ (ವರ್ಗಾವಣೆ ಮೇಲೆ ನಿರ್ಬಂಧ) ಅಧಿನಿಯಮ ೧೯೯೧ & ನಿಯಮಗಳು ೧೯೯೪ | Karnataka Land (Restriction of Transfer) Act 1991 & Rules 1994 |
| ೩೧ | ಕರ್ನಾಟಕ ಬಾಡಿಗೆ ಕಾಯ್ದೆ ೧೯೯೯ ಮತ್ತು ನಿಯಮಗಳು ೨೦೦೧ | Karnataka Rent Act 1999 & Rules 2001 |

| | | |
|---|---|---|
| ೩೨ | ಕರ್ನಾಟಕ (ವೈಯಕ್ತಿಕ ಮತ್ತು ಇತರೆ) ಇನಾಂ ರದ್ದಿಯಾತಿ ಕಾಯ್ದೆ, ೧೯೫೪ ಮತ್ತು ೧೯೫೬ | The Karnataka (Personal and Miscellaneous) Inam Abolition Act, 1954 and 1956 |
| ೩೩ | ಕರ್ನಾಟಕ ವೈಯಕ್ತಿಕ ಮತ್ತು ಇತರೆ ಇನಾಂ ರದ್ದಿಯಾತಿ (ಪರಿಹಾರ ಬಾಂಡ್) ನಿಯಮಗಳು, ೧೯೫೯ | The Karnataka Personal and Miscellaneous Inam Abolition (Compensation Bond ) Rules, 1959 |
| ೩೪ | ಮೈಸೂರು (ಧಾರ್ಮಿಕ ಮತ್ತು ದತ್ತಿ) ಇನಾಂ ರದ್ದಿಯಾತಿ ಕಾಯ್ದೆ ೧೯೫೫ ಮತ್ತು ನಿಯಮಗಳು ೧೯೫೬ | The Mysore (Religious and Charitable) Inam Abolition Act 1955 and Rules 1956 |
| ೩೫ | ಕರ್ನಾಟಕ (ಬೆಳಗಾವಿ ಮತ್ತು ಗುಲ್ಬರ್ಗಾ ಪ್ರದೇಶಗಳು) ಧಾರ್ಮಿಕ ದತ್ತಿ ಮತ್ತು ಇನಾಂ ರದ್ದಿಯಾತಿ ಕಾಯ್ದೆ, ೧೯೭೩ | The Karnataka (Belgaum and Gulbarga Areas ) Religious and Charitable Inams Abolition Act, 1973 |
| ೩೬ | ವಿಷಾಹಾರ ವಸ್ತು ಕಾಯಿದೆ ೧೯೧೯ & ಮೈಸೂರು ವಿಷಾಹಾರ ವಸ್ತು ನಿಯಮಗಳು ೧೯೬೬ | Poison Act 1919 and Mysore Poison Rules-1996 |
| ೩೭ | ರೋರಿಕ್ ಮತ್ತು ದೇವಿಕರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ ೧೯೯೬ (ನಿಯಮಗಳನ್ನು ರಚಿಸಲಾಗಿಲ್ಲ) | Roerich and Devikarani Roerich Estate (Acquisitions and Transfer) Act 1996 |
| ೩೮ | ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ ಅಧಿನಿಯಮ ೨೦೦೫ & ನಿಯಮಗಳು ೨೦೦೫ | Basavakalyan Development Board Act 2005 & Rules 2005 |
| ೩೯ | ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ ೨೦೦೯ & (ನಿಯಮಗಳನ್ನು ಇನ್ನೂ ರಚಿಸಿಲ್ಲ) | Kaginele Development Authority Act 2009 (Rules not yet framed) |
| ೪೦ | ಕೂಡಲ ಸಂಗಮ ಅಭಿವೃದ್ಧಿ ಮಂಡಳಿ ಅಧಿನಿಯಮ ೧೯೯೪ & ನಿಯಮಗಳು ೧೯೯೮ | Koodala Sangama Development Board Act 1994 & Rules 1998 |
| | ಕೇಂದ್ರದ ಅಧಿನಿಯಮಗಳು ಹಾಗೂ ಅವುಗಳಿಗೆ ರಚಿಸಲಾಗಿರುವ ನಿಯಮಗಳ ಮಾಹಿತಿ | |
| ೪೧ | ಭೂ ಸ್ವಾಧೀನ ಕಾಯ್ದೆ ೧೮೯೪ | Land Acquisition Act 1894 |
| ೪೨ | ಭೂ ಸ್ವಾಧೀನ (ಕರ್ನಾಟಕ ತಿದ್ದುಪಡಿ) ಕಾಯ್ದೆ ೧೯೬೧ ಕರ್ನಾಟಕ ಕಾಯ್ದೆ ಸಂಖ್ಯೆ: ೧೭/೧೯೬೧ | Land Acquisition (Karnataka Amendment) Act 1961 Karnataka Act No.17/1961 |
| ೪೩ | ಭೂ ಸ್ವಾಧೀನ (ಕರ್ನಾಟಕ ತಿದ್ದುಪಡಿ & ವ್ಯಾಲಿಡೇಷನ್ ) ಕಾಯ್ದೆ ೧೯೬೭ ಕರ್ನಾಟಕ ಕಾಯ್ದೆ ಸಂಖ್ಯೆ: ೧೦/೧೯೬೮ | Land Acquisition (Karnataka Amendment & Validation) Act 1967 Karnataka Act No.10/1968 |
| ೪೪ | ಭೂ ಸ್ವಾಧೀನ (ಕರ್ನಾಟಕ ತಿದ್ದುಪಡಿ) ಕಾಯ್ದೆ ೧೯೮೮ ಕರ್ನಾಟಕ ಕಾಯ್ದೆ ಸಂಖ್ಯೆ: ೩೩/೧೯೯೧ | Land Acquisition (Karnataka Amendment)Act 1988 Karnataka Act No.33/1991 |
| ೪೫ | ಭೂ ಸ್ವಾಧೀನ (ಕರ್ನಾಟಕ ) ನಿಯಮಗಳು ೧೯೬೫ | Land Acquisition (Karnataka) Rules 1965 |
| ೪೬ | ಭೂ ಸ್ವಾಧೀನ (ಕಂಪನಿಗಳು) (ಕರ್ನಾಟಕ) ನಿಯಮಗಳು ೧೯೭೩ | Land Acquisition (Companies) (Karnataka) Rules 1973 |
| ೪೭ | ನೋಂದಣಿ ಅಧಿನಿಯಮ ೧೯೦೮ ಕರ್ನಾಟಕ ನೋಂದಣಿ ನಿಯಮಗಳು ೧೯೬೫ | The Registration Act 1908 Karnataka Registration rules 1965 |
| ೪೮ | ದಂಡ ಪ್ರಕ್ರಿಯಾ ಸಂಹಿತೆ | Criminal Proceedure Code |

## ಭೂ ಸುಧಾರಣೆಗಳು

ಸ್ವಾತಂತ್ರ್ಯಾನಂತರ ದೇಶಾದ್ಯಂತ ಭೂ ಸುಧಾರಣೆಗಳನ್ನು ಜಾರಿಗೊಳಿಸುವಲ್ಲಿ ಸರ್ಕಾರವು ೦೩ ಉದ್ದೇಶಗಳನ್ನು ನಿಗದಿ ಪಡಿಸಿತ್ತು – ೧) ಜಮೀನುದಾರಿ ಪದ್ಧತಿಯನ್ನು ರದ್ದುಗೊಳಿಸುವುದು, ಇನಾಂದಾರಿ ಹಾಗೂ ಅನುಪಸ್ಥಿತ ಭೂ ಮಾಲೀಕರು ಮುಂತಾದ ಮಧ್ಯವರ್ತಿಗಳನ್ನು ತೆಗೆದು ಹಾಕುವುದು. ೨) ಗೇಣಿದಾರಿ ಪದ್ಧತಿಯ ನಿಯಂತ್ರಣ ಮತ್ತು ಗೇಣಿ ಪದ್ಧತಿಯನ್ನು ನಿರ್ಮೂಲಗೊಳಿಸುವುದು. ಮತ್ತು ೩) ಕೃಷಿ ಕುಟುಂಬಗಳು ಹೊಂದಿರಬಹುದಾದ ಭೂಮಿಯ ಗರಿಷ್ಠಮಿತಿ. ಇದಕ್ಕೆ ಸಂಬಂಧಿಸಿದಂತೆ ೧೯೫೭ರ ಸೆಪ್ಟೆಂಬರ್‌ನಲ್ಲಿ 'ಬಿ.ಡಿ.ಜತ್ತಿ ಸಮಿತಿ'ಯು ವರದಿಯನ್ನು ಸಲ್ಲಿಸಿತ್ತು. ಇದರ ಫಲಶ್ರುತಿಯಾಗಿ ೧೯೬೧ ರಲ್ಲಿ 'ಕರ್ನಾಟಕ ಭೂ ಸುಧಾರಣಾ ಕಾನೂನು' ಅಸ್ತಿತ್ವಕ್ಕೆ ಬಂದಿತು. ಆನಂತರ ೧೯೭೧ರಲ್ಲಿ ಭೂಸುಧಾರಣೆಗೆ ಸಂಬಂಧಿಸಿದಂತೆ ರಚಿಸಲ್ಪಟ್ಟ, ಸಮಗ್ರ ರಾಜ್ಯಕ್ಕೆ ಅನ್ವಯಿಸುವ ಸಮಾನತೆಯಿಂದ ಕೂಡಿದ ಶಾಸನ ಇಂದಿಗೂ ಮುಂದುವರೆಯುತ್ತಿದೆ.ರಾಜ್ಯದ ಎಲ್ಲ ಕಡೆಯೂ ರೈತವಾರಿ ಹಿಡುವಳಿ ವ್ಯವಸ್ಥೆಯು ಕಂಡು ಬರುತ್ತದೆ. ಅಂದರೆ ಪ್ರತೀ ಭೂ ಮಾಲೀಕನೂ ಸರ್ಕಾರದೊಂದಿಗೆ ನೇರವಾಗಿ ವ್ಯವಹರಿಸುತ್ತಾನೆ.

ಕಂದಾಯ ದಾಖಲೆಗಳ ಪ್ರಕಾರ ರೈತ (ಮಾಲೀಕ) ಹೊಂದಿರುವ ಜಮೀನಿನ ವ್ಯಾಪ್ತಿ ಮತ್ತು ಆತನು ಪ್ರತಿ ವರ್ಷ ಸಲ್ಲಿಸುವ ಭೂ ಕಂದಾಯದ ವಿವರಗಳು ವೇದ್ಯವಾಗುತ್ತವೆ. ವ್ಯವಸ್ಥಿತ ಭೂಕಂದಾಯ ವಸೂಲಿ, ಜಮೀನಿನ ಸರಿಯಾದ ದಾಖಲೆ ಇದ್ದರೆ ಮಾತ್ರ ಸಾಧ್ಯವಾಗುವುದು. ಪ್ರತೀ ಗ್ರಾಮದ ದಾಖಲೆಗಳನ್ನು ಪ್ರತ್ಯೇಕವಾಗಿ ಸಂರಕ್ಷಿಸಿ ಇಡಲಾಗುವುದು. ಇಂಥ ದಾಖಲೆಗಳು ಮೂಲತಃ ಭೂಕಂದಾಯ ವಸೂಲಿಗಾಗಿ ತೆರೆಯಲ್ಪಟ್ಟಿದ್ದರೂ, ಕಾಲಕ್ರಮೇಣ, ಇವುಗಳನ್ನು ಜಮೀನು ಮಾಲೀಕತ್ವ ಮತ್ತು ಮಾಲೀಕತ್ವ ಪರಭಾರೆ ಮಾಡಿದ ವಿಷಯ ತಿಳಿಯಲು ಅನುಕೂಲವಾಗುವ ರೀತಿಯ ವಿವರ ಹೊಂದಿರುವಂತೆ ದಾಖಲಿಸಲಾಯಿತು. ಕಾಲಾಂತರದಲ್ಲಿ, ಇವುಗಳನ್ನು 'ಹಕ್ಕಿನ ದಾಖಲೆ' ಗಳೆಂದು ಕರೆಯಲಾಯಿತು. ಹೀಗೆ ಬದಲಾದ ಪರಿಸ್ಥಿತಿಯಲ್ಲಿ ೧೯೫೦ರಲ್ಲಿ ಮುಂಬೈ ರಾಜ್ಯವು ವಂಶಪಾರಂಪರಿಕ ಶ್ಯಾನುಭೋಗ, ಕುಲಕರ್ಣಿಗಳನ್ನು ಕೈಬಿಟ್ಟು, ಅವರ ಬದಲಿಗೆ ಗ್ರಾಮ ಲೆಕ್ಕಾಧಿಕಾರಿಗಳನ್ನು ನೇಮಿಸಿತು.

ಆಡಳಿತಾತ್ಮಕ ದೃಷ್ಟಿಯಿಂದ ಜಿಲ್ಲೆಯೇ ಪ್ರಮುಖ ಘಟ್ಟ. ಭೂಕಂದಾಯ ಮತ್ತು ಹಿಡುವಳಿಯ ಆಡಳಿತಕ್ಕೆ ಸಂಬಂಧಿಸಿದಂತೆ

ಜಿಲ್ಲಾಧಿಕಾರಿ ಮುಖ್ಯ ಆಡಳಿತಾಧಿಕಾರಿಯಾಗಿರುತ್ತಾರೆ. ಅವರು ಆಗಿಂದಾಗ್ಗೆ ಕಂದಾಯ ಹಾಗೂ ಆಡಳಿತಕ್ಕೆ ಸಂಬಂಧಿಸಿದಂತೆ ಸೂಕ್ತ ಆದೇಶಗಳನ್ನು ಹೊರಡಿಸುವರು. ಜಿಲ್ಲಾ ಘಟಕ ಮತ್ತು ಗ್ರಾಮದ ನಡುವೆ ತಾಲೂಕು ಅಥವಾ ತಹಸೀಲು ಇದೆ. ತಾಲೂಕು ಕಚೇರಿಯಲ್ಲಿ ಗ್ರಾಮಗಳ ಕುರಿತು ಕಾರ್ಯನಿರ್ವಹಿಸುವ ಅಧಿಕಾರಿಯನ್ನು ಕಂದಾಯ ನಿರೀಕ್ಷಕ (ರೆವೆನ್ಯೂ ಇನ್ಸ್‌ಪೆಕ್ಟರ್) ಎಂದು ಕರೆಯಲಾಗುವುದು. ಇವರು ತಮ್ಮ ವ್ಯಾಪ್ತಿಯಲ್ಲಿರುವ ಗ್ರಾಮ ಸಮೂಹದ ಅಧಿಕಾರಿಗಳ ಕಾರ್ಯವನ್ನು ಉಸ್ತುವಾರಿ ಮಾಡುವರು. ಇವರ ಆಡಳಿತ ವ್ಯಾಪ್ತಿಯ ಪ್ರದೇಶವನ್ನು 'ಹೋಬಳಿ' ಅಥವಾ 'ಭೂ ಕಂದಾಯ ವೃತ್ತ' ಎಂದು ಕರೆಯಲಾಗುವುದು. ಅಂತೆಯೇ ತಾಲೂಕು ಸಮೂಹವನ್ನು ಉಪ-ವಿಭಾಗಾಧಿಕಾರಿಯ (ಅಸಿಸ್ಟೆಂಟ್ ಕಮಿಷನರ್) ಆಡಳಿತ ವ್ಯಾಪ್ತಿಗೆ ಸೇರಿಸಲಾಗಿದೆ. ಇವರಿಗೆ ಮೇಲ್ಮನವಿ ಅರ್ಜಿಯನ್ನು ಸ್ವೀಕರಿಸುವ ಅಧಿಕಾರವೂ ಇದ್ದು ತಮ್ಮ ಅಧಿಕಾರ ವ್ಯಾಪ್ತಿಗೆ ಬರುವ ತಾಲೂಕುಗಳ ಉಸ್ತುವಾರಿ ಕಾರ್ಯವನ್ನೂ ಇವರು ನಿರ್ವಹಿಸುವರು. ಭೂ ಕಂದಾಯ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾದೇಶಿಕ ಆಯುಕ್ತರು ನಿಯಂತ್ರಣಾಧಿಕಾರಿಯಾಗಿ ಕಾರ್ಯನಿರ್ವಹಿಸುವರು. ಈ ಮುಂಚೆ ಈ ಹುದ್ದೆಗೆ 'ವಿಭಾಗಾಧಿಕಾರಿ' ಎಂದು ಹೆಸರಿತ್ತು.

### ಭೂಮಿ:

ಭೂಮಿ ಯೋಜನೆಯನ್ನು ೨೦೦೦-೦೧ರಿಂದ ರಾಜ್ಯಾದ್ಯಂತ ಎಲ್ಲಾ ತಾಲೂಕುಗಳಲ್ಲಿ ಅನುಷ್ಠಾನಗೊಳಿಸಿದೆ. 'ಭೂಮಿ' ತಂತ್ರಾಂಶದಲ್ಲಿ ಹಕ್ಕು ಬದಲಾವಣೆಗಳನ್ನು ಈ ಯೋಜನೆ ಜಾರಿಗೆ ಬಂದಾಗಿನಿಂದ ಸೆಪ್ಟಂಬರ್ ೨೦೦೧ ರಿಂದ ಕೈಬರಹದ ಪಹಣಿಗಳನ್ನು ನೀಡುವುದನ್ನು ನಿಷೇಧಿಸಿ, ಸರ್ಕಾರ ನಿಗದಿ ಪಡಿಸಿದ ದರದಲ್ಲಿ ಗಣಕೀಕೃತ ಪಹಣಿ ನೀಡಲಾಗುತ್ತಿದೆ. ಖಾತೆ ಬದಲಾವಣೆಯ ಮ್ಯುಟೇಷನ್‌ಗಳನ್ನು ಕೂಡ ನೀಡಲಾಗುತ್ತದೆ. ತಾಲೂಕು ಕಚೇರಿಗಳಲ್ಲಿ ಕಿಯೋಸ್ಕ್ (Touch Screen) ಸ್ಥಾಪಿಸಿದ್ದು ಸಾರ್ವಜನಿಕರು ಇದರ ಮೂಲಕ ಮಾಹಿತಿ ಹಾಗೂ ವಿವರಗಳನ್ನು ತಿಳಿದುಕೊಳ್ಳಬಹುದಾಗಿದೆ.

### ಭೂಮಿ-ಕಾವೇರಿ:

ಭೂಮಿ-ಕಾವೇರಿ ತಂತ್ರಾಂಶ ಜೋಡಣೆಯು ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ನಡೆಸಿರುವ ಜಮೀನಿನ ವಹಿವಾಟನ್ನು ತಿಳಿಸುತ್ತದೆ. ಇದರ ಮೂಲಕ ಜಮೀನು ಪರಭಾರೆ ವಹಿವಾಟಿನ ನೋಂದಾಯಿತ ಪ್ರಕರಣಗಳನ್ನು ತಾಲೂಕು ಕಚೇರಿಯ ಭೂಮಿ ತಂತ್ರಾಂಶಕ್ಕೆ ರವಾನಿಸಲಾಗುವುದು. ನಂತರ ನಿಯಮಾನುಸಾರ ಹಕ್ಕು ದಾಖಲೆ ಬದಲಾವಣೆ ಪ್ರಕ್ರಿಯೆ ನಡೆಯುವುದು.

### ಸಂಯೋಜಿತ ಮ್ಯುಟೇಷನ್ ಪದ್ಧತಿ:

ಮ್ಯೂಟೇಷನ್‌ಮತ್ತು ಪೋಡಿ ಕಾರ್ಯಗಳನ್ನು ಸಂಯೋಜಿಸಿ ಎರಡೂ ಪ್ರಕ್ರಿಯೆ ಏಕಕಾಲದಲ್ಲಿ ನಡೆಯುತ್ತದೆ. ಇದರಿಂದಾಗಿ ಹಕ್ಕು ಬದಲಾವಣೆ ಆದಂತೆಲ್ಲಾ ಅದಕ್ಕನುಗುಣವಾಗಿ ಪೋಡಿ ಕಾರ್ಯ ಸಹ ನಡೆದು ರೈತರಿಗೆ ತಮ್ಮ ಜಮೀನಿನ ಪ್ರತ್ಯೇಕ ಪಹಣಿ ಮತ್ತು ನಕ್ಷೆ ಲಭ್ಯವಾಗುತ್ತದೆ.

### ಗ್ರಾಮೀಣ ಗಣಕೀಕೃತ ಸೇವೆ (ನೆಮ್ಮದಿಯೋಜನೆ):

ರಾಜ್ಯದ ಜಿಲ್ಲೆಗಳ ಎಲ್ಲಾ ಹೋಬಳಿ ಕೇಂದ್ರಗಳಲ್ಲಿ 'ನೆಮ್ಮದಿ' ಕೇಂದ್ರಗಳನ್ನು ತೆರೆದು ಗ್ರಾಮೀಣ ಜನರಿಗೆ ವಿವಿಧ ಸೇವೆಗಳನ್ನು ವಾಸಸ್ಥಳದ ಹತ್ತಿರವೇ ಪಡೆಯಲು ಅನುಕೂಲ ಕಲ್ಪಿಸಿದೆ. '**ನೆಮ್ಮದಿ**' ಕೇಂದ್ರಗಳಲ್ಲಿ ಕಂದಾಯ ಇಲಾಖೆಯ ಸುಮಾರು ೪೦ ಕ್ಕೂ ಹೆಚ್ಚಿನ ಸೇವೆಗಳನ್ನು ಕಲ್ಪಿಸಿದೆ.ಭೂಸ್ವಾಧೀನ ಪ್ರಕ್ರಿಯೆಗಳನ್ನು 'ಭೂಮಿ' ಯೋಜನೆಯಡಿಯಲ್ಲಿ ಗಣಕೀಕರಣಗೊಳಿಸಲು ಯೋಜಿಸಿದ್ದು ಚಿಕ್ಕಬಳ್ಳಾಪುರ ಹಾಗೂ ಶಿವಮೊಗ್ಗ ಉಪವಿಭಾಗಾಧಿಕಾರಿಗಳ ಕಚೇರಿಯಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಹಾಗೆಯೇ ರೈತರು ಕೃಷಿ ಸಾಲಗಳಿಗೆ ತಮ್ಮ ಜಮೀನನ್ನು ಆಧಾರ ಮಾಡಿ ಸಾಲ ಸೌಲಭ್ಯ ಪಡೆಯುವಾಗ, ಸಾಲದ ವಿವರಗಳನ್ನು ಪಹಣಿಯಲ್ಲಿ ನಮೂದಿಸುವುದು, ಸಾಲ ತೀರಿದ ನಂತರ ಆ ಆಧಾರವನ್ನು ಬಿಡುಗಡೆ ಮಾಡುವುದು ಮುಂತಾದ ಪ್ರಕ್ರಿಯೆಗಳನ್ನು ಗಣಕಯಂತ್ರದ ಮೂಲಕ ನಿರ್ವಹಿಸಲಾಗುತ್ತಿದೆ. ಪಹಣಿ ದೋಷಗಳ ತಿದ್ದುಪಡಿ, ಪಹಣಿಯಲ್ಲಿ ಬೆಳೆಗಳ ಇಂದೀಕರಣ ಮುಂತಾದವುಗಳು ಇದರಲ್ಲಿ ಸೇರಿವೆ.

### ನೋಂದಣಿ ಇಲಾಖೆ

ಈ ಇಲಾಖೆಯು ೧೮೬೫ರಲ್ಲಿ ಪ್ರಾರಂಭವಾಗಿದ್ದು ಕಂದಾಯ ಸಚಿವಾಲಯಕ್ಕೆ ಸೇರಿದೆ. ರಾಜ್ಯ ಮಟ್ಟದಲ್ಲಿ ನೋಂದಣಿ, ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ನೋಂದಣಾಧಿಕಾರಿಗಳು, ತಾಲೂಕು ಮಟ್ಟದಲ್ಲಿ (ಮತ್ತು ಕೆಲವು ಹೋಬಳಿಗಳಲ್ಲಿಯೂ) ಉಪನೋಂದಣಾಧಿಕಾರಿಗಳ ಕಚೇರಿಗಳಿದ್ದು ಕಾರ್ಯನಿರ್ವಹಿಸುತ್ತಿವೆ. ಸ್ಥಿರಾಸ್ತಿಗೆ ಸಂಬಂಧಪಟ್ಟ ದಸ್ತಾವೇಜು ಹಾಗೂ ಇತರೆ ಬಗೆಯ ದಸ್ತಾವೇಜುಗಳ ನೋಂದಣಿ ರಾಜಸ್ವ ಸಂಗ್ರಹಣೆ, ಋಣಭಾರ ಪ್ರಮಾಣ ಪತ್ರ ಮತ್ತು ದಸ್ತಾವೇಜುಗಳ ದೃಢೀಕರಣ ನಕಲು ತಯಾರಿಸಿ ವಿತರಿಸುವುದು, ವಿಶೇಷವಿವಾಹ, ಹಿಂದೂ, ಪಾರ್ಸಿ ವಿವಾಹ ಹಾಗೂ ರಾಜ್ಯದಲ್ಲಿ ಜಾರಿಯಲ್ಲಿರುವ ಇತರೆ ಕಾಯ್ದೆಯಡಿ ವಿವಾಹದ ನೋಂದಣಿ, ವ್ಯಾಪಾರಿ ಸಂಸ್ಥೆಗಳ ನೋಂದಣಿ ಮುಂತಾದ ಕಾರ್ಯ ಚಟುವಟಿಕೆ ಹೊಂದಿದೆ.

ಈ ಇಲಾಖೆಯು, ನೋಂದಣಿ ಕಾಯ್ದೆ ೧೯೦೮, ಕರ್ನಾಟಕ ನೋಂದಣಿ ನಿಯಮ ೧೯೬೫ ಭಾರತೀಯ ಮುದ್ರಾಂಕ ಕಾಯ್ದೆ ೧೮೯೯, ಕರ್ನಾಟಕ ಮುದ್ರಾಂಕ ಕಾಯ್ದೆ ೧೯೫೭ ಮತ್ತು ಅದರಡಿ ಮಾಡಿರುವ ನಿಯಮಗಳು, ಭಾರತೀಯ ಪಾಲುಗಾರಿಕೆ ಕಾಯ್ದೆ ೧೯೩೨, ವಿಶೇಷ ವಿವಾಹ ಕಾಯ್ದೆ, ಹಿಂದೂ ವಿವಾಹ ಕಾಯ್ದೆ, ಪಾರ್ಸಿ ವಿವಾಹ ಕಾಯ್ದೆ, ಕರ್ನಾಟಕ ವಿವಾಹ (ನೋಂದಣಿ ಮತ್ತು ಸಂಕೀರ್ಣ (ಉಪಬಂಧಗಳ) ಕಾಯ್ದೆ ೧೯೭೬ ಮುಂತಾದ ವಿವಿಧ ಕಾಯ್ದೆಗಳನ್ನು ಜಾರಿಗೊಳಿಸುತ್ತಿದೆ.ಏಕೀಕರಣ ಪೂರ್ವದಲ್ಲಿ ಐದು ಪ್ರದೇಶಗಳಲ್ಲಿ ಬೇರೆ ಬೇರೆ ಕಚೇರಿ ಕಾರ್ಯವ್ಯವಸ್ಥೆ ಇದ್ದುದರಿಂದ, ೧೯೫೮ರಲ್ಲಿ '**ಸಚಿವಾಲಯ ಕೈಪಿಡಿ**' ಯೊಂದನ್ನು ಹೊಸದಾಗಿ ರೂಪಿಸಲಾಯಿತು. ಇದರಿಂದಾಗಿ ಜಿಲ್ಲಾ ಮಟ್ಟದಲ್ಲಿ ಹಾಗೂ ಕಾರ್ಯದರ್ಶಿ ಕಚೇರಿಯಲ್ಲಿ ಏಕರೂಪದ ಕಾರ್ಯವಿಧಾನ ಜಾರಿಗೆ ಬಂದಿತು. ಹೊಸ ರಾಜ್ಯದ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಲ್ಲಿ ಅನೂಚಾನವಾಗಿ ನಡೆದು ಬಂದಂತಹ ಆಡಳಿತಾತ್ಮಕ ವ್ಯವಸ್ಥೆಯಲ್ಲಿ, ಸ್ವಂತ ಕಾನೂನುಗಳು, ಕಾಯ್ದೆ ನಿಬಂಧನೆಗಳು, ಕಾರ್ಯ ವಿಧಾನಗಳು ಮತ್ತು ಬೆಳವಣಿಗೆ, ಯೋಜನೆಗಳು ಇದ್ದವು.

ಅದೇ ರೀತಿ ತೆರಿಗೆ ಕಾನೂನು, ರಾಜ್ಯದ ವಿವಿಧ ಪ್ರದೇಶಗಳಲ್ಲಿ ಬೇರೆ ಬೇರೆಯಾಗಿದ್ದವು. ಮುಂದೆ ಮೈಸೂರು ಆರ್ಥಿಕ ವಿಚಾರಣಾ ಸಮಿತಿಯ ಏಕ ರೀತಿಯ ತೆರಿಗೆ ಕಾನೂನು ರಾಜ್ಯಾದ್ಯಂತ ಜಾರಿಗೆ ಬಂದಿತು. ಇದರ ಜೊತೆಗೆ ಚಾಲ್ತಿಯಲಿದ್ದ ಶಾಸನ ಮತ್ತು ನಿಯಮಗಳನ್ನು ಬದಲಾವಣೆ ಮಾಡಿ ಏಕರೂಪದ ಆಡಳಿತಕ್ಕೆ ಅನುಕೂಲ ಮಾಡಲಾಯಿತು. ಜಿಲ್ಲಾ ಮಟ್ಟದಲ್ಲಿ ಏಕರೂಪದ ಕಾರ್ಯವಿಧಾನವನ್ನು ಕೈಗೊಳ್ಳಲು ಜಿಲ್ಲಾ ಆಡಳಿತವನ್ನು ಚುರುಕುಗೊಳಿಸಲಾಯಿತು. ಈ ವ್ಯವಸ್ಥೆಯ ಉದ್ದೇಶ ಮೂರು ರೀತಿಯದು: ೧) ಕಾನೂನು ಮತ್ತು ಸುವ್ಯವಸ್ಥೆ. ೨) ಕಂದಾಯ ಆಡಳಿತ. ೩) ಜಿಲ್ಲೆಯ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಚಟುವಟಿಕೆಗಳ ಮುಂದುವರಿಕೆ.

ಭಾರತ ಸಂವಿಧಾನದ ೧೫೪ನೇ ವಿಧಿಯಂತೆ ರಾಜ್ಯಾಡಳಿತ ವ್ಯವಸ್ಥೆಯು ರಾಜ್ಯಪಾಲರ ವ್ಯಾಪ್ತಿಗೆ ಬರುತ್ತದೆ. ರಾಜ್ಯಪಾಲರು ರಾಜ್ಯದ ಸಂವಿಧಾನಾತ್ಮಕ ಮುಖ್ಯಸ್ಥರು. ಸರಕಾರದ ಕಾರ್ಯಗಳು ಇವರ ಹೆಸರಿನಲ್ಲೇ ನಡೆಯುತ್ತದೆ. ರಾಜ್ಯಪಾಲರನ್ನು ಐದು ವರ್ಷಗಳಿಗೊಮ್ಮೆ ನೇಮಿಸಲಾಗುತ್ತದೆ. ಸೈದ್ಧಾಂತಿಕವಾಗಿ ರಾಜ್ಯಪಾಲರು ಕಾರ್ಯಾಂಗದ ಎಲ್ಲ ಅಧಿಕಾರಕ್ಕೆ ಹೊಣೆಯಾದರೂ ಅವರು ತಮ್ಮ ಅಧಿಕಾರವನ್ನು ನೇರವಾಗಿ ಚಲಾಯಿಸುವುದಿಲ್ಲ. ಅತಿ ವಿಶೇಷ ಸಂದರ್ಭಗಳಲ್ಲಿ ಅವರು ತಮ್ಮ ಅಧಿಕಾರವನ್ನು ಚಲಾಯಿಸುತ್ತಾರೆ. ಸಾಮಾನ್ಯವಾಗಿ ರೂಢಿಯಲ್ಲಿರುವಂತೆ, ಮಂತ್ರಿಮಂಡಲದ ಸದಸ್ಯರು (ಮಂತ್ರಿಗಳು) ರಾಜ್ಯದ ಕಾರ್ಯಾಂಗ ಅಧಿಕಾರವನ್ನು ಚಲಾಯಿಸುವರು. ಮಂತ್ರಿಮಂಡಲದ ಸೇವೆಗೆ ಸಚಿವಾಲಯ ಇದ್ದು ಆಡಳಿತವನ್ನು ಸುಸೂತ್ರವಾಗಿ ನಡೆಸುತ್ತದೆ. ಅಂತೆಯೇ ರಾಜ್ಯಪಾಲರಿಗೂ ಪ್ರತ್ಯೇಕವಾದ ಸಚಿವಾಲಯವಿದ್ದು ವಿಶೇಷ ಕಾರ್ಯದರ್ಶಿಯು ರಾಜ್ಯಪಾಲರ ಸಚಿವಾಲಯದ ಮುಖ್ಯಸ್ಥರಾಗಿರುವರು. ರಾಜ್ಯದ ಶಾಸನಸಭೆಯು ಎರಡು ಸಭೆಗಳನ್ನು ಹೊಂದಿದೆ. ವಿಧಾನಸಭೆ ಮತ್ತು ವಿಧಾನ ಪರಿಷತ್ತು. ವಿಧಾನಸಭೆಯಲ್ಲಿ ೨೨೪ ಸದಸ್ಯರಿರುವರು. ಒಬ್ಬ ಸದಸ್ಯನನ್ನು ಆಂಗ್ಲೋ-ಇಂಡಿಯನ್ ಸಮುದಾಯದ ಪ್ರಾತಿನಿಧ್ಯಕ್ಕೆ ರಾಜ್ಯಪಾಲರು ನಾಮಕರಣ ಮಾಡುವರು. ಈ ಎಲ್ಲಾ ಸದಸ್ಯರ ಅಧಿಕಾರಾವಧಿಐದು ವರ್ಷ. ಇವರನ್ನು ವಯಸ್ಕ ಮತದಾನ ಪದ್ಧತಿಯಿಂದ ಚುನಾಯಿಸಲಾಗುವುದು. ಹಾಗೆಯೇ ಪರಿಷತ್ತಿಗೆ ಚುನಾಯಿತರಾದ ಸದಸ್ಯರ ಅಧಿಕಾರಾವಧಿ ಆರು ವರ್ಷ. ವಿಧಾನ ಪರಿಷತ್ತಿನಲ್ಲಿ ೭೫ ಸದಸ್ಯರಿದ್ದು, ಇವರಲ್ಲಿ ೨೫ ಜನರನ್ನು ವಿಧಾನಸಭೆಯಿಂದ ಆಯ್ಕೆ ಮಾಡಲಾಗುವುದು. ಇನ್ನು ೨೫ ಸದಸ್ಯರನ್ನು ಸ್ಥಳೀಯ ಸಂಸ್ಥೆಗಳಿಂದಲೂ, ಏಳು ಸದಸ್ಯರನ್ನು ನೋಂದಾಯಿತ ಪದವೀಧರರ ಮತ ಕ್ಷೇತ್ರದಿಂದಲೂ, ಏಳು ಸದಸ್ಯರನ್ನು ನೋಂದಾಯಿತ ಅಧ್ಯಾಪಕ ಕ್ಷೇತ್ರದಿಂದಲೂ ಮತ್ತು ಹನ್ನೊಂದು ಸದಸ್ಯರನ್ನು ರಾಜ್ಯಪಾಲರು ನಾಮಕರಣ ಮಾಡುವ ಮುಖೇನ ತುಂಬಲಾಗುವುದು. ವಿಧಾನಸಭೆಯ ಕಲಾಪಗಳಲ್ಲಿ ಈ ಸಭೆಯಿಂದ ಅಧ್ಯಕ್ಷನಾಗಿ ಆರಿಸಲ್ಪಟ್ಟ ವ್ಯಕ್ತಿ ಅಧ್ಯಕ್ಷತೆ ವಹಿಸುತ್ತಾರೆ. ಇದೇ ರೀತಿ ವಿಧಾನ ಪರಿಷತ್ತಿನಲ್ಲಿಯೂ ಅಧ್ಯಕ್ಷನ ಆಯ್ಕೆಯಾಗುತ್ತದೆ.

ವಿಧಾನಸಭೆಯ ನಾಯಕರಾಗಿ ಮುಖ್ಯಮಂತ್ರಿಗಳು ಕಾರ್ಯನಿರ್ವಹಿಸುತ್ತಾರೆ. ಸಂವಿಧಾನದಲ್ಲಿ ಮುಖ್ಯಮಂತ್ರಿಗಳ ನಾಯಕತ್ವದಲ್ಲಿ ಮಂತ್ರಿಮಂಡಲ ರಚಿಸಲು ಅವಕಾಶವಿದೆ. ಮುಖ್ಯಮಂತ್ರಿಗಳು ರಾಜ್ಯಪಾಲರಿಗೆ ಕಾರ್ಯನಿರ್ವಹಿಸಲು ಸಲಹೆ ಮತ್ತು ನೆರವನ್ನು ನೀಡುತ್ತಾರೆ. ಅವರು ಬಹುಮತ ಪಕ್ಷದ ನಾಯಕರಾಗಿ ರಾಜ್ಯಪಾಲರಿಂದ ನೇಮಿಸಲ್ಪಡುವರು. ಅವರ ಶಿಫಾರಸ್ಸಿನ ಮೇರೆಗೆ ರಾಜ್ಯಪಾಲರು ಇತರ ಮಂತ್ರಿಗಳನ್ನು ನೇಮಿಸುತ್ತಾರೆ. ಮಂತ್ರಿಮಂಡಲವನ್ನು 'ಸಚಿವ ಸಂಪುಟ' (ಕ್ಯಾಬಿನೆಟ್) ಎನ್ನುವರು. ಇದರಲ್ಲಿ ಕ್ಯಾಬಿನೆಟ್ ದರ್ಜೆಯ ಮಂತ್ರಿಗಳು,ರಾಜ್ಯಮಂತ್ರಿಗಳುಹಾಗೂಉಪಮಂತ್ರಿಗಳು(ಡೆಪ್ಯೂಟಿ ಮಿನಿಸ್ಟರ್ಸ್) ಇರುವರು. ಮುಖ್ಯಮಂತ್ರಿಗಳು ಇತರ ಮಂತ್ರಿಗಳ ಕಾರ್ಯಚಟುವಟಿಕೆಗಳನ್ನು ನಿರ್ದೇಶಿಸುವ, ನಿಯಂತ್ರಿಸುವ ಮತ್ತು ಸಮನ್ವಯಗೊಳಿಸುವ ಅಧಿಕಾರ ಹೊಂದಿರುವರು. ಇದರಲ್ಲಿ ಪಕ್ಷದ ನಾಯಕನ ಪಾತ್ರವು, ವಿಧಾನಸಭೆಯ ನಾಯಕನ ಪಾತ್ರ ಹಾಗೂ, ಸರ್ಕಾರದ ನಾಯಕನ ಪಾತ್ರವೂ ಮುಪ್ಪುರಿಗೊಂಡಿವೆ. ಇದೇ ರೀತಿ ಮುಖ್ಯ ಕಾರ್ಯದರ್ಶಿಯವರು ಆಡಳಿತ ಮತ್ತು ಸಿಬ್ಬಂದಿ ಸೇವೆಗಳ ಮುಖ್ಯಸ್ಥರಾಗಿರುವರು. ಅಷ್ಟೇ ಅಲ್ಲದೇ ಅವರು ಮುಖ್ಯಮಂತ್ರಿಗಳೊಂದಿಗೆ ಆಡಳಿತಾತ್ಮಕ ಹೊಣೆಗಾರಿಕೆಯನ್ನು ಪರಿಣಾಮಕಾರಿಯಾಗಿ ಹಾಗೂ ಸುಲಲಿತವಾಗಿ ನಿಭಾಯಿಸುವ ಮತ್ತು ನೆರವು ನೀಡುವ ಕಾರ್ಯ ಮಾಡುವರು.

ರಾಜ್ಯ ಸರ್ಕಾರದ ಮೂರು ಪ್ರಮುಖ ಶಾಖೆಗಳೆಂದರೆ, ೧) ಮಂತ್ರಿಗಳು, ೨) ಸಚಿವಾಲಯದ ಕಾರ್ಯದರ್ಶಿಗಳು, ೩) ಇಲಾಖೆಯ ಕಾರ್ಯಾಂಗ ಮುಖ್ಯಸ್ಥರು. ಕಾರ್ಯನೀತಿಯನ್ನು ಮಂತ್ರಿಗಳು ತೀರ್ಮಾನಿಸಿದರೆ ಕಾರ್ಯದರ್ಶಿಯವರು ಸಲಹೆ ನೀಡುವರು. ಕಾರ್ಯಾಂಗದ ಮುಖ್ಯಸ್ಥರು ಕಾರ್ಯ ನೀತಿಯನ್ನು ಜಾರಿ ಮಾಡುವರು. ಮಂತ್ರಿ ಮತ್ತು ಕಾರ್ಯದರ್ಶಿ ಈ ಇಬ್ಬರು ಕಾರ್ಯನಿರ್ವಾಹಕರ ಸೇವೆಗೆ ಕಾರ್ಯದರ್ಶಿ ಕಚೇರಿಯ ವ್ಯವಸ್ಥೆಯನ್ನು ರೂಪಿಸಲಾಗಿದೆ.ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಸಚಿವಾಲಯದ ಮುಖ್ಯಸ್ಥರೂ ಸಹ ಆಗಿರುವರು. ಆಡಳಿತವನ್ನು ಸರಿಯಾದ ರೀತಿಯಲ್ಲಿ ಮತ್ತು ನೈಪುಣ್ಯತೆಯಿಂದ ನಡೆಸುವ ಜವಾಬ್ದಾರಿ ಮುಖ್ಯ ಕಾರ್ಯದರ್ಶಿಯವರದ್ದು. ಅವರ ಸಹಾಯಕ್ಕೆ ಐದು ಜನ ಅಪರ-ಮುಖ್ಯ ಕಾರ್ಯದರ್ಶಿಗಳಿದ್ದು ಆಡಳಿತದ ನಿರ್ವಹಣಾ ಜವಾಬ್ದಾರಿಯನ್ನು ಅಪರ-ಮುಖ್ಯ ಕಾರ್ಯದರ್ಶಿಗಳು ಹೊಂದಿರುತ್ತಾರೆ. ಇವರ ಅಧೀನದಲ್ಲಿ ಪ್ರಧಾನ ಕಾರ್ಯದರ್ಶಿಗಳು ಅಥವಾ ಸರ್ಕಾರದ ಕಾರ್ಯದರ್ಶಿಗಳು ಇರುವರು. ಇವರಿಗೆ ಅಧೀನವಾಗಿ ಮತ್ತು ಸಹಾಯಕರಾಗಿ ಸಹ (ಜಂಟಿ), ಉಪ ಮತ್ತು ಅಧೀನ ಕಾರ್ಯದರ್ಶಿಗಳು ಕಾರ್ಯನಿರ್ವಹಿಸುವರು. ಸಚಿವಾಲಯ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಈ ಅಧಿಕಾರಿಗಳು ಸಂಬಂಧಪಟ್ಟ ಕ್ಷೇತ್ರ ಇಲಾಖೆಗಳ ಕಾರ್ಯಚಟುವಟಿಕೆಗಳ ಉಸ್ತುವಾರಿಯ ಸಂಪೂರ್ಣ ಜವಾಬ್ದಾರಿ ಹೊಂದಿರುತ್ತಾರೆ.

ಪ್ರಸ್ತುತ ವ್ಯವಸ್ಥೆಯಲ್ಲಿ ಕಂಡು ಬರುವ ಸಚಿವಾಲಯದ ಇಲಾಖೆಗಳು ಯಾವುವೆಂದರೆ ೧)ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ೨) ಸಾರ್ವಜನಿಕ ಉದ್ದಿಮೆಗಳ ಇಲಾಖೆ, ೩) ಒಳಾಡಳಿತ ಇಲಾಖೆ, ೪) ಆರ್ಥಿಕ ಇಲಾಖೆ, ೫) ಸಾರಿಗೆ ಇಲಾಖೆ, ೬) ಮೂಲಭೂತ ಸೌಲಭ್ಯ ಅಭಿವೃದ್ಧಿ ಇಲಾಖೆ, ೭) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ೮) ಕಂದಾಯ ಇಲಾಖೆ, ೯)ಶಿಕ್ಷಣ ಇಲಾಖೆ, ೧೦)ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ೧೧)ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು

ತಂತ್ರಜ್ಞಾನ ಇಲಾಖೆ, ೧೨)ನಗರಾಭಿವೃದ್ಧಿ ಇಲಾಖೆ, ೧೩)ವಸತಿ ಇಲಾಖೆ,೧೪)ಲೋಕೋಪಯೋಗಿ ಇಲಾಖೆ,೧೫)ಜಲ ಸಂಪನ್ಮೂಲ ಇಲಾಖೆ, ೧೬)ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ೧೭)ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ೧೮)ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ೧೯) ಕೃಷಿ ಮತ್ತು ತೋಟಗಾರಿಕಾ ಇಲಾಖೆ, ೨೦)ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ೨೧)ಅರಣ್ಯ , ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ೨೨)ಸಹಕಾರ ಇಲಾಖೆ, ೨೩)ಸಮಾಜ ಕಲ್ಯಾಣ ಇಲಾಖೆ, ೨೪) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ೨೫) ಕನ್ನಡ, ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ. ೨೬) ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ೨೭) ಕಾರ್ಮಿಕ ಇಲಾಖೆ, ೨೮) ಇಂಧನ ಇಲಾಖೆ, ೨೯) ಯುವಜನ ಸೇವಾ ಇಲಾಖೆ, ೩೦) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ೩೧)ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇತ್ಯಾದಿ

ಮೈಸೂರಿನಲ್ಲಿರುವ ಆಡಳಿತ ತರಬೇತಿ ಸಂಸ್ಥೆಯ ಅಂಗಗಳಾಗಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ತರಬೇತಿ ಸಂಸ್ಥೆಗಳನ್ನು ಸರಕಾರ ಸ್ಥಾಪಿಸಿದೆ. ಇದರ ಜೊತೆಗೆ ಕರ್ನಾಟಕ ಸರ್ಕಾರದ ಸಚಿವಾಲಯ ತರಬೇತಿ ಇಲಾಖೆಯನ್ನು ಬೆಂಗಳೂರಿನಲ್ಲಿ ಆರಂಭಿಸಲಾಗಿದೆ. ಈ ಸಂಸ್ಥೆಯಲ್ಲಿ ಹಲವು ಬಗೆಯ ಸರ್ಕಾರಿ ನೌಕರ ಸಿಬ್ಬಂದಿ ವರ್ಗಕ್ಕೆ ತರಬೇತಿ ನೀಡಲಾಗುತ್ತಿದೆ. ರಾಜ್ಯದ ಅಧಿಕೃತ ಭಾಷೆ ಕನ್ನಡವಾಗಿರುವುದಲ್ಲದೆ ಈ ಭಾಷೆಯನ್ನೇ ವ್ಯವಹಾರ ಮಾಧ್ಯಮವಾಗಿ ಸರ್ಕಾರಿ ಕಚೇರಿಗಳಲ್ಲಿ ಉಪಯೋಗಿಸಬೇಕೆಂದೂ ತೀರ್ಮಾನಿಸಲಾಗಿದೆ. ಆದರೆ ರಾಜ್ಯದಲ್ಲಿರುವ ಕೇಂದ್ರ ಸರ್ಕಾರದ ಇತರ ಕಚೇರಿಗಳು ಮತ್ತು ನ್ಯಾಯಾಲಯಗಳಲ್ಲಿ ಆಂಗ್ಲ ಭಾಷೆ ಬಳಸಬಹುದು.

## ನಾಗರಿಕ ಸನ್ನದು

ಸಾರ್ವಜನಿಕರ ಅನುಕೂಲಕ್ಕಾಗಿ ಕಂದಾಯ ಇಲಾಖೆಯಿಂದ ವಿವಿಧ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಮಾಹಿತಿ ಮತ್ತು ಸೇವೆಗಳ ಸೌಲಭ್ಯವನ್ನು ಜನಸಾಮಾನ್ಯರಿಗೆ ನೀಡುವ ದೃಷ್ಟಿಯಲ್ಲಿ ಕಚೇರಿಯು ನಾಗರೀಕ ಸನ್ನದು ಪ್ರಕಟಿಸಿದೆ. ಈ ಸನ್ನದಿನಲ್ಲಿ ಸಾರ್ವಜನಿಕರು ಯಾವ ಯಾವ ಸೇವೆ, ಮಾಹಿತಿ/ದಾಖಲೆಗಳನ್ನು ಪಡೆಯಬಹುದು ಮತ್ತು ಪಡೆಯಲು ತೆಗೆದುಕೊಳ್ಳುವ ಕಾಲಾವಕಾಶದ ಬಗ್ಗೆ ಮಾಹಿತಿಯನ್ನು ಒದಗಿಸುವಲ್ಲಿ ಮಾರ್ಗದರ್ಶಿಯಾಗಿದೆ.

- ಬೇಬಾಕಿ ಪ್ರಮಾಣ ಪತ್ರ (ಭೂ ಕಂದಾಯ, ನೀರು ತೆರಿಗೆ, ಇತರ ವಸೂಲಾತಿ)
- ಜಾತಿ/ಆದಾಯ ಪತ್ರ
- ನೆಲಸಿಗರ ಪ್ರಮಾಣ ಪತ್ರ
- ವಾಸ ದೃಢೀಕರಣ ಪತ್ರ
- ಕುಟುಂಬ ಉತ್ತರ ಜೀವಿ ಸಮರ್ಥನಾ ಪತ್ರ
- ಜನನ/ಮರಣ ಪ್ರಮಾಣ ಪತ್ರ
- ರಾಷ್ಟ್ರೀಯತೆ ದೃಢೀಕರಣ ಪತ್ರ
- ಕೃಷಿ ಜಮೀನು ಹೊಂದಿರುವ ಪ್ರಮಾಣ ಪತ್ರ
- ಕೃಷಿ ಕಾರ್ಮಿಕ ಪ್ರಮಾಣ ಪತ್ರ
- ಹೆಚ್ಚುವರಿ ಭೂ ರಹಿತ ಪ್ರಮಾಣ ಪತ್ರ
- ಭೂ ಮೌಲ್ಯ ದೃಢೀಕರಣ ಪತ್ರ
- ಗ್ರಾಮೀಣ ನೆಲಸಿಗರ ದೃಢೀಕರಣ ಪತ್ರ
- ಖಾತೆ: ಹಕ್ಕು ಬದಲಾವಣೆ ಪತ್ರ
- ೧೯೬೯-೨೦೦೦ಕ್ಕಿಂತ ಮುಂಚಿನ ಹಕ್ಕು ದಾಖಲೆಗಳು
- ಹಕ್ಕು ಬದಲಾವಣೆ ಅಂಗೀಕಾರ
- ವಿಭಜನೆ
- ವಾರಸುದಾರರ ಖಾತೆ ಬದಲಾವಣೆ
- ಮಂಜೂರಾದ ಜಮೀನು ನೊಂದಾಯಿಸಲು ನಿರಾಕ್ಷೇಪಣಾ ಪತ್ರ
- ಭೂ ಕಂದಾಯ ಕಾಯ್ದೆ ಕಲಂ ೧೦೩ ಮತ್ತು ೧೦೪ ರ ಅಡಿ ಸರ್ವಜನಿಕರ ರಸ್ತೆ ಇತ್ಯಾದಿಗಳನ್ನು ಘೋಷಿಸುವುದು.
- ಭೂಕಂದಾಯ ಕಾಯಿದೆ ಕಲಂ ೧೪೧ ರಡಿಯಲ್ಲಿ ಆರ್ಬಿಟ್ರೇಷನ್ ಗಡಿ ವಿವಾದ ಇತ್ಯರ್ಥ
- ನ್ಯಾಯಾಲಯದ ಆದೇಶದ ಪ್ರತಿ
- ಭೂ ಪರಿವರ್ತನೆ
- ವೃದ್ಧಾಪ್ಯ ವೇತನ
- ಅಂಗವಿಕಲ ವೇತನ
- ವಿಧವಾ ವೇತನ
- ಸಂಧ್ಯಾ ಸುರಕ್ಷಾ ಯೋಜನೆ
- ರಾಷ್ಟ್ರೀಯ ಕುಟುಂಬ ನೆರವು ಯೋಜನೆ
- ಆದರ್ಶ ವಿವಾಹ ಯೋಜನೆ
- ಅನ್ನಪೂರ್ಣ ಯೋಜನೆ
- ಆಮ್ ಆದ್ಮಿ ಭೀಮಾ ಯೋಜನೆ
- ಹೊಸ ಪಡಿತರ ಚೀಟಿ
- ಅದ್ಯರ್ಪಣ ಪ್ರಮಾಣ ಪತ್ರ ನೀಡಿದಾಗ ನೀಡುವ ಹೊಸ ಪಡಿತರ .
- ಪಡಿತರ ಚೀಟಿಯಲ್ಲಿ ಹೆಸರು ಸೇರಿಸುವುದು: ಕೈಬಿಡುವುದು
- ಪಡಿತರ ಚೀಟಿ ಅದ್ಯರ್ಪಣೆ ಪ್ರಮಾಣ ಪತ್ರ
- ಬಂದೂಕು ಪರವಾನಗಿ : ಆಯುಧ ಪರವಾನಗಿ
- ಬಂದೂಕು: ಆಯುಧ ಪರವಾನಗಿ ನವೀಕರಣ
- ಮನರಂಜನಾ ಅನುಮತಿ
- ಪ್ರಕೃತಿ ವಿಕೋಪ ಪರಿಹಾರ
- ಬೆಳೆ ನಾಶ ಪರಿಹಾರ
- ಭೂ ಸುಧಾರಣೆ ಕಾಯ್ದೆ ೧೯೬೧ರ ಕಲಂ ೮೦ರ ಅಡಿ ಅನುಮತಿ.

## 'ಸಕಾಲ' ಸೇವಾಖಾತರಿ ಮಸೂದೆ:

ಕರ್ನಾಟಕ ಸರ್ಕಾರವು 'ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ ೨೦೧೧ನ್ನು ಜಾರಿಗೊಳಿಸುವ ಮೂಲಕ ಜನತೆಗೆ 'ಸೇವಾಖಾತರಿ' ಯನ್ನೊದಗಿಸುತ್ತಿದೆ. ಇದರ ಪ್ರಕಾರ ಪ್ರತಿಯೊಬ್ಬ ನಾಗರೀಕರೂ ಗೊತ್ತು ಮಾಡಿದ ಕಾಲ ಮಿತಿಯೊಳಗೆ ಸೇವೆಯನ್ನು ಪಡೆಯುವ ಹಕ್ಕು ಹೊಂದುತ್ತಾರೆ. ಅದಕ್ಕಾಗಿ ಸದರಿ ಅಧಿನಿಯಮದಲ್ಲಿ, ಸಾರ್ವಜನಿಕ ಪ್ರಾಧಿಕಾರದ ಪ್ರತಿಯೊಬ್ಬ ಹೆಸರಿಸಲಾದ ಅಧಿಕಾರಿ ಮತ್ತು ಆತನ ಅಧೀನ ಸಾರ್ವಜನಿಕ

ನೌಕರನು ಗೊತ್ತು ಮಾಡಿದ ಕಾಲದೊಳಗೆ ಅನುಸೂಚಿಯಲ್ಲಿ ನಿರ್ದಿಷ್ಟ ಪಡಿಸಿದ ನಾಗರಿಕ ಸಂಬಂಧಿ ಸೇವೆಯನ್ನು ಪಡೆಯಲು ಅರ್ಹರಾದ ವ್ಯಕ್ತಿಗಳಿಗೆ ಒದಗಿಸತಕ್ಕದ್ದು. ಹಾಗೂ ಅದನ್ನು ತಮ್ಮ ತಮ್ಮ ಕಛೇರಿಗಳ ಸೂಚನಾ ಫಲಕದ ಮೇಲೂ ಪ್ರಕಟಿಸಬೇಕು. ಅದಕ್ಕಾಗಿ ಸಕ್ಷಮ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರಿಯನ್ನು ನೇಮಿಸಲಾಗಿದೆ. ಸೇವೆ ನೀಡುವಲ್ಲಿ ಸಾರ್ವಜನಿಕ ನೌಕರನಿಂದ ಉಂಟಾದ ವಿಳಂಬಕ್ಕೆ ಹೊಣೆಗಾರನನ್ನಾಗಿ ಮಾಡುವುದು, ಮತ್ತು ಕರ್ತವ್ಯ ಲೋಪವೆಸಗಿದ ಸಾರ್ವಜನಿಕ ನೌಕರನಿಗೆ, ಗೊತ್ತು ಪಡಿಸಿದ ವೆಚ್ಚವನ್ನು ಜಮೆಮಾಡುವಂತೆ ಅಥವಾ ಅದನ್ನು ಆತನ ಸಂಬಳದಿಂದ ಕಡಿತಗೊಳಿಸಲು ಆದೇಶ ಮಾಡಬಹುದಾಗಿದೆ. ಅಂದರೆ ಪ್ರತಿ ದಿನದಲ್ಲಿ ಕನಿಷ್ಠ ೨೦ ರೂ ನಿಂದ ಗರಿಷ್ಠ ೫೦೦ರೂ ವರೆಗೆ ಪರಿಹಾರ ಧನವನ್ನು ಸಂಬಂಧ ಪಟ್ಟವರು ನಾಗರೀಕರಿಗೆ ನೀಡಬೇಕು. ಇಂತಹ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುವ ಹಕ್ಕನ್ನೂ ಸಹ ಕೊಡ ಮಾಡಿದ್ದು, ಮೇಲ್ಮನವಿ ಪ್ರಾಧಿಕಾರವೇ ಅಂತಿಮವಾಗಿರುತ್ತೆ.

ಸರ್ಕಾರಿ ನೌಕರರನ್ನು ನಾಗರೀಕರೆಡೆಗೆ ಸೂಕ್ಷ್ಮಗ್ರಾಹಿಗಳನ್ನಾಗಿ ಮಾಡುವ, ಕಾಲಬದ್ಧ ಸೇವೆಗಳನ್ನು ನೀಡುವ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳುವಂತೆ ಮಾಡುವ ಉದ್ದೇಶದಿಂದ ಈ ಕಾಯ್ದೆಯನ್ನು ತರಲಾಗಿದೆ. ಸರ್ಕಾರಿ ಸೇವೆಗಳ ಸೌಲಭ್ಯಗಳನ್ನು ಸುಲಭವಾಗಿ, ಯಾವುದೇ ಅಡೆತಡೆಗಳಿಲ್ಲದೇ ಸಕಾಲದಲ್ಲಿ ಸಾರ್ವಜನಿಕರು ಪಡೆದುಕೊಳ್ಳಬೇಕೆಂಬ ಆಶಯದಿಂದ ಕರ್ನಾಟಕ ಸರ್ಕಾರವು 'ನಾಗರಿಕ ಸೇವಾ ಖಾತರಿ ಕಾಯ್ದೆ-೨೦೧೧'ನ್ನು ಜಾರಿಗೆ ತರಲು ಉದ್ದೇಶಿಸಿದೆ. ಪ್ರಾಯೋಗಿಕವಾಗಿ ಮಾರ್ಚ್ ೧, ೨೦೧೨ರಿಂದ ಬೀದರ್, ಚಿತ್ರದುರ್ಗ, ಧಾರವಾಡ ಮತ್ತು ಉಡುಪಿ ಜಿಲ್ಲೆಗಳ ಒಂದೊಂದು ತಾಲೂಕಿನಲ್ಲಿ ಜಾರಿಗೊಳಿಸಲಾಗುತ್ತಿದೆ. ಇದರಲ್ಲಿ ೧೫೧ ಸೇವಾ ಸೌಲಭ್ಯಗಳನ್ನೊದಗಿಸುವ ೧೧ ಇಲಾಖೆಗಳು ಒಳಗೊಂಡಿವೆ. ನಾಗರಿಕ ಸಂಬಂಧಿಸೇವೆ ಪಡೆದುಕೊಳ್ಳುವ ಯಾರು ಬೇಕಾದರೂ ಆನ್‌ಲೈನ್‌ನಲ್ಲಿ ಮಾಹಿತಿ ಪಡೆಯುವ, ಮೇಲ್ವಿಚಾರಣೆ ನಡೆಸುವ ಹಕ್ಕನ್ನು ಹೊಂದಿರುತ್ತಾರೆ. ವಿದ್ಯುನ್ಮಾನ ಆಡಳಿತ ಭಾಗವಾದ ಈ ಸೌಲಭ್ಯ ಸಾರ್ವಜನಿಕರಿಗೆ ಅತ್ಯಂತ ಉಪಯುಕ್ತವಾಗಬಲ್ಲದು.

**ಕರ್ನಾಟಕದ ಮುಖ್ಯ ಕಾರ್ಯದರ್ಶಿಗಳು**

| ಮುಖ್ಯ ಕಾರ್ಯದರ್ಶಿಯವರ ಹೆಸರು ಶ್ರೀಮತಿ/ಶ್ರೀ. | | ಅಧಿಕಾರಾವಧಿ | |
|---|---|---|---|
| | | ಇಂದ | ವರೆಗೆ |
| ಪಿ.ವಿ.ಆರ್. ರಾವ್ | ಭಾ.ನಾ.ಸೇ | ೦೧-೧೧-೧೯೫೬ | ೦೬-೦೧-೧೯೬೦ |
| ಎನ್.ಎಸ್. ಹಿರಣ್ಣಯ್ಯ | ಭಾ.ಆ.ಸೇ | ೦೬-೦೧-೧೯೬೦ | ೧೮-೧೧-೧೯೬೦ |
| ಆರ್.ಜಿ. ರೆಬೆಲ್ಲೋ | ಭಾ.ಆ.ಸೇ | ೧೮-೧೧-೧೯೬೦ | ೧೩-೧೧-೧೯೬೨ |
| ಕೆ.ನಾರಾಯಣಸ್ವಾಮಿ | ಭಾ.ಆ.ಸೇ | ೧೩-೧೧-೧೯೬೨ | ೦೧-೦೫-೧೯೬೩ |
| ಕೆ.ಬಾಲಚಂದ್ರನ್ | ಭಾ.ನಾ.ಸೇ | ೦೧-೦೫-೧೯೬೩ | ೧೮-೦೩-೧೯೬೭ |
| ಕೆ. ನಾರಾಯಣಸ್ವಾಮಿ | ಭಾ.ಆ.ಸೇ | ೧೮-೦೩-೧೯೬೭ | ೨೫-೦೮-೧೯೬೮ |
| ಆರ್.ಎನ್. ವಾಸುದೇವ | ಭಾ.ಆ.ಸೇ | ೨೬-೦೮-೧೯೬೮ | ೦೭-೦೨-೧೯೭೧ |
| ಆರ್.ಜಿ. ರೆಬೆಲ್ಲೋ | ಭಾ.ಆ.ಸೇ | ೦೮-೦೨-೧೯೭೧ | ೦೧-೦೬-೧೯೭೪ |
| ಜಿ.ವಿ.ಕೆ. ರಾವ್ | ಭಾ.ಆ.ಸೇ | ೦೧-೦೬-೧೯೭೪ | ೧೯-೦೭-೧೯೭೭ |
| ಕೆ. ನರಸಿಂಹರಾವ್ | ಭಾ.ಆ.ಸೇ | ೨೦-೦೭-೧೯೭೭ | ೨೮-೦೨-೧೯೮೨ |
| ಆರ್.ಎ. ನಾಯಕ್ | ಭಾ.ಆ.ಸೇ | ೦೧-೦೩-೧೯೮೨ | ೩೦-೦೯-೧೯೮೩ |
| ಟಿ.ಆರ್. ಸತೀಶ್‌ಚಂದ್ರನ್ | ಭಾ.ಆ.ಸೇ | ೦೧-೧೦-೧೯೮೩ | ೩೧-೧೦-೧೯೮೭ |
| ಎ.ಬಿ. ದಾತಾರ್ | ಭಾ.ಆ.ಸೇ | ೩೧-೧೦-೧೯೮೭ | ೩೦-೦೯-೧೯೮೯ |
| ಕೆ.ಎಸ್.ಎನ್. ಮೂರ್ತಿ | ಭಾ.ಆ.ಸೇ | ೦೧-೧೦-೧೯೮೯ | ೩೧-೦೫-೧೯೯೦ |
| ಎಂ. ಶಂಕರನಾರಾಯಣ | ಭಾ.ಆ.ಸೇ | ೦೧-೦೬-೧೯೯೦ | ೦೪-೦೧-೧೯೯೧ |
| ಎನ್.ಕೆ. ಪ್ರಭಾಕರ ರಾವ್ | ಭಾ.ಆ.ಸೇ | ೦೪-೦೧-೧೯೯೧ | ೩೧-೧೦-೧೯೯೧ |
| ಟಿ.ಪಿ. ಇಸ್ಸಾರ್ | ಭಾ.ಆ.ಸೇ | ೩೧-೧೦-೧೯೯೧ | ೨೮-೦೮-೧೯೯೨ |
| ಜೆ. ಅಲೆಗ್ಸಾಂಡರ್ | ಭಾ.ಆ.ಸೇ | ೨೯-೦೮-೧೯೯೨ | ೩೦-೧೧-೧೯೯೨ |
| ಜೆ.ಸಿ. ಲಿನ್ | ಭಾ.ಆ.ಸೇ | ೦೧-೧೨-೧೯೯೨ | ೩೧-೧೨-೧೯೯೪ |
| ಎಸ್.ಬಿ. ಮುದ್ದಪ್ಪ | ಭಾ.ಆ.ಸೇ | ೩೧-೧೨-೧೯೯೪ | ೩೦-೧೨-೧೯೯೫ |
| ಸಿಸಿಲ್ ನೊರೋನ್ಹ | ಭಾ.ಆ.ಸೇ | ೩೦-೧೨-೧೯೯೫ | ೩೧-೦೮-೧೯೯೬ |
| ಬಿ.ಆರ್. ಪ್ರಭಾಕರ್ | ಭಾ.ಆ.ಸೇ | ೩೧-೦೮-೧೯೯೬ | ೩೧-೦೭-೧೯೯೭ |

| | | | |
|---|---|---|---|
| ಬಿ.ಕೆ. ಭಟ್ಟಾಚಾರ್ಯ | ಭಾ.ಆ.ಸೇ | ೩೧-೦೭-೧೯೯೭ | ೩೧-೧೨-೨೦೦೦ |
| ಥೆರೆಸಾ ಭಟ್ಟಾಚಾರ್ಯ | ಭಾ.ಆ.ಸೇ | ೩೧-೧೨-೨೦೦೦ | ೩೦-೦೩-೨೦೦೨ |
| ಡಾ.ಎ. ರವೀಂದ್ರ | ಭಾ.ಆ.ಸೇ | ೩೦-೦೩-೨೦೦೨ | ೩೦-೧೨-೨೦೦೨ |
| ಬಿ.ಎಸ್. ಪಾಟೀಲ್ | ಭಾ.ಆ.ಸೇ | ೩೦-೧೨-೨೦೦೨ | ೩೧-೦೧-೨೦೦೪ |
| ಕೆ.ಕೆ. ಮಿಶ್ರ | ಭಾ.ಆ.ಸೇ | ೩೧-೦೧-೨೦೦೪ | ೩೦-೦೭-೨೦೦೫ |
| ಬಿ.ಕೆ. ದಾಸ್ | ಭಾ.ಆ.ಸೇ | ೩೦-೦೭-೨೦೦೫ | ೩೦-೦೯-೨೦೦೬ |
| ಮಾಲತಿ ದಾಸ್ | ಭಾ.ಆ.ಸೇ | ೩೦-೦೯-೨೦೦೬ | ೩೧-೧೨-೨೦೦೬ |
| ಪ್ರಹ್ಲಾದ್ ಬಿ. ಮಹಿಷಿ | ಭಾ.ಆ.ಸೇ | ೩೧-೧೨-೨೦೦೬ | ೦೭-೦೨-೨೦೦೮ |
| ಸುಧಾಕರ್ ರಾವ್ | ಭಾ.ಆ.ಸೇ | ೦೭-೦೨-೨೦೦೮ | ೩೦-೦೯-೨೦೦೯ |
| ಎಸ್.ವಿ. ರಂಗನಾಥ್ | ಭಾ.ಆ.ಸೇ | ೦೧-೧೦-೨೦೦೯ | ೩೧-೧೦-೨೦೧೩ |
| ಕೌಶಿಕ್ ಮುಖರ್ಜಿ | ಭಾ.ಆ.ಸೇ | ೩೧-೧೦-೨೦೧೩ | ೩೧-೧೨-೨೦೧೫ |
| ಅರವಿಂದ ಜಾಧವ್ | ಭಾ.ಆ.ಸೇ | ೩೧-೧೨-೨೦೧೫ | ೨೯-೦೯-೨೦೧೬ |
| ಸುಭಾಷ್‌ಚಂದ್ರ ಕುಂಟಿಯಾ | ಭಾ.ಆ.ಸೇ | ೨೯-೦೯-೨೦೧೬ | |

## ಪೋಲೀಸ್ ಆಡಳಿತ

ಮೈಸೂರು ಅರಸರ ಆಡಳಿತದಲ್ಲಿ ಪೋಲೀಸರ ಕರ್ತವ್ಯಗಳನ್ನು ತಳವಾರ, ತೋಟಿ, ನೀರ್ಗಂಟಿ, ಕಾವಲುಗಾರ, ಕಟ್ಟಾ, ಬಿಡಿಸೇವಕ, ಹಳೇಪೈಕ, ಉಂಬಳಿದಾರ, ಅಮರಗಾರ, ಹುಲ್ಲಾಗವಲ ಅಂಕಾಮಾಲಾ ಮತ್ತು ಕಳ್ಳಕೊರಮ–ಮೊದಲಾದವರು ಪಟೇಲರ ಮೇಲ್ವಿಚಾರಣೆಯಲ್ಲಿ ಮಾಡುತ್ತಿದ್ದರು. ಈ ವ್ಯವಸ್ಥೆ ರಾಜ ಮನೆತನದ ಮೈಸೂರಿನಲ್ಲಿ ಟಿಪ್ಪು ಮತ್ತು ಪೂರ್ಣಯ್ಯನವರ ಅಧಿಕಾರಾವಧಿಯಲ್ಲಿ ಜಾರಿಯಲ್ಲಿತ್ತು. ದಿವಾನ ಪೂರ್ಣಯ್ಯನವರು ಕಂದಾಚಾರ ಸೇವಕರನ್ನು ಪೋಲೀಸು ಕಾರ್ಯಕ್ಕೆ ನೇಮಕ ಮಾಡಿದ್ದರು. ೧೮೫೬ ರಲ್ಲಿ ನ್ಯಾಯಿಕ ಆಯುಕ್ತರ (ಜ್ಯುಡಿಷಿಯಲ್ ಕಮಿಷನರ್) ಕಚೇರಿಯನ್ನು ಪ್ರಾರಂಭಿಸಿ, ಅವರನ್ನೇ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ (ಪದನಿಮಿತ್ತ) ಮಾಡಲಾಯಿತು. ೧೮೭೯ ರಲ್ಲಿ ಮುಖ್ಯ ಆಯುಕ್ತರೇ (ಚೀಫ್ ಕಮಿಷನರ್) ಪೋಲೀಸ್ ಇಲಾಖೆಗೂ ನಿಯುಕ್ತಗೊಂಡಿದ್ದರು. ರಾಜ್ಯವನ್ನು ಬ್ರಿಟಿಷರ ವಶಕ್ಕೆ ನೀಡಿದ ಮೇಲೆ, ಪೋಲೀಸು ಆಡಳಿತ ದಿವಾನರ ನಿಯಂತ್ರಣದಲ್ಲಿದ್ದಿತು. ಆನಂತರ ಪೋಲೀಸ್ ಕಾರ್ಯದರ್ಶಿಯ ನೇಮಕವಾಯಿತು. ೧೯೦೬ ರಲ್ಲಿ ಪೋಲೀಸ್ ಸೂಪರಿಂಟೆಂಡೆಂಟ್ ಮತ್ತು ಸಹಾಯಕ ಸೂಪರಿಂಟೆಂಡೆಂಟ್ ಹುದ್ದೆಗಳನ್ನು ಕಮಿಷನರ್ ಶ್ರೇಣಿಯ ಹುದ್ದೆಯಲ್ಲಿ ವಿಲೀನ ಮಾಡಲಾಯಿತು. ೧೯೧೦ರ ಹೊತ್ತಿಗೆ ಮೈಸೂರಿನ ಪೋಲೀಸ್ ಪಡೆಯಲ್ಲಿ ಗ್ರಾಮ ಪೋಲೀಸು ಮತ್ತು ಸಾಧಾರಣ ಪೋಲೀಸ್ ದಳಗಳಿದ್ದವು.

ಮದರಾಸು ಕರ್ನಾಟಕ ಪ್ರದೇಶದಲ್ಲಿ ತಲಾರಿ (ಸೇವಕ) ಪ್ರತಿ ಗ್ರಾಮದಲ್ಲಿದ್ದು ಕಾರ್ಯ ಮಾಡುತ್ತಿದ್ದನು. ಇದು ಹಳೆಯ 'ಕಾವಲು ವ್ಯವಸ್ಥೆ' ಮಾದರಿಯಾಗಿತ್ತು. ಈ ವ್ಯವಸ್ಥೆಯಲ್ಲಿ ಕಾವಲುಗಾರರ ಅಧೀನರಾಗಿ ತಲಾರಿ' ಸೇವೆಯಲ್ಲಿ ನಿರತರಾಗಿದ್ದರು. ಇವರನ್ನು ಪಾಳೇಗಾರರು ಮತ್ತು ಸ್ಥಳೀಯ ಸೇನಾ ನಾಯಕರು ನಿಯಂತ್ರಿಸುತ್ತಿದ್ದರು. ಆನಂತರ ಪಟೇಲರು ಈ ಸೇವಾ ನೌಕರರ ಮೇಲ್ವಿಚಾರಕರಾಗಿದ್ದರು. ೧೯೦೪ ರಲ್ಲಿ ಮದರಾಸ್ ಪ್ರೆಸಿಡೆನ್ಸಿಯಲ್ಲಿ ಪ್ರತೀ ಆರು ಚದರ ಮೈಲಿ ಪ್ರದೇಶಕ್ಕೆ ಒಬ್ಬ ಪೋಲೀಸ್ ಪೇದೆಯು ಇದ್ದುದಾಗಿ ತಿಳಿದು ಬರುವುದು. ಇನ್ಸ್‌ಪೆಕ್ಟರ್ ಜನರಲ್ ಈ ಇಲಾಖೆಯ ಮುಖ್ಯಸ್ಥರಾಗಿದ್ದರು. ಪ್ರತೀ ಜಿಲ್ಲೆಯೂ ಪೋಲೀಸ್ ಸೂಪರಿಂಟೆಂಡೆಂಟ್‌ರ ಅಧೀನದಲ್ಲಿತ್ತು. ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ನಿಯತಕಾಲಿಕ ಪೋಲೀಸ್ ಪಡೆ ವ್ಯವಸ್ಥೆ ರೂಪುಗೊಂಡಿತ್ತು. ೧೮೨೭ ಫಿಖಿಖ ನೇ ಬಾಂಬೆ ಅಧಿನಿಯಮದನ್ವಯ ಜಿಲ್ಲಾ ಮ್ಯಾಜಿಸ್ಟ್ರೇಟರು ಈ ವ್ಯವಸ್ಥೆಯ ಆಡಳಿತಾತ್ಮಕ ನಿಯಂತ್ರಣ ಹೊಂದಿದ್ದರು. ಹೀಗಾಗಿ ಪ್ರತೀ ಜಿಲ್ಲೆಯಲ್ಲೂ ಪೋಲೀಸ್ ಸೂಪರಿಂಟೆಂಡೆಂಟರಿದ್ದರು. ಇದಕ್ಕೂ ಮುನ್ನ ಪಟೇಲರ ನೇತೃತ್ವದಲ್ಲಿ ಗ್ರಾಮ ಸೇವಾಪಡೆಯಲ್ಲಿ ತಲಾರಿ ಮತ್ತು ಶೇಟ್ ಸನ್ನದಿಗಳು ಕಾರ್ಯನಿರ್ವಹಿಸುತ್ತಿದ್ದರು.

ಹೈದರಾಬಾದ್ ಕರ್ನಾಟಕದಲ್ಲಿ ೧೮೫೩ರ ವರೆವಿಗೂ ವ್ಯವಸ್ಥಿತ ಪೋಲೀಸ್ ಸೇವೆ ಇರಲಿಲ್ಲ. ೧೮೬೬ ರಲ್ಲಿ ನಿಯತ ಪೋಲೀಸ್ ಪಡೆಯನ್ನು ಆರಂಭಿಸಿ ರೆವೆನ್ಯೂ ಅಧಿಕಾರಿಗಳ ಅಧೀನಕ್ಕೆ ಒಳಪಡಿಸಲಾಯಿತು. ೧೮೬೯ ರಲ್ಲಿ ವಿಶೇಷ ಸದರ್ ಉಲ್ ಮೊಹಾನ್ ಅಥವಾ ಪೋಲೀಸ್ ಮಂತ್ರಿಯನ್ನು ಹೈದರಾಬಾದ್ ರಾಜ್ಯದಲ್ಲಿ ನೇಮಿಸಲಾಯಿತು. ೧೯೪೮ರ ನಂತರ ಕಲಬುರಗಿ ವಿಭಾಗೀಯ ಕೇಂದ್ರ ಆರಂಭಿಸಲ್ಪಟ್ಟು, ಕಲಬುರಗಿ, ಬೀದರ್, ರಾಯಚೂರು ಮತ್ತು ಉಸ್ಮಾನಾಬಾದ್ ಜಿಲ್ಲೆಗಳನ್ನು ಅದಕ್ಕೆ ಸೇರಿಸಲಾಯಿತು. ಆ ಕಾಲಕ್ಕೆ ಎರಡು ಪೋಲೀಸ್ ಪಡೆಗಳಿದ್ದವು. ೧) ನಿಜಾಮನ ಸರ್ಕಾರದಲ್ಲಿ ದಿವಾನರ ಪೋಲೀಸ್. ಮತ್ತು ೨) ಜಹಗೀರ್‌ದಾರರ ವೈಯಕ್ತಿಕ ಪೋಲೀಸ್ (ಇವರಿಗೆ ತಮ್ಮದೇ ಆದ ಪೋಲೀಸ್ ವ್ಯವಸ್ಥೆಯನ್ನು ಇಟ್ಟುಕೊಳ್ಳಲು ಪರವಾನಗಿ ಚಾಲ್ತಿಯಲ್ಲಿದ್ದು ತನ್ಮೂಲಕ ಕಾನೂನು ಸುವ್ಯವಸ್ಥೆಯನ್ನು ಸಂರಕ್ಷಿಸಬಹುದಾಗಿತ್ತು).

ಭಾರತ ಉಪ ಖಂಡದಲ್ಲಿ ಕರ್ನಾಟಕ ರಾಜ್ಯ ಪೋಲೀಸ್ ತನ್ನ ಅಪರಾಧ ಪತ್ತೆ ಕಾರ್ಯ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವುದಲ್ಲಿ ತನ್ನದೇ ಅದ ಹೆಸರನ್ನು ಹೊಂದಿದೆ. ಬದಲಾದ ನಗರೀಕರಣ ಮತ್ತು ಆಧುನಿಕತೆಗೆ ಅನುಗುಣವಾಗಿ ಸೇವೆಯನ್ನು ಅಳವಡಿಸಿಕೊಂಡು ನಾಗರೀಕರ ಜೊತೆಯಲ್ಲಿ ಉತ್ತಮ ಬಾಂದವ್ಯವನ್ನು ಇಟ್ಟುಕೊಂಡು ಅವರ ಸಹಕಾರದೊಂದಿಗೆ ಉತ್ತಮವಾದ ಸೇವೆಯನ್ನು ಕೊಡುವುದೇ ಕರ್ನಾಟಕ ಪೋಲೀಸ್

ಇಲಾಖೆಯ ಮುಖ್ಯ ಉದ್ದೇಶವಾಗಿದ್ದು. ಆ ಮಾರ್ಗದಲ್ಲಿ ರಾಜ್ಯ ಪೊಲೀಸ್ ವ್ಯವಸ್ಥೆ ಕ್ರಿಯಾತ್ಮಕ ಮತ್ತು ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಿದೆ. ತನ್ನ ಎಲ್ಲಾ ಕ್ಷೇತ್ರಗಳಲ್ಲೂ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವುದು ಈ ಇಲಾಖೆಯ ಕಾರ್ಯವಿಧಾನದ ಮಾರ್ಗಸೂಚಿ.

ಮಹಾ ನಿರ್ದೇಶಕರು ಮತ್ತು ಪೊಲೀಸ್ ಮಹಾ ನಿರೀಕ್ಷಕರವರು ಕರ್ನಾಟಕ ರಾಜ್ಯದ ಪೊಲೀಸ್ ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ. ಇವರ ಅಧೀನದಲ್ಲಿ ಪೊಲೀಸ್ ಮಹಾ ನಿರ್ದೇಶಕ ದರ್ಜೆಯ ಮತ್ತು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರ ದರ್ಜೆಯ ಅಧಿಕಾರಿಗಳು ಇದ್ದು, ಈ ಮಹಾ ನಿರ್ದೇಶಕ ದರ್ಜೆಯ ಅಧಿಕಾರಿಗಳು ನಿಗಧಿಪಡಿಸಿದ ತರಬೇತಿ ಮತ್ತು ಸಿ.ಐ.ಡಿ. ವಿಭಾಗಗಳನ್ನು ನೋಡಿಕೊಳ್ಳತ್ತಿದ್ದು ಮತ್ತು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರುಗಳು, ನಿಗಧಿಪಡಿಸಿದ ವಿಭಾಗಗಳನ್ನು, ಅಂದರೆ ಕಾನೂನು ಮತ್ತು ಸುವ್ಯವಸ್ಥೆ, ಅಪರಾಧ ಮತ್ತು ತಾಂತ್ರಿಕ ಸೇವೆಗಳು, ಆಡಳಿತ, ಕುಂದು ಕೊರತೆಗಳು ಮತ್ತು ಮಾನವ ಹಕ್ಕುಗಳು, ಬೆಂಗಳೂರು ಮಹಾನಗರ ಕಾರ್ಯಪಡೆ, ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಸಂಪರ್ಕ ಲಾಜೆಸ್ಟಿಕ್ ಮತ್ತು ಆಧುನೀಕರಣ, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ರಾಜ್ಯ ಅಪರಾಧ ದಾಖಲಾತಿ ಮತ್ತು ಗಣಕ ವಿಭಾಗ, ರಾಜ್ಯ ಗುಪ್ತವಾರ್ತೆ, ಆಂತರಿಕ ಭದ್ರತೆ ವಿಭಾಗ, ಮತ್ತು ರೈಲ್ವೇಸ್ ಇತ್ಯಾದಿಗಳನ್ನು ನೋಡಿಕೊಳ್ಳುತ್ತಾರೆ.ರಾಜ್ಯದ ಐದು ಮಹಾ ನಗರಗಳಲ್ಲಿ ಐದು ಪೊಲೀಸ್ ಆಯುಕ್ತರುಗಳು (ಕಮೀಷನರೇಟ್), ಕಾರ್ಯ ನಿರ್ವಹಿಸುತ್ತಿದ್ದು, ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರ ಶ್ರೇಣಿಯ ಅಧಿಕಾರಿ ಬೆಂಗಳೂರು ನಗರದ ಪೊಲೀಸ್ ಆಯುಕ್ತರಾಗಿಯೂ, ಪೊಲೀಸ್ ಮಹಾನಿರೀಕ್ಷಕರ ದರ್ಜೆಯ ಅಧಿಕಾರಿಗಳು, ಮೈಸೂರು ನಗರ ಮಂಗಳೂರು ಮತ್ತು ಹುಬ್ಬಳ್ಳಿ–ಧಾರವಾಡ ನಗರ ಹಾಗೂ ಬೆಳಗಾವಿ ನಗರಗಳ ಆಯುಕ್ತರಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.

ಪೊಲೀಸ್ ಮಹಾ ನಿರೀಕ್ಷಕ ಶ್ರೇಣಿಯ ಅಧಿಕಾರಿಗಳು ಆರು ವಲಯಗಳ ಮುಖ್ಯಸ್ಥರಾಗಿರುತ್ತಾರೆ. ಪ್ರತಿ ವಲಯದಲ್ಲಿ ನಾಲ್ಕರಿಂದ ಆರು ಜಿಲ್ಲೆಗಳು ಇರುತ್ತದೆ. (ಪ್ರತಿ ಜಿಲ್ಲೆಯಲ್ಲಿ ಪೊಲೀಸ್ ಅಧೀಕ್ಷಕರ ಶ್ರೇಣಿಯ ಅಧಿಕಾರಿಯವರು ಮುಖ್ಯಸ್ಥರಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ), ಅಲ್ಲದೇ ಪೊಲೀಸ್ ಮಹಾ ನಿರೀಕ್ಷಕರ ಶ್ರೇಣಿಯ ಅಧಿಕಾರಿಗಳು ನಿಗಧಿಪಡಿಸಿದ ನಿರ್ದಿಷ್ಟ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ. ಇವುಗಳಲ್ಲಿ ಯೋಜನೆ ಮತ್ತು ಆಧುನೀಕರಣ, ಸಂಚಾರ ಮತ್ತು ರಸ್ತೆ ಸುರಕ್ಷತೆ, ಆಡಳಿತ, ಕೇಂದ್ರಸ್ಥಾನ, ಜಲಸಂಪನ್ಮೂಲ, ನಕ್ಸಲ್ ನಿಗ್ರಹಪಡೆ, ತರಬೇತಿ, ಆರ್ಥಿಕ ಅಪರಾಧಗಳು, ಕರ್ನಾಟಕ ರಾಜ್ಯ ಮೀಸಲು ಪಡೆ, ಅರಣ್ಯ ಘಟಕ, ಕರ್ನಾಟಕ ಪೊಲೀಸ್ ಅಕಾಡೆಮಿ, ಕರಾವಳಿ ಭದ್ರತಾ ಪೊಲೀಸ್, ಹಾಗೂ ೪ ಪೊಲೀಸ್ ಮಹಾನಿರೀಕ್ಷಕ ಶ್ರೇಣಿಯ ಅಧಿಕಾರಿಗಳು ಬೆಂಗಳೂರು ನಗರ ಅಪರ ಪೊಲೀಸ್ ಆಯುಕ್ತರಾಗಿ ಕಾನೂನು ಮತ್ತು ಸುವ್ಯವಸ್ಥೆ (ಎರಡು), ಸಂಚಾರ ಮತ್ತು ಆಡಳಿತ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.ಆಂತರಿಕ ಭದ್ರತೆಯನ್ನು ಬಲಪಡಿಸಿ ಕಾರ್ಯ ನಿರ್ವಹಿಸುವುದು, ಮುಂದಿನ ವರ್ಷಗಳಲ್ಲಿ ಅಪರಾಧಗಳ ತಡೆ ಕುರಿತು ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು. ಮಾನವ ಹಕ್ಕುಗಳ ಮತ್ತು ಲಿಂಗ ಸಂಬಂಧ ಅಪರಾಧಗಳು ಇವುಗಳ ಬಗ್ಗೆ ಅರಿವು ಮೂಡಿಸುವ ಕುರಿತು ಅಂತರಾಷ್ಟ್ರೀಯ ಮಟ್ಟದ ಮಾನದಂಡವನ್ನು ಪೊಲೀಸ್ ಕೆಲಸದಲ್ಲಿ ಅಳವಡಿಸುವುದು ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಮಹತ್ವದ ಗುರಿಯಾಗಿರುತ್ತಾರೆ.ಅಪರಾಧ ಎದುರಿಸುವಲ್ಲಿ ಬದಲಾವಣೆಗಳು:ಕಳೆದ ಕೆಲವು ದಶಕಗಳಲ್ಲಿ ಹೊಸ ಜಟಿಲ ಮತ್ತು ಸಂಕೀರ್ಣ ಸ್ವರೂಪದ ಅಪರಾಧಗಳು ಪ್ರಪಂಚದಾದ್ಯಂತ ಹರಡಿವೆ. ಅತೀ ವೇಗವಾಗಿ ಅಭಿವೃದ್ಧಿಯಾಗುತ್ತಿರುವ ಔದ್ಯೋಗಿಕರಣ ಮತ್ತು ನಗರೀಕರಣದಿಂದಾಗಿ ಹಾಗೂ ಸಾಕಷ್ಟು ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆಗಳು ಉದ್ಭವಿಸುವ ಸಂಭವವಿರುತ್ತದೆ. ಪ್ರಸ್ತುತ ಜಟಿಲ ಸಮಸ್ಯೆಗಳ ಪರಿಸ್ಥಿತಿಯ ಬಗ್ಗೆ ಅರಿವು ಮೂಡಿಸಲು ಪೊಲೀಸ್ ಇಲಾಖೆಯ ಪರಿಣಾಮಕಾರಿಯಾಗಿ ಕರ್ತವ್ಯ ನಿರ್ವಹಿಸಲು ಅತಿ ಹೆಚ್ಚಿನ ಸೌಲಭ್ಯವನ್ನು ಕಲ್ಪಿಸುವುದು ಅಗತ್ಯ.

**ಈಗಿನ ಅಪರಾಧ ಪ್ರಕರಣಗಳು ವಿವಿಧ ಹಂತಗಳನ್ನು ಮೀರಿದ್ದು ಅವುಗಳು ಕೆಳಗಿನಂತಿವೆ:**

೧) ಭಯೋತ್ಪಾದನೆ, ಗಡಿ ಪ್ರದೇಶದ ಭಯೋತ್ಪಾದನೆ, ಹೈಜಾಕಿಂಗ್ ಇತ್ಯಾದಿ, ೨) ಎಡ ಪಂಥೀಯ ಭಯೋತ್ಪಾದನೆ, ೩) ಗಡಿ ಮತ್ತು ಕಡಲ ತೀರ ಭದ್ರತೆ, ೪) ನಾರ್ಕೋಟೀಸ್ ಮತ್ತು ನಾರ್ಕೋ ಭಯೋತ್ಪಾದನೆ, ೫) ಸೈಬರ್ ಕ್ರೈಂ, ಹ್ಯಾಕಿಂಗ್ ಮತ್ತು ಅಂತರ್ಜಾಲವನ್ನು ನಾಶಪಡಿಸುವುದು, ಐಡೆಂಟಿಟಿ ತೆಫ್ಟ್, ಸೈಬರ್ ಭಯೋತ್ಪಾದನೆ ಇತ್ಯಾದಿ, ೬) ಆರ್ಥಿಕ ಅಪರಾಧಗಳು, ಬ್ಯಾಂಕಿಂಗ್, ಮತ್ತು ಎನ್.ಬಿ.ಎಫ್.ಡಿ ಮತ್ತು ಕಾರ್ಪೋರೇಟ್ ಮೋಸ, ೭) ಖೋಟಾ ನೋಟುಗಳ ಮುದ್ರಣ, ೮) ಸಂಘಟಿತ ಅಪರಾಧಗಳನ್ನೊಳಗೊಂಡ ಮಾಫಿಯಾ ಮತ್ತು ಗ್ಯಾಂಗ್‌ಗಳು, ೮) ಭ್ರಷ್ಟಾಚಾರ, ೯) ಪರಿಸರ ಸಂಬಂಧಿತ ಅಪರಾಧಗಳು, ೧೦) ನೈತಿಕ ಪೊಲೀಸ್ ಮತ್ತು ಕೋಮುವಾರು ಮತ್ತು ಜಾತಿಯ ಸಂಘರ್ಷಗಳು, ೧೧) ಮಾನವ ಕಳ್ಳಸಾಗಾಣಿಕೆ, ೧೨) ಆರ್ಗನ್ ಟ್ರೇಡ್ (ಮಾನವ ದೇಹದ ಅಂಗಾಂಗಗಳ ವ್ಯಾಪಾರ), ೧೩) ಚುನಾವಣೆಗಳಿಗೆ ಸಂಬಂಧಪಟ್ಟಂತೆ ಹಿಂಸೆ ಮತ್ತು ಅಪರಾಧಗಳು, ೧೪) ಮಹಾನಗರಗಳಲ್ಲಿ ಅವ್ಯವಸ್ಥಿತ ಸಂಚಾರಿ ವ್ಯವಸ್ಥೆ, ಇತ್ಯಾದಿ.

| ವಿವಿಧ ವಲಯಗಳಡಿಯಲ್ಲಿ ಬರುವ ಜಿಲ್ಲೆಗಳ ವಿವರ: | | |
|---|---|---|
| ಕ್ರ.ಸ. | ವಲಯ | ಜಿಲ್ಲೆ |
| ೧ | ದಕ್ಷಿಣ ವಲಯ, ಮೈಸೂರು | ಮೈಸೂರು, ಕೊಡಗು, ಮಂಡ್ಯ, ಹಾಸನ ಮತ್ತು ಚಾಮರಾಜನಗರ |
| ೨ | ಪಶ್ಚಿಮ ವಲಯ, ಮಂಗಳೂರು | ದಕ್ಷಿಣ ಕನ್ನಡ, ಉತ್ತರ ಕನ್ನಡ, ಚಿಕ್ಕಮಗಳೂರು, ಉಡುಪಿ |
| ೩ | ಪೂರ್ವ ವಲಯ,ದಾವಣಗೆರೆ | ಚಿತ್ರದುರ್ಗ, ಶಿವಮೊಗ್ಗ, ದಾವಣಗೆರೆ, ಹಾವೇರಿ |
| ೪ | ಕೇಂದ್ರ ವಲಯ, ಬೆಂಗಳೂರು | ತುಮಕೂರು,ಕೋಲಾರ, ಬೆಂಗಳೂರು, ಕೆ.ಜಿ.ಎಫ್., ರಾಮನಗರ, ಚಿಕ್ಕಬಳ್ಳಾಪುರ |
| ೫ | ಉತ್ತರ ವಲಯ, ಬೆಳಗಾವಿ | ಬೆಳಗಾವಿ, ವಿಜಯಪುರ, ಧಾರವಾಡ, ಬಾಗಲಕೋಟೆ, ಗದಗ |
| ೬ | ಈಶಾನ್ಯ ವಲಯ, ಕಲಬುರಗಿ | ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ |

ಐದು ಪೊಲೀಸ್ ಆಯುಕ್ತ ಕಛೇರಿಗಳು ಹಾಗೂ ಒಟ್ಟು ೩೦ ಪೊಲೀಸ್ ಘಟಕಗಳಿರುತ್ತವೆ. (ರೈಲ್ವೆ ಪೊಲೀಸ್ ಹೊರತುಪಡಿಸಿ) ರೈಲ್ವೆ ಪೊಲೀಸ್ ಘಟಕವನ್ನು ಪ್ರತ್ಯೇಕ ಘಟಕವೆಂದು ಪರಿಗಣಿಸಲಾಗಿದೆ.ಪೊಲೀಸ್ ಠಾಣೆಗಳು ಇಲಾಖೆಯ ಪ್ರಾಥಮಿಕ ಘಟಕಗಳಾಗಿದ್ದು, ರಾಜ್ಯದಲ್ಲಿ ಒಟ್ಟು ೯೫೨ ಪೊಲೀಸ್ ಠಾಣೆಗಳಿವೆ. (ಸಂಚಾರ, ಮಹಿಳಾ ಪೊಲೀಸ್ ಠಾಣೆ ಮತ್ತು ರೈಲ್ವೆ ಒಳಗೊಂಡಂತೆ) ನಗರ ಮತ್ತು ಪಟ್ಟಣ ಠಾಣೆಗಳಲ್ಲಿ ಆರಕ್ಷಕ ನಿರೀಕ್ಷಕರು ಮುಖ್ಯಸ್ಥರಾಗಿರುತ್ತಾರೆ. ಈ ಪೊಲೀಸ್ ಠಾಣೆಯಲ್ಲಿ ೨ ರಿಂದ ೪ ಜನ ಉಪ ಆರಕ್ಷಕ ನಿರೀಕ್ಷಕರು ಇರುತ್ತಾರೆ. ಇದಲ್ಲದೇ ಇವರ ಜೊತೆಗೆ ಸಹಾಯಕ ಆರಕ್ಷಕ ನಿರೀಕ್ಷಕರು, ಮುಖ್ಯ ಪೇದೆಗಳು ಮತ್ತು ಪೊಲೀಸ್ ಪೇದೆಗಳು ಇರುತ್ತಾರೆ. ಸ್ಥಾಯಿ ಆದೇಶದ ಪ್ರಕಾರ ನಗರ ಠಾಣೆಗಳ ಒಟ್ಟು ಸಿಬ್ಬಂದಿ ಸಂಖ್ಯೆ: ೭೯ ಹಾಗೂ ಪಟ್ಟಣ ಠಾಣೆಗಳ ಒಟ್ಟು ಸಿಬ್ಬಂದಿಗಳ ಸಂಖ್ಯೆ ೪೦.

ಗ್ರಾಮಾಂತರ ಪ್ರದೇಶಗಳಲ್ಲಿ ಪೊಲೀಸ್ ಠಾಣೆಯಲ್ಲಿ ಅವಶ್ಯಕತೆಗನುಗುಣವಾಗಿ ಒಬ್ಬ ಅಥವಾ ಇಬ್ಬರು ಉಪ ಆರಕ್ಷಕ ನಿರೀಕ್ಷಕರುಗಳಿದ್ದು, ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಅಪರಾಧ ವಿಭಾಗದ ಮುಖ್ಯಸ್ಥರಾಗಿ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಗ್ರಾಮಾಂತರ ಪೊಲೀಸ್ ಠಾಣೆಗಳಲ್ಲಿ ಅತೀ ಕಡಿಮೆ ಅಂದರೆ ೩೦ ಸಿಬ್ಬಂದಿಗಳಿದ್ದು, ಗ್ರಾಮಾಂತರ ಠಾಣೆಗಳಲ್ಲಿ ಸಿಬ್ಬಂದಿಗಳ ಸಂಖ್ಯೆ ಇಲಾಖೆಯ ಸ್ಥಾಯಿ ಆದೇಶದ ಪ್ರಕಾರ ೩೦ ಇರುತ್ತದೆ. ಪೊಲೀಸ್ ಠಾಣೆಗಳನ್ನು ಆಡಳಿತಾತ್ಮಕ ದೃಷ್ಟಿಯಿಂದ ವೃತ್ತಗಳಾಗಿ ವಿಂಗಡಿಸಿದೆ. ಈ ವೃತ್ತಗಳನ್ನು ಉಪ ವಿಭಾಗಗಳ ಅಡಿಯಲ್ಲಿ ತರಲಾಗಿದೆ. ಉಪವಿಭಾಗಕ್ಕೆ ಪೊಲೀಸ್ ಉಪಾಧೀಕ್ಷಕರ ದರ್ಜೆಯ ಅಧಿಕಾರಿಯು ಮತ್ತು ವೃತ್ತಗಳಲ್ಲಿ ವೃತ್ತ ನಿರೀಕ್ಷಕರು ಮುಖ್ಯಸ್ಥರಾಗಿರುತ್ತಾರೆ.

**ಅಪರಾಧ ಮತ್ತು ತಾಂತ್ರಿಕ ಸೇವೆಗಳ ವಿಭಾಗ (Crime and Technical Services):**

ಈ ವಿಭಾಗವು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರ ದರ್ಜೆಯಅಧಿಕಾರಿಯಅಧೀನದಲ್ಲಿದೆ.ತಾಂತ್ರಿಕ ಸೇವೆಯಘಟಕವು ಬೆರಳು ಮುದ್ರೆ ಘಟಕ, ವಿಧಿ ವಿಜ್ಞಾನ ಪ್ರಯೋಗಾಲಯ ಮತ್ತು ರಾಜ್ಯ ಅಪರಾಧ ಇಲಾಖೆ ವಿಭಾಗಗಳನ್ನು ಒಳಗೊಂಡಿರುತ್ತದೆ.

**ಬೆರಳು ಮುದ್ರೆ ಘಟಕ(ಎಫ್.ಪಿ.ಬಿ.) (fingerPrint Bureau):**

ಕರ್ನಾಟಕ ರಾಜ್ಯದ ಬೆರಳು ಮುದ್ರೆ ಸಂಗ್ರಹಾಲಯವು ಒಂದು ವಿಶೇಷವಾದ ಘಟಕವಾಗಿದ್ದು, ತನ್ನ ಆಧುನಿಕ ಮತ್ತು ವೈಜ್ಞಾನಿಕ ರೀತಿಯಲ್ಲಿ ಆಧುನಿಕವಾಗಿ ಪೊಲೀಸ್‌ಗೆ ಸವಾಲೆಸಗುವಂತಹ ಅನೇಕ ನಿಗೂಢ ಹಾಗೂ ಕುತೂಹಲಕಾರಿಯಂತಹ ಅಪರಾಧಗಳನ್ನು ಬಗೆಹರಿಸುವಲ್ಲಿ ಬೆರಳು ಮುದ್ರೆಯಿಂದ ಅಪರಾಧಗಳನ್ನು ಪತ್ತೆ ಹೆಚ್ಚುವಲ್ಲಿ ಪೊಲೀಸ್ ಇಲಾಖೆಗೆ ತನ್ನದೇ ಆದ ವಿಶಿಷ್ಟ ಸೇವೆಯನ್ನು ಸಲ್ಲಿಸುತ್ತಿದೆ. ಬೆರಳು ಮುದ್ರೆ ಸಂಗ್ರಹಾಲಯವು ೨೦೦೫ ರಿಂದೀಚೆಗೆ ತನ್ನದೇ ಆದ ಆಧುನಿಕ ಮತ್ತು ಸುಸಜ್ಜಿತ ಉಪಕರಣಗಳನ್ನೊಳಗೊಂಡ ಬೆರಳು ಮುದ್ರೆ ಸಂಗ್ರಹಾಲಯದ ಸ್ವಂತ ಇಲಾಖಾ ಕಟ್ಟಡ, ಮಡಿವಾಳ, ಬೆಂಗಳೂರು ಇಲ್ಲಿ ಕಾರ್ಯ ನಿರ್ವಹಿಸುತ್ತಿದೆ.ರಾಜ್ಯ ಬೆರಳು ಮುದ್ರೆ ಸಂಗ್ರಹಾಲಯದ ಕೇಂದ್ರ ಸ್ಥಾನವು ಬೆಂಗಳೂರಿನಲ್ಲಿದ್ದು ಇದರ ಮುಖ್ಯಸ್ಥರಾಗಿ ಪೊಲೀಸ್ ಅಧೀಕ್ಷಕರು ಆಗಿರುತ್ತಾರೆ.

ಬೆಂಗಳೂರು ನಗರ, ಹುಬ್ಬಳ್ಳಿ-ಧಾರವಾಡನಗರ ಹಾಗೂ ಮೈಸೂರು ನಗರಗಳ ಬೆರಳು ಮುದ್ರೆ ಘಟಕಗಳು ಎ.ಸಿ.ಪಿ ದರ್ಜೆಯ ಅಧಿಕಾರಿಗಳು ಹಾಗೂ ಆರು ವಲಯವಾರು ಘಟಕಗಳ ಮೇಲ್ವಿಚಾರಣೆಯನ್ನು ಪೊಲೀಸ್ ಉಪಾಧೀಕ್ಷಕರು (ಎಫ್.ಪಿ.ಬಿ) ದರ್ಜೆಯ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿರುತ್ತಾರೆ, ಅಲ್ಲದೆ ಒಂದು ಪೊಲೀಸ್ ಉಪಾಧೀಕ್ಷಕರ ಹುದ್ದೆಯನ್ನು ಸೃಜಿಸಿ ಕರ್ನಾಟಕ ಪೊಲೀಸ್ ಅಕಾಡೆಮಿ ಮೈಸೂರು ಇಲ್ಲಿ ಉಪನ್ಯಾಸಕರಾಗಿ ನಿಯೋಜಿಸಿ ಹೊಸದಾಗಿ ಭರ್ತಿಯಾದ ಗೆಜೆಟೆಡ್ ಪ್ರೊಬೆಷನರಿ ಮತ್ತು ಪಿ.ಎಸ್.ಐ ರವರುಗಳಿಗೆ ಹಾಗೂ ಹಿರಿಯ ಅಧಿಕಾರಿಗಳಿಗೆ ವೈಜ್ಞಾನಿಕ ತನಿಖೆ ಬಗ್ಗೆ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಿರುತ್ತಾರೆ. ಒಟ್ಟಾರೆ ರಾಜ್ಯದ ನಗರ/ ವಲಯಗಳಲ್ಲಿನ ಎ.ಸಿ.ಪಿ. ಮತ್ತು ಡಿವೈಎಸ್.ಪಿ ಕಛೇರಿಗಳು ಹಾಗೂ ಜಿಲ್ಲಾ ಬೆರಳು ಮುದ್ರೆ ಘಟಕಗಳ ಆಡಳಿತಾತ್ಮಕ ಕಾರ್ಯ ನಿರ್ವಹಣೆಯನ್ನು ಪೊಲೀಸ್ ಅಧೀಕ್ಷಕರು ಬೆರಳು ಮುದ್ರೆ ಸಂಗ್ರಹಾಲಯ ಬೆಂಗಳೂರುರವರ ನಿಯಂತ್ರಣದ ವ್ಯಾಪ್ತಿಗೊಳಪಟ್ಟಿರುತ್ತದೆ.

**ನ್ಯಾಯ ವಿಜ್ಞಾನ ಪ್ರಯೋಗಾಲಯ (ಎಫ್.ಎಸ್.ಎಲ್)(Forensic science Labs):**

ಈ ನಿರ್ದೇಶನಾಲಯವು ೧೯೬೮ ರಲ್ಲಿ ಕಾರ್ಯಾರಂಭ ಗೊಂಡಾಗಿನಿಂದಲೂ, ಅಪರಾಧ ನ್ಯಾಯಾಂಗ ವ್ಯವಸ್ಥೆಯ ಅಗತ್ಯತೆಗಳನ್ನು ಪೂರೈಸುತ್ತಾ ಬಹು ದೂರ ಸಾಗಿಬಂದಿದೆ. ಪ್ರಾರಂಭಿಕ ಹಂತದಲ್ಲಿ, ಬೆಂಗಳೂರಿನ ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ರಾಸಾಯನಿಕಶಾಸ್ತ್ರ (ವಿಷ ವಿಜ್ಞಾನ ವಿಭಾಗವು ಸೇರಿದಂತೆ), ಅಗ್ನಿ ಅಸ್ತ್ರ ವಿಭಾಗ ಮತ್ತು ಪ್ರಶ್ನಿತ ದಸ್ತಾವೇಜು ವಿಭಾಗಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ವಿಶ್ಲೇಷಿಸಲು ಸ್ವೀಕರಿಸಲಾಗುತ್ತಿತ್ತು. ಪ್ರಸ್ತುತ, ಈ ನಿರ್ದೇಶನಾಯದ ಕೇಂದ್ರ ಕಛೇರಿಯಲ್ಲಿ ಹತ್ತು ವಿವಿಧ ವಿಭಾಗಗಳು ಕಾರ್ಯ ನಿರತವಾಗಿವೆ. ಅವುಗಳೆಂದರೆ: ಭೌತಶಾಸ್ತ್ರ, ರಾಸಾಯನಿಕಶಾಸ್ತ್ರ, ಪ್ರಶ್ನಿತ ದಸ್ತಾವೇಜು, ವಿಷ ವಿಜ್ಞಾನ, ಜೀವಶಾಸ್ತ್ರ, ನ್ಯಾಯ ಮನೋವಿಜ್ಞಾನ, ಛಾಯಾಚಿತ್ರ, ಡಿ.ಎನ್.ಎ ಮತ್ತು ಸಂಶೋಧನಾ ವಿಭಾಗಗಳು.

ಅಪರಾಧಗಳ ತನಿಖೆಯಲ್ಲಿ ತನಿಖಾಧಿಕಾರಿಗಳಿಗೆ ನ್ಯಾಯ ವಿಜ್ಞಾನ ಸೇವೆಯ ಅಗತ್ಯತೆ ಮತ್ತು ಬೇಡಿಕೆಗಳು ಏರಿಕೆಯಾಗುತ್ತಿದ್ದು, ಇದರೊಂದಿಗೆ ನ್ಯಾಯ ವಿಜ್ಞಾನ ಸೇವೆಯನ್ನು ವಿಕೇಂದ್ರಿಕರಿಸುವ ದೃಷ್ಟಿಯಿಂದ ಎಲ್ಲಾ ಐದು ಪೊಲೀಸ್ ವಲಯಗಳಲ್ಲಿ ಅಂದರೆ ದಾವಣಗೆರೆ, ಮಂಗಳೂರು, ಕಲಬುರಗಿ, ಬೆಳಗಾವಿ ಮತ್ತು ಮೈಸೂರುಗಳಲ್ಲಿ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯಗಳನ್ನು ಸ್ಥಾಪಿಸಲಾಯಿತು. ರಾಜ್ಯದ ಈ ಐದು ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯಗಳಲ್ಲಿ ಪ್ರಸ್ತುತ ಜೀವಶಾಸ್ತ್ರ, ವಿಷ ವಿಜ್ಞಾನ, ನ್ಯಾಯ ಮನೋವಿಜ್ಞಾನ ಮತ್ತು ಛಾಯಾಚಿತ್ರ ವಿಭಾಗಗಳು ಮಾತ್ರ ಇರುತ್ತವೆ.ಪ್ರಾರಂಭಿಕ ಹಂತದಲ್ಲಿ, ಬೆಂಗಳೂರಿನ ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ರಾಸಾಯನಿಕಶಾಸ್ತ್ರ (ವಿಷ ವಿಜ್ಞಾನ ವಿಭಾಗವು ಸೇರಿದಂತೆ), ಅಗ್ನಿ ಅಸ್ತ್ರ ವಿಭಾಗ ಮತ್ತು ಪ್ರಶ್ನಿತ ದಸ್ತಾವೇಜು ವಿಭಾಗಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ವಿಶ್ಲೇಷಿಸಲು ಸ್ವೀಕರಿಸಲಾಗುತ್ತಿತ್ತು. ರಾಜ್ಯ ಸರ್ಕಾರದ ಆದೇಶಗಳಂತೆ ಇತರೇ ವಿಭಾಗಗಳಾದ: ಭೌತಶಾಸ್ತ್ರ, ಜೀವಶಾಸ್ತ್ರ, ಛಾಯಾಚಿತ್ರ ಮತ್ತು ನ್ಯಾಯ

ಮನೋ ವಿಜ್ಞಾನ ವಿಭಾಗಗಳು ಆನಂತರದ ವರ್ಷಗಳಲ್ಲಿ ಕಾರ್ಯಾರಂಭಗೊಂಡಿದ್ದು, ಡಿ.ಎನ್.ಎ ಕೇಂದ್ರವು ೨೦೦೮ನೇ ಸಾಲಿನಿಂದ ಕಾರ್ಯಾರಂಭಗೊಂಡಿರುತ್ತದೆ.ನ್ಯಾಯ ವಿಜ್ಞಾನ ಪ್ರಯೋಗಾಲಯ, ಬೆಂಗಳೂರಿನಲ್ಲಿ ರೂ.೧೦೦ ಲಕ್ಷಗಳ ವೆಚ್ಚದಲ್ಲಿ (ಪೊಲೀಸ್ ಆಧುನೀಕರಣ ಯೋಜನೆಯ ಅನುದಾನ) ಸೈಬರ್ ಫೋರೇನ್ಸಿಕ್ \ವಿಭಾಗವನ್ನು ೨೦೧೫ರಲ್ಲಿ ಸ್ಥಾಪಿಸಲಾಗಿರುತ್ತದೆ.

### ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯಗಳು(Regional Forensic Science Labs):

ಅಪರಾಧಗಳ ತನಿಖೆಯಲ್ಲಿ ನ್ಯಾಯ ವಿಜ್ಞಾನ ಸೇವೆಯ ಅಗತ್ಯತೆ ಮತ್ತು ಬೇಡಿಕೆಗಳು ಏರಿಕೆಯಾಗುತ್ತಿದ್ದು, ನ್ಯಾಯ ವಿಜ್ಞಾನ ಸೇವೆಯನ್ನು ವಿಕೇಂದ್ರಿಕರಿಸುವ ದೃಷ್ಟಿಯಿಂದ ಹಾಗೂ ಪ್ರಕರಣಗಳ ಶೀಘ್ರ ವಿಲೇವಾರಿಗಾಗಿ ಎಲ್ಲಾ ಐದು ಪೊಲೀಸ್ ವಲಯಗಳಲ್ಲಿ ಅಂದರೆ ದಾವಣಗೆರೆ, ಮಂಗಳೂರು, ಕಲಬುರಗಿ, ಬೆಳಗಾವಿ ಮತ್ತು ಮೈಸೂರುಗಳಲ್ಲಿ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯಗಳನ್ನು ಸ್ಥಾಪಿಸಲಾಯಿತು. ಉಪನಿರ್ದೇಶಕರು ಆಯಾ ಪೊಲೀಸ್ ವಲಯಗಳ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯದ ಮುಖ್ಯಸ್ಥರಾಗಿರುತ್ತಾರೆ. ಸದರಿ ಅಧಿಕಾರಿಯು ತಾಂತ್ರಿಕ ಮತ್ತು ಆಡಳಿತಾತ್ಮಕ ವಿಷಯಗಳ ನಿಯಂತ್ರಣ ಮತ್ತು ಉಸ್ತುವಾರಿ ನಡೆಸುತ್ತಾರೆ. ಈ ಐದು ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯಗಳಲ್ಲಿ ಜೀವಶಾಸ್ತ್ರ, ವಿಷ ವಿಜ್ಞಾನ, ನ್ಯಾಯ ಮನೋವಿಜ್ಞಾನ ಮತ್ತು ಛಾಯಾಚಿತ್ರ ವಿಭಾಗಗಳಿದ್ದು, ನ್ಯಾಯ ಮನೋ ವಿಜ್ಞಾನ ವಿಭಾಗಕ್ಕೆ ಅಧಿಕಾರಿ/ ಸಿಬ್ಬಂದಿಗಳು ಭರ್ತಿ ಮಾಡಬೇಕಾಗಿದ್ದು, ಸದರಿ ವಿಭಾಗವನ್ನು ಹೊರತು ಪಡಿಸಿ ಉಳಿದ ವಿಭಾಗಗಳು ಕಾರ್ಯ ನಿರತವಾಗಿದೆ.

ಸೈಬರ್ ಫೋರೇನ್ಸಿಕ್ ಮತ್ತು ಡಿ.ಎನ್.ಎ ಕೇಂದ್ರಗಳಲ್ಲಿನ ಸ್ವೀಕೃತಿ ಪ್ರಕರಣಗಳು ಹೆಚ್ಚಾದಂತೆ, ಸದರಿ ವಿಭಾಗಗಳ ಬಾಕಿ ಪ್ರಕರಣಗಳ ಮಟ್ಟವನ್ನು ನಿಯಂತ್ರಿಸುವುದು ಪ್ರಮುಖ ಕಾರ್ಯವಾಗಿರುತ್ತದೆ. ಇದರಿಂದಾಗಿ, ಕೇಂದ್ರ ಕಛೇರಿಯ ಜೀವಶಾಸ್ತ್ರ ವಿಭಾಗದ ಅಧಿಕಾರಿ/ ಸಿಬ್ಬಂದಿಗಳನ್ನು ಡಿ.ಎನ್.ಎ ಕೇಂದ್ರಕ್ಕೆ ನಿಯೋಜಿಸಲಾಯಿತು. ಮತ್ತು ಜೀವಶಾಸ್ತ್ರ ವಿಭಾಗದ ಸ್ವೀಕೃತ ಪ್ರಕರಣಗಳನ್ನು ಹತ್ತಿರದ ಇತರೇ ಪ್ರಾನ್ಯಾವಿಪ್ರಗಳಿಗೆ ವಿಕೇಂದ್ರಿಕರಿಸಲಾಯಿತು. ಪ್ರಾನ್ಯಾವಿಪ್ರ, ಕಲಬುರ್ಗಿ ಮತ್ತು ಮಂಗಳೂರಿನ ಇಬ್ಬರು ಸ್ವಯಂಪ್ರೇರಿತ ವೈಜ್ಞಾನಿಕ ಸಹಾಯಕರು ಡಿ.ಎನ್.ಎ ಕೇಂದ್ರದಲ್ಲಿಯೂ ಮತ್ತು ಪ್ರಾನ್ಯಾವಿಪ್ರ, ಮೈಸೂರು, ಬೆಳಗಾವಿ ಮತ್ತು ಮಂಗಳೂರಿನ ಛಾಯಾಚಿತ್ರ ವಿಭಾಗಗಳ ವೈಜ್ಞಾನಿಕಸಹಾಯಕರುಗಳುಸೈಬರ್ವಿಭಾಗದಲ್ಲಿಓ.ಓ.ಡಿಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.ಪ್ರಕರಣಗಳ ಪ್ರಮಾಣ ಪತ್ರಗಳಿಗೆ ಸಹಿ ಮಾಡುವ ಅಧಿಕಾರಿಗಳು ಇಲ್ಲದ ಪ್ರಾನ್ಯಾವಿಪ್ರಗಳಿಗೆ ಕೇಂದ್ರ ಕಛೇರಿ ಮತ್ತು ಇತರೇ ಪ್ರಾನ್ಯಾವಿಪ್ರಗಳಲ್ಲಿರುವ ಅಧಿಕಾರಿಗಳನ್ನು ಸರದಿಯಲ್ಲಿ ಓ.ಓ.ಡಿ ಮೇರೆಗೆ ನಿಯೋಜಿಸಿ ಪ್ರಕರಣಗಳನ್ನು ವಿಲೇವಾರಿ ಮಾಡುವ ವ್ಯವಸ್ಥೆಯನ್ನು ರೂಪಿಸಲಾಗಿದೆ.ಈ ರಾಜ್ಯ ಪೊಲೀಸ್ ಪ್ರಕರಣಗಳಲ್ಲದೇ, ಗೋವಾ ರಾಜ್ಯದ ವಿಷ ವಿಜ್ಞಾನ ಪ್ರಕರಣಗಳನ್ನು ಹತ್ತಿರದ ಪ್ರಾನ್ಯಾವಿಪ್ರಗಳು ಸ್ವೀಕರಿಸುತ್ತವೆ.

### ಆಂತರಿಕ ಭದ್ರತಾ ವಿಭಾಗ: (ಐ.ಎಸ್.ಡಿ):

"ಆಂತರಿಕ ಭದ್ರತಾ ವಿಭಾಗ"ವು ಎಡಿಜಿಪಿ, ಐಎಸ್‌ಡಿ ರವರ ಸಂಪೂರ್ಣ ಮೇಲ್ವಿಚಾರಣೆಯಲ್ಲಿ ೨೦೦೮ ರಿಂದ ಕಾರ್ಯ ನಿರ್ವಹಿಸುತ್ತಿರುತ್ತದೆ. ಬೆದರಿಕೆಗಳು ಮತ್ತು ಚಟುವಟಿಕೆಗಳ ವಿರೋಧದ ನಡುವೆಯೂ ರಾಷ್ಟ್ರದ ಭದ್ರತೆಗೆ ಪ್ರತಿಕೂಲವಾಗಿ ಧಕ್ಕೆಯಾಗದಂತೆ ಅದರಲ್ಲೂ ಭಯೋತ್ಪಾದನೆ ಮತ್ತು ರಾಷ್ಟ್ರವಿರೋಧಿ ಚಟುವಟಿಕೆಗಳ ಮೇಲೆ ಕ್ರಮ ಕೈಗೊಳ್ಳುವುದು ಈ ಘಟಕದ ಮೂಲ ಉದ್ದೇಶ ಮತ್ತು ಜವಾಬ್ದಾರಿಯಾಗಿರುತ್ತದೆ. ಆಂತರಿಕ ಭದ್ರತಾ ವಿಭಾಗವು ಬೇಹುಗಾರರಾಗಿ ಗುಪ್ತ ಮಾಹಿತಿಯನ್ನು ಸಂಗ್ರಹಿಸುವುದು, ನಿಗಾವಹಿಸುವುದು, ಪ್ರತಿ ಕಾರ್ಯಾಚರಣೆಯ ಜೊತೆಗೆ ಎಲ್ಲಾ ತರಹದ ಅಪರಾಧಗಳು ಅಥವಾ ಸಂಶಯ ಪಡುವಂತಹ ಮೇಲ್ಕಂಡ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಣೆ ಮತ್ತು ಈ ಕೆಳಕಂಡ ಕಾಯ್ದೆಗಳ ಅಡಿಯಲ್ಲಿ ಅಪರಾಧಗಳ ತನಿಖೆಯನ್ನು ಕಡ್ಡಾಯವಾಗಿ ಕೈಗೊಳ್ಳಬೇಕಾಗಿರುತ್ತದೆ.ಕರ್ನಾಟಕ ರಾಜ್ಯ ಪೋಲಿಸ್‌ನ "ಆಂತರಿಕ ಭದ್ರತಾ ವಿಭಾಗ"ವು ಎಡಿಜಿಪಿ, ಐಎಸ್‌ಡಿ ರವರ ಸಂಪೂರ್ಣ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ. ಬೆದರಿಕೆಗಳು ಮತ್ತು ಚಟುವಟಿಕೆಗಳ ವಿರೋಧದ ನಡುವೆಯೂ ರಾಷ್ಟ್ರದ ಭದ್ರತೆಗೆ ಪ್ರತಿಕೂಲವಾಗಿ ಧಕ್ಕೆಯಾಗದಂತೆ, ಅದರಲ್ಲೂ ಭಯೋತ್ಪಾದನೆ ಮತ್ತು ರಾಷ್ಟ್ರವಿರೋಧಿ ಚಟುವಟಿಕೆಗಳ ಮೇಲೆ ಕ್ರಮ ಕೈಗೊಳ್ಳುವುದು ಈ ಘಟಕದ ಮೂಲ ಉದ್ದೇಶ ಮತ್ತು ಜವಾಬ್ದಾರಿಯಾಗಿರುತ್ತದೆ. ಆಂತರಿಕ ಭದ್ರತಾ ವಿಭಾಗವು ಬೇಹುಗಾರರಾಗಿ ಗುಪ್ತ ಮಾಹಿತಿಯನ್ನು ಸಂಗ್ರಹಿಸುವುದು.ನಿಗಾ ವಹಿಸುವುದು, ಪ್ರತಿ ಕಾರ್ಯಾಚರಣೆಯ ಜೊತೆಗೆ ಎಲ್ಲಾ ತರಹದ ಅಪರಾಧಗಳು ಅಥವಾ ಸಂಶಯ ಪಡುವಂತಹ ಮೇಲ್ಕಂಡ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಣೆ ಮತ್ತು ಈ ಕೆಳಕಂಡ ಕಾಯ್ದೆಗಳ ಅಡಿಯಲ್ಲಿ ಅಪರಾಧಗಳ ತನಿಖೆಯನ್ನು ಕಡ್ಡಾಯವಾಗಿ ಕೈಗೊಳ್ಳಬೇಕಾಗಿರುತ್ತದೆ.

- ದಿ ಅಟಾಮಿಕ ಎನರ್ಜಿ ಆಕ್ಟ್ –೧೯೬೩ (ಸೆಂಟ್ರಲ್ ಆಕ್ಟ–೩೩ ಆಫ್ ೧೯೬೨)
- ದಿ ಅನ್‌ಲಾಫುಲ್ ಅಕ್ಟಿವಿಟಿಸ್ (ಪ್ರಿವೆನ್‌ಷನ್) ಆಕ್ಟ್ ೧೯೬೭, (ಸೆಂಟ್ರಲ್ ಆಕ್ಟ್ –೩೭ ಆಫ್ ೧೯೬೭)
- ದಿ ಆಂಟಿ ಹೈಜಾಕಿಂಗ್ ಆಕ್ಟ್ ೧೯೯೨ (ಸೆಂಟ್ರಲ್ ಆಕ್ಟ್ – ೬೫ ಆಫ್ ೧೯೮೨)
- ದಿ ಸಪ್ರೆಷನ್ ಆಪ್ ಅನ್‌ಲಾಫುಲ್ ಆಕ್ಟ್ಸ್ ಎಗೆನೆಸ್ಟ್ ಸೇಫ್ಟೀ ಆಫ್ ಸಿಸವಿಲ್ ಏವಿಯೇಷನ್ ಆಕ್ಟ್– ೧೯೮೨ (ಸೆಂಟ್ರಲ್ ಆಕ್ಟ್–೬೬ ಆಫ್ ೧೯೮೨)
- ದಿ ಸಾರ್ಕ್ ಕನ್‌ವೆನ್‌ಷನ್ (ಸಪ್ರೆಷನ್ ಆಫ್ ಟೆರರಿಸಂ) ಆಕ್ಟ್ –೧೯೯೩ (ಸೆಂಟ್ರಲ್ ಆಕ್ಟ್ –೩೬ ಆಫ್ ೨೦೦೨)
- ದಿ ಸಪ್ರೆಷನ್ ಆಪ್ ಅನ್‌ಲಾಫುಲ್ ಆಕ್ಟ್ಸ್ ಎಗೆನೆಸ್ಟ್ ಸೇಫ್ಟೀ ಅಫ್ ಮೆರಿಟೈಮ್ ನೇವಿಗೇಷನ್ ಆಂಡ್ ಫಿಕ್ಸೆಡ್ ಫ್ಲಾಟ್‌ಪಾರಂ ಆನ್ ಕಾಂಟಿನೆಂಟಲ್ ಶೆಲ್ಫ್ ಆಕ್ಟ್ –೨೦೦೨ (ಸೆಂಟ್ರಲ್ ಆಕ್ಟ್ –೬೯ ಆಫ್ ೨೦೦೨)
- ದಿ ವೆಪನ್ಸ್ ಆಫ್ ಮಾಸ್ ಡಿಸ್‌ಟ್ರಕ್ಷನ್ ಅಂಡ್ ದೇರ್ ಡೆಲಿವರಿ ಸಿಸ್ಟಂಸ್ (ಪ್ರಾಹಿಬೀಷನ್ ಆಫ್ ಅನ್‌ಲಾಫುಲ್ ಆಕ್ಟಿವಿಟೀಸ್) ಆಕ್ಟ್ –೨೦೦೫, (ಸೆಂಟ್ರಲ್ ಆಕ್ಟ್ –೨೧ ಆಫ್ ೨೦೦೫)
- ಇನ್‌ಫರ್‌ಮೇಷನ್ ಟೆಕ್ನಾಲಜಿ ಆಕ್ಟ್–೨೦೦೦ (ಸೆಂಟ್ರಲ್ ಆಕ್ಟ್–೨೧ ಆಫ್ ೨೦೦೦)

**ಅಫೆನ್ಸ್‌ಸ್ ಅಂಡರ್**:–

- ಚಾಪ್ಟರ್ ಆಫ್ ದಿ ಇಂಡಿಯನ್ ಪೀನಲ್ ಕೋಡ್ ೧೮೬೦ (ಸೆಂಟ್ರಲ್ ಆಕ್ಟ್ –೪೫ ಆಫ್ ೧೮೬೦) (ಸೆಕ್ಷನ್ಸ್ ೧೨೧ ಟು ೧೩೦)(ಬೋತ್ ಇನ್‌ಕ್ಲೂಸೀವ್)
- ಸೆಕ್ಷನ್ ೪೮೯–ಎ ಟು ೪೮೯ –ಇ (ಬೋತ್ ಇನ್ ಕ್ಲೂಸೀವ್) ಆಪ್ ದಿ ಇಂಡಿಯನ್ ಪೀನಲ್ ಕೋಡ್ ೧೮೬೦, (ಸೆಂಟ್ರಲ್ ಆಕ್ಟ್ –೪೫ ಆಫ್ ೧೮೬೦)
- ಸೆಕ್ಷನ್ ೧೫೩–ಎ ಆಂಡ್ ೧೫೩–ಬಿ ಅಪ್ ಇಂಡಿಯನ್ ಪೀನಲ್ ಕೋಡ್ ೧೮೯೦ (ಸೆಂಟ್ರಲ್ ಆಕ್ಟ್–೪೫ ಆಫ್ ೧೮೬೦)
- ದಿ ಎಕ್ಸ್‌ಪ್ಲೋಸಿವ್ ಸಬ್‌ಸ್ಟಾನ್ಸಸ್ ಆಕ್ಟ್ ೧೯೦೮ (ಸೆಂಟ್ರಲ್ ಆಕ್ಟ್–೫೭ ಆಫ್ ೧೯೦೮)
- ದಿ ಕರ್ನಾಟಕ ಕಂಟ್ರೋಲ್ ಆಫ್ ಅರ್ಗ್‌ನೈಸಡ್ ಕ್ರೈಂ ಆಕ್ಟ್ ೨೦೦೦ (ಕರ್ನಾಟಕ ಆಕ್ಟ್ ೧ ಆಪ್ ೨೦೦೨)
- ದಿ ಆರ್ಮ್ಸ್ ಆಕ್ಟ್ ೧೯೫೯ (ಸೆಂಟ್ರಲ್ ಆಕ್ಟ್ –೫೪ ಆಫ್ ೧೯೫೯)
- ದಿ ನಾರ್ಕೋಟಿಕ್ ಡ್ರಗ್ಸ್ ಆಂಡ್ ಸೈಕೋಟ್ರೀಪಿಕ್ ಸಬ್‌ಸ್ಟಾನ್ಸ್ ಆಕ್ಟ್ ೧೯೮೫ (ಸೆಂಟ್ರಲ್ ಆಕ್ಟ್ –೬೧ ಆಫ್ ೧೯೮೫)
- ದಿ ಪ್ರೈವೆಟ್ ಸೆಕ್ಯೂರಿಟಿ ಏಜನ್ಸಿಸ್(ರೆಗ್ಯೂಲೆಷನ್) ಆಕ್ಟ್ ೨೦೦೫ (ಸೆಂಟ್ರಲ್ ಆಕ್ಟ್–೨೯ ಆಫ್ ೨೦೦೫)
- ಸರ್ಕಾರದಿಂದ ತನಿಖೆಗೆ ಮತ್ತು ವಿಚಾರಣೆಗೆ ವಹಿಸಿಕೊಂಡಿರುವ ಯಾವುದೇ ಪ್ರಕರಣಗಳು.

ದಿನಾಂಕ: ೧೯/೦೪/೨೦೧೩ ರಂದು ಕರ್ನಾಟಕ ರಾಜ್ಯ ಸರ್ಕಾರವು ಆಂತರಿಕ ಭದ್ರತಾ ವಿಭಾಗದ ಮಾನ್ಯ ಎಡಿಜಿಪಿ, ಐಜಿಪಿ, ಡಿಐಜಿಪಿ, ಎಸ್‌ಪಿ ಮತ್ತು ಡಿವೈಎಸ್‌ಪಿ ರವರುಗಳ ಕಛೇರಿಗಳನ್ನು ಪೋಲೀಸ್ ಠಾಣೆಯನ್ನಾಗಿ ಘೋಷಿಸಿರುತ್ತದೆ ಹಾಗೂ ಇದಕ್ಕೆ ಮೇಲ್ಕಂಡ ಕಾಯಿದೆ ಅಡಿಗಳಲ್ಲಿ ತನಿಖೆ ನಡೆಸಲು ಕರ್ನಾಟಕ ರಾಜ್ಯಾದ್ಯಾಂತ ವ್ಯಾಪ್ತಿ ಒಳಪಟ್ಟಿರುತ್ತದೆ. ಮಾನ್ಯ ಎಡಿಜಿಪಿ ಆಂತರಿಕ ಭದ್ರತಾ ವಿಭಾಗ, ರವರ ಅಧೀನದಲ್ಲಿ ಈ ಕೆಳಕಂಡ ವಿಭಾಗಗಳು ಇದ್ದು, ಅವುಗಳ ಈ ಕೆಳಕಂಡ ಕರ್ತವ್ಯಗಳನ್ನು ಮತ್ತು ಚಟುವಟಿಕೆಗಳನ್ನು ನಿರ್ವಹಿಸುತ್ತಿರುತ್ತವೆ.

### ಭಯೋತ್ಪಾದನಾ ನಿಗ್ರಹ ಕೇಂದ್ರ–ಆಂತರಿಕ ಭದ್ರತಾ ವಿಭಾಗ:

ಭಯೋತ್ಪಾದನಾ ನಿಗ್ರಹ ಕೇಂದ್ರ (ಸಿಸಿಟಿ)ವು ಆಂತರಿಕ ಭದ್ರತಾ ವಿಭಾಗದ ಒಂದು ಭಾಗವಾಗಿ ಕೂಡ್ಲುವಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಭಯೋತ್ವದನಾ ನಿಗ್ರಹ ಕೇಂದ್ರವು ಕಾರ್ಯಚರಣೆ ಪಡೆ ಹಾಗೂ ತರಬೇತಿ ಪಡೆ ಎಂದು ಎರಡು ಪಡೆಗಾಗಿ ವಿಂಗಡಣೆ ಹೊಂದಿದೆ. ಇದರ ಪ್ರಸ್ತುತ ಬಲ ೧೭೫ ಕಮಾಂಡೋಗಳು ಭಾರತೀಯ ಸೇನೆ ಪಡೆಯ ಮಾದರಿಯಂತೆ ಆಯ್ಕೆ ಮಾಡಲಾಗುತ್ತದೆ.

### ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ (ಕೆ.ಎಸ್.ಐ.ಎಸ್.ಎಫ್):

ಕರ್ನಾಟಕ ಸರ್ಕಾರವು ಆದೇಶ ಸಂಖ್ಯೆ: ಹೆಚ್‌ಡಿ ೦೫ ಪಿಓಪಿ ೨೦೧೧. ದಿನಾಂಕ: ೧೪/೦೧/೨೦೧೧ರಲ್ಲಿ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ ೧ನೇ ಪಡೆಯನ್ನು ಸ್ಥಾಪಿಸಲು ಹಾಗೂ ಆದೇಶ ಸಂಖ್ಯೆ: ಹೆಚ್‌ಡಿ ೧೩೭ ಪಿಓಪಿ ೨೦೧೧, ದಿನಾಂಕ: ೦೫/೦೮/೨೦೧೧ರಲ್ಲಿ ೨ನೇ ಮತ್ತು ೩ನೇ ಪಡೆಗಳನ್ನು ಸ್ಥಾಪಿಸಲು ಆದೇಶಿಸಲಾಯಿತು.ದೇಶದಾದ್ಯಂತ ದಿನೇ ದಿನೇ ಹೆಚ್ಚುತ್ತಿರುವ ಭಯೋತ್ಪಾದನೆಯ ಹಿನ್ನೆಲೆಯಲ್ಲಿ ಸರ್ಕಾರದ ಪ್ರಮುಖ ಅಣೆಕಟ್ಟುಗಳು, ನೀರಾವರಿ ಯೋಜನೆಗಳು, ವಿದ್ಯುತ್ ಯೋಜನೆಗಳು, ಅಣುಶಕ್ತಿ ಸ್ಥಾವರಗಳು, ನಮ್ಮ ಮೆಟ್ರೋ ಮುಂತಾದ ಪ್ರಮುಖ ಸ್ಥಾವರಗಳಿಗೆ ಭದ್ರತೆಯನ್ನು ಒದಗಿಸುವುದು ಕೆ.ಎಸ್.ಐ.ಎಸ್.ಎಫ್.ನ ಮುಖ್ಯ ಉದ್ದೇಶವಾಗಿರುತ್ತದೆ. ಕೆ.ಎಸ್.ಐ.ಎಸ್.ಎಫ್.ನ್ನು ನಿಯೋಜಿಸಲು ಮೂಲಭೂತ ಸೌಕರ್ಯಗಳಾದ ವಸತಿಗೃಹ ಸೌಲಭ್ಯ, ಬ್ಯಾರಕ್ಸ್ ಸೌಲಭ್ಯ, ಶಸ್ತ್ರಾಗಾರ, ಸಿಸಿಟಿವಿ ಕೊಠಡಿ, ವಾಚ್‌ಟವರ್ ಮುಂತಾದವುಗಳನ್ನು ಒದಗಿಸಬೇಕಾಗುತ್ತದೆ ಹಾಗೂ ಕೆ.ಎಸ್.ಐ.ಎಸ್.ಎಫ್. ಅಧಿಕಾರಿ ಮತ್ತು ಸಿಬ್ಬಂದಿಗಳ ವೇತನವನ್ನೂ ಸಹ ಸೂಕ್ಷ್ಮ ಸ್ಥಾವರದ ಮುಖ್ಯಸ್ಥರೇ ನೀಡಬೇಕಾಗುತ್ತದೆ.

### ಪ್ರೈವೆಟ್ ಸೆಕ್ಯೂರಿಟಿ ಏಜೆನ್ಸೀಸ್ (PSA):

ಪ್ರೈವೆಟ್ ಸೆಕ್ಯೂರಿಟಿ ಏಜೆನ್ಸಿಯನ್ನು, ರಾಜ್ಯ ಗೃಹ ಇಲಾಖೆಯ ಅಡಿಯಲ್ಲಿ ತಂದಿದ್ದು, ಆಂತರಿಕ ಭದ್ರತಾ ಪಡೆಯ ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೋಲಿಸ್ ರವರು ರಾಜ್ಯದ ಎಲ್ಲಾ ಪ್ರೈವೆಟ್ ಸೆಕ್ಯೂರಿಟಿ ಏಜೆನ್ಸಿಗಳಿಗೆ ಕರ್ನಾಟಕ ರಾಜ್ಯ ಪ್ರೈವೆಟ್ ಸೆಕ್ಯೂರಿಟಿ ಏಜೆನ್ಸಿಸ್ ರೂಲ್ಸ–೨೦೦೮ರ ಕಾಯ್ದೆಗಳಿಗೆ ನಿಯಂತ್ರಣಾಧಿಕಾರಿಗಳಾಗಿರುತ್ತಾರೆ. ರಾಜ್ಯದಲ್ಲಿ ೨೦೦೦ಕ್ಕೂ ಹೆಚ್ಚು ಪ್ರೈವೆಟ್ ಸೆಕ್ಯೂರಿಟಿ ಏಜೆನ್ಸಿಗಳು ಮತ್ತು ೮–೧೦ ಲಕ್ಷ ಪ್ರೈವೆಟ್ ಸೆಕ್ಯೂರಿಟಿ ಏಜೆನ್ಸಿ ನೌಕರರು ಕಾರ್ಯನಿರ್ವಹಿಸುತ್ತಿರುತ್ತಾರೆ. ಇವುಗಳಲ್ಲಿ ೧೬೪೭ ಏಜೆನ್ಸಿಗಳು ಪರವಾನಿಗೆ ಪಡೆಯಲು ಅರ್ಜಿ ಸಲ್ಲಿಸಿದ್ದು, ಈವರೆಗೆ ೧೨೭೪ ಏಜೆನ್ಸಿಗಳಿಗೆ ಪರವಾನಿಗೆ ನೀಡಲಾಗಿದೆ. ಆಂತರಿಕ ಭದ್ರತಾ ವಿಭಾಗದ ಎಡಿಜಿಪಿ ರವರು ಈ ಎಲ್ಲಾ ಪ್ರೈವೆಟ್ ಸೆಕ್ಯೂರಿಟಿ ಏಜೆನ್ಸಿಗಳ ಚಟುವಟಿಕೆಗಳನ್ನು ಖಾಸಗಿ ಕ್ಷೇತ್ರಗಳಲ್ಲಿ ಸಹಕಾರಿ ಕಾನೂನು ಜಾರಿ ಪಡೆಯನ್ನಾಗಿ ಕಾರ್ಯನಿರ್ವಹಿಸಲು ಯೋಜನೆಗಳನ್ನು ರೂಪಿಸುತ್ತಿದ್ದಾರೆ.

ಆಂತರಿಕ ಭದ್ರತಾ ವಿಭಾಗದ ಎಡಿಜಿಪಿ ರವರ ಅನುಮತಿ ಪಡೆಯದೇ ಪ್ರೈವೆಟ್ ಸೆಕ್ಯೂರಿಟಿ ಏಜೆನ್ಸಿಗಳನ್ನು ನಡೆಸುವುದು ಕಾನೂನು ಬಾಹಿರವಾಗಿರುತ್ತದೆ. ಈ ನಿಟ್ಟಿನಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ೧) ಕರ್ನಾಟಕ ರಾಜ್ಯದ ಡಿಜಿ ಮತ್ತು ಐಜಿಪಿ ರವರು ರಾಜ್ಯದ ಎಲ್ಲಾ ಪೋಲಿಸ್ ಆಯುಕ್ತರುಗಳಿಗೆ ಮತ್ತು ಜಿಲ್ಲಾ ಪೋಲಿಸ್ ಅಧೀಕ್ಷಕರುಗಳಿಗೆ ಕಾನೂನು ಬಾಹಿರವಾಗಿ ನಡೆಸುತ್ತಿರುವ ಪ್ರೈವೆಟ್ ಸೆಕ್ಯೂರಿಟಿ ಏಜೆನ್ಸನಿಗಳಿಗೆ ಪಿಎಸ್‌ಎಆರ್ ಆಕ್ಟ್–೨೦೦೫ ರ ಪ್ರಕಾರ ಕೇಸು ದಾಖಲು ಮಾಡಲು ಸೂಚನೆ ನೀಡಿರುತ್ತಾರೆ, ೨) ಆಂತರಿಕ ಭದ್ರತಾ ವಿಭಾಗದಲ್ಲಿ ಪ್ರೈವೆಟ್ ಸೆಕ್ಯೂರಿಟಿ ಏಜೆನ್ಸಿ ನಡೆಸಲು ಪರವಾನಿಗೆ ಪಡೆದ ಏಜೆಂಟಗಳ ಪಟ್ಟಿಯನ್ನು ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ ಗೆ ಕಳುಹಿಸಿದ್ದು, ಎಲ್ಲಾ ಬ್ಯಾಂಕ್‌ಗಳಿಗೆ ಮಾಹಿತಿ ನೀಡುವಂತೆ ಸೂಚಿಸಲಾಗಿದೆ, ೩) ಆಂತರಿಕ ಭದ್ರತಾ ವಿಭಾಗದಲ್ಲಿ ಪ್ರೈವೆಟ್ ಸೆಕ್ಯೂರಿಟಿ ಏಜೆನ್ಸಿ ನಡೆಸಲು ಪರವಾನಿಗೆ ಪಡೆದ ಏಜೆಂಟಗಳ ಮಾಹಿತಿಯು ಕರ್ನಾಟಕ ರಾಜ್ಯ ಪೋಲಿಸ್‌ನ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ, ಮತ್ತು ೪) ಪ್ರೈವೆಟ್ ಸೆಕ್ಯೂರಿಟಿ ಏಜೆನ್ಸಿಯಲ್ಲಿ

ಒಂದು ಸಾಫ್ಟವೇರನ್ನು ಅಭಿವೃದ್ಧಿಪಡಿಸಿ ಅಳವಡಿಸಿಕೊಂಡಿದ್ದು ಈ ನಿಟ್ಟಿನಲ್ಲಿ ಏಜೆನ್ಸಿಗಳಿಗೆ ತರಬೇತಿ ನೀಡಿದ್ದು ಇದ್ದ ಮಾಹಿತಿಯನ್ನು ಕಾಲಕಾಲಕ್ಕೆ ಕ್ರೋಢೀಕರಿಸಲು ಸಹಾಯಕವಾಗಿದೆ.

### ಆಂಟಿ ನಕ್ಸಲ್ ಫೋರ್ಸ್ (ANF):

೧) ನಕ್ಸಲ್ ನಿಗ್ರಹ ಪಡೆಯನ್ನು ಸರ್ಕಾರದ ಆದೇಶ ಸಂಖ್ಯೆ ಹೆಚ್‌ಡಿ-೧/ಪಿಓಪಿ/೨೦೦೫ (ಭಾಗ) ದಿ.೨೧-೦೫-೨೦೦೫ ರಲ್ಲಿ ಒಟ್ಟು ೫೪೩ ಅಧಿಕಾರಿ/ಸಿಬ್ಬಂದಿಗಳನ್ನು ಒಳಗೊಂಡಂತೆ ರಚಿಸಿರುತ್ತದೆ, ೨) ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯದ ಗಡಿ ಭಾಗದಲ್ಲಿ ನಕ್ಸಲ್ ಚಟುವಟಿಕೆಯನ್ನು ನಿಯಂತ್ರಿಸಲು ಹೊಸದಾಗಿ ೦೩ ಕ್ಯಾಂಪ್‌ಗಳನ್ನು ತೆರೆಯಲು ಸರ್ಕಾರವು ಅನುಮೋದನೆಯನ್ನು ಆದೇಶ ಸಂಖ್ಯೆ ಹೆಚ್‌ಡಿ-೧೯/ಪಿಓಪಿ/೨೦೧೫ ದಿ.೦೭-೦೯-೨೦೧೫ ರಲ್ಲಿ ನೀಡಿ ಒಟ್ಟು ೧೪೭ ಅಧಿಕಾರಿ/ಸಿಬ್ಬಂದಿ ಬಲವನ್ನು ಹೆಚ್ಚುವರಿಯಾಗಿ ನೀಡಿರುತ್ತದೆ.

### ಕೋಸ್ಟಲ್ ಸೆಕ್ಯೂರಿಟಿ ಪೋಲೀಸ್ (CSP):

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಮನ್ವಯದಿಂದ ಅಕ್ರಮವಾಗಿ ನುಸುಳುವವರನ್ನು ಮತ್ತು ಕಾನೂನು ಬಾಹಿರ ಚಟುವಟಿಕೆಗಳನ್ನು ತಡೆಯಲು ಕರ್ನಾಟಕ ಕರಾವಳಿ ಕಾವಲು ಪೋಲೀಸ್ ಘಟಕವನ್ನು ಸ್ಥಾಪಿಸಲಾಗಿದೆ. ಕರಾವಳಿ ಕಾವಲು ಪೋಲೀಸ್ ಘಟಕದ ವ್ಯಾಪ್ತಿಯು ದಕ್ಷಿಣಕನ್ನಡ ಜಿಲ್ಲೆಯ ತಲಪಾಡಿಯಿಂದ ಉತ್ತರಕನ್ನಡ ಜಿಲ್ಲೆಯ ಮಾಜಾಳಿವರೆಗೆ ಸುಮಾರು ೩೨೦ ಕಿ.ಮೀ ಉದ್ದದ ತೀರಪ್ರದೇಶವನ್ನು ಒಳಗೊಂಡಿದ್ದು, ಸಮುದ್ರದಲ್ಲಿ ೫ ನಾಟಿಕಲ್ ಮೈಲುವರೆಗೆ ಮತ್ತು ದಡದಲ್ಲಿ ೫೦೦ಮೀ. ವರೆಗೆ ವ್ಯಾಪ್ತಿ ಹೊಂದಿರುತ್ತದೆ.

ಕರಾವಳಿ ಕಾವಲು ಪೋಲೀಸ್ ಘಟಕವು ೧ನೇ ಹಂತದಲ್ಲಿ ೫ ಕರಾವಳಿ ಕಾವಲು ಪೋಲೀಸ್ ಠಾಣೆಗಳನ್ನು ಹೊಂದಿದ್ದು, ಅವುಗಳು ಮಂಗಳೂರು, ಮಲ್ಪೆ, ಭಟ್ಕಳ, ಕುಮಟಾ ಕಾರವಾರದಲ್ಲಿ ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಪ್ರತಿಯೊಂದು ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಕೇಂದ್ರ ಸರ್ಕಾರದಿಂದ ಮಂಜೂರಾದ ಐದು ೫ ಟನ್ ಸಾಮರ್ಥ್ಯದ ಮತ್ತು ಹತ್ತು ೧೨ ಟನ್ ಸಾಮರ್ಥ್ಯದ ಇಂಟರ್‌ಸೆಪ್ಟರ್ ಬೋಟ್‌ಗಳು ಕಾರ್ಯಾಚರಣೆಯಲ್ಲಿರುತ್ತದೆ. ಸಿ.ಎಸ್.ಪಿ ಕೇಂದ್ರ ಕಛೇರಿಯು ಉಡುಪಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

೨ನೇ ಹಂತದಲ್ಲಿ ಹೆಜಮಾಡಿ, ಗಂಗೊಳ್ಳಿ, ಹೊನ್ನಾವರ ಮತ್ತು ಬೆಲೆಕೇರಿಗಳಲ್ಲಿ ಠಾಣೆಗಳು ಮಂಜೂರಾಗಿರುತ್ತದೆ. ಇದರಲ್ಲಿ ಹೆಜಮಾಡಿ ಪೋಲೀಸ್ ಠಾಣೆಯ ಹೊಸ ಕಟ್ಟಡ ನಿರ್ಮಾಣವಾಗಿದ್ದು, ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಇನ್ನುಳಿದ ಪೋಲೀಸ್ ಠಾಣೆಗಳಾದ ಗಂಗೊಳ್ಳಿ, ಹೊನ್ನಾವರ ಮತ್ತು ಬೆಲೆಕೇರಿ ಕಟ್ಟಡಗಳು ಮುಕ್ತಾಯದ ಹಂತದಲ್ಲಿದ್ದು, ಪ್ರಸ್ತುತ ಸರ್ಕಾರಿ/ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

### ಧ್ಯೇಯೋದ್ದೇಶಗಳು:

೧) ಸಮುದ್ರ ತೀರದಲ್ಲಿ ನಿಯಮಿತವಾಗಿ ಸಮುದ್ರಗಸ್ತು ನಡೆಸಿ ಕಣ್ಗಾವಲು ಇಡುವುದು, ೨) ಭಾರತೀಯ ನೌಕಾದಳ, ಕೋಸ್ಟ್‌ಗಾರ್ಡ್, ಕಸ್ಟಮ್ಸ್, ಡಿಆರ್.ಐ, ರಾಜ್ಯ ಹಾಗೂ ಕೇಂದ್ರ ಸರ್ಕಾರದ ಇತರೆ ಸಂಸ್ಥೆಗಳ ನೆರವಿನೊಂದಿಗೆ ಗುಪ್ತ ಮಾಹಿತಿಯನ್ನು ಸಂಗ್ರಹಿಸುವುದು, ೩) ಹಾನಿಯನ್ನುಂಟು ಮಾಡುವ ಭಯೋತ್ಪಾದಕರು ಹಾಗೂ ರಾಷ್ಟ್ರವಿರೋಧಿ ಜನರನ್ನು ತಡೆಯುವುದು, ೪) ಆಯುಧ, ಮದ್ದುಗುಂಡುಗಳು, ಮಾದಕ ದ್ರವ್ಯಗಳು ಹಾಗೂ ಸ್ಫೋಟಕ ವಸ್ತುಗಳ ಅಕ್ರಮ ಸಾಗಾಣಿಕೆಯನ್ನು ತಡೆಗಟ್ಟುವುದು, ೫) ವಿದೇಶಿಯರ ಕಾನೂನು ಬಾಹಿರ ವಲಸೆ ಹಾಗೂ ಅನಧಿಕೃತ ವಾಸ್ತವ್ಯವನ್ನು ತಡೆಗಟ್ಟುವುದು, ೬) ಕರ್ನಾಟಕ ಕಡಲ ತೀರದ ೧೫ ಬಂದರುಗಳ ಚಟುವಟಿಕೆಗಳ ಬಗ್ಗೆ ನಿಗಾ ಇಡುವುದಲ್ಲದೇ ಮೀನುಗಾರಿಕಾ ದೋಣಿ ಹಾಗೂ ವಿದೇಶಿ ಹಡಗುಗಳ ಮೇಲೆ ನಿಗಾ ಇಡುವುದು, ೭) ರಾಜ್ಯ ಹಾಗೂ ಕೇಂದ್ರ ಸರ್ಕಾರದ ಸಂಸ್ಥೆಗಳೊಂದಿಗೆ ಸಂಪರ್ಕವಿರಿಸುವುದು, ಮತ್ತು ೮) ತೀರ ಸಮುದ್ರದಲ್ಲಿ ಸಿಲುಕಿದವರಿಗೆ ಸಹಾಯ ನೀಡುವುದು.

### ರಾಜ್ಯ ಅಪರಾಧ ದಾಖಲಾತಿ ವಿಭಾಗ ಮತ್ತು ಪೋಲೀಸ್ ಗಣಕ ವಿಭಾಗ:

ಗಣಕೀಕರಣದ ಹಾದಿಯಲ್ಲಿ ಕರ್ನಾಟಕ ರಾಜ್ಯವು ದೇಶದಲ್ಲಿನ ಮುಂಚೂಣಿಯಲ್ಲಿರುವ ರಾಜ್ಯಗಳಲ್ಲಿ ಒಂದಾಗಿದ್ದು, ತನ್ನ ಪ್ರಯಾಣವನ್ನು ೧೯೯೪ ರಲ್ಲಿ ಸಿಸಿಐಎಸ್ ತಂತ್ರಾಂಶವನ್ನು ಉಪಯೋಗಿಸುವ ಮೂಲಕ ಪ್ರಾರಂಭಿಸಿತು. ಹಲವು ವರ್ಷಗಳ ತನ್ನ ಅನುಭವದ ಮೂಲಕ ಐಟಿ ವಲಯದಲ್ಲಿನ ಇಆರ್‌ಪಿ ಸಾಫ್ಟ್‌ವೇರ್, ನೆಟ್‌ವರ್ಕ್, ಡೇಟ್ ಸೆಂಟರ್, ತರಬೇತಿ, ಪರಿಣಿತ ಸಿಬ್ಬಂದಿ ಮತ್ತು ಕೇಂದ್ರೀಕೃತ ಮೇಲ್ವಿಚಾರಕ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸುವಲ್ಲಿ ಯಶಸ್ವಿಯಾಗಿದೆ. ಸಿಸಿಟಿಎನ್‌ಎಸ್ ಯೋಜನೆ ಯಡಿಯಲ್ಲಿ, ಈಗಾಗಲೇ ಇದ್ದ ಎಲ್ಲಾ ಐಟಿ ಸಿಸ್ಟಂಗಳನ್ನು ಮೇಲ್ದರ್ಜೆಗೇರಿಸುವ ಮೂಲಕ ಪ್ರಸ್ತುತ ಚಾಲ್ತಿಯಲ್ಲಿರುವ ಹೊಸ ತಂತ್ರಾಂಶಗಳು ಮತ್ತು ಸೇವೆಗಳೊಂದಿಗೆ ಮುನ್ನಡೆಯಲು ಸಾಧ್ಯವಾಗಿದೆ.

### ವಿಶೇಷ ಪೋಲೀಸ್ ಘಟಕಗಳು:

ಸಿವಿಲ್ ಪೋಲೀಸ್ ಘಟಕಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲಯ ಈ ಘಟಕಗಳಿಗೆ ಸಹಾಯಕವಾಗಿ ವಿಶೇಷ ಪೋಲೀಸ್ ಘಟಕಗಳು ಇವೆ. ಅವುಗಳ ವಿವರ ಇಂತಿವೆ.ಸಿ.ಐ.ಡಿ., ವಿಶೇಷ ಘಟಕಗಳು ಹಾಗೂ ಆರ್ಥಿಕ ಅಪರಾಧಗಳು, ಅಪರಾಧ ಪತ್ತೆದಳ, ವಿಶೇಷ ಘಟಕವು ಪೋಲೀಸ್ ಮಹಾನಿರ್ದೇಶಕರ ದರ್ಜೆಯ ಅಧಿಕಾರಿಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ. ಇವರ ಅಧೀನದಲ್ಲಿ ಅರಣ್ಯ ವಿಭಾಗ, ಆರ್ಥಿಕ ಅಪರಾಧ ವಿಭಾಗಗಳು, ಹಾಗೂ ಸೈಬರ್ ಪೋಲೀಸ್ ಠಾಣೆ ಕಾರ್ಯನಿರ್ವಹಿಸುತ್ತವೆ.

### ಕರ್ನಾಟಕ ರಾಜ್ಯ ಮೀಸಲು ಪೋಲೀಸ್ (ಕೆ.ಎಸ್.ಆರ್.ಪಿ.):

ಈ ಘಟಕವು ಅಡಿಷನ್ ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ದರ್ಜೆಯ ಅಧಿಕಾರಿಯ ನೇತೃತ್ವದಲ್ಲಿ ನಡೆಯುತ್ತಿದ್ದು, ಒಬ್ಬರು ಇನ್ಸ್ಪೆಕ್ಟರ್ ಜನರಲ್, ಒಬ್ಬರು ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಹಾಗೂ ಒಬ್ಬರು ಕಮಾಂಡೆಂಟ್ ರವರು ಎ.ಡಿ.ಜಿ.ಪಿ. ರವರಿಗೆ ಕೇಂದ್ರ ಕಛೇರಿಯಲ್ಲಿ ಸಹಾಯಕರಾಗಿರುತ್ತಾರೆ. ಕರ್ನಾಟಕ ರಾಜ್ಯ ಮೀಸಲು ಪೋಲೀಸ್ ಘಟಕವು ಒಟ್ಟು ೧೩ ಪಡೆಗಳು ಮತ್ತು ಒಂದು ತರಬೇತಿ ಶಾಲೆಯನ್ನು ಒಳಗೊಂಡಿರುತ್ತದೆ. ಈ ಪೈಕಿ ೪ ಪಡೆಗಳ ಕೇಂದ್ರಸ್ಥಾನ ಬೆಂಗಳೂರಿನಲ್ಲಿ, ತಲಾ ಒಂದು ಪಡೆಯ ಕೇಂದ್ರಸ್ಥಾನ

ಬೆಳಗಾವಿ, ಮೈಸೂರು, ಕಲಬುರಗಿ, ಮಂಗಳೂರು, ಶಿವಮೊಗ್ಗ, ಶಿಗ್ಗಾವಿ, ಮತ್ತು ಹಾಸನದಲ್ಲಿ ಹಾಗೂ ೨ ಐ.ಆರ್.ಬಿ. ಪಡೆಗಳು ಮುನಿರಾಬಾದ್ ಮತ್ತು ವಿಜಯಪುರದಲ್ಲಿ ಇರುತ್ತದೆ. ಇದರ ಜೊತೆಗೆ ೨ ಮಹಿಳಾ ಕಂಪನಿಗಳು ಮತ್ತುನ ೨ ಭಯೋತ್ಪಾದಕ ನಿಗ್ರಹ ಘಟಕಗಳು ಇರುತ್ತದೆ.

ಪೊಲೀಸ್ ವೈರ್‌ಲೆಸ್ ಘಟಕ:ಪೊಲೀಸ್ ಇಲಾಖೆಯಲ್ಲಿ ಪೊಲೀಸ್ ವೈರ್‌ಲೆಸ್ ಘಟಕವು ಒಂದು ಅಂಗವಾಗಿರುತ್ತದೆ. ಈ ಘಟಕವು ಮಾನ್ಯ ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಸಿಎಲ್&ಎಂ ಬೆಂಗಳೂರು ರವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ. ಪೊಲೀಸ್ ಉಪಮಹಾನಿರೀಕ್ಷಕರು, ವೈರ್‌ಲೆಸ್ ಮತ್ತು ಪೊಲೀಸ್ ಅಧೀಕ್ಷಕರು, ವೈರ್‌ಲೆಸ್ ರವರ ಮೇಲ್ವಿಚಾರಣೆಯಲ್ಲಿ ಈ ಘಟಕವಯ ಕಾರ್ಯನಿರ್ವಹಿಸುತ್ತಿದೆ. ಈ ಘಟಕದಲ್ಲಿ ೧೪ ಲಿಪಿಕ ಸಿಬ್ಬಂದಿಗಳನ್ನೊಳಗೊಂಡಂತೆ ಒಟ್ಟು ೧೭೧೫ ಅಧಿಕಾರಿ ಹಾಗೂ ಸಿಬ್ಬಂದಿಗಳಿದ್ದು ಇವರುಗಳನ್ನು ೩೧ ಜಿಲ್ಲೆಗಳು, ಬೆಂಗಳೂರು ನಗರ ಸೇರಿ ೫ ಕಮೀಷನರೇಟ್‌ಗಳು ಹಾಗೂ ಎಎನ್‌ಎಫ್, ಸಿಎಸ್‌ಪಿ, ಇಂಟೆಲಿಜೆನ್ಸ್, ಐಎಸ್‌ಡಿ ಮತ್ತು ಐಆರ್‌ಬಿ ಗಳಲ್ಲಿ ನಿಯೋಜಿಸಲಾಗಿದೆ. ರಾಜ್ಯ ವೈರ್‌ಲೆಸ್ ಘಟಕವನ್ನು ಮೂರು ವಲಯಗಳನ್ನಾಗಿ ವಿಂಗಡಿಸಲಾಗಿದ್ದು, ಅವುಗಳನ್ನು ದಕ್ಷಿಣ ವಲಯ, ಉತ್ತರ ವಲಯ ಮತ್ತು ಕೇಂದ್ರ ವಲಯಗಳನ್ನಾಗಿ ಮಾಡಿ ಪ್ರತಿ ವಲಯಕ್ಕೆ ಒಬ್ಬರಂತೆ ಡಿ.ಎಸ್.ಪಿ(ವೈರ್‌ಲೆಸ್) ರವರು ಉಸ್ತುವಾರಿ ಅಧಿಕಾರಿಯಗಳಾಗಿರುತ್ತಾರೆ. ಪ್ರತಿ ಜಿಲ್ಲೆ ಮತ್ತು ನಗರಗಳಲ್ಲಿನ ನಿಯಂತ್ರಣ ಕೋಣೆಗಳಲ್ಲಿ ಪಿ.ಐ(ವೈರ್‌ಲೆಸ್) ರವರು ನಿಯಂತ್ರಣ ಕೋಣೆಯ ಉಸ್ತುವಾರಿ ಅಧಿಕಾರಿಯಾಗಿರುತ್ತಾರೆ.

**ಪೊಲೀಸ್ ತರಬೇತಿ ವಿಭಾಗ:**

ಈ ವಿಭಾಗವಯ ಪೊಲೀಸ್ ಮಹಾ ನಿರ್ದೇಶಕರು, ನೇಮಕಾತಿ ಮತ್ತು ತರಬೇತಿ ರವರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಅವರಿಗೆ ಸಹಾಯಕವಾಗಿ ಪೊಲೀಸ್ ಮಹಾ ನಿರೀಕ್ಷಕರು (ತರಬೇತಿ) ಮತ್ತು ಪೊಲೀಸ್ ಉಪ ಮಹಾನಿರೀಕ್ಷಕರು (ತರಬೇತಿ) ಅಧಿಕಾರಿಗಳು ಇರುತ್ತಾರೆ. ರಾಜ್ಯದಲ್ಲಿ ಈ ಕೆಳಕಂಡ ತರಬೇತಿ ಸಂಸ್ಥೆಗಳಿರುತ್ತದೆ. ೧) ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರು, ೨) ಕರ್ನಾಟಕ ರಾಜ್ಯ ಪೊಲೀಸ್ ತರಬೇತಿ ಕೇಂದ್ರ, ಕಲಬುರ್ಗಿ, ೩) ಕರ್ನಾಟಕ ರಾಜ್ಯ ಪೊಲೀಸ್ ತರಬೇತಿ ಶಾಲೆ, ಚನ್ನಪಟ್ಟಣ, ೪) ಪೊಲೀಸ್ ತರಬೇತಿ ಶಾಲೆ, ಖಾನಾಪುರ, ೫) ಸಶಸ್ತ್ರ ಪೊಲೀಸ್ ತರಬೇತಿ ಶಾಲೆ, ಬೆಂಗಳೂರು, ೬) ಪಿ.ಡಿ.ಎಂ.ಎಸ್., ಯಲಹಂಕ.ಬೆಂಗಳೂರು, ೭) ಪೊಲೀಸ್ ತರಬೇತಿ ಶಾಲೆ, ಕಡೂರು, ೮) ಪೊಲೀಸ್ ತರಬೇತಿ ಶಾಲೆ, ಹುಬ್ಬಳ್ಳಿ-ಧಾರವಾಡ, ೯) ಪೊಲೀಸ್ ತರಬೇತಿ ಶಾಲೆ, ಥಣಿಸಂದ್ರ, ೧೦) ಪೊಲೀಸ್ ತರಬೇತಿ ಶಾಲೆ, ಹಾಸನ, ೧೧) ಪೊಲೀಸ್ ತರಬೇತಿ ಶಾಲೆ, ಐಮಂಗಲ ಮತ್ತು ೧೨) ಪೊಲೀಸ್ ತರಬೇತಿ ಶಾಲೆ, ಮೈಸೂರು.

**ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ**

ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಮುಖ್ಯಸ್ಥರು, ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರ ದರ್ಜೆಯ ಅಧಿಕಾರಿಯಾಗಿದ್ದು, ಅವರಿಗೆ ಸಹಾಯಕವಾಗಿ ಕೇಂದ್ರಸ್ಥಾನದಲ್ಲಿ ಓರ್ವ ಪೊಲೀಸ್ ಮಹಾ ನಿರೀಕ್ಷಕರು, ಓರ್ವ ಉಪ ಪೊಲೀಸ್ ಮಹಾ ನಿರೀಕ್ಷಕರು ಹಾಗೂ ಒಬ್ಬ ಪೊಲೀಸ್ ಅಧೀಕ್ಷಕರು ಇದ್ದಾರೆ. ಬೆಂಗಳೂರು, ಮಂಗಳೂರು, ದಾವಣಗೆರೆ, ಬೆಳಗಾವಿ, ಗುಲ್ಬರ್ಗಾ ಮತ್ತು ಮೈಸೂರು ಜಿಲ್ಲೆಗಳಲ್ಲಿ ಒಟ್ಟು ೬ ಕ್ಷೇತ್ರೀಯ ವಿಭಾಗಗಳಿದ್ದು, ಅವುಗಳು ಪೊಲೀಸ್ ಅಧೀಕ್ಷಕರ ಅಧೀನದಲ್ಲಿರುತ್ತವೆ. ಹಾಗೂ ೧೯೫೫ ರ ನಾಗರೀಕ ಹಕ್ಕು ಕಾಯ್ದೆ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿ ತನಿಖೆ ನಡೆಸಲಾಗುತ್ತಿದೆ. ಅಲ್ಲದೆ ಈ ನಿರ್ದೇಶನಾಲಯವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಮೀಸಲಿರಿಸಿದ ಸೌಲಭ್ಯಗಳನ್ನು ವಂಚಿಸುವ ಅಥವಾ ವಂಚಿಸಲು ಪ್ರಯತ್ನಿಸುವ ಇತರ ಜನಾಂಗಗಳ ಮೇಲೆ ನಿಗಾವಹಿಸಲಾಗುತ್ತದೆ.

**ಸಂಚಾರ ಮತ್ತು ರಸ್ತೆ ಸುರಕ್ಷತೆ(ಸಿ.ಟಿ.ಆರ್.ಎಸ್):**

ಈ ಘಟಕವು ಸರ್ಕಾರದ ಆದೇಶಸಂಖ್ಯೆ: ಹೆಚ್.ಡಿ/೦೧೮/ಪಿ.ಓ.ಪಿ / ೮೯ / ಬೆಂಗಳೂರು ದಿನಾಂಕ: ೧೭.೦೭.೧೯೯೧ ರಂದು ಕಾರ್ಯರೂಪದಲ್ಲಿ ಬಂದಿದ್ದು, ಪೊಲೀಸ್ ಮಹಾ ನಿರೀಕ್ಷಕರು/ ಆಯುಕ್ತರು ಸಂಚಾರ ಮತ್ತು ರಸ್ತೆ ಸುರಕ್ಷತೆ (ಸಿ.ಟಿ.ಆರ್.ಎಸ್) ರವರುಗಳು ಈ ಘಟಕದ ಮುಖ್ಯಾಧಿಕಾರಿಗಳಾಗಿರುತ್ತಾರೆ. ಈ ಘಟಕದ ಮುಖ್ಯ ಉದ್ದೇಶಗಳು: ೧) ನಗರ ಹಾಗೂ ಜಿಲ್ಲಾಘಟಕಗಳ ಅಧಿಕಾರಿಗಳಿಗೆ – ಅ. ರಾಜ್ಯದಲ್ಲಿನ ರಸ್ತೆ ಅಪಘಾತಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ನಿರ್ದೇಶನ ನೀಡುವುದು, – ಆ. ಸಂಚಾರ ಮತ್ತು ರಸ್ತೆ ಸುರಕ್ಷತೆಗೆ ಸಂಬಂಧಿಸಿದಂತೆ ಬೇಕಾಗುವ ಸಾಮಗ್ರಿಗಳನ್ನು ಖರೀದಿಸಲು ಹಾಗೂ ವಿತರಿಸಲು ಅನುದಾನ ನೀಡುವುದು – ಇ. ಸಂಚಾರ ಸುರಕ್ಷತೆಗೆ ಆದ್ಯತೆ ನೀಡಿ ಸುಗಮ ಸಂಚಾರಕ್ಕಾಗಿ ಟ್ರಾಫಿಕ್ ಸಿಗ್ನಲ್ ದೀಪಗಳನ್ನು ಅಳವಡಿಸಲು ಮತ್ತು ಅದರ ಪರಿಣಾಮಕಾರಿ ಕಾರ್ಯನಿರ್ವಹಣೆಯ ಬಗ್ಗೆ ನಿರ್ದೇಶನ ನೀಡುವುದು – ಈ. ಐ.ಎಂ.ವಿ. ಆಕ್ಟ್ ೧೫೮(೬) ರ ಪ್ರಕಾರ ರಸ್ತೆ ಅಪಘಾತಗಳ ಬಗ್ಗೆ ವಿವರಗಳನ್ನು ಟ್ರಿಬ್ಯೂನಲ್ ಹಾಗೂ ಸಂಬಂಧಿಸಿದ ಇನ್ಸೂರೆನ್ಸ್ ಸಂಸ್ಥೆಗಳಿಗೆ ಒದಗಿಸುವುದು, ೨) ಬ್ಲಾಕ್‌ಬೆರ್ರಿ ಉಪಕರಣಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಮೋಟಾರು ವಾಹನ ಕಾಯ್ದೆ ಉಲ್ಲಂಘನೆಯ ಪ್ರಕರಣಗಳನ್ನು ದಾಖಲಿಸಲು ಘಟಕಾಧಿಕಾರಿಗಳ ಮುಖಾಂತರ ವಿತರಿಸುವುದು, ೩) ಮಧ್ಯಪಾನ ಮಾಡಿ ವಾಹನಚಾಲನೆ ಮಾಡುವ ಚಾಲಕರ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ಕ್ರಮಕೈಗೊಳ್ಳಲು ಆಲ್ಕೋಬ್ರೆತ್ ಅನಲೈಸರ್‌ಗಳನ್ನು ಘಟಕಾಧಿಕಾರಿಗಳ ಮುಖಾಂತರ ವಿತರಿಸುವುದು, ೪) ಅತೀ ವೇಗ ಮತ್ತು ಅಜಗರೂಕತೆಯಿಂದ ವಾಹನ ಚಾಲನೆ ಮಾಡುವ ಚಾಲಕರನ್ನು ಪತ್ತೆ ಹಚ್ಚಿ ನಿಯಂತ್ರಿಸಲು ರಾಜ್ಯಾದ್ಯಾಂತ ೭೩ ಇಂಟರ್‌ಸೆಪ್ಟರ್ ವಾಹನಗಳನ್ನು ಘಟಕಾಧಿಕಾರಿಗಳಿಗೆ ವಿತರಿಸಲಾಗಿರುತ್ತದೆ, ಮತ್ತು ೫) ರಸ್ತೆ ಅಪಘಾತಗಳನ್ನು ಗುರುತಿಸಿ ಹಾಗೂ ಸುಗಮ ಸಂಚಾರಕ್ಕೆ ಅನುವುಮಾಡಿಕೊಡಲು ಈಗಾಗಲೇ ೧೨ ಜಿಲ್ಲಾ ಘಟಕಗಳಲ್ಲಿ ೧೭೮ ಸರ್ವೆಲೈನ್ಸ್ ಕ್ಯಾಮರಗಳನ್ನು ಅಳವಡಿಸಿದ್ದು, ೨೦೧೪-೧೫ರಲ್ಲಿ ಆರು ಜಿಲ್ಲೆಗಳಿಗೆ ೨೨೬ ಸರ್ವೆಲೈನ್ಸ್ ಕ್ಯಾಮರಗಳನ್ನು ಅಳವಡಿಸಲಾಗಿರುತ್ತದೆ.

**ಸಾರ್ವಜನಿಕ ದೂರು ಮತ್ತು ಮಾನವ ಹಕ್ಕುಗಳ ವಿಭಾಗ:**

ಪ್ರಧಾನ ಕಛೇರಿಯ ದೂರು ಮತ್ತು ಮಾನವ ಹಕ್ಕುಗಳ ವಿಭಾಗದಲ್ಲಿ ಎಡಿಜಿಪಿ ದರ್ಜೆಯ ಅಧಿಕಾರಿಯವರು ಇದರ ಮುಖ್ಯಸ್ಥರಾಗಿರುತ್ತಾರೆ. ೨೦೧೫ನೇ ಸಾಲಿನಲ್ಲಿ ದೂರು ಅರ್ಜಿಗಳನ್ನು

ಸಾರ್ವಜನಿಕರಿಂದ ನೇರವಾಗಿ ಹಾಗೂ ಸರ್ಕಾರದ ಮುಖಾಂತರ ಸ್ವೀಕರಿಸಲಾಗಿದ್ದು, ಇವುಗಳಲ್ಲಿ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದ್ದು, ಕೆಲವು ದೂರು ಅರ್ಜಿಗಳು ಘಟಕಾಧಿಕಾರಿಗಳಲ್ಲಿ ವಿಚಾರಣೆಗಾಗಿ ಬಾಕಿ ಇರುತ್ತದೆ. ಇವುಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಘಟಕಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ಮತ್ತು ಸೂಚನೆಗಳನ್ನು ನೀಡಲಾಗಿದೆ.

**ಪೊಲೀಸ್ ಸಂಶೋಧನ ಘಟಕ:**

ಸಿ.ಬಿ.ಐ ನಿರ್ದೇಶನದ ಮೇರೆಗೆ ಪೊಲೀಸ್ ಸಂಶೋಧನ ಘಟಕವು ೧೯೭೪ ರಲ್ಲಿ ಪ್ರಾರಂಭವಾಯಿತು. ಇದು ಪೊಲೀಸ್ ಪ್ರಧಾನ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಈ ಸಂಸ್ಥೆ ರಾಜ್ಯದಲ್ಲಿನ ಅಪರಾಧಗಳು ಮತ್ತು ವಿವಿಧ ರೀತಿಯ ಪೊಲೀಸ್ ಸಮಸ್ಯೆಗಳ ಬಗ್ಗೆ ಅಧ್ಯಯನ ನಡೆಸಿ ಅಪರಾಧ ತಡೆಗಟ್ಟಲು ಮತ್ತು ಪೊಲೀಸ್ ಇಲಾಖೆಯ ಎದುರಿಸುತ್ತಿರುವ ವಿಭಿನ್ನ ರೀತಿಯ ಸಮಸ್ಯೆಗಳಿಗೆ ಸೂಕ್ತ ಪರಿಹಾರೋಪಾಯಗಳನ್ನು ಸೂಚಿಸುತ್ತಿದೆ.ರಾಜ್ಯದಲ್ಲಿ ದಾಖಲಾಗುವ ಅಪರಾಧಗಳ ಪ್ರತಿದಿನದ ಅಂಕಿ-ಅಂಶಗಳನ್ನು ಪಡೆದು, ದಾಖಲಾಗುವ ವಿಭಿನ್ನ ರೀತಿಯ ಅಪರಾಧಗಳ ಬಗ್ಗೆ ವಿಶ್ಲೇಷಣೆ ಮಾಡಿ ಪೊಲೀಸ್ ಘಟಕಗಳಿಗೆ ಮಾರ್ಗದರ್ಶನ ನೀಡಲಾಗುತ್ತಿದೆ.

ಅಪರಾಧಗಳನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳು, ಒಂದು ಜಿಲ್ಲೆಗಿಂತ ಹೆಚ್ಚಿನ ಪ್ರದೇಶದಲ್ಲಿ ಚಟುವಟಿಕೆಯಿಂದಿರುವ ಗ್ಯಾಂಗ್ಗಳ ಬಗ್ಗೆ, ಅಪರಾಧಿಗಳ ಬಗ್ಗೆ ಪೊಲೀಸ್ ಕಣ್ಗಾವಲು ಆಧುನಿಕ ಅಪರಾಧಗಳನ್ನು ತನಿಖೆ ಮಾಡಲು ಮಾರ್ಗದರ್ಶನ ನೀಡುವುದರ ಜೊತೆಗೆ ಪ್ರತಿ ವರ್ಷದ ಅಪರಾಧದ ಅಂಕಿ-ಅಂಶಗಳು ಹಾಗೂ ವಿವಿಧ ಘಟಕಗಳು, ಪ್ರತಿ ವರ್ಷ ನಿರ್ವಹಿಸಿದ ಕಾರ್ಯಗಳನ್ನು ಕ್ರೋಢೀಕರಿಸಿ ವಾರ್ಷಿಕ ವರದಿ ತಯಾರಿಸಿ ಹಿರಿಯ ಅಧಿಕಾರಿಗಳ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಗುತ್ತಿದೆ. ಹಾಗೆಯೇ ವಿವಿಧ ಪೊಲೀಸ್ ಘಟಕಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಬಿ.ಪಿ.ಆರ್.ಡಿ. ಗೆ ಮಾಹಿತಿಯನ್ನು ಈ ಘಟಕದ ಮೂಲಕವೇ ಸಲ್ಲಿಸಲಾಗುತ್ತಿದೆ.ಈ ಘಟಕದ ಪೊಲೀಸ್ ಅಧಿಕಾರಿಗಳು ವಿಧಾನ ಮಂಡಲದ ಅಧಿವೇಶನಗಳ ಸಂದರ್ಭದಲ್ಲಿ ಪೊಲೀಸ್ ಇಲಾಖೆಯ ಸಮನ್ವಯ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿದಾರೆ. ಅಲ್ಲದೇ ಅಪರಾಧ ಶಾಖೆಗೆ ಸಂಬಂಧಿಸಿದ ಕೆಲಸಗಳಲ್ಲಿಯೂ ಹಿರಿಯ ಅಧಿಕಾರಿಗಳಿಗೆ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

**ಕರ್ನಾಟಕ ಕಾರಾಗೃಹಗಳ ಇಲಾಖೆ**

**ಧ್ಯೇಯ**: ಕಾರಾಗೃಹಗಳು ದಂಡ ನ್ಯಾಯ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿವೆ. ಸಜಾಬಂದಿಗಳು ಮತ್ತು ವಿಚಾರಣಾಧೀನ ಬಂಧಿಗಳ ಸುರಕ್ಷಿತ ಅಭಿರಕ್ಷೆಗಾಗಿ ಕಾರಾಗೃಹಗಳನ್ನು ಸ್ಥಾಪಿಸಲಾಗಿದೆ. ಕಾರಾವಾಸ ದಂಡಾದೇಶ ವಿಧಿಸುವ ಉದ್ದೇಶ ಮತ್ತು ಔಚಿತ್ಯವೇನೆಂದರೆ, ಸಮಾಜವನ್ನು ಅಪರಾಧದ ವಿರುದ್ಧಮತ್ತು ಪ್ರತೀಕಾರದ ವಿರುದ್ಧ ರಕ್ಷಿಸುವುದು ಮತ್ತು ಸತತ ತರಬೇತಿ, ವಿದ್ಯಾಭ್ಯಾಸ ಮತ್ತು ಪರಸ್ಪರ ತಿಳುವಳಿಕೆಗಳಿಂದ ಸುಧಾರಿತ ನಾಗರಿಕನಾಗಿ ಮಾಡಿ ಸಮಾಜದಲ್ಲಿ ಪುನರ್ ಸೇರ್ಪಡೆ ಮಾಡಲು ಬದ್ಧವಾಗಿದೆ. **ಸಂಘಟನೆ**: ಇಲಾಖೆಯು ಗೃಹಸಚಿವರ ಉಸ್ತುವಾರಿಯಲಿದ್ದು, ಗೃಹ ಇಲಾಖೆಯ ಪ್ರಧಾನಕಾರ್ಯದರ್ಶಿಗಳು ಹಾಗೂ ಪ್ರಧಾನ ಕಾರ್ಯದರ್ಶಿಗಳು (ಪಿ.ಸಿ.ಎ.ಎಸ್) ಅಧೀನದಲ್ಲಿ ಕಾರ್ಯನಿರ್ವಹಿಸುತ್ತದೆ. ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾ ನಿರೀಕ್ಷಕರು ಕಾರಾಗೃಹಗಳ ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ. ಪೊಲೀಸ್ ಉಪ ಮಹನಿರೀಕ್ಷಕರು (ಕಾರಾಗೃಹ), ಕಾರಾಗೃಹಗಳ ಉಪ ಮಹನಿರೀಕ್ಷಕರು (ಕೇಂದ್ರಕಾರ್ಯಸ್ಥಾನ) ಮತ್ತು ಪತ್ರಾಂಕಿತ ವ್ಯವಸ್ಥಾಪಕರು ಕೇಂದ್ರ ಕಚೇರಿಯಲ್ಲಿ ಸಹಾಯಕರಾಗಿರುತ್ತಾರೆ. ಎಲ್ಲ ಕೇಂದ್ರ / ಜಿಲ್ಲಾ, ಕಾರಾಗೃಹಗಳ ಮುಖ್ಯಅಧೀಕ್ಷಕರು / ಅಧೀಕ್ಷಕರುಗಳು ಸಂಬಂಧಿಸಿದ ಕಾರಾಗೃಹ ಗಳ ಉಸ್ತುವಾರಿಯನ್ನು ನೋಡಿ ಕೊಳ್ಳುತ್ತಿರುತ್ತಾರೆ.

ಕರ್ನಾಟಕ ರಾಜ್ಯದಲ್ಲಿ ಒಟ್ಟು ೧೦೨ ಕಾರಾಗೃಹಗಳಿದ್ದು, ಅವುಗಳಲ್ಲಿ ೮ ಕೇಂದ್ರ ಕಾರಾಗೃಹಗಳು, ೧೫ ಜಿಲ್ಲಾ ಕಾರಾಗೃಹಗಳು, ೪ ಜಿಲ್ಲಾ ಉಪ ಕಾರಾಗೃಹಗಳು, ೨ ವಿಶೇಷ ಉಪ ಕಾರಾಗೃಹಗಳು, ೧ ಬಯಲು ಬಂದೀಖಾನೆ, ೧ ತರುಣ ಬಂದೀಖಾನೆ ಮತ್ತು ೭೦ ತಾಲ್ಲೂಕು ಉಪ ಕಾರಾಗೃಹಗಳು (೩೦ ಇಲಾಖೆಯ ಸಿಬ್ಬಂದಿಕಾರ್ಯ ನಿರ್ವಹಿಸುತ್ತಿರುವ ತಾಲ್ಲೂಕು ಉಪ ಕಾರಾಗೃಹಗಳು ಮತ್ತು ೪೦ ಪೊಲೀಸ್‌ಸಿಬ್ಬಂದಿ ಕಂದಾಯ ಇಲಾಖೆಯ ಆಡಳಿತದಲ್ಲಿರುವ ತಾಲ್ಲೂಕು ಉಪ ಕಾರಾಗೃಹಗಳು). ಇಲಾಖೆಯ ಈ ಕೆಳಕಂಡ ಆಡಳಿತಾತ್ಮಕಾ ಕಾನೂನು ಮತ್ತು ನಿಯಮಗಳ ಪ್ರಕಾರ ಕಾರ್ಯನಿರ್ವಹಿಸುತ್ತಿದೆ. ೧) ಕರ್ನಾಟಕ ಕಾರಾಗೃಹಗಳ ಅಧಿನಿಯಮ ೧೯೬೩, ೨) ಕರ್ನಾಟಕ ಬಂದಿಗಳ ಅಧಿನಿಯಮ ೧೯೬೩, ೩) ಬಂದಿಗಳ ಗುರುತಿಸುವ ಅಧಿನಿಯಮ, ೪) ಕರ್ನಾಟಕ ಕಾರಾಗೃಹಗಳ ನಿಯಮಗಳು ೧೯೭೪, ಮತ್ತು ೫) ಕರ್ನಾಟಕ ಕಾರಾಗೃಹ ಕೈಪಿಡಿ ೧೯೭೮.

**ಪೆರೋಲ್ ಮತ್ತು ಫರ್ಲೋ:**

ಸಂಬಂಧಿಕರನ್ನು ಬೇಟಿಮಾಡಲು, ಕೌಟುಂಬಿಕ ಸಮಸ್ಯೆಗಳನ್ನು ಪರಿಹರಿಸಲು ಸಂಸಾರದ ಕಷ್ಟಸುಖಗಳಲ್ಲಿ ಭಾಗವಹಿಸಲು ಬಂದಿಗಳಿಗೆ ಪೆರೋಲ್ ಮತ್ತು ಫರ್ಲೋ ಮೇಲೆಊರಿಗೆ ಹೋಗಿಬರಲು ಮತ್ತು ಅವರು ಜೈಲಿಗೆ ಬರುವುದಕ್ಕೆ ಮೊದಲು ಅವರು ಇದ್ದಂತಹ ಸಮಾಜದ ಸಂಪರ್ಕ ಪಡೆಯಲು ಅನುಕೂಲತೆಯನ್ನು ಮಾಡಿಕೊಡಲಾಗಿದೆ.

**(೧) ಪೆರೋಲ್ ನಿಯಮಗಳಿಗೆ ತಿದ್ದುಪಡಿ:**

ಬಂದಿಗಳನ್ನು ಪೆರೋಲ್ ಬಿಡುಗಡೆ ರಜೆಯ ಮೇಲೆ ಬಿಡುಗಡೆ ಮಾಡುವ ನಿಯಮಗಳಿಗೆ ಭದ್ರತಾ ಠೇವಣಿ ಹಣ ರೂ ೬,೦೦೦ಗಳಿಂದ ರೂ ೧,೦೦೦ಕ್ಕೆ ಇಳಿಸಿದ್ದು ಇಬ್ಬರು ಜಾಮೀನುದಾರರನ್ನು ನಿಗದಿಪಡಿಸಿದೆ.ಜಾಮೀನುದಾರರು ಅಲಭ್ಯವಾದ ಪ್ರಸಂಗಗಳಲ್ಲಿ ರೂ ೩,೦೦೦ ಭದ್ರತಾ ಠೇವಣಿಹಾಗೂ ವ್ಯಯಕ್ತಿಕ ಬಂಧ ಪತ್ರ ಮೇಲೆ ಬಿಡುಗಡೆ ಮಾಡಲು ಅವಕಾಶ ಮಾಡಿಕೊಡಲಾಗಿದೆ. (೨) ತುರ್ತು ಪೆರೋಲ್ : ಸಜಾಬಂಡಿಗಳನ್ನು ತಾತ್ಕಾಲಿಕವಾಗಿ ಬಿಡುಗಡೆ ಮಾಡುವ ಕಾರಾಗೃಹಗಳ ನಿಯಮಾವಳಿಗಳಿಗೆ ತಿದ್ದುಪಡಿಯನ್ನು ತರಲಾಗಿದ್ದು. 'ತುರ್ತು ಪೆರೋಲ್'ಎಂಬ ಹೆಸರಿ ನಡಿಯಲ್ಲಿ ೧೫ ದಿನಗಳ ತಾತ್ಕಾಲಿಕ ರಜೆಯನ್ನು ನೀಡುವ ಅವಕಾಶ ಕಲ್ಪಿಸಲಾಗಿದೆ. ತುರ್ತುಪೆರೋಲ್ ಮೇಲೆಬಂದಿಗಳನ್ನು ಬಿಡುಗಡೆ ಮಾಡುವ ಅಧಿಕಾರವು ಆಯಾ ಕಾರಾಗೃಹ ಸಂಸ್ಥೆಯ ಅಧೀಕ್ಷಕರಿಗೆ ಇರುತ್ತದೆ. ತುರ್ತುಪೆರೋಲ್

ಮೇಲೆ ಬಿಡುಗಡೆಗೊಂಡ ಬಂದಿಗಳ ಸಂಖ್ಯೆ: ೧) ೨೦೧೦-೧೧ : ೧೮೩೭, ೨) ೨೦೧೧-೧೨ :೧೩೮೭, ೩) ೨೦೧೨-೧೩ : ೮೮೩, ೪) ೨೦೧೩-೧೪ : ೮೨೯, ೫) ೨೦೧೪-೧೫ : ೧,೩೧೮, ೬) ೨೦೧೫-೧೬ : ೧,೦೨೯.

**ಅವಧಿಪೂರ್ವ ಬಿಡುಗಡೆ:**

ಜೀವಾವಧಿ ಶಿಕ್ಷಾ ಕೈದಿಗಳು ಹಾಗೂ ಅಲ್ಪಾವಧಿ ಶಿಕ್ಷಾ ಕೈದಿಗಳು ಅವಧಿಗೆ ಮುನ್ನ ಬಿಡುಗಡೆಯಾಗಿ ಎಲ್ಲ ಕೇಂದ್ರ ಹಾಗೂ ಜಿಲ್ಲಾಕಾರಾಗೃಹಗಳಲ್ಲಿ ಸಲ ಹಾಸಮಿತಿಗಳನ್ನು ರಚಿಸಲಾಗಿದೆ. ಮಾಫಿಯು ಸೇರಿ ೨/೩ ರಷ್ಟು ಶಿಕ್ಷೆ ಅನುಭವಿಸಿದ ಕೈದಿಗಳ ವಿಚಾರಾಂಶಗಳನ್ನು ಜಿಲ್ಲಾದಂಡಾಧೀಶರ ಮತ್ತು ಜಿಲ್ಲಾ ಆರಕ್ಷಕ ಅಧೀಕ್ಷಕರ ಅಭಿಪ್ರಾಯಗಳೊಂದಿಗೆ ಈ ಸಲಹಾ ಸಮಿತಿಯ ಮುಂದೆ ಮಂಡಿಸಲಾಗುವುದು. ಈ ಸಲಹಾ ಸಮಿತಿಯಿಂದ ಅವಧಿಗೆ ಮುನ್ನ ಬಿಡುಗಡೆಗೆ ಶಿಫಾರಸ್ಸು ಮಾಡಲ್ಪಟ್ಟ ಮಹಾನಿರೀಕ್ಷಕರ ಅಭಿಪ್ರಾಯಗಳೊಂದಿಗೆಸರ್ಕಾರಕ್ಕೆಆಜ್ಞೆಗಾಗಿಅಪಿ ೯ಸಲಾಗುತ್ತಿದೆ.

**ಬಂದಿಗಳ ಆರೋಗ್ಯ:**

ಕಾರಾಗೃಹಗಳಲ್ಲಿ ಲಭ್ಯವಿರುವ ವೈದ್ಯಕೀಯ ಸೌಲಭ್ಯ ಎಲ್ಲ ಕೇಂದ್ರ ಕಾರಾಗೃಹಗಳಲ್ಲಿ ಹಾಗೂ ಕೆಲವೊಂದು ಜಿಲ್ಲಾ ಕಾರಾಗೃಹಗಳಲ್ಲಿ ಬಂದಿಗಳ ವೈದ್ಯಕೀಯ ತಪಾಸಣೆಗಾಗಿ ಪ್ರತ್ಯೇಕ ಆಸ್ಪತ್ರೆ ವಿಭಾಗ ಇರುತ್ತದೆ. ಈ ಆಸ್ಪತ್ರೆಗಳಲ್ಲಿ ಆರೋಗ್ಯ ಇಲಾಖೆಯಿಂದ ಪ್ರತಿ ನಿಯೋಜನಗೊಂಡ ವೈದ್ಯಾಧಿಕಾರಿಗಳು ಇರುತ್ತಾರೆ. ವೈದ್ಯಾಧಿಕಾರಿಗಳಿಗೆ ಸಹಕರಿಸಲು ಅರೆವೈದ್ಯಕೀಯ ಸಿಬ್ಬಂದಿಗಳಾದ ಫಾರ್ಮಾಸಿಸ್ಟ್, ಮೇಲ್‌ನರ್ಸ್, ಲ್ಯಾಬ್‌ಟೆಕ್ನೀಶಿಯನ್‌ಗಳು ಇರುತ್ತಾರೆ. ಈ ಆಸ್ಪತ್ರೆಗಳಲ್ಲಿ ಅವಶ್ಯವಿರುವ ವೈದ್ಯಕೀಯ ಉಪಕರಣಗಳಾದ ಎಕ್ಸ್‌ರೇಯಂತ್ರ, ಪ್ರಯೋಗಾಲಯದ ಉಪಕರಣಗಳು ಇಸಿಜಿ ಮುಂತಾದವುಗಳು ಲಭ್ಯವಿರುತ್ತವೆ. ಬಂದಿಗಳ ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆಯನ್ನು ಕಾರಾಗೃಹದ ವೈದ್ಯಾಧಿಕಾರಿಗಳು ನೋಡಿಕೊಳ್ಳುತ್ತಾರೆ. ಹೆಚ್ಚಿನ / ಉನ್ನತ ಚಿಕಿತ್ಸೆ ಅಗತ್ಯವಿದ್ದಲಿ ಹೊರ ಆಸ್ಪತ್ರೆಗಳಿಗೆ ಜಿಲ್ಲಾ ತಾಲ್ಲೂಕು ವೈದ್ಯಾಧಿಕಾರಿಗಳು ಭೇಟಿ ನೀಡಿ ಚಿಕಿತ್ಸೆ ನೀಡುತ್ತಾರೆ.

**ಆರೋಗ್ಯ ಶಿಬಿರಗಳು:**

ಸಾಮಾನ್ಯ ಆರೋಗ್ಯ, ಕಣ್ಣು, ಹಲ್ಲು ಮತು ಚರ್ಮಕ್ಕೆ ಸಂಬಂಧಿಸಿದ ಕಾಯಿಲೆಗಳ ಬಗ್ಗೆ ಉಚಿತ ವೈದ್ಯಕೀಯ ಶಿಬಿರಗಳನ್ನು ಎಲ್ಲ ಮುಖ್ಯ ಕಾರಾಗೃಹದಲ್ಲಿ ಸರ್ಕಾರೇತರ ಸಂಘ ಸಂಸ್ಥೆಗಳ ಮೂಲಕ ಅಂದರೆ ರೆಡ್‌ಕ್ರಾಸ್ ಸೊಸೈಟಿ, ರೋಟರಿ, ಲಯನ್ಸ್‌ಕ್ಲಬ್ ಮತ್ತು ಪ್ರಿಸನ್ಸ್ ಮಿನಿಸ್ಟ್ರಿ ಇಂಡಿಯಾ ಹಾಗೂ ಇತರೆ ಸ್ವಯಂ ಸೇವಾಸಂಸ್ಥೆಗಳ ಮೂಲಕ ಪ್ರತ್ಯೇಕ ಸಂದರ್ಭಗಳ ನಡೆಸಲಾಗುತ್ತಿದೆ.

**ಕಾರಾಗೃಹಗಳಲ್ಲಿ ಆಯೋಜಿಸುವ ಉತ್ತಮ ಆಚರಣೆಯ ಒಂದು ಒಳನೋಟ:**

೧) ಎನ್.ಜಿ.ಒ, ಚಾರಿಟಬಲ್‌ಟ್ರಸ್ಟ್, ಧಾರ್ಮಿಕನಾಯಕರು ಮತ್ತು ಸಂಸ್ಥೆಗಳ ಸಹಾಯದಿಂದ ಕೈದಿಗಳಿಗೆ ಯೋಗ ಮತ್ತು ಧ್ಯಾನ ಶಿಕ್ಷಣ, ೨) ನೈತಿಕ ಉಪನ್ಯಾಸಗಳು / ಉಪನ್ಯಾಸಗಳು ವಿವಿಧ ಸಂಘಟನೆಗಳ ಆಧ್ಯಾತ್ಮಿಕ ನಾಯಕರು ನಡೆಸುತ್ತಾರೆ, ೩) ಆರ್ಟ್ ಆಫ್ ಲಿವಿಂಗ್‌ಸಂಸ್ಥೆಯಿಂದ -ಯುವ ನಾಯಕತ್ವ ತರಬೇತಿ ಕಾರ್ಯಕ್ರಮ, ೪) ಪ್ರಾಥಮಿಕ ಶಿಕ್ಷಣ ತರಗತಿಗಳು, ೫) ವಿವಿಧ ಮುಕ್ತ ವಿಶ್ವವಿದ್ಯಾಲಯಗಳು ಮಾಜಿ ಮೂಲಕ ತಮ್ಮ ಶಿಕ್ಷಣ ಮುಂದುವರಿಸಲು ಕೈದಿಗಳ ಅವಕಾಶ ಒದಗಿಸುವುದು . ಐಜಿಎನ್‌ಓಯೂ, KSOU ಇತ್ಯಾದಿ,

ಒಳಾಂಗಣ ಮತ್ತು ಹೊರಾಂಗಣ ಆಟಗಳು ಫೆಸಿಲಿಟಿ, ೬) ಗ್ರಂಥಾಲಯ ಸೌಲಭ್ಯಗಳು, ೭) ಟೆಲಿವಿಷನ್ ಸೌಲಭ್ಯಗಳು, ೮) ಮಜೂರಿ ಗಳಿಕೆ ಯೋಜನೆ, ೯) ವಿವಿಧ ವ್ಯಾಪಾರ ಕ್ರ್ಯಾಫ್ಟ್ ವೃತ್ತಿ ತರಬೇತಿ, ಬೇಕರಿ, ಜವಳಿ, ಇತ್ಯಾದಿ (ಪುರುಷರಿಗೆ ಮತ್ತು ಸ್ತ್ರೀ ಯರಿಗೆ), ೧೦) ಕ್ಯಾಂಟಿನ್ ಸೌಲಭ್ಯಗಳು, ೧೧) ಆರೋಗ್ಯ ಶಿಬಿರಗಳು, ೧೨) ಆರೋಗ್ಯ ಭಾಗ್ಯ ಯೋಜನೆ, ೧೩) ಸ್ಟಾಫ್ ಪರೋಪಕಾರಿ ನಿಧಿ, ೧೪) ವೀಡಿಯೊ ಕಾನ್ಫರೆನ್ಸ್ ಫೆಸಿಲಿಟಿ, ೧೫) ಸಿಸಿಟಿವಿ ಫೆಸಿಲಿಟಿ, ೧೬) ಸಂಬಂಧಿಗಳು, ಸ್ನೇಹಿತರು ಮತ್ತು ಸಮರ್ಥಕರು ಸಂದರ್ಶನ, ೧೭) ವಾಕಿಟಾಕಿ ಮತ್ತು ಹೈ ಫ್ರೀಕ್ವೆನ್ಸಿ ನಿಸ್ತಂತು ಸೆಟ್, ೧೮) ಮದ್ಯ ಮತ್ತು ಮಾದಕ ದ್ರವ್ಯಗಳು ಮತ್ತು ಡ್ರಗ್ಸ್ ಕೈದಿಗಳಿಗೆ ವ್ಯಸನ ಮೇಲೆ ಜಾಗೃತಿ ಕಾರ್ಯಕ್ರಮಗಳು, ೧೯) ರಾಜ್ಯದ ಪ್ರತಿಷ್ಠಿತ ಚಿತ್ರಮಂದಿರಗಳಲ್ಲಿ ರಂಗಭೂಮಿ ಕಲೆಮತ್ತು ಪ್ರದರ್ಶನ ನಾಟಕಗಳಲ್ಲಿ ತರಬೇತಿ, ೨೦) ಅಧಿಕಾರಿಗಳು ಮತ್ತು ಸಿಬ್ಬಂದಿ ವ್ಯಕ್ತಿತ್ವ ಅಭಿವೃದ್ಧಿ ಕಾರ್ಯಗಾರ.

ಬಯಲು ಬಂದೀಖಾನೆ, ಕೋರಮಂಗಲ, ದೇವನಹಳ್ಳಿ ತಾಲೂಕು: ಸುಧಾರಣಾ ಕ್ರಮಗಳ ಅಂಗವಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಕೋರಮಂಗಲದಲ್ಲಿ ಬಯಲು ಬಂದೀಖಾನೆಯನ್ನು ಸ್ಥಾಪಿಸಲಾಗಿದೆ. ಇಲ್ಲಿ ಕೈದಿಗಳು ಕನಿಷ್ಟ ಭದ್ರತೆಯಲ್ಲಿ ಕೆಲಸಮಾಡುತ್ತಾರೆ. ಈ ಸಂಸ್ಥೆಗೆ ೧೧೪ ಎಕರೆ ಜಾಮೀನು ಇರುತ್ತದೆ. ಈ ಬಂದೀಖಾನೆಯಲ್ಲಿ ೮೦ ಜನ ಕೈದಿಗಳಿಗೆ ಸ್ಥಳಾವಕಾಶವಿರುತ್ತದೆ. ಈಗ ೩೮ ಮಂದಿ ಬಂದಿಗಳು ಇರುತ್ತಾರೆ. ಅಜೀವ ಕಾರಾಗೃಹ ವಾಸಿಗಳನ್ನು ಅದರಲ್ಲಿಯೂ ೫ ವರ್ಷಗಳಶಿಕ್ಷೆಯನ್ನು ಮುಗಿಸಿ ಮೊದಲಿದ್ದ ಕಾರಾಗೃಹಗಳಲ್ಲಿ ಸಚ್ಚಾರಿತ್ರ್ಯ ಹೊಂದಿ ಉತ್ತಮ ಗುಣ ಹಾಗೂ ನಡುವಳಿಕೆ ಯುಳ್ಳವರನ್ನು ಇಲ್ಲಿಗೆ ವರ್ಗಾಯಿಸಲಾಗುತ್ತದೆ. ಇಲ್ಲಿ ಬಂದಿಗಳಿಗೆ ಆಧುನಿಕ ಮಾದರಿಯ ವ್ಯವಸಾಯ, ತೋಟಗಾರಿಕೆ, ರೇಷ್ಮೆಸಾಕಾಣಿಕೆ, ಕುರಿಸಾಕಾಣಿಕೆ, ಭೂ ಸರಸಂರಕ್ಷಣೆ ಮತ್ತು ಹನಿ ನೀರಾವರಿ ಬಳಕೆಯ ಬಗ್ಗೆ ತರಬೇತಿ ಕೊಡಲಾಗುತ್ತದೆ. ಇಲ್ಲಿ ಕೆಲಸದಲ್ಲಿ ನಿರತರಾದ ಬಂದಿಗಳು ವ್ಯವಸಯಗಾರರಂತೆ ಕಾಣುತ್ತಾರೆ. ಹೊಸ ಬಯಲು ಬಂದೀಖಾನೆ ಪ್ರಸ್ತಾವನೆ: ರಾಜ್ಯದಲ್ಲಿ ಇನ್ನೂ ಮೂರು ಕಡೆಗಳಲ್ಲಿ ಅಂದರೆಯಾದಗಿರಿ, ಮಂಡ್ಯ ಮತ್ತು ಕಡೂರುಗಳಲ್ಲಿ ಬಯಲು ಬಂದೀಖಾನೆಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು ಈಗಾಗಲೇ ಕಡೂರಿನಲ್ಲಿ ೫೫.೧೩ ಎಕರೆ ಜಮೀನು ಇಲಾಖೆಯ ಹಸ್ತಾಂತರವಾಗಿದೆ. ಅದೇ ರೀತಿ ಮಂಡ್ಯದಲ್ಲಿ ೪೦ ಎಕರೆ ಹಾಗೂ ಯಾದಗಿರಿಯಲ್ಲಿ ೧೦೦ ಎಕರೆ ಜಮೀನು ಗುರುತಿಸಲಾಗಿದ್ದು ಇಲಾಖೆಗೆ ಹಸ್ತಾಂತರವಾಗಬೇಕಾಗಿದೆ.

**ಸುಧಾರಣಾ ಕ್ರಮಗಳು:**

ಬಂದಿಗಳು ಬಿಡುಗಡೆಯಾದ ನಂತರ ಸಮಾಜದಲ್ಲಿ ಒಳ್ಳೆಯ ನಾಗರಿಕರಾಗಿ ಬಾಳುವಂತೆ ಹಾಗೂ ಅಪರಾಧ ಮನೋಭಾವನೆ ಪುನರಾವರ್ತನೆಗೊಳ್ಳದಂತೆ ನೋಡಿಕೊಳ್ಳಲು ಈ ಕೆಳಕಂಡ

ಸುಧಾರಣಾ ಕ್ರಮಗಳು ಜಾರಿಯಲ್ಲಿವೆ. ಕಾರಾಗೃಹಗಳ ಕೈಗಾರಿಕೆಗಳನ್ನು ಮೇಲ್ದರ್ಜೆಗೇರಿಸುವುದು. ಕಾರಾಗೃಹಗಳಲ್ಲಿರುವ ಕೈಗಾರಿಕೆಗಳು ಸುಮಾರು ೨೫ ರಿಂದ ೩೦ ವರ್ಷಗಳ ಹಿಂದೆ ಸ್ಥಾಪಿತವಾಗಿದ್ದವಾಗಿದ್ದು,ಅವುಹಳೆಯಮಾದರಿಯಾಗಿದ್ದು ಅಲ್ಲಿರುವ ಯಂತ್ರೋಪಕರಣಗಳು ಸಹ ಹಳೆಯ ಮಾದರಿಯದ್ದಾಗಿರುತ್ತವೆ. ಕಾರಾಗೃಹಗಳ ಕೈಗಾರಿಕೆಗಳನ್ನು ಉನ್ನತ ದರ್ಜೆಗೆ ಏರಿಸುವ ಅಂದರೆ ಹಳೆಯ ಯಂತ್ರೋಪಕರಣಗಳ ಬದಲಿಗೆ ಹೊಸ ಯಂತ್ರೋಪಕರಣಗಳನ್ನು ಅಳವಡಿಸುವುದು ಅವಶ್ಯವಿದೆ ಹಾಗೂ ಚಾಲ್ತಿಯಲ್ಲಿರುವ ವೃತ್ತಿಗಳಲ್ಲಿ ಬಂದಿಗಳಿಗೆ ತರಬೇತಿ ನೀಡಿ ಅವರನ್ನು ಆಯಾ ಕೈಗಾರಿಕೆಗಳಲ್ಲಿ ಕೆಲಸದಲ್ಲಿ ತೊಡಗಿಸುವುದು ಅವಶ್ಯಕವಿದೆ. ಈ ನಿಟ್ಟಿನಲ್ಲಿ ಕಾರಾಗೃಹಗಳ ಕೈಗಾರಿಕೆಗಳನ್ನು ಆಧುನೀಕರಿಸಲು ಹಾಗೂ ಉನ್ನತ ದರ್ಜೆಗೇರಿಸಲು ಸರ್ಕಾರದಿಂದ ಅನುದಾನ ಲಭ್ಯವಾಗುವುದು ಅತ್ಯಲ್ಪವಾಗಿರುತ್ತದೆ. ಕೈಗಾರಿಕೆಗಳಲ್ಲಿ ಯಂತ್ರೋಪಕರಣಗಳು ದುರಸ್ತಿ ಕಾಣದೆ ಮತ್ತು ಕೆಲವೊಂದು ಕಾರ್ಖಾನೆಗಳಲ್ಲಿ ಬೋಧಕರಿಲ್ಲದೆ ಭಾಗಶ: ಕಾರ್ಖಾನೆಗಳು ಸ್ಥಗಿತಗೊಂಡಿರುತ್ತವೆ.

ಕಾರಾಗೃಹಗಳ ಕೈಗಾರಿಕೆಗಳನ್ನು ಮೇಲ್ದರ್ಜೆಗೇರಿಸುವುದು ಅತ್ಯವಶ್ಯವಾಗಿರುತ್ತದೆ. ಕಾರಾಗೃಹಗಳ ಕೈಗಾರಿಕೆಗಳನ್ನು ಆಧುನೀಕರಿಸಲು ಹಾಗೂ ಅಲ್ಲಿನ ಸೋಪ್ ಮತ್ತು ಫಿನಾಯಿಲ್ ತಯಾರಿಕೆ, ಪಾದರಕ್ಷೆ ತಯಾರಿಕೆ ಹಾಗೂ ಕೈ ಮಗ್ಗ ಈ ಕ್ಷೇತ್ರಗಳಲ್ಲಿ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಸಂಬಂಧಿಸಿದ ಸರ್ಕಾರದ ಹಾಗೂ ಸರ್ಕಾರದ ಅಧೀನ ಸಂಸ್ಥೆಗಳ ಮತ್ತು ಖಾಸಗಿ ಉದ್ಯಮಗಳ ಸಹಕಾರವನ್ನು ಕೋರಲಾಗಿದೆ.

**ಕೃಷಿ ಮತ್ತು ತೋಟಗಾರಿಕೆ:**

ಕೈದಿಗಳಲ್ಲಿ ಬಹುಪಾಲು ಮಂದಿ ಕೃಷಿ ಪ್ರಧಾನ ಕುಟುಂಬಗಳಿಂದ ಬರುವುದರಿಂದ ಅವರಿಗೆ ಆಧುನಿಕ ರೀತಿಯಲ್ಲಿ ಕೃಷಿ ಹಾಗೂ ತೋಟಗಾರಿಕೆಯಲ್ಲಿ ತರಬೇತಿ ನೀಡಲು ಆದ್ಯತೆ ಕೊಡಲಾಗಿದೆ. ಇದರಿಂದ ಅವರು ಬಿಡುಗಡೆಯಾಗಿ ಹೋದಮೇಲೆ ಒಳ್ಳೆಯ ಕೃಷಿಕರುಗಳು ಮತ್ತು ತೋಟಗಾರಿಕಾ ಕುಶಾಲಿಗಳಾಗುವುದಕ್ಕೆ ಅನುಕೂಲವಾಗುತ್ತದೆ.

ಭೂಮಿ ಹದಮಾಡಿ, ಗೊಬ್ಬರಹಾಕಿ, ಬೀಜ ಬಿತ್ತುವುದರಿಂದ ಹಿಡಿದು ಔಷಧಿಗಳ ಉಪಯೋಗವನ್ನೊಳಗೊಂಡು ಬೆಳೆಗಳನ್ನು ಕಟಾವು ಮಾಡುವವರೆಗೆ ಈ ತರಬೇತಿ ವಿಸ್ತರಿಸಲ್ಪಟ್ಟಿದೆ. ಈ ಉದ್ದೇಶಕ್ಕಾಗಿ ಪ್ರತಿಯೊಂದು ಕೇಂದ್ರ ಹಾಗೂ ಜಿಲ್ಲಾ ಕಾರಾಗೃಹಗಳಿಗೆ ಹೊಂದಿ ಕೊಂಡಂತೆ ಕೃಷಿಗೆ ಯೋಗ್ಯವಾದ ಭೂಮಿ ಇದೆ. ಈ ಭೂಮಿಯಲ್ಲಿ ತರಕಾರಿಗಳನ್ನು ಹಾಗೂ ಧಾನ್ಯಗಳನ್ನು ಬೆಳೆಯಲಾಗುತ್ತಿದೆ. ವ್ಯವಸಾಯಕ್ಕೆ ಅನುಕೂಲ ವಾಗಲು ಆಧುನಿಕ ಸಲಕರಣೆಗಳು ಟ್ರ್ಯಾಕ್ಟರ್‌ಗಳನ್ನು ನೀಡಲಾಗಿದೆ ಹಾಗೂ ಹನಿ ನೀರಾವರಿ ಪದ್ಧತಿಯನ್ನು ಸಹ ಅಳವಡಿಸಲಾಗಿದೆ.

**ಮಜೂರಿ ಗಳಿಕೆ ಯೋಜನೆ:**

ಬಂದಿಗಳಿಗೆ ಸಜಾ ಆಗಿ ಅವರು ಕಾಯ್ದೆ ಪ್ರಕಾರ ದುಡಿಯಲೇ ಬೇಕಾದರೂ, ಅದು ಬಲವಂತದ ದುಡಿತವಾಗಬಾರದು ಹಾಗೂ ಅವರು ಕೆಲಸಕ್ಕೆ ಉತ್ತೇಜನ ರೂಪದಲ್ಲಿಯಾದರೂ ವೇತನ ಕೊಡಬೇಕು ಎಂಬುದು ಆಧುನಿಕ ಚಿಂತನೆಯಾಗಿದೆ. ಅಲ್ಲದೆ ಹಾಗೆ ಕೊಡುವ ವೇತನ ಅವರಿಗೂ, ಅವರ ಮನೆ ಮಕ್ಕಳಿಗೂ ಸ್ವಲ್ಪ ಆಸರೆಯಾಗ ಬಹುದು ಎಂಬ ಒಂದು ಘನ ಉದ್ದೇಶದಿಂದ ಕರ್ನಾಟಕ ರಾಜ್ಯದಲ್ಲಿ ಕೈದಿಗಳು ವೇತನಗಳಿಸುವ ಯೋಜನೆಯು ಅಸ್ತಿತ್ವದಲ್ಲಿದೆ. ಹೀಗೆ ವೇತನವನ್ನು ಆಯಾ ಕೈದಿಗಳ ವ್ಯಯಕ್ತಿಕ ಲೆಕ್ಕದಲ್ಲಿ ಜಮಾ ಮಾಡಲಾಗುವುದು.

ಕೈದಿಗಳಿಗೆ ತಾವುಗಳಿಸಿದ ಅರ್ಧದಷ್ಟು ಹಣವನ್ನು ಅಂದರೆ ಶೇ ೫೦ ರಷ್ಟನ್ನು ಅವರ ಸ್ವಂತ ಉಪಯೋಗಕ್ಕಾಗಿ ಅಂದರೆ ಕಾಫಿ, ಚಹಾ, ತಿಂಡಿ ತಿನಿಸುಗಳನ್ನು, ಅಂಚೆಕಾರ್ಡ್‌ಗಳು ಮುಂತಾದವುಗಳನ್ನು ಅಥವಾ ಅವರ ನಿಕಟ ಸಂಬಂದಿಗಳಿಗೆ ಆರ್ಜಿತ ಹಣವನ್ನು ಮನಿಯಾರ್ಡರ್ ಮೂಲಕ ಕಳುಹಿಸಲು ಅನುಮಾತಿ ನಿಡಲಾಗುತ್ತಿದೆ ಮತ್ತು ಇನ್ನುಳಿದ ಶೇ ೫೦ ರಷ್ಟು ಹಣವನ್ನುಅವರು ಬಿಡುಗಡೆ ಹೊಂದಿ ಹೋಗುವಾಗ ಒಟ್ಟಿಗೆ ಕೊಡಲಾಗುವುದು. ಕೈದಿಗಳಿಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಹಾಗೂ ಅವರುಗಳು ಬಿಡುಗಡೆಯಾಗಿ ಹೋಗುವಾಗ ಹೆಚ್ಚಿನ ಹಣವನ್ನು ಉಳಿಸಿಕೊಂಡು ಪುನರ್ವಸತಿ ಕಲ್ಪಿಸಾಕೊಂಡು ಸಮಾಜದಲ್ಲಿ ಒಳ್ಳೆಯ ನಾಗರಿಕರಾಗಿ ಬಾಳುವಂತಗಲಿ ಎಂಬ ದೃಷ್ಟಿಯಿಂದ ಮಜೂರಿ ದರಗಳನ್ನು ಹೆಚ್ಚಿಸಲಾಗಿದೆ. ಕೆಲಸ ಮಾಡಲು ಮುಂದೆ ಬರುವ ವಿಚಾರಣಾಧೀನ ಬಂದಿಗಳಿಗೆ ಸಹ ಮಜೂರಿ ನೀಡಲಾಗುತ್ತಿದೆ.

**ಶಿಕ್ಷಣ ಮತ್ತು ವಾಚನಾಲಯ ಸೌಲಭ್ಯ:**

ಅನಕ್ಷರಸ್ತ ಬಂದಿಗಳನ್ನು ಅಕ್ಷರಸ್ತರನ್ನಾಗಿ ಮಾಡಲು ವಯಸ್ಕರ ಶಿಕ್ಷಣ ಪದ್ಧತಿಯು ಜಾರಿಯಲ್ಲಿದೆ ಹಾಗೂ ಇದಕ್ಕಾಗಿ ಶಿಕ್ಷಣ ಇಲಾಖೆ ಯಿಂದ ಎರವಲು ಪಡೆದ ನುರಿತ ಶಿಕ್ಷಕರಿರುತ್ತಾರೆ. ಬಂದಿಗಳು ಹೆಚ್ಚಿನ ವ್ಯಾಸಂಗವನ್ನು ಮಾಡಲು ಇಚ್ಚಿಸಿದ್ದಲ್ಲಿ ಮೈಸೂರು/ ಬೆಂಗಳೂರು/ ಧಾರವಾಡ ಮುಕ್ತ ವಿಶ್ವವಿದ್ಯಾಲಯ ಹಾಗೂ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ ನವದೆಹಲಿಈ ಸಂಸ್ಥೆಗಳ ಮೂಲಕ ಪ್ರವೇಶ ಪಡೆಯಲು ಮುಕ್ತ ಅವಕಾಶವನ್ನು ಕಲ್ಪಿಸಿಕೊಡಲಾಗಿದೆ ಹಾಗೂ ಇದಕ್ಕಾಗಿ ತಗಲುವ ವೆಚ್ಚವನ್ನು ಇಲಾಖೆಯೇ ಭರಿಸುತ್ತದೆ.

ಪ್ರಸಕ್ತ ಸಾಲಿನಲ್ಲಿ ಈ ಕೆಳಕಂಡಂತೆ ವಿವಿಧ ಕೋರ್ಸ್‌ಗಳಲ್ಲಿ ವ್ಯಾಸಂಗವನ್ನು ಮುಂದುವರಿಸಲು ಬಂದಿಗಳಿಗೆ ಅನುಮತಿಯನ್ನು ನೀಡಲಾಗಿದೆ. ಆಯಾವ್ಯಾಸಂಗಕ್ಕೆ ತಗಲುವ ಪ್ರವೇಶ ಶುಲ್ಕ ಮತ್ತು ಪರೀಕ್ಷಾ ಶುಲ್ಕವನ್ನು ಇಲಾಖೆ ಭರಿಸಿದೆ. ಕೇಂದ್ರ ಕಾರಾಗೃಹ ಬೆಂಗಳೂರು, ಬೆಳಗಾವಿ, ಬಳ್ಳಾರಿ, ಕಲಬುರಗಿ, ಮೈಸೂರು ವಿಜಯಪುರಗಳಲ್ಲಿ ಹಾಗೂ ಬಯಲು ಬಂಧಿಖಾನೆ, ಕೋರಮಂಗಲದಲ್ಲಿ ಕೇಂದ್ರ ಗ್ರಂಥಾಲಯದ ತನ್ನ ಶಾಖೆಗಳನ್ನು ತೆರೆದಿವೆ. ಈ ಗ್ರಂಥಾಲಯಗಳಲ್ಲಿ ಮನೋರಂಜನೆ ಹಾಗೂ ವ್ಯಕ್ತಿತ್ವ ನಿರ್ಮಾಣ ಮಾಡುವಂತಹ ಪುಸ್ತಕಗಳು ಲಭ್ಯವಿರುತ್ತವೆ. ಬಂದಿಗಳಿಗೆ ಗ್ರಂಥಾಲಯದ ಸೌಲಭ್ಯ ಪಡೆದುಕೊಳ್ಳಲು ಅನುವು ಮಾಡಿಕೊಡಲಾಗಿದೆ.

**ಕಾರಾಗೃಹ ಸಿಬ್ಬಂದಿ ತರಬೇತಿ ಸಂಸ್ಥೆ:**

ಅಧೀನ ಕಾರ್ಯ ನಿರ್ವಾಹಕ ಸಿಬ್ಬಂದಿ, ಅಂದರೆ ವೀಕ್ಷಕ (ವಾರ್ಡರ್), ಮುಖ್ಯವೀಕ್ಷಕ (ಹೆಡ್‌ವಾರ್ಡರ್) ಮುಂತಾದವರಿಗೆ ತರಬೇತಿ ನೀಡಲು ೧೯೭೭ರಲ್ಲಿ ಕಾರಾಗೃಹ ಸಿಬ್ಬಂದಿ ತರಬೇತಿ

ಸಂಸ್ಥೆಯನ್ನು ಮೈಸೂರಿನಲ್ಲಿ ಪ್ರಾರಂಭಿಸಲಾಗುತ್ತದೆ. ಈ ಸಂಸ್ಥೆಯು ಕೇಂದ್ರ ಕಾರಾಗೃಹಗಳ ಹಿರಿಯ ಅಧೀಕ್ಷಕರ ಹುದ್ದೆಯ ಪ್ರಾಚಾರ್ಯರನ್ನು ಮುಖ್ಯಸ್ಥರನ್ನಾಗಿಯೂ, ಸಹಾಯಕರನ್ನಾಗಿ ಸಹಾಯಕ ಅಧೀಕ್ಷಕರನ್ನು ಭೋದಕರನ್ನು, ಆಯುಧ ತರಬೇತಿ ಮತ್ತು ದೇಹದಾರ್ಢ್ಯ ಭೋದಕರನ್ನು ಅಧಿಕ ಸಿಬ್ಬಂದಿಯನ್ನು ಹೊಂದಿದೆ. ಪ್ರಸ್ತುತ ಕಾರಾಗೃಹಗಳ ಕಾರಾಗೃಹ ಚೀಫ್ ಸೂಪರಿಂಟೆಂಡೆಂಟ್ ಪ್ರಾಚಾರ್ಯರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ವಿಶ್ವವಿದ್ಯಾಲಯದಿಂದ, ಆರಕ್ಷಕ ತರಬೇತಿ ವಿದ್ಯಾಲಯದಿಂದ, ತೋಟಗಾರಿಕೆ, ಕೃಷಿ ಮತ್ತು ವೈದ್ಯಕೀಯ ಇಲಾಖೆಗಳಿಂದ ವಿವಿಧ ವಿಷಯಗಳ ಪರಿಣಿತ ೪೩ನೇ ತಂಡ ಜನವರಿ ೨೦೧೩ ರಿಂದ ಆರಂಭಗೊಂಡಿದ್ದು ವೀಕ್ಷಕರಿಗೆ ತರಬೇತಿಯನ್ನು ನೀಡಲಾಗುತ್ತಿದೆ.

ಜೈಲುಗಳ ಸ್ಥಿತಿಗತಿಗಳನ್ನು ಸುಧಾರಿಸುವ ಅವಶ್ಯಕತೆಯನ್ನು ಮನಗಂಡ ನವದೆಹಲಿಯ Bureau of Police Research and Development ಸಂಸ್ಥೆಯು ನೀಡಿರುವ ಸುಧಾರಣಾ ಸಲಹೆಗಳನ್ನು ರಾಜ್ಯ ಕಾರಾಗೃಹ ಇಲಾಖೆಯು ಹಂತ ಹಂತವಾಗಿ ಕಾರ್ಯಗತಗೊಳಿಸುತ್ತಿರುವುದು ಗಮನೀಯವಾಗಿದೆ. ಇತ್ತೀಚೆಗೆ ಕಾರಾಗೃಹ ಸಿಬ್ಬಂದಿಗಳ ಮನೋಭಿವೃದ್ಧಿಗಾಗಿ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ಇಲಾಖೆಯು ಪ್ರತಿ ವರ್ಷ ಹಮ್ಮಿಕೊಳ್ಳುತ್ತದೆ. ಇದಲ್ಲದೆ ಕಾರಾಗೃಹದ ಉನ್ನತ ಅಧಿಕಾರಿಗಳನ್ನು ವಿವಿಧ ತರಬೇತಿ ಕೋರ್ಸ್‌ಗಳಿಗೆ ಹೊರ ರಾಜ್ಯಗಳಲ್ಲಿನ ತರಬೇತಿ ಸಂಸ್ಥೆಗಳಿಗೆ ನಿಯೋಜಿಸಲಾಗುತ್ತದೆ.

**ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು:**

ಬಂದಿಗಳು ಒಳಾಂಗಣ ಹಾಗೂ ಹೊರಾಂಗಣ ಆಟಗಳಾದ ಚೆಸ್, ಕೇರಂ ವಾಲೀಬಾಲ್, ಕಬ್ಬಡಿ, ಖೋಖೋ, ಕ್ರಿಕೆಟ್ ಇತ್ಯಾದಿ ಆಟಗಳನ್ನಾಡಲು ಅನುಕೂಲ ಮಾಡಿ ಕೊಡಲಾಗಿದೆ. ಗಣೇಶೋತ್ಸವ, ರಾಜ್ಯೋತ್ಸವ ಇಂತಹ ಅನೇಕ ಸಂದರ್ಭಗಳಲ್ಲಿ ಬಂದಿಗಳು ನಾಟಕಗಳನ್ನಾಡಲು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಅನುಕೂಲ ಮಾಡಿಕೊಡಲಾಗಿದೆ. ಬಂದಿಗಳ ಮನೋಭಿವೃದ್ಧಿಗಾಗಿ ಯೋಗ ತರಗತಿಗಳನ್ನು ನಡೆಸಲಾಗುತ್ತಿದೆ.

**ಕ್ರೀಡಾಕೂಟ:**

ಇಲಾಖೆಯಲ್ಲಿ ಪ್ರಥಮಬಾರಿಗೆ ರಾಜ್ಯದ ವಿವಿಧ ಕಾರಾಗೃಹಗಳ ಸಜಾ ಸಜಾ ಬಂದಿಗಳ ಕ್ರೀಡಾ ಕೂಟವನ್ನು ಜೂನ್ ೨೦೧೨ (೨೪ರಿಂದ೨೬) ಏರ್ಪಡಿಸಲಾಗಿತ್ತು. ಸದರಿ ಕ್ರೀಡಾ ಕೂಟಗಳನ್ನು ಎರಡು ಕಾರಾಗೃಹಗಳಲ್ಲಿ ಬೆಂಗಳೂರು ಹಾಗೂ ಮೈಸೂರು ಕೇಂದ್ರ ಕಾರಾಗೃಹಗಳಲ್ಲಿ ಆಯೋಜಿಸಿ ವಿವಿಧ ಕ್ರೀಡಾಗಳಾದ ಕ್ರಿಕೆಟ್, ಕಬಡ್ಡಿ, ಥ್ರೋಬಾಲ್, ಟೆನ್ನಿಕಾಯ್ಟ್, ವಾಲೀಬಾಲ್, ಚೆಸ್ ಹಾಗೂ ಕೇರಂ ಪಂದ್ಯಗಳನ್ನು ಆಡಿಸಲಾಯಿತು. ಎಲ್ಲ ಬಂದಿಗಳಿಗೂ ಸಮಾನ ಅವಕಾಶಗಳನ್ನು ಕಲ್ಪಿಸಲಾಗಿತ್ತು ಎಲ್ಲ ತಂಡಗಳಲ್ಲಿನ ಉತ್ಸಾಹವನ್ನು ಐಪಿಎಲ್ ಕ್ರೀಡಾಗಳಲ್ಲಿ ಕಂಡು ಬರುವಂತಹ ಉತ್ಸಾಹಕ್ಕೆ ಸಮಾನಾಂತರವಾಗಿತ್ತು. ಪಂದ್ಯಗಳನ್ನು ಗೆದ್ದತಂಡಗಳಿಗೆ ಟ್ರೋಫಿ ಮತ್ತು ಬಹುಮಾನಗಳನ್ನು ನೀಡಲಾಯಿತು.

**ಬಂದಿಗಳಿಗೆ ಯೂತ್ ಲೀಡರ್‌ಶಿಪ್ ಟ್ರೈನಿಂಗ್ ಪ್ರೋಗ್ರಾಮ್(ವೈ.ಎಲ್.ಟಿ.ಪಿ):**

ಬಂದಿಗಳ ಮನಪರಿವರ್ತನೆ ಮಾಡಿ ಅವರನ್ನು ಸತ್ಪ್ರಜೆಗಳನ್ನಾಗಿ ಸಮಾಜಕ್ಕೆ ಸೇರಿಸುವ ಕಾರ್ಯದಲ್ಲಿ ಇಲಾಖೆಯು ಪ್ರತಿಷ್ಠಿತ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಸಹಯೋಗದಲ್ಲಿ ಜಂಟಿಯಾಗಿ ಯೂತ್ ಲೀಡರ್ ಶಿಪ್ ಟ್ರೈನಿಂಗ್ ಪ್ರೋಗ್ರಾಮ್ (ವೈಎಲ್‌ಟಿಪಿ) ಕಾರ್ಯಕ್ರಮವನ್ನು ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮವು ಬಂದಿಗಳ ಮೀಸಲಿರುವ ಕಾರ್ಯಕ್ರಮವಾಗಿದ್ದು ೬೦ ದಿನಗಳ ಕಾಲ (೧.೬.೨೦೧೨-೩೧.೭.೨೦೧೨) ಜರಗಿತು. ಕಾರ್ಯಕ್ರಮದಲ್ಲಿ ಬಂದಿಗಳಿಗೆ ವ್ಯಕ್ತಿತ್ವ ವಿಕಸನ, ಒತ್ತಡ ನಿರ್ವಹಣೆ, ಮನಃಶಾಂತಿ ಸುದರ್ಶನ ಕ್ರಿಯೆಯ ಮೂಲಕ ಒತ್ತಡ, ಆಯಾಸ ಮತ್ತು ನಕಾರಾತ್ಮಕ ಭಾವನೆಗಳನ್ನು ತೆಗೆದು ಹಾಕುವ ವಿಧಾನಗಳ ಬಗ್ಗೆ ಸುಧೀರ್ಘವಾಗಿ ತಿಳಿಸಲಾಯಿತು.

**ಬಂದಿಗಳಿಂದ ನಾಟಕ ಪ್ರದರ್ಶನ :**

ಕಾರಾಗೃಹದ ಬಂದಿ ನಿವಾಸಿಗಳಿಗೆ ರಂಗಕಲೆಯಲ್ಲಿ ಸಂಕಲ್ಪ, ಮೈಸೂರು ಇವರ ವತಿಯಿಂದ ತರಬೇತಿ ನೀಡಿ ಪ್ರಸಕ್ತ ಸಾಲಿನಲ್ಲಿ ಜೈಲ್ ಜೈಲಿನಿಂದ ಜೈಲಿಗೆ ರಂಗ ಯಾತ್ರೆ ಕಾರ್ಯಕ್ರಮದ ಅಡಿಯಲ್ಲಿ ಬೆಂಗಳೂರು, ಬೆಳಗಾವಿ, ಮೈಸೂರು ಹಾಗೂ ಧಾರವಾಡ ಕೇಂದ್ರ ಕಾರಾಗೃಹದ ಬಂದಿ ನಿವಾಸಿಗಳಿಂದ ಶೇಕ್ಸ್‌ಪಿಯರ್‌ನ 'ಕಿಂಗ್‌ಲಿಯರ್' ಚಂದ್ರಶೇಖರ್ ಕಂಬಾರ ವಿರಚಿತ 'ಶಿವರಾತ್ರಿ' ಈ ನಾಟಕಗಳನ್ನು ಬೆಂಗಳೂರು, ಬೆಳಗಾವಿ, ಧಾರವಾಡ ನಗರದ ಪ್ರತಿಷ್ಠಿತ ರಂಗಮಂದಿರಗಳಲ್ಲಿ ಯಶಸ್ವಿ ಪ್ರದರ್ಶನಗಳನ್ನು ನೀಡಲಾಗಿದ್ದು ಸಾರ್ವಜನಿಕರ ಹಾಗೂ ರಂಗವಿಮರ್ಶಕರ ಪ್ರಶಂಶೆಗೆ ಪಾತ್ರರಾಗಿರುತ್ತಾರೆ.

**ವೀಡಿಯೋ ಕಾನ್ಫರೆನ್ಸಿಂಗ್:**

ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಬಂದಿಗಳನ್ನು ನ್ಯಾಯಾಲಯಗಳ ಮುಂದೆ ಹಾಜರು ಪಡಿಸುವ ವಿನೂತನ ವ್ಯವಸ್ಥೆಯನ್ನು ಒದಗಿಸುವಲ್ಲಿ ಕರ್ನಾಟಕವು ಅಗ್ರಸ್ಥಾನದಲ್ಲಿದ್ದು ಪ್ರಸ್ತುತ ೭ ಕೇಂದ್ರ ಕಾರಾಗೃಹಗಳು, ೧೩ ಜಿಲ್ಲಾ ಕಾರಾಗೃಹಗಳು, ೪ ಜಿಲ್ಲಾ ಕೇಂದ್ರ ಉಪಕರ ಗೃಹಗಳು, ೩ ಉಪ ಕಾರಾಗೃಹಗಳು ಮತ್ತು ಸಂಬಂಧಿಸಿದ ನ್ಯಾಯಾಲಯಗಳ ನಡುವೆ ಚಾಲ್ತಿಯಲ್ಲಿವೆ. ಈ ವ್ಯವಸ್ಥೆಯ ಮೂಲಕ ೨೦೧೨-೧೩ನೇ ಸಾಲಿನಲ್ಲಿ ೪೫,೬೮ ವಿಚಾರಣಾ ಬಂದಿಗಳನ್ನು ನ್ಯಾಯಾಲಯಗಳ ಮುಂದೆ ಹಾಜರು ಪಡಿಸಲಾಗಿದ್ದು ರೂ ೮೫,೨೨,೮೮೨,೦೦ಗಳನ್ನು ಉಳಿತಾಯ ಮಾಡಲಾಗಿದೆ. ಮಲ್ಟಿ ಪಾಯಿಂಟ್ ವೀಡಿಯೋ ಕಾನ್ಫರೆನ್ಸಿಂಗ್: ಮಲ್ಟಿಪಾಯಿಂಟ್ ವೀಡಿಯೋ ಕಾನ್ಫರೆನ್ಸಿಂಗ್ ಇದು ದೇಶದಲ್ಲೇ ವಿನೂತನ ಉಪಕ್ರಮವಾಗಿದ್ದು ಈ ವ್ಯವಸ್ಥೆಯನ್ನು ಸಿಟಿಕೋರ್ಟ್ ಕಾಂಪ್ಲೆಕ್ಸ್, ಬೆಂಗಳೂರು ಇಲ್ಲಿ ಅಳವಡಿಸಲಾಗಿರುತ್ತದೆ. ಈವ್ಯವಸ್ಥೆಯು ವಿಚಾರಣೆ ನ್ಯಾಯಾಲಯ ಮತ್ತು ಬೆಂಗಳೂರು ಕೇಂದ್ರ ಕಾರಾಗೃಹವನ್ನೇ ಸಂಪರ್ಕದಲ್ಲಿಡುವುದರ ಜೊತೆಗೆ ಬೆಂಗಳೂರು ಹೊರಗಡೆ ಇರುವ ೪ ಕಾರಾಗೃಹಗಳನ್ನು ಏಕಕಾಲಕ್ಕೆ ಸಂಪರ್ಕ ಕಲ್ಪಿಸುತ್ತದೆ. ಇದರಿಂದ ಕ್ರಿಮಿನಲ್ ಮೊಕದ್ದಮೆಗೆ ಸಂಬಂಧಿಸಿದ ಬೆಂಗಳೂರಿನ ಹೊರಗಿರುವ ಕಾರಾಗೃಹಗಳಲ್ಲಿ

ದಾಖಲಿರುವ ಬಂದಿಗಳನ್ನು ದೈಹಿಕವಾಗಿ ನ್ಯಾಯಾಲಯದ ಮುಂದೆ ಹಾಜರುಪಡಿಸದೆ ವೀಡಿಯೋ ಕಾನ್ಫರೆನ್ಸಿಂಗ್ ಮೂಲಕ ಸಂವಾದ ನಡೆಸಬಹುದಾಗಿದೆ.

**ಐ. ಪಿ. ದೂರವಾಣಿಗಳು:**

ವರದಿಯವರ್ಷದಲ್ಲಿ ಇ-ಆಡಳಿತ ಇಲಾಖೆಯ ಕೆಸ್ವಾನ್ ಯೋಜನೆಯಲ್ಲಿ ಕಾರಾಗೃಹಗಳಿಗೆ ಐ. ಪಿದೂರವಾಣಿಗಳನ್ನು ಅಳವಡಿಸಲು ಕ್ರಮ ಜರುಗಿಸಲು ಎಲ್ಲಕೇಂದ್ರ ಕಾರಾಗೃಹಗಳು ಹಾಗೂ ಜಿಲ್ಲಾ ಕೇಂದ್ರ ಉಪಕರ ಗೃಹಗಳಿಗೆಐ. ಪಿದೂರವಾಣಿಗಳನ್ನು ಒದಗಿಸಲಾಗಿದೆ. ಬಂದಿಗಳಿಗೆ ದೂರವಾಣಿ ಸೌಲಭ್ಯ : ಇತರೆ ಕಾರಾಗೃಹಗಳಿಗೆ ವಿಸ್ತರಣೆ: ದೇಶದಲ್ಲಿ ಪ್ರಥಮವೆಂಬಂತೆ ಬಂದಿಗಳಿಗೆ ಪೇಟೆಲಿಫೋನ್-ಪಾವತಿ ದೂರವಾಣಿ ಸೌಲಭ್ಯವನ್ನು ಒದಗಿಸಿಕೊಡಲಾಗಿದೆ. ಈ ಸೌಲಭ್ಯವನ್ನು ಪ್ರಪ್ರಥಮವಾಗಿ ಬೆಂಗಳೂರು ಮತ್ತು ಮೈಸೂರು ಕೇಂದ್ರ ಕಾರಾಗೃಹಗಳಲ್ಲಿ ಒದಗಿಸಲಾಗಿರುತ್ತದೆ. ಅನಂತರ ಈ ಸೌಲಭ್ಯವನ್ನುಕೇಂದ್ರ ಕಾರಾಗೃಹ ಬೆಳಗಾವಿ (೧೫.೪.೦೮), ಕಲಬುರಗಿ (೯.೪.೦೮), ವಿಜಯಪುರ (೮.೫.೦೮), ಧಾರವಾಡ (೨೧.೦೬.೦೮) ಮತ್ತು ಬಳ್ಳಾರಿ (೨೦.೬.೦೮) ವಿಸ್ತರಿಸಲಾಗಿದೆ. ಈ ಸೌಲಭ್ಯದ ಮೂಲಕ ಬಂದಿಗಳು ಅವರ ಸಂಬಂಧಿಕರೊಡನೆ, ಮತ್ತು ವಕೀಲರೊಡನೆ ಸಂಭಾಷಣೆ ಮಾಡಲು ಅವರಿಗೆ ನೀಡಲಾಗಿರುವ ಪ್ರೇಪೆಯ್ಡ್ ಕಾರ್ಡು ಮೂಲಕ ಅನುಕೂಲ ಕಲ್ಪಿಸಲಾಗಿದೆ.

**ರಾಜ್ಯದಲ್ಲಿರುವ ಕಾರಾಗೃಹಗಳು:**

೧ ಕೇಂದ್ರ ಕಾರಾಗೃಹ ಬೆಂಗಳೂರು ಕೇಂದ್ರ ಕಾರಾಗೃಹ ಪರಪ್ಪನ ಅಗ್ರಹಾರ, ಬೆಂಗಳೂರು-೫೬೦೦೧೦;
೨ ಕೇಂದ್ರ ಕಾರಾಗೃಹ ಬೆಳಗಾವಿ ಹಿಂಡಲಗಾ, ಬೆಳಗಾವಿ – ೫೯೧೧೦೮;
೩ ಕೇಂದ್ರಕಾರಾಗೃಹ, ಬಳ್ಳಾರಿ – ೫೮೩೧೦೩;
೪ ಕೇಂದ್ರಕಾರಾಗೃಹ, ವಿಜಯಪುರ-೫೮೬೧೦೭;
೫ ಕೇಂದ್ರ ಕಾರಾಗೃಹ, ಕಲಬುರಗಿ – ೫೮೫೧೦೨;
೬ ಕೇಂದ್ರಕಾರಾಗೃಹ, ಅಶೋಕ ರೋಡ್, ಮೈಸೂರು-೫೭೦೦೦೭;
೭ ಕೇಂದ್ರಕಾರಾಗೃಹ, ಧಾರವಾಡ – ೫೮೦೦೦೮;
೮ ಕೇಂದ್ರಕಾರಾಗೃಹ (ವುಮೆನ್‌ಪ್ರಿಸನ್) ತುಮಕೂರು-೫೭೨೧೦೧
೯ ಕಾರಾಗೃಹ ತರಬೇತಿ ಸಂಸ್ಥೆ, ಅಶೋಕ ರೋಡ್, ಮೈಸೂರು – ೫೭೦೦೦೭.

**ಜಿಲ್ಲಾ ಕಾರಾಗೃಹಗಳು:**

೧ ಜಿಲ್ಲಾ ಕಾರಾಗೃಹ, ಬೀದರ್ – ೫೮೫೪೦೧;
೨ ಜಿಲ್ಲಾ ಕಾರಾಗೃಹ, ಕಾರವಾರ – ೫೮೧೩೦೧;
೩ ಜಿಲ್ಲಾ ಕಾರಾಗೃಹ, ಮಡಿಕೇರಿ – ೫೭೧೧೨೦;
೪ ಜಿಲ್ಲಾ ಕಾರಾಗೃಹ, ಮಂಗಳೂರು- ೫೭೫೦೦೩;
೫ ಜಿಲ್ಲಾ ಕಾರಾಗೃಹ, ರಾಯಚೂರು – ೫೮೪೧೦೧;
೬ ಜಿಲ್ಲಾ ಕಾರಾಗೃಹ, ಶಿವಮೊಗ್ಗ – ೫೭೭೨೦೧;
೭ ಜಿಲ್ಲಾ ಕಾರಾಗೃಹ, ಬಾಗಲಕೋಟೆ – ೫೮೭೧೦೧;
೮ ಜಿಲ್ಲಾ ಕಾರಾಗೃಹ, ಚಿತ್ರದುರ್ಗ – ೫೭೭೫೦೧;
೯ ಜಿಲ್ಲಾ ಕಾರಾಗೃಹ, ಚಾಮರಾಜನಗರ – ೫೭೧೩೧೩.
೧೦ ಜಿಲ್ಲಾ ಕಾರಾಗೃಹ, ಹಾವೇರಿ – ೫೮೧೧೧೦.
೧೧ ಜಿಲ್ಲಾ ಕಾರಾಗೃಹ, ರಾಮನಗರ – ೫೭೧೫೧೧.
೧೨ ಜಿಲ್ಲಾ ಕಾರಾಗೃಹ, ತುಮಕೂರು.
೧೩ ಜಿಲ್ಲಾ ಕಾರಾಗೃಹ, ಚಿಕ್ಕಬಳ್ಳಾಪುರ – ೫೬೨೧೦೧.
೧೪ ಜಿಲ್ಲಾ ಕಾರಾಗೃಹ, ಉಡುಪಿ-೫೭೬೧೦೧.
೧೫ ಜಿಲ್ಲಾ ಕಾರಾಗೃಹ, ಕೊಪ್ಪಳ.
೧೬ ಜಿಲ್ಲಾ ಕಾರಾಗೃಹ, ಚಿಕ್ಕಮಗಳೂರು – ೫೭೭೧೦೧.
೧೭ ಜಿಲ್ಲಾ ಕಾರಾಗೃಹ, ಹಾಸನ – ೫೭೩೨೦೧.
೧೮ ಜಿಲ್ಲಾ ಕಾರಾಗೃಹ, ಕೋಲಾರ – ೫೬೩೧೦೧.
೧೯ ಜಿಲ್ಲಾ ಕಾರಾಗೃಹ, ಮಂಡ್ಯ – ೫೭೧೪೦೧.

**ಜಿಲ್ಲಾ ಕಾರಾಗೃಹಗಳು:**

೨೦ ವಿಶೇಷ ಉಪ ಕಾರಾಗೃಹ, ದಾವಣಗೆರೆ-೫೭೭೦೦೧.
೨೧ ವಿಶೇಷ ಉಪ ಕಾರಾಗೃಹ, ಕೆ.ಜಿ.ಎಫ್ – ೫೬೩೧೧೭.
೨೨ ಬಯಲು ಬಂದೀಖಾನೆ, ದೇವನಹಳ್ಳಿ.

**ಗೃಹರಕ್ಷಕ ಮತ್ತು ಪೌರ ರಕ್ಷಣಾ ಇಲಾಖೆ**

ಗೃಹ ರಕ್ಷಕ ದಳ ಸಂಸ್ಥೆಯು ಮೂಲತಃ ಒಂದು ಸ್ವಯಂ ಸೇವಕ ಸಂಸ್ಥೆಯಾಗಿದ್ದು, ಕರ್ನಾಟಕ ಗೃಹರಕ್ಷಕ ಕಾಯ್ದೆ ೧೯೬೨ ಮತ್ತು ಕರ್ನಾಟಕ ಗೃಹರಕ್ಷಕ ನಿಯಮಾವಳಿ ೧೯೬೩ರ ಪ್ರಕಾರ ರಚಿತವಾಗಿದೆ. ಗೃಹರಕ್ಷಕ ಸ್ವಯಂ ಸೇವಾ ಪಡೆಗಳು ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಪೋಲೀಸ್ ಇಲಾಖೆಗೆ ನೆರವಾಗುತ್ತವೆ. ನೆರೆಹಾವಳಿ, ಭೂಕಂಪ, ಬೆಂಕಿ ಅನಾಹುತ, ಕಟ್ಟಡ ಕುಸಿತ ಮತ್ತು ಪ್ರಕೃತಿ ವಿಕೋಪ ಪರಿಸ್ಥಿತಿಗಳಲ್ಲಿ ನಾಗರಿಕರ ಪ್ರಾಣ ಹಾಗೂ ಆಸ್ತಿ ಪಾಸ್ತಿಗಳ ರಕ್ಷಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ.

ಭಾರತ ಸರ್ಕಾರ ರಾಜ್ಯಕ್ಕೆ ೨೧,೭೦೦ ಗೃಹರಕ್ಷಕರನ್ನು ಮಂಜೂರು ಮಾಡಿದ್ದು ಕರ್ನಾಟಕ ಸರ್ಕಾರ ಇದನ್ನು ೨೫,೦೦೦ಕ್ಕೆ ಹೆಚ್ಚಿಸಿದೆ. ೨೦೧೦ರ ಡಿಸೆಂಬರ್ ಅಂತ್ಯಕ್ಕೆ ೨೨,೮೯೯ ಗೃಹರಕ್ಷಕ ಸ್ವಯಂ ಸೇವಕರು ನೊಂದಣಿಯಾಗಿರುತ್ತಾರೆ. ೨೮೧೪ ಮಹಿಳಾ ಗೃಹರಕ್ಷಕಿಯರಿದ್ದಾರೆ. ಇವರುಗಳಿಗೆಲ್ಲಾ ಡಿಸಾಸ್ಟರ್ ಮೇನೇಜ್‌ಮೆಂಟ್, ಲ್ಯಾಂಡ್ ಸ್ಲೈಡ್‌ರಿಸ್ಕ್ ಮೇನೇಜ್‌ಮೆಂಟ್, ಅಗ್ನಿಶಮನ, ದೋಣಿಚಾಲನೆ, ವಾಹನ ಚಾಲನೆ, ಪ್ರಥಮ ಚಿಕಿತ್ಸೆ, ರೈಫಲ್ ಶೂಟಿಂಗ್, ಚುನಾವಣೆ, ಜಾತ್ರೆ, ಸಮ್ಮೇಳನ, ಸಮಾವೇಶಗಳಲ್ಲಿ ನಾಗರಿಕರನ್ನು ರಕ್ಷಿಸಲು ಪೌರರಕ್ಷಣಾ ತರಬೇತಿಗಳನ್ನು ನೀಡಲಾಗುವುದು. ಗೃಹರಕ್ಷಕರು ಕರ್ತವ್ಯ ನಿರ್ವಹಿಸುವಾಗ ದಿನಭತ್ಯೆ ಹಾಗೂ ಸರ್ಕಾರಿ ನೌಕರರಿಗೆ

ಅನ್ವಯವಾಗುವ ರೀತಿಯಲ್ಲಿ ಪ್ರವಾಸ ಭತ್ಯೆ, ಕವಾಯತು ಭತ್ಯೆಗಳನ್ನು ನೀಡಲಾಗುವುದು. ಕರ್ತವ್ಯ ನಿರ್ವಹಿಸುವಾಗ ಮೃತಪಟ್ಟರೆ ಒಂದು ಲಕ್ಷ ಎಕ್ಸ್‌ಗ್ರೇಷಿಯಾ ನೀಡಲಾಗುವುದು. ಅತ್ಯುತ್ತಮ ಸೇವೆಸಲ್ಲಿಸಿದವರನ್ನು ಗುರುತಿಸಿ ರಾಷ್ಟ್ರಪತಿಗಳ ಪದಕ, ಮುಖ್ಯಮಂತ್ರಿಯವರ ವಿಶಿಷ್ಟ ಸೇವಾ ಪದಕ ನೀಡಿ ಗೌರವಿಸಲಾಗುತ್ತದೆ.

### ಅಗ್ನಿಶಾಮಕ ದಳ

ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯನ್ನು ೧೯೪೨ರಲ್ಲಿ ಬೆಂಗಳೂರು ದಕ್ಷಿಣ ಮತ್ತು ಉತ್ತರ ಎಂಬ ಎರಡು ವಲಯಗಳನ್ನಾಗಿ ಪೋಲೀಸ್ ಇಲಾಖೆಯ ಆಡಳಿತ ಮತ್ತು ನಿಯಂತ್ರಣದಲ್ಲಿ ಸ್ಥಾಪಿಸಲಾಯಿತು. ಕರ್ನಾಟಕ ರಾಜ್ಯ ಅಗ್ನಿಶಾಮಕ ಸೇವೆ ಅಧಿನಿಯಮ ೧೯೬೪ರ ಕಾಯ್ದೆ ಬಂದ ನಂತರ, ಅಗ್ನಿಶಾಮಕ ಮತ್ತು ತುರ್ತು ಸೇವಾ ನಿರ್ದೇಶನಾಲಯವನ್ನು ೦೫-೧೧-೧೯೬೫ರಲ್ಲಿ ಪ್ರಾರಂಭಿಸಲಾಯಿತು. ಮಹಾನಿರ್ದೇಶಕರು ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ. ಈ ಇಲಾಖೆಯು ಕಾರ್ಯಾಚರಣೆ, ತರಬೇತಿ, ನಿರ್ವಹಣೆ ಮತ್ತು ಸಂಪರ್ಕ ಎಂಬ ನಾಲ್ಕು ವರ್ಗಗಳಲ್ಲಿ ಕಾರ್ಯನಿರ್ವಹಿಸುತ್ತದೆ. ಪ್ರತಿಯೊಂದು ಜಿಲ್ಲೆಗೂ ಒಬ್ಬ ಅಗ್ನಿಶಾಮಕ ಅಧಿಕಾರಿ ಇರುತ್ತಾರೆ. ಹಾಲಿ ೧೯೫ ಅಗ್ನಿಶಾಮಕ ಠಾಣೆ ಮತ್ತು ನಾಲ್ಕು ಅಗ್ನಿನಿಯಂತ್ರಣ ಘಟಕಗಳು, ೧೪೬ ತಾಲೂಕು ಮತ್ತು ೩೦ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. "ರಕ್ಷಣೆಗಾಗಿ" ಇದು ಅಗ್ನಿ ಶಾಮಕ ದಳದ ಧ್ಯೇಯ ವಾಕ್ಯವಾಗಿದ್ದು, ಬೆಂಕಿ ಅನಾಹುತ ಅಥವಾ ಇತರೆ ತೀವ್ರ ಸ್ವರೂಪದ ಅನಾಹುತಗಳಲ್ಲಿ ಸಿಲುಕಿಕೊಂಡ ಸಾರ್ವಜನಿಕರ ಜೀವ ಹಾಗೂ ಆಸ್ತಿ ಸಂರಕ್ಷಣೆ ಮಾಡುವುದು, ಬಹು ಅಂತಸ್ತಿನ ಕಟ್ಟಡ, ಅಪಾಯಕಾರಿ ಉದ್ದಿಮೆಗಳು, ಗೋದಾಮುಗಳಲ್ಲಿ ಅಗ್ನಿ ಅನಾಹುತ ತಡೆಗಟ್ಟುವುದು, ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಅಗ್ನಿಶಾಮಕ ಜಲವಾಹನಗಳನ್ನು ತಟಸ್ಥ ಕರ್ತವ್ಯಕ್ಕೆ ನಿಯೋಜಿಸುವುದು, ಪ್ರೌಢಶಾಲಾ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಅಗ್ನಿಶಮನದ ಬಗ್ಗೆ ಜಾಗೃತಿ ಮೂಡಿಸಲು 'SAFE' (Students Association for fire Education) ಸ್ಥಾಪಿಸಿದೆ.

ಅಣಕು ಪ್ರದರ್ಶನ ಮತ್ತು ಇವ್ಯಾಕ್ಯುವೇಷನ್ ಡ್ರಿಲ್ ನಡೆಸುವ ಮೂಲಕ ಅರಿವು ಮೂಡಿಸಲಾಗುತ್ತಿದೆ. ಇಲಾಖೆಯ ಕೇಂದ್ರ ಕಛೇರಿಯನ್ನು ಗಣಕೀಕೃತಗೊಳಿಸಿದ್ದು, ಇ-ಮೇಲ್, ಬ್ರಾಡ್ ಬ್ಯಾಂಡ್ ಅಂತರ್‌ಜಾಲ ವ್ಯವಸ್ಥೆಗೊಳಿಸಿದ್ದು ಸಿಬ್ಬಂದಿಗಳಿಗೆ ಸೂಕ್ತ ತರಬೇತಿಗಳನ್ನು ನೀಡಲಾಗಿದೆ. Blog.ksfes.gov.in ಎಂಬ ಬ್ಲಾಗ್‌ನ್ನು ಸಾರ್ವಜನಿಕರಿಗೂ media watch.ksfes.gov.inನ್ನು ಮಾಧ್ಯಮದವರಿಗೂ ಹಂಚಿಕೊಳ್ಳಲು ಅಂತರ್‌ಜಾಲ ಸ್ಥಾನ ಹೊಂದಿದೆ. ಅಲ್ಲದೇ ನಿಸ್ತಂತು ಜಾಲ ವ್ಯವಸ್ಥೆ ಕೂಡ ಇದೆ. ಪ್ರತಿ ವರ್ಷ ಏಪ್ರಿಲ್ ೧೪ ರಿಂದ ೨೦ ರವರೆಗೆ ಅಗ್ನಿಶಾಮಕ ಸೇವಾ ಸಪ್ತಾಹ ಆಚರಿಸಲಾಗುತ್ತಿದೆ. ವಾಹನಗಳನ್ನು ರೇಚಕ ಯಂತ್ರಗಳನ್ನು ದುರಸ್ಥಿಪಡಿಸಲು ಬನ್ನೇರುಘಟ್ಟದಲ್ಲಿ ಸುಸಜ್ಜಿತವಾದ ಕಾರ್ಯಾಗಾರ ಸ್ಥಾಪಿಸಿದೆ.

ಅಮ್ಯೂಸ್ ಮೆಂಟ್ ಕಾಯಿದೆ, ಪೆಟ್ರೋಲ್ ಕಾಯಿದೆ, ಎಕ್ಸ್‌ಪೋಸಿವ್ ಕಾಯಿದೆ, ನ್ಯಾಷನಲ್ ಬಿಲ್ಡಿಂಗ್ ಕೋಡ್ ಮುಂತಾದವುಗಳ ಅಡಿಯಲ್ಲಿ ನಿರಾಕ್ಷೇಪಣಾ ಪತ್ರ ನೀಡುವುದು, ಸಭೆ ಸಮಾರಂಭಗಳಿಗೆ ಅಗ್ನಿಶಮನ ಮುನ್ನೆಚ್ಚರಿಕೆ ಕ್ರಮವಾಗಿ ಇಲಾಖೆಯು ವಾಹನಗಳನ್ನು ಕೋರಿಕೆಯ ಮೇರೆಗೆ ನಿಗದಿತ ಶುಲ್ಕ ಪಡೆದು ನಿಯೋಜಿಸುವ ವ್ಯವಸ್ಥೆ ಇದೆ.

### ಕರ್ನಾಟಕ ಲೋಕಾಯುಕ್ತ ಸಂಸ್ಥೆ

ಆಡಳಿತ ಕಾರ್ಯ ಚಟುವಟಿಕೆಗಳಲ್ಲಿನ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಹಾಗೂ ಆಡಳಿತ ಯಂತ್ರದಲ್ಲಿರುವ ಶಿಸ್ತುಹೀನತೆ ಬಗೆಗೆ ಸಾರ್ವಜನಿಕರಿಂದ ಬರುವ ದೂರುಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಂಡು ಸಾರ್ವಜನಿಕ ಆಡಳಿತ ಮಟ್ಟ ಸುಧಾರಿಸುವ, ಭ್ರಷ್ಟಾಚಾರ ನಿಯಂತ್ರಣ, ಸಾರ್ವಜನಿಕ ಕುಂದು ಕೊರತೆಗಳನ್ನು ಬಗೆಹರಿಸುವುದು, ಸಾರ್ವಜನಿಕ ನೌಕರರ ವಿರುದ್ಧ ದೂರು ಇದ್ದಲ್ಲಿ ಅದನ್ನು ತನಿಖೆ ಮಾಡಿ ಅವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ಲೋಕಾಯುಕ್ತ ಸಂಸ್ಥೆಗೆ ಇರುವ ಅಧಿಕಾರಗಳಾಗಿವೆ. ಈ ಸಂಸ್ಥೆಯಲ್ಲಿ ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತ ಎಂಬ ಎರಡು ಹುದ್ದೆಗಳು ಪ್ರಭಾವೀ ಹುದ್ದೆಗಳಾಗಿವೆ.

ಭಾರತದ ಸರ್ವೋಚ್ಛನ್ಯಾಯಾಲಯದ ನ್ಯಾಯಾಧೀಶರಾಗಿ ಅಥವಾ ಯಾವುದೇ ರಾಜ್ಯದ ಉಚ್ಛ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿ ಕರ್ತವ್ಯ ನಿರ್ವಹಿಸಿರುವ ನ್ಯಾಯಾಧೀಶರನ್ನು ಲೋಕಾಯುಕ್ತರನ್ನಾಗಿ ನೇಮಕ ಮಾಡುತ್ತಾರೆ. ಯಾವುದೇ ರಾಜ್ಯದ ಉಚ್ಛ ನ್ಯಾಯಾಲಯದ ನ್ಯಾಯಾಧೀಶರಾಗಿ ಕರ್ತವ್ಯ ನಿರ್ವಹಿಸಿರುವ ನ್ಯಾಯಾಧೀಶರನ್ನು ಉಪ ಲೋಕಾಯುಕ್ತರನ್ನಾಗಿ ನೇಮಕ ಮಾಡುತ್ತಾರೆ. ಇವರ ಕಾರ್ಯ ವೈಖರಿಯಲ್ಲಿ ನೆರವಾಗಲು ನ್ಯಾಯಾಧೀಶರು, ಸರ್ಕಾರಿ ಅಭಿಯೋಜಕರು, ಪೋಲೀಸರು ಅಭಿಯಂತರರು ಮತ್ತು ಲೆಕ್ಕಾಧಿಕಾರಿಗಳು ಮುಂತಾದ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. ಯಾವುದೇ ದೂರು ಸುಳ್ಳು ಅಥವಾ ದುರುದ್ದೇಶದಿಂದ ಅಥವಾ ಕ್ಷುಲ್ಲಕ ಕಾರಣಕ್ಕಾಗಿ ಸಲ್ಲಿಸಲಾಗಿರುವುದು ಮನವರಿಕೆಯಾದರೆ ಅಂತಹ ದೂರು ನೀಡಿದವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲು ಅವಕಾಶವಿದೆ.

ಲೋಕಾಯುಕ್ತರು ಮತ್ತು ಉಪ ಲೋಕಾಯುಕ್ತರು, ಮುಖ್ಯಮಂತ್ರಿ ಯಾವುದೇ ಮಂತ್ರಿ, ಕಾರ್ಯದರ್ಶಿ, ರಾಜ್ಯ ಶಾಸಕಾಂಗದ ಸದಸ್ಯರು, ಕರ್ನಾಟಕ ಸರ್ಕಾರ ಹೊರಡಿಸಿದ ಅಧಿಸೂಚನೆಯಲ್ಲಿ ಕಾಣಿಸಿದ ಸಾರ್ವಜನಿಕ ನೌಕರರುಗಳ ಮೇಲಿನ ದೂರುಗಳ ಬಗ್ಗೆ ತನಿಖೆ ಮಾಡಲು ಅಧಿಕಾರವ್ಯಾಪ್ತಿ ಉಳ್ಳವರಾಗಿದ್ದಾರೆ. ಅಫಿಡವಿಟ್ ನೊಂದಿಗೆ ನಿಗದಿತ ನಮೂನೆಯಲ್ಲಿ ಫಿರ್ಯಾದು ಸಲ್ಲಿಸಬೇಕು. ಪ್ರಧಾನ ಕಛೇರಿ ಬೆಂಗಳೂರಿನಲ್ಲಿದ್ದು, ಶಾಖಾ ಕಛೇರಿಗಳು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಇರುತ್ತವೆ. ಲೋಕಾಯುಕ್ತ ಸಂಸ್ಥೆಯು ಕರ್ನಾಟಕ ಲೋಕಾಯುಕ್ತ ಕಾಯ್ದೆ ೧೯೮೪ ಮತ್ತು ಕರ್ನಾಟಕ ಲೋಕಾಯುಕ್ತ ನಿಯಮ ೧೯೮೫, ಭ್ರಷ್ಟಾಚಾರ ನಿರ್ಮೂಲನಾ ಅಧಿನಿಯಮ ೧೯೮೮ ಇವುಗಳನ್ನು ಜಾರಿಗೊಳಿಸುತ್ತಿದೆ.

೧೯೮೪ರಲ್ಲಿ ಲೋಕಾಯುಕ್ತ ಕಾಯಿದೆ ಜಾರಿಗೆ ಬಂದರೂ ಮೊದಲ ಲೋಕಾಯುಕ್ತರ ನೇಮಕವಾದ್ದು ೧೯೮೬ರಲ್ಲಿ. ಇದುವರೆಗು ಕಾರ್ಯನಿರ್ವಹಿಸಿದ ಲೋಕಾಯುಕ್ತರ ಪಟ್ಟಿ ಕೆಳಕಂಡಂತಿದೆ.

| | |
|---|---|
| ನ್ಯಾ.ಡಿ.ಕೋಶಾಲ್ | ೧೫-೧-೧೯೮೬ ರಿಂದ ೧೪-೧-೧೯೯೧ |
| ನ್ಯಾ. ರವೀಂದ್ರನಾಥ್ ಪೈನೆ | ೨೫-೦೧-೧೯೯೧ರಿಂದ ೨೪-೦೧-೧೯೯೬ |
| ನ್ಯಾ.ಎ.ಎನ್. ಹಕೀಂ | ೨-೦೬-೧೯೯೬ ರಿಂದ ೧-೦೭-೨೦೦೧ |
| ನ್ಯಾ.ಎನ್.ವೆಂಕಟಾಚಲ | ೩-೦೭-೨೦೦೧ ರಿಂದ ೨-೦೭-೨೦೦೬ |
| ನ್ಯಾ. ಎನ್. ಸಂತೋಷ ಹೆಗಡೆ | ೩-೦೮-೨೦೦೬ ರಿಂದ ೨-೦೮-೨೦೧೧ |
| ನ್ಯಾ.ಶಿವರಾಜ್ ಪಾಟೀಲ್ | ೩-೦೮-೨೦೦೬ ರಿಂದ ೨೦-೦೯-೨೦೧೧ |

ಸಾರ್ವಜನಿಕರಿಗೆ ಉಪಯುಕ್ತವಾಗುವಂತೆ ಸಹಾಯವಾಣಿ (೧೫೩೨೦) ಉಚಿತ ದೂರವಾಣಿ ವ್ಯವಸ್ಥೆ ಮಾಡಲಾಗಿದೆ. ಅಂತರ್ಜಾಲ ವ್ಯವಸ್ಥೆಯಿಂದಲೂ ಮಾಹಿತಿ ಪಡೆಯಬಹುದಾಗಿದೆ.

### ಭ್ರಷ್ಟಾಚಾರ ನಿಗ್ರಹ ದಳ

ಭ್ರಷ್ಟಾಚಾರ ನಿಗ್ರಹ ದಳವು ಒಂದು ವಿಶೇಷ ಸಂಸ್ಥೆಯಾಗಿದ್ದು, ರಾಜ್ಯದಲ್ಲಿ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಗುಪ್ತಮಾಹಿತಿ ಸಂಗ್ರಹಿಸುವುದು ಇತರ ಇಲಾಖೆಗಳ ವಿಜಿಲೆನ್ಸ್ ಅಧಿಕಾರಗಳೊಂದಿಗೆ ಸಮನ್ವಯತೆ ಸಾಧಿಸಿ ಸರ್ಕಾರಿ ಅಧಿಕಾರಿಗಳು ಪಾರದರ್ಶಕವಾಗಿ ಕರ್ತವ್ಯ ನಿರ್ವಹಿಸುವಂತೆ ನೋಡಿಕೊಳ್ಳುವುದು, ಭ್ರಷ್ಟಾಚಾರಕ್ಕೆ ಸಂಬಂಧಿಸಿದ ದೂರುಗಳ ಬಗ್ಗೆ ತನಿಖೆಯನ್ನು ಕೈಗೊಂಡು ಅಭಿಯೋಜನೆಗೆ ಒಳಪಡಿಸುವುದು ಹಾಗೂ ಭ್ರಷ್ಟಾಚಾರ ನಿಯಂತ್ರಣಕ್ಕೆ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವುದು ಇದರ ಪ್ರಮುಖ ಕರ್ತವ್ಯಗಳಾಗಿವೆ. ಎ.ಸಿ.ಬಿ ಯು ಭ್ರಷ್ಟಾಚಾರ ನಿಗ್ರಹ ಅಧಿನಿಯಮ ೧೯೮೮ ರ ಅಡಿಯಲ್ಲಿ ದಾಖಲಾಗುವ ಪ್ರಕರಣಗಳ ಬಗ್ಗೆ ಕ್ರಮ ಕೈಗೊಳ್ಳುತ್ತದೆ.

ಸಾರ್ವಜನಿಕರು, ಸರ್ಕಾರ ಹಾಗೂ ಲೋಕಾಯುಕ್ತ ಸಂಸ್ಥೆಗಳಿಂದ ಸಾರ್ವಜನಿಕ ಸೇವಕರ ವಿರುದ್ಧ ಬಂದ ದೂರು ಅರ್ಜಿಗಳ/ನಿಖರ ಮಾಹಿತಿ ಬಗ್ಗೆ ವಿಚಾರಣೆಯನ್ನು ಸಹ ನಿಗ್ರಹ ದಳವು ಮಾಡುತ್ತದೆ. ಭ್ರಷ್ಟಾಚಾರ ನಿಗ್ರಹ ದಳವನ್ನು ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ ೧೪ ಸೇಲೋಏ ೨೦೧೬ ದಿನಾಂಕ: ೧೪.೦೩.೨೦೧೬ ರಲ್ಲಿ ಸೃಜಿಸಲಾಗುದೆ. ಈ ದಳವು ನೇರವಾಗಿ ಸಿಆಸುಇ (ಡಿ.ಪಿ.ಎ.ಆರ್)ಯ ಆಡಳಿತಾತ್ಮಕ ನಿಯಂತ್ರಣದಲ್ಲಿದ್ದು, ಎಡಿಜಿಪಿ ದರ್ಜೆಯ ಹಿರಿಯ ಐಪಿಎಸ್ ಅಧಿಕಾರಿಯವರು ಭ್ರಷ್ಟಾಚಾರ ನಿಗ್ರಹ ದಳದ ನಿರ್ದೇಶಕರಾಗಿರುತ್ತಾರೆ. ಎಡಿಜಿಪಿ ರವರಿಗೆ ಆಡಳಿತಾತ್ಮಕ ಹಾಗೂ ಇತರ ವಿಷಯಗಳಲ್ಲಿ ಸಹಕರಿಸಲು ಐಜಿಪಿ ಹುದ್ದೆಯ ಅಧಿಕಾರಿಯವರು ಇರುತ್ತಾರೆ.

ಕೇಂದ್ರ ಸ್ಥಾನದಲ್ಲಿ ಇಬ್ಬರು ಎಸ್.ಪಿ.ದರ್ಜೆಯ ಅಧಿಕಾರಿಗಳಿದ್ದು ಕ್ರಮವಾಗಿ ೧) ಎಸ್.ಪಿ (ಕೇಂದ್ರ ಸ್ಥಾನ) ಹಾಗೂ ೨) ಎಸ್.ಪಿ (ಆಡಳಿತ) ಎಂಬ ಹುದ್ದೆಗಳಲ್ಲಿ ಕಾರ್ಯನಿರ್ವಹಿ ಸುತ್ತಾರೆ. ಭ್ರಷ್ಟಾಚಾರ ನಿಗ್ರಹ ದಳವನ್ನು ರಾಜ್ಯದಲ್ಲಿ ೭ ವಲಯಗಳಾಗಿ ವಿಭಾಗಿಸಲಾಗಿದ್ದು ವಿವರ ಹೀಗಿವೆ. ೧) ಕೇಂದ್ರ ವಲಯ; ೨) ದಕ್ಷಿಣ ವಲಯ; ೩) ಪೂರ್ವ ವಲಯ; ೪) ಪಶ್ಚಿಮ ವಲಯ; ೫) ಉತ್ತರ ವಲಯ; ೬) ಈಶಾನ್ಯ ವಲಯ ಮತ್ತು ೭) ಬಳ್ಳಾರಿ ವಲಯ.

ವಲಯದಲ್ಲಿ ೧ ಅಥವಾ ೩ ಜಿಲ್ಲೆಗಳಿದ್ದು ಎಸ್.ಪಿ ದರ್ಜೆಯ ಅಧಿಕಾರಿ ಪ್ರತಿ ವಲಯದ ಉಸ್ತುವಾರಿಯಲ್ಲಿರುತ್ತಾರೆ. ಪ್ರತೀ ಜಿಲ್ಲೆಯಲ್ಲೂ ಎಸಿಬಿ ಠಾಣೆ ಇದ್ದು, ಡಿ.ವೈ.ಎಸ್.ಪಿ ದರ್ಜೆಯ ಅಧಿಕಾರಿಯು ಠಾಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಾರೆ. ಪ್ರತಿ ಎಸಿಬಿ ಠಾಣೆಯಲ್ಲಿ ಡಿ.ವೈ.ಎಸ್.ಪಿ ರವರಿಗೆ ಸಹಕರಿಸಲು ಇಬ್ಬರು ಪೋಲೀಸ್ ನಿರೀಕ್ಷಕರ ಹಾಗೂ ಇತರ ದರ್ಜೆಯ ಅಧಿಕಾರಿಗಳ ತಂಡವಿರುತ್ತದೆ. ಪೋಲೀಸ್ ನೀರೀಕ್ಷಕ ದರ್ಜೆಯ ಅಧಿಕಾರಿಗಳು ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿ ತನಿಖೆ ನಡೆಸಲು ಸಶಕ್ತರಾಗಿರುತ್ತಾರೆ. ಭ್ರಷ್ಟಾಚಾರ ನಿಗ್ರಹ ದಳದಲ್ಲಿ ತಾಂತ್ರಿಕ ಅಧಿಕಾರಿಗಳಾದ ಎಂಜಿನಿಯರ್‌ಗಳು, ತಹಶೀಲ್ದಾರರು ಆರ್ಥಿಕ ಅಧಿಕಾರಿಗಳು ಇದ್ದು, ತಾಂತ್ರಿಕ ಆಡಳಿತಾತ್ಮಕ ಹಾಗೂ ಆರ್ಥಿಕ ವಿಷಯಗಳ ಉಸ್ತುವಾರಿ ವಹಿಸಿರುತ್ತಾರೆ. ಕಾನೂನಾತ್ಮಕ ಅಗತ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ದಳದಲ್ಲಿನ ಕಾನೂನು ಕೋಶವು ತನ್ನ ವಿಶೇಷ ಹಾಗೂ ಪರಿಣಿತ ಸಲಹೆ ಸೂಚನೆಗಳನ್ನು ನೀಡುತ್ತದೆ. ನ್ಯಾಯಾಲಯದಲ್ಲಿ ಪ್ರಕರಣಗಳ ಅಭಿಯೋಜನೆಗೆ ಅಗತ್ಯ ಕ್ರಮ ಕೈಗೊಳ್ಳುವಲ್ಲಿ ಸಹಕರಿಸುತ್ತದೆ.

ಸದರಿ ಭ್ರಷ್ಟಾಚಾರ ನಿಗ್ರಹ ದಳವು ಭ್ರಷ್ಟಾಚಾರ ಅಧಿನಿಯಮ ೧೯೮೮ ರಲ್ಲಿರುವ ಅಂಶಗಳನ್ನು ಮೂಲಭೂತವಾಗಿ ಜಾರಿ ಮಾಡುವಲ್ಲಿ ಶ್ರಮಿಸುತ್ತದೆ. ಸ್ವ-ಇಚ್ಛೆಯಿಂದ ಭ್ರಷ್ಟಾಚಾರದ ಬಗ್ಗೆ ಮಾಹಿತಿ ಸಂಗ್ರಹಿಸುವ ಪ್ರದತ್ತ ಅಧಿಕಾರವಿದ್ದು ಸಾರ್ವಜನಿಕ ನೌಕರರು ಪರಿಣಾಮಕಾರಿಯಾಗಿ ಹಾಗೂ ಪಾರದರ್ಶಕತೆಯಿಂದ ಕರ್ತವ್ಯ ನಿರ್ವಹಿಸಲು ಅಗತ್ಯವೆನಿಸುವ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತದೆ. ಸದರಿ ಭ್ರಷ್ಟಾಚಾರ ನಿಗ್ರಹ ದಳವು ಡಿ.ಎ ಅಪರಾಧಿಕ ದಿರ್ನಡತೆ ಹಾಗೂ ದುರುಪಯೋಗಗಳಿಗೆ ಸಂಬಂಧಿಸಿದ ಪ್ರಕರಣಗಳ ತನಿಖೆಯನ್ನು ಮಾಡುತ್ತದೆ. ಎಫ್.ಐ.ಆರ್ ದಾಖಲಿಸುವ ಮುನ್ನ ಟ್ರ್ಯಾಪ್ ಕಾರ್ಯಾಚರಣೆಯನ್ನು ಹೊರತುಪಡಿಸಿ ಇತರ ಎಲ್ಲಾ ರೀತಿಯ ದೂರುಗಳನ್ನು ಸ್ವೀಕರಿಸುವಾಗ ಪ್ರಾಥಮಿಕ ವಿಚಾರಣೆಯನ್ನು ನಡೆಸುತ್ತದೆ. ಇದಲ್ಲದೆ ದಳವು ವಿಚಾರಣೆ, ಗೌಪ್ಯ ವಿಚಾರಣೆ ಹಾಗೂ ಅನಿರೀಕ್ಷಿತ ತಪಾಸಣೆ (ಸರ್ಪ್ರೈಸ್ ಚೆಕ್) ಗಳನ್ನೂ ಸಹ ಕೈಗೊಳ್ಳುತ್ತದೆ.

ಪ್ರಾಥಮಿಕ ವಿಚಾರಣೆಯಲ್ಲಿ ಪ್ರಕರಣ ದಾಖಲಿಸಲು ಸಾಕಷ್ಟು ಮಾಹಿತಿ/ಸಾಕ್ಷಿಗಳಿವೆ ಎಂದು ಕಂಡುಬಂದಲ್ಲಿ ಎಫ್.ಐ.ಆರ್ ದಾಖಲಿಸಿ ಸಂಬಂಧಿಸಿದ ನ್ಯಾಯಾಲಯಕ್ಕೆ ಸಲ್ಲಿಸಿ ತನಿಖೆಯನ್ನು ಕೈಗೆತ್ತಿಕೊಳ್ಳಲಾಗುತ್ತದೆ. ತನಿಖೆ ಮುಗಿದ ನಂತರ ಸತ್ಯಾಸತ್ಯತೆಗಳ ಆಧಾರದ ಮೇಲೆ ಆರೋಪ ಪಟ್ಟಿಯನ್ನು ದಾಖಲಿಸಲಾಗುತ್ತದೆ. ಇಲ್ಲವೇ ಸಂಬಂಧಿಸಿದ ಇಲಾಖೆಗಳಿಗೆ ಆರೋಪಿತ ಅಧಿಕಾರಿಯ ಬಗ್ಗೆ ಇಲಾಖಾ ವಿಚಾರಣೆ ಮಾಡಲು ನಿರ್ದೇಶಿಸಲಾಗುತ್ತದೆ. ನ್ಯಾಯಾಲಯದಲ್ಲಿ ಸಾರ್ವಜನಿಕ ನೌಕರನು ದೋಷಿ ಎಂದು ಸಿದ್ಧವಾದಲ್ಲಿ ಅಂತಹ ನೌಕರನನ್ನು ಸೇವೆಯಿಂದ ವಜಾಗೊಳಿಸಬೇಕಾಗುತ್ತದೆ. ಇಲಾಖಾ ವಿಚಾರಣೆಯಲ್ಲಿ ನೌಕರನ ವಿರುದ್ಧ ದೊಡ್ಡ ಶಿಕ್ಷೆ ಅಥವಾ ಅಲ್ಪ ಶಿಕ್ಷೆಯನ್ನು ಪ್ರಕರಣದ ಆಳ ಮತ್ತು ವಿಸ್ತಾರಗಳನ್ನು ಆಧರಿಸಿ ನೀಡಲಾಗುತ್ತದೆ. ದೊಡ್ಡ ಶಿಕ್ಷೆಯಲ್ಲಿ ವಜಾ, ಪದೋನ್ನತಿಯಲ್ಲಿ ಇಳಿಮುಖ, ಪದೋನ್ನತಿಯನ್ನು ತಡೆ

ಹಿಡಿಯುವಿಕೆ, ವೇತನ ಹೆಚ್ಚಳಗಳನ್ನು ತಡೆಯುವುದು, ವಾಗ್ದಂಡನೆ, ಎಚ್ಚರಿಕೆ ಇತ್ಯಾದಿಗಳನ್ನು ನೀಡುವ ಕ್ರಮವಿರುತ್ತದೆ.

## ನ್ಯಾಯಾಂಗ ಆಡಳಿತ

ರಾಜಧರ್ಮವು (ರಾಜರ ಕರ್ತವ್ಯ ಮತ್ತು ಅಧಿಕಾರವನ್ನು ವಿವರಿಸುವುದು) ಪ್ರಾಚೀನ ಕರ್ನಾಟಕದ ರಾಜರ ನ್ಯಾಯ ತೀರ್ಮಾನ ಆಡಳಿತ ಕ್ರಮದ ಮೇಲೆ ಪ್ರಭಾವ ಬೀರಿತ್ತು. ಇದು ರಾಜನ ಮೂಲಭೂತ ಕರ್ತವ್ಯಗಳಲ್ಲಿ ಒಂದಾಗಿದ್ದಿತು. ಪ್ರಾಚೀನ ಶಾಸನಗಳಲ್ಲಿ ಕಂಡು ಬರುವ 'ದುಷ್ಟಶಿಕ್ಷೆ, ಶಿಷ್ಟ ಪರಿಪಾಲನೆ' ಹೇಳಿಕೆಯ ಪ್ರಕಾರ ರಾಜ ದುಷ್ಟರನ್ನು ಶಿಕ್ಷಿಸಿ, ಕಾನೂನಿನನ್ವಯ ನಡೆಯುವವರನ್ನು ಕಾಪಾಡಬೇಕಾಗಿದ್ದಿತು. ದೂರಿತ್ತವರಿಗೆ ಪಕ್ಷಪಾತವಿಲ್ಲದೆ ನ್ಯಾಯ ದೊರಕಿಸುವುದರ ಜೊತೆಗೆ ಅವರನ್ನು ರಕ್ಷಿಸುವುದೂ ರಾಜನ ಪವಿತ್ರ ಕರ್ತವ್ಯಗಳಲ್ಲೊಂದಾಗಿದ್ದಿತು. ನ್ಯಾಯ ತೀರ್ಮಾನ, ರಾಜನ ಆದ್ಯ ಕರ್ತವ್ಯವಾಗಿದ್ದು, ಈ ಕ್ರಿಯೆಗೆ 'ಸ್ಮೃತಿ' ಮತ್ತು 'ಧರ್ಮಶಾಸ್ತ್ರ'ಗಳನ್ನು ತಿಳಿದ ಪಂಡಿತರ ನೆರವು ಅವಶ್ಯಕವಾಗಿ ದೊರೆಯುತ್ತಿತ್ತು. ಪುರಾತನ ಕಾಲದ ಮನು, ಕೌಟಿಲ್ಯ, ಯಾಜ್ಞವಲ್ಕ್ಯ ಮೊದಲಾದವರ ಬರಹಗಳಲ್ಲಿ ಉನ್ನತ ನ್ಯಾಯಾಲಯದ ರಚನೆ ಮತ್ತು ಅಧಿಕಾರವನ್ನು ಕುರಿತಂತೆ ನಿಯಮಗಳು ಕಂಡುಬರುತ್ತವೆ. ಅಲ್ಲದೆ, ಉನ್ನತ ನ್ಯಾಯಾಲಯವು ರಾಜಧಾನಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ರಾಜಾಧಿಕಾರದಡಿಯಲ್ಲಿ ಕೆಳಗಿನ ನ್ಯಾಯಾಲಯಗಳು ಹುಟ್ಟಿಕೊಂಡಿದ್ದವು.

ಆಗಿನ ಕಾಲದ ನಿಯಮಗಳು ಅಹವಾಲುಗಳನ್ನು ತೀರ್ಮಾನಿಸುವ ಅಧಿಕಾರವುಳ್ಳ ಜನತಾ ನ್ಯಾಯಾಲಯಗಳನ್ನು ಗುರುತಿಸಲು ಅವಕಾಶ ಮಾಡಿದ್ದವು. ನ್ಯಾಯಾಧೀಶರ ಮತ್ತು ಮಧ್ಯಸ್ಥಗಾರರ ಅರ್ಹತೆಯ ಗುಣವಿಶೇಷಗಳನ್ನು ಸ್ಪಷ್ಟವಾಗಿ ನಿರೂಪಣೆ ಮಾಡಲಾಗಿತ್ತು. ಅಂತೆಯೇ ಗ್ರಾಮ ಮಂಡಲಗಳು ಮತ್ತು ವೃತ್ತಿ ಸಂಘಗಳಿಗೆ ನ್ಯಾಯ ತೀರ್ಮಾನದ ಅಧಿಕಾರವಿದ್ದು, ಸಾಮಾನ್ಯವಾಗಿ ವಿವಾದಗಳನ್ನು ಸಮಾಧಾನಕರವಾಗಿ ಪರಿಹರಿಸಲಾಗುತ್ತಿತ್ತು. ಹದಿನಾಲ್ಕನೆಯ ಶತಮಾನದಲ್ಲಿ ಶ್ರೀ ವೈಷ್ಣವ ಮತ್ತು ಜೈನರ ನಡುವಿನ ವಿವಾದವನ್ನು ಚಕ್ರವರ್ತಿ ಬುಕ್ಕನೇ ಪರಿಹರಿಸಿದನೆಂದು ಉಲ್ಲೇಖವಿದೆ. ವಿಜಯನಗರದ ಇನ್ನೊಬ್ಬ ಚಕ್ರವರ್ತಿ, ಹದಿನೈದನೇ ಶತಮಾನದಲ್ಲಿ ಲಕ್ಕ್ಮೇಶ್ವರದ ಜೈನ–ಬ್ರಾಹ್ಮಣರ ನಡುವಿನ ವಿವಾದ ಇತ್ಯರ್ಥಕ್ಕಾಗಿ ಅರಮನೆಯ ಪುರೋಹಿತನನ್ನೇ ಕಳುಹಿಸಿದ್ದನು. ಕರ್ನಾಟಕದಲ್ಲಿನ ನ್ಯಾಯ ಸಂಬಂಧ ವಿಚಾರಣೆಗಳಲ್ಲಿ ಇವುಗಳು ಉತ್ಕೃಷ್ಟ ಉದಾಹರಣೆಗಳು. ಕಲ್ಯಾಣದ 'ವಿಜ್ಞಾನೇಶ್ವರ'ನ (೧೧ನೇ ಶತಮಾನದ ಪ್ರಖ್ಯಾತ ಬರಹ) 'ಮಿತಾಕ್ಷರ' (ಯಾಜ್ಞವಲ್ಕ್ಯ ಸ್ಮೃತಿಯ ಭಾಷ್ಯ)ದಲ್ಲಿ ಕಾಣಸಿಗುತ್ತವೆ. ಅವನ ಈ ಕೃತಿಯನ್ನು ಹಿಂದೂ ಕುಟುಂಬದಲ್ಲೇ ಹುಟ್ಟಿದ ದಾಯಾದಿಗಳು ಮತ್ತು ಇತರರು ಪೂರ್ವಜರ ಆಸ್ತಿಯನ್ನು ಪಡೆಯುವ ಹಕ್ಕಿನ ಕಾನೂನು (ನಿಯಮ) ತಿಳುವಳಿಕೆಯ ಬಗ್ಗೆ ಅಧಿಕಾರಯುತವಾಗಿ ಈ ದೇಶದಲ್ಲಿ ಬಂಗಾಳವನ್ನುಳಿದು ಎಲ್ಲ ಕಡೆ ಒಪ್ಪಿಕೊಳ್ಳಲಾಗಿತ್ತು. ಬಂಗಾಳದಲ್ಲಿ 'ಜೀಮೂತವಾಹನ ಭಾಷ್ಯ'ವನ್ನು ಅನುಸರಿಸಲಾಗಿತ್ತು. ಹೊಯ್ಸಳ ಅರಸರು, ಚಾಳುಕ್ಯ ಮತ್ತು ಗಂಗರಿಂದ ಅನೂಚಾನವಾಗಿ ಬಂದ ನ್ಯಾಯ ತೀರ್ಮಾನ ಪದ್ಧತಿಯನ್ನೇ ಸಾಮಾನ್ಯವಾಗಿ ಅನುಸರಿಸಿದರು. ರಾಜ್ಯದಲ್ಲಿ ಉದ್ಭವಿಸುವ ಒಟ್ಟು ವ್ಯಾವಹಾರಿಕ (ಸಿವಿಲ್) ಮೊಕದ್ದಮೆಗಳಲ್ಲಿ ಶೇಕಡ ೮೦ರಷ್ಟು ಬೆಂಗಳೂರಿನಲ್ಲೇ ಕಂಡು ಬರುವುದರಿಂದ, ಅವುಗಳನ್ನು ಶೀಘ್ರವಾಗಿ ಇತ್ಯರ್ಥ ಮಾಡುವ ಸಲುವಾಗಿ ಎರಡು ಶ್ರೇಣಿಯ ನ್ಯಾಯಾಲಯ ವ್ಯವಸ್ಥೆಯನ್ನು ರೂಪಿಸಲಾಗಿದೆ. ಇದಕ್ಕನುಗುಣವಾಗಿ ೧೯೮೦ರಲ್ಲಿ ನಗರ ವ್ಯಾವಹಾರಿಕ ನ್ಯಾಯಾಲಯ ಶಾಸನವನ್ನು ಮಾಡಲಾಯಿತು. ಈ ಶಾಸನದನ್ವಯ ಬೆಂಗಳೂರು ನಗರಕ್ಕಾಗಿ, ನಗರ ವ್ಯಾವಹಾರಿಕ ನ್ಯಾಯಾಲಯಗಳನ್ನು ಸ್ಥಾಪಿಸಲಾಯಿತು.

## ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ

ಕಾನೂನು ಸೇವೆಗಳ ಪ್ರಾಧಿಕಾರಗಳ ಅಧಿನಿಯಮ ೧೯೮೭ ಕೇಂದ್ರೀಯ ಶಾಸನವಾಗಿದ್ದು ಕರ್ನಾಟಕದಲ್ಲಿ ದಿನಾಂಕ: ೯–೧೧–೧೯೯೫ರಿಂದ ಜಾರಿಗೆ ಬಂದಿರುತ್ತದೆ. ರಾಷ್ಟ್ರಮಟ್ಟದಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ; ಸುಪ್ರೀಂಕೋರ್ಟ್ ಮಟ್ಟದಲ್ಲಿ ಸುಪ್ರೀಂಕೋರ್ಟ್ ಕಾನೂನು ಸೇವೆಗಳ ಸಮಿತಿ, ರಾಜ್ಯ ಮಟ್ಟದಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ; ಹೈಕೋರ್ಟ್ ಮಟ್ಟದಲ್ಲಿ ಹೈಕೋರ್ಟ್ ಕಾನೂನು ಸೇವೆಗಳ ಸಮಿತಿಗಳಿವೆ. ಅದರಂತೆಯೇ ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿಯೂ ಇವುಗಳು ಕಾರ್ಯನಿರ್ವಹಿಸುತ್ತವೆ. ಇವೆಲ್ಲವುಗಳ ಧ್ಯೇಯೋದ್ದೇಶಗಳೆಂದರೆ; ಕಾನೂನು ಸಾಕ್ಷರತಾ ಪ್ರಸಾರದ ಮೂಲಕ ಜನರಲ್ಲಿ ಕಾನೂನಿನ ಬಗ್ಗೆ ಅರಿವುಂಟುಮಾಡುವುದು. ಉಚಿತ ಕಾನೂನು ನೆರವು ನೀಡುವುದು. ಜನತಾ ನ್ಯಾಯಾಲಯ (ಲೋಕ ಅದಾಲತ್) ಮೂಲಕ ನ್ಯಾಯಾಲಯದಲ್ಲಿರುವ ಹಾಗೂ ನ್ಯಾಯಾಲಯದಲ್ಲಿ ದಾಖಲಾಗದ ಪ್ರಕರಣಗಳಲ್ಲಿಯ ಉಭಯ ಪಕ್ಷಗಳವರಲ್ಲಿ ರಾಜೀ ಸಂಧಾನ ಏರ್ಪಡಿಸಿ ಪ್ರಕರಣಗಳನ್ನು ಇತ್ಯರ್ಥಗೊಳಿಸುವುದು. ಈ ಜನತಾ ನ್ಯಾಯಾಲಯದಲ್ಲಿ ನೀಡಿದ ತೀರ್ಪು ಅಂತಿಮ. ಇದರ ವಿರುದ್ಧ ಮೇಲ್ಮನವಿಗೆ ಅವಕಾಶವಿಲ್ಲ. ಸಿವಿಲ್ ನ್ಯಾಯಾಲಯದ ತೀರ್ಪಿನಷ್ಟೇ ಮಾನ್ಯತೆಯುಳ್ಳದ್ದಾಗಿರುತ್ತದೆ.

ನ್ಯಾಯಾಲಯದ ವಾರ್ಷಿಕ ಆದಾಯ ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಇರುವ ಜನರು, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರು, ಮಹಿಳೆ ಮತ್ತು ಮಕ್ಕಳು, ಕಾರ್ಖಾನೆಯ ಕಾರ್ಮಿಕರು, ಮತೀಯ ದೌರ್ಜನ್ಯಕ್ಕೆ ಒಳಗಾದವರು, ಮಾನಸಿಕ ಅಥವಾ ಬೇರಾವುದೇ ನ್ಯೂನತೆಯನ್ನು ಹೊಂದಿದವರು, ಜೀತಕ್ಕೊಳಗಾದವರು, ಗುಂಪು ಘರ್ಷಣೆ, ಗಲಭೆ, ಪ್ರವಾಹ, ಭೂಕಂಪ ಮುಂತಾದವುಗಳಿಗೆ ಒಳಗಾದವರು, ರಕ್ಷಣಾ ಗೃಹ, ಮನೋರೋಗಿಗಳ ಆಸ್ಪತ್ರೆ ಮುಂತಾದ ಅಭಿರಕ್ಷೆಯಲ್ಲಿರುವವರು ಉಚಿತ ಕಾನೂನಿನ ನೆರವನ್ನು ಪಡೆಯಬಹುದಾಗಿರುತ್ತದೆ. ಕೆಳಹಂತದ ನ್ಯಾಯಾಲಯದಿಂದ ಹಿಡಿದು ಸರ್ವೋಚ್ಚ ನ್ಯಾಯಾಲಯದವರೆಗಿನ ಎಲ್ಲಾ ಹಂತದಲ್ಲಿ ಉಚಿತ ಕಾನೂನು ಸಲಹೆ ಮತ್ತು ನೆರವನ್ನು ನೀಡಲಾಗುತ್ತದೆ. ಅಂತಹ ವ್ಯಕ್ತಿಗಳಿಗೆ ಉಚಿತ ಕಾನೂನು ಸಲಹೆಗಳನ್ನು ನೀಡುವುದಲ್ಲದೇ ಅಂತಹವರ ಪರವಾಗಿ ಪ್ರಾಧಿಕಾರದ ಖರ್ಚಿನಲ್ಲಿ ವಕೀಲರೊಬ್ಬರನ್ನು ನೇಮಕ ಮಾಡಿ, ನ್ಯಾಯಾಲಯದ ಎಲ್ಲಾ ಖರ್ಚನ್ನು ಪ್ರಾಧಿಕಾರದ ವತಿಯಿಂದ ಕೊಡಲಾಗುತ್ತದೆ. ಆಯಾ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಅಥವಾ ತಾಲೂಕು ಕಾನೂನು ಸೇವಾ ಸಮಿತಿಗೆ ಅರ್ಜಿಯೊಂದನ್ನು (ಶುಲ್ಕರಹಿತ) ಸಲ್ಲಿಸಿ ಈ ನೆರವನ್ನು ಪಡೆದು ಕೊಳ್ಳಬಹುದಾಗಿರುತ್ತದೆ. ಹೈಕೋರ್ಟ್ ಪ್ರಕರಣಗಳಿಗೆ ಸಂಬಂಧಿಸಿದಂತೆ, ಹೈಕೋರ್ಟ್ ಕಟ್ಟಡದಲ್ಲಿರುವ ಹೈಕೋರ್ಟ್ ಕಾನೂನು ಸೇವೆಗಳ ಸಮಿತಿ ನೆರವು ನೀಡುತ್ತದೆ.

## ಕರ್ನಾಟಕ ಆಡಳಿತ ನ್ಯಾಯ ಮಂಡಳಿ:

ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಕೇಂದ್ರ ಸರ್ಕಾರದ ಅಧಿಸೂಚನೆ ಎ-೧೧೦೧೯/೨೦/೮೬/ಎಟಿ. ದಿನಾಂಕ ೦೩-೧೦-೧೯೮೬ ರಂತೆ ದಿನಾಂಕ ೬-೧೦-೧೯೮೬ರಲ್ಲಿ ಸ್ಥಾಪಿಸಲ್ಪಟ್ಟು ಕಾರ್ಯನಿರ್ವಹಿಸುತ್ತಿದೆ. ಇದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯಕ್ಕೆ ಸೇರಿದೆ. ಮೊದಲು ವಿಲೇಖನಾಧಿಕಾರಿ ಇದರ ಮುಖ್ಯಸ್ಥರಾಗಿದ್ದು, ಅಧಿಸೂಚನೆ ಸಂಖ್ಯೆ ಎಫ್‌ಡಿ/೯/ಟಿಎಫ್‌ಸಿ/೨೦೦೦ ದಿನಾಂಕ ೨೦-೦೪-೨೦೦೧ರ ರೀತ್ಯಾ ಅಧ್ಯಕ್ಷರು ಇದರ ಮುಖ್ಯಸ್ಥರಾದರು. ಮತ್ತೆ ಸರ್ಕಾರಿ ಆದೇಶ ಸಿಆಸುಇ/೨೯/ಸೇಆನ್ಯಾ ೨೦೦೭ ದಿನಾಂಕ ೧೪-೦೩-೨೦೦೮ರಂತೆ ನಿಬಂಧಕರು (ವಿಲೇಖನಾಧಿಕಾರಿ) ಇವರನ್ನು ಇಲಾಖಾ ಮುಖ್ಯಸ್ಥರೆಂದು ಘೋಷಿಸಲಾಗಿದೆ. ಇದು ಕರ್ನಾಟಕ ರಾಜ್ಯ ವ್ಯಾಪ್ತಿಯನ್ನು ಹೊಂದಿದ್ದು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸೇವೆ ಮತ್ತು ನೇಮಕಾತಿಗೆ ಸಂಬಂಧಿಸಿದ ವಿವಾದಗಳನ್ನು ತೀರ್ಮಾನಿಸುತ್ತದೆ.

ಇದು ೬-೧೦-೧೯೮೬ರಿಂದ ಎರಡು ದ್ವಿಸದಸ್ಯ ಪೀಠ ಹೊಂದಿದ್ದು, ೨-೦೬-೨೦೦೭ರಿಂದ ಮೂರು ದ್ವಿಸದಸ್ಯ ನ್ಯಾಯ ಪೀಠ ಹೊಂದಿರುತ್ತದೆ. ಪ್ರತಿಯೊಂದು ದ್ವಿಸದಸ್ಯ ಪೀಠವು ಒಬ್ಬ ನ್ಯಾಯಾಂಗ ಸದಸ್ಯರು ಮತ್ತು ಮತ್ತೊಬ್ಬ ಆಡಳಿತಾತ್ಮಕ ಸದಸ್ಯರನ್ನೊಳಗೊಂಡಿರುತ್ತದೆ. ಆಡಳಿತ ನ್ಯಾಯ ಮಂಡಳಿ ಕಾಯ್ದೆ ೧೯೮೫ರ ಕಲಂ ೫(೬)ರ ಪ್ರಕಾರ ಕೆಲವು ಲಘು ಸೇವಾವಿವಾದಗಳನ್ನು ತೀರ್ಮಾನಿಸುವ ಸಲುವಾಗಿ ಏಕಸದಸ್ಯ ಪೀಠಗಳನ್ನೂ ರಚಿಸಬಹುದಾಗಿರುತ್ತದೆ. ಸರ್ಕಾರಿ ನೌಕರರ, ಸರ್ಕಾರದ ವಿವಿಧ ಹಂತಗಳಲ್ಲಿ ಸೇವಾ ವಿಷಯಗಳನ್ನು ನಿರ್ವಹಿಸುತ್ತಿರುವ ಅಧಿಕಾರಿಗಳ ಹಾಗೂ ವಕೀಲರ ಅನುಕೂಲಕ್ಕಾಗಿ ಆಗಸ್ಟ್ ೧೯೯೮ರಿಂದ 'ಕರ್ನಾಟಕ ಸೇವಾಕಾನೂನು ವರದಿ' (Karnataka Services law report) ಪತ್ರಿಕೆಯನ್ನು ಮಂಡಳಿಯು ಹೊರತರುತ್ತಿದೆ.

## ಅಡ್ವೋಕೇಟ್ ಜನರಲ್‌ರವರ ಕಚೇರಿ:

ಪ್ರಾರಂಭದಲ್ಲಿ ಅಠಾರ ಕಛೇರಿಗಳಲ್ಲಿ ಒಂದಾಗಿದ್ದ ಈ ಕಛೇರಿ ೧೯೫೬ನೇ ಇಸವಿಯಿಂದ ಪ್ರತ್ಯೇಕಗೊಂಡು ಹಾಲಿ ಅಡ್ವೋಕೇಟ್ ಜನರಲ್‌ರವರ ಕಛೇರಿ ಎಂದಾಗಿದೆ. ಇದರ ಮುಖ್ಯ ಕೇಂದ್ರ ಕಛೇರಿಯು ಕರ್ನಾಟಕ ಉಚ್ಚನ್ಯಾಯಾಲಯದ ಕಟ್ಟಡದಲ್ಲಿದೆ. ಇದರ ಅಧೀನದಲ್ಲಿ ಕರ್ನಾಟಕ ಆಡಳಿತ ನ್ಯಾಯಮಂಡಳಿ ಬೆಂಗಳೂರು, ಧಾರವಾಡ ಘಟಕ ಕಛೇರಿ ಮತ್ತು ಕಲಬುರಗಿ ಘಟಕ ಕಛೇರಿ ಎಂದು ಮೂರು ಘಟಕ ಕಛೇರಿ ಹೊಂದಿದೆ. ಧಾರವಾಡ ಮತ್ತು ಕಲಬುರಗಿ ಸಂಚಾರಿ (ಮಹಾಧಿವಕ್ತಾರ) ಪೀಠ ಕೂಡ ಸೇರಿದೆ. ಅಡ್ವೋಕೇಟ್ ಜನರಲ್‌ರವರು ಈ ಇಲಾಖೆಯ ಹಿರಿಯ ಮುಖ್ಯಸ್ಥರಾಗಿರುತ್ತಾರೆ. ಆಡಳಿತಾತ್ಮಕ ಹಾಗೂ ಹಣಕಾಸಿಗೆ ಸಂಬಂಧಿಸಿದ ಅಧಿಕಾರಗಳನ್ನು ಹೊಂದಿರುತ್ತಾರೆ. ಹಾಗೂ ಸರ್ಕಾರದ ಮುಖ್ಯ ಕಾನೂನು ಸಲಹೆಗಾರರಾಗಿರುತ್ತಾರೆ. ರಾಜ್ಯವು ಸರ್ವೋಚ್ಛ ನ್ಯಾಯಾಲಯ ಹಾಗೂ ಕರ್ನಾಟಕ ಆಡಳಿತ ನ್ಯಾಯಮಂಡಳಿ, ಧಾರವಾಡ ಮತು ಕಲಬುರಗಿ ಸಂಚಾರಿ ಪೀಠಗಳ ಮುಂದೆ ಬರುವ ಪ್ರಕರಣಗಳಲ್ಲಿ ಕಕ್ಷಿದಾರರಾಗಿರುವುದರಿಂದ ಅಡ್ವೋಕೇಟ್ ಜನರಲ್‌ರವರ ನೆರವಿಗಾಗಿ ಸರ್ಕಾರವು ಕಾನೂನು ಅಧಿಕಾರಿಗಳ ಒಂದು ತಂಡವನ್ನು ನೇಮಿಸಿದೆ. ಅವರೆಂದರೆ, ಹೆಚ್ಚುವರಿ ಅಡ್ವೋಕೇಟ್ ಜನರಲ್, ಸರ್ಕಾರಿ ನ್ಯಾಯವಾದಿ, ಅಪರ ಸರ್ಕಾರಿ ನ್ಯಾಯವಾದಿಗಳು, ಒಂದನೇ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್, ೨ನೇ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್, ಹೆಚ್ಚುವರಿ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ಮತ್ತು ಉಚ್ಚ ನ್ಯಾಯಾಲಯದ ಸರ್ಕಾರಿ ನ್ಯಾಯವಾದಿಗಳಾಗಿರುತ್ತಾರೆ. ಇವರುಗಳು ಆಯಾ ನ್ಯಾಯಾಲಯದ ಮುಂದೆ ಬರುವ ಸರ್ಕಾರದ ಮೊಕದ್ದಮೆಗಳನ್ನು ನಡೆಸುತ್ತಾರೆ. ಈ ತಂಡದಲ್ಲಿ ಹಾಲಿ ೬೫ ಕಾನೂನು ಅಧಿಕಾರಿಗಳಿದ್ದು, ಅಡ್ವೋಕೇಟ್ ಜನರಲ್‌ರವರ ಮಾರ್ಗದರ್ಶನ ಹಾಗೂ ಮೇಲ್ವಿಚಾರಣೆಯಲ್ಲಿ ಕಾರ್ಯ ನಿರ್ವಹಿಸುವರು. ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಮತ್ತು ಸರ್ಕಾರಕ್ಕೆ ಉತ್ತರಿಸಲು ಜವಾಬ್ದಾರರಾಗಿರುತ್ತಾರೆ.

## ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ

(Director of Prosecutions and Government litigation)

ಕ್ರಿಮಿನಲ್ ಮೊಕದ್ದಮೆಗಳನ್ನು ನ್ಯಾಯಾಲಯಗಳಲ್ಲಿ ಪರಿಣಾಮಕಾರಿಯಾಗಿ ನಡೆಸಲು ಮತ್ತು ಪೋಲೀಸ್ ಇಲಾಖೆಯು ಸಂಗ್ರಹಿಸಿರುವ ಮಾಹಿತಿ ಮತ್ತು ದಾಖಲೆಗಳು ಸಾಕಷ್ಟಿದೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸುವುದಕ್ಕೋಸ್ಕರ ಸ್ವತಂತ್ರವಾದ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಅಸ್ತಿತ್ವಕ್ಕೆ ಬಂದಿತು. ಜೊತೆಗೆ ಸರ್ಕಾರಿ ವ್ಯಾಜ್ಯಗಳಿಗೆ ಸಂಬಂಧಪಟ್ಟಂತೆ ರಾಜ್ಯದ ಸಿವಿಲ್ ಜಡ್ಜ್ ನ್ಯಾಯಾಲಯಗಳು ಮತ್ತು ಸಿವಿಲ್ ಜಡ್ಜ್ (ಕಿರಿಯ ಶ್ರೇಣಿ) ಮತ್ತು ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳಲ್ಲಿ ನಡೆಸಲಾಗುವ ಸಿವಿಲ್ ವ್ಯಾಜ್ಯಗಳ ಮೇಲ್ವಿಚಾರಣೆಯೂ ಕೂಡ ಈ ಇಲಾಖೆಯ ಕಾರ್ಯವ್ಯಾಪ್ತಿಗೊಳಪಟ್ಟಿರುತ್ತದೆ.

ಈ ಇಲಾಖೆಯು ಕ್ರಿಮಿನಲ್ ನ್ಯಾಯಾಲಯಗಳನ್ನು ಒಳಗೊಂಡಂತೆ ಸತ್ರ ನ್ಯಾಯಾಲಯಗಳಲ್ಲಿರುವ ಕ್ರಿಮಿನಲ್ ಮೊಕದ್ದಮೆಗಳಲ್ಲಿ ರಾಜ್ಯದ ಪರವಾಗಿ ಅಭಿಯೋಜನೆ ನಡೆಸಲು ವ್ಯವಸ್ಥೆ ಮಾಡುವುದು. ಪೋಲೀಸ್ ಇಲಾಖೆಯ ಅಧಿಕಾರಿಗಳಿಗೆ ಮತ್ತು ಇತರೆ ಇಲಾಖೆಯ ಅಧಿಕಾರಿಗಳಿಗೆ ಕ್ರಿಮಿನಲ್ ಮೊಕದ್ದಮೆಗಳ ತನಿಖೆ ಮತ್ತು ಅಭಿಯೋಜನೆಗೆ ಸಂಬಂಧಿಸಿದಂತೆ ಸಲಹೆ ಮತ್ತು ಮಾರ್ಗದರ್ಶನಗಳನ್ನು ನೀಡುವುದು. ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳು ಮತ್ತು ಸತ್ರ ನ್ಯಾಯಾಲಯಗಳು ನೀಡಿದ ತೀರ್ಪುಗಳು ಮತ್ತು ಆದೇಶಗಳನ್ನು ಮರು ಪರಿಶೀಲಿಸುವುದು. ಅರ್ಹ ಪ್ರಕರಣಗಳಲ್ಲಿ ಮೇಲ್ಮನವಿ ಸಲ್ಲಿಸಲು ಅಥವಾ ಪರಿಷ್ಕರಣಕ್ಕೆ ಅರ್ಜಿಸಲ್ಲಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು. ಅಭಿಯೋಗದಿಂದ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುವುದು ಸೇರಿದಂತೆ ಕ್ರಿಮಿನಲ್ ಮೊಕದ್ದಮೆಗಳ ತನಿಖೆ ಮತ್ತು ಅಭಿಯೋಗಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳ ಬಗ್ಗೆ ಸರಕಾರಕ್ಕೆ ಸಂಬಂಧಿಸಿದ ಇಲಾಖೆಗಳಿಗೆ ಸಲಹೆಗಳನ್ನು ನೀಡುವುದು. ತಾಲೂಕು ಕೇಂದ್ರಗಳಲ್ಲಿರುವ ಸಿವಿಲ್ ಜಡ್ಜ್ (ಕಿರಿಯ ಶ್ರೇಣಿ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ಸಂಯುಕ್ತ ನ್ಯಾಯಾಲಯಗಳಲ್ಲಿ ರಾಜ್ಯ ಸರ್ಕಾರದ ಪರವಾಗಿ ಸಿವಿಲ್ ವ್ಯಾಜ್ಯ ನಡೆಸುವುದು, ಹಾಗೂ ಅವುಗಳಲ್ಲಿ ನೀಡಿದ ತೀರ್ಪು ಮತ್ತು ಆದೇಶಗಳನ್ನು ಪರಿಶೀಲಿಸಿ ಅರ್ಹವಾದ ಮೊಕದ್ದಮೆಗಳಲ್ಲಿ ಮೇಲ್ಮನವಿ ಸಲ್ಲಿಸಲು ಅಥವಾ ಪರಿಷ್ಕರಣಕ್ಕೆ ಅರ್ಜಿಸಲ್ಲಿಸುವ ವ್ಯವಸ್ಥೆ ಮಾಡುವುದು ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತಿದೆ.

### ಮಾನವ ಹಕ್ಕು ಆಯೋಗ

ಭಾರತ ಸಂವಿಧಾನದಿಂದ ಖಾತರಿ ಪಡಿಸಲಾಗಿರುವ ಅಥವಾ ಅಂತರರಾಷ್ಟ್ರೀಯ ಒಡಂಬಡಿಕೆಗಳಲ್ಲಿ ಸೇರಿಸಲಾಗಿರುವ ಮತ್ತು ಭಾರತದಲ್ಲಿ ಜಾರಿಗೊಳಿಸಬಹುದಾದ "ಜೀವನದ, ಸ್ವಾತಂತ್ರ್ಯದ, ಸಮಾನತೆ ಮತ್ತು ವ್ಯಕ್ತಿಯ ಘನತೆಯ ಹಕ್ಕುಗಳೇ ಮಾನವ ಹಕ್ಕುಗಳು" ಎಂದು ಹೇಳಲ್ಪಡುತ್ತವೆ. ಸಾಮಾನ್ಯವಾಗಿ ವಿಚಾರಣಾಧೀನ ಕೈದಿ ಸಾವು, ಬಂಧನಕ್ಕೆ ಒಳಗಾದ ವ್ಯಕ್ತಿಗೆ ನೀಡುವ ಕಿರುಕುಳ, ನಕಲಿ ಪೋಲೀಸ್ ಕಾರ್ಯಾಚರಣೆ, ಪೋಲೀಸರಿಂದ ಚಿತ್ರಹಿಂಸೆ, ಕಾನೂನು ಬಾಹಿರ ಬಂಧನ, ದಸ್ತಗಿರಿ, ಪೋಲೀಸರು ಅನಾವಶ್ಯಕವಾಗಿ ಪ್ರಕರಣದಲ್ಲಿ ಸಿಕ್ಕಿಸುವುದು, ಜೀತದಾಳು, ಮಾನವನಿಂದ ನಿರ್ಮಲೀಕರಣ, ಮಾನವ ಅಂಗಗಳ ಕಾನೂನುಬಾಹಿರ ವ್ಯವಹಾರ, ಭಯೋತ್ಪಾದನೆ, ನಕ್ಸಲ್ ಚಟುವಟಿಕೆ, ಬಾಲ್ಯವಿವಾಹ, ಬಾಲಕಾರ್ಮಿಕ ಚಟುವಟಿಕೆ, ಮಹಿಳೆ ಮತ್ತು ಮಕ್ಕಳ ಮೇಲೆ ಲೈಂಗಿಕ ಕಿರುಕುಳ, ಜನಾಂಗೀಯ ನಿಂದನೆ, ಅಪಾಯಕಾರಿ ಪರಿಸರ, ಹೆಚ್ಐವಿ ಬಾಧಿತರಿಗೆ ಭೇದಭಾವತೋರುವುದು ಇವೇ ಮುಂತಾದವುಗಳಲ್ಲಿ ಮಾನವ ಹಕ್ಕು ಉಲ್ಲಂಘನೆಯಾಗುವ ಸಂಭವವಿರುತ್ತದೆ. ಎಲ್ಲಾ ಮಾನವ ಜೀವಿಗಳು ಹುಟ್ಟಿನಿಂದ ಘನತೆ ಮತ್ತು ಹಕ್ಕುಗಳಲ್ಲಿ ಸಮಾನ ಮತ್ತು ಪ್ರತಿಯೊಬ್ಬನಿಗೂ ಯಾವುದೇ ತರಹದ ತಾರತಮ್ಯ ಇಲ್ಲದ ಹಕ್ಕುಗಳನ್ನು ಮತ್ತು ಸ್ವಾತಂತ್ರ್ಯವನ್ನು ಹೊಂದುವ ಕಾನೂನುವುಳ್ಳವನಾಗಿದ್ದಾನೆ. ಇವು ಮಾನವನಿಗೆ ನೈಸರ್ಗಿಕವಾಗಿ ಬಂದಂತಹ ಮತ್ತು ಪರಭಾರೆಯಾಗದಂತಹ ಹಕ್ಕುಗಳಾಗಿದ್ದು, ಇಂತಹ ಹಕ್ಕುಗಳ ಉಲ್ಲಂಘನೆ ಆಗುವುದನ್ನು ತಡೆಯುವುದು, ಹಕ್ಕುಗಳ ಉಲ್ಲಂಘನೆ ಆಗದಂತೆ ರಕ್ಷಣೆ ನಿಡುವುದು, ಹಕ್ಕುಗಳ ಉಲ್ಲಂಘನೆಗೆ ಒಳಗಾದವರಿಗೆ ನೆರವು ನೀಡುವುದು ಮಾನವ ಹಕ್ಕುಗಳ ಆಯೋಗದ ಧ್ಯೇಯೋದ್ದೇಶಗಳಲ್ಲಿ ಸೇರಿವೆ

### ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ:

ಮೊದಲಿಗೆ ೧-೧೧-೧೯೫೭ ರಲ್ಲಿ ಬೋರ್ಡ್ ಆಫ್ ರೆವಿನ್ಯೂ ಎಂದು ಸ್ಥಾಪಿಸಲಾಯಿತು. ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ ಕಾಯ್ದೆ ೧೯೭೬ರಂತೆ, ಕರ್ನಾಟಕ ಕಂದಾಯ ಮೇಲ್ಮನವಿ ನ್ಯಾಯಾಧಿಕರಣ, ಮಾರಾಟ ತೆರಿಗೆ ಮೇಲ್ಮನವಿ ನ್ಯಾಯಾಧಿಕರಣ, ಕರ್ನಾಟಕ ಸಹಕಾರ ಮೇಲ್ಮನವಿ ನ್ಯಾಯಾಧಿಕರಣ ಈ ಮೂರನ್ನು ಒಟ್ಟುಗೂಡಿಸಿ ದಿನಾಂಕ: ೧-೦೧-೧೯೭೬ರಿಂದ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣವನ್ನು ರಚಿಸಲಾಯಿತು. ಕೇಂದ್ರ ಸ್ಥಾನ ಬೆಂಗಳೂರು ಆಗಿದ್ದು, ಬೆಳಗಾವಿ, ಕಲಬುರಗಿ, ಮಂಗಳೂರು, ಮೈಸೂರುಗಳಲ್ಲಿ ಶಿಬಿರ ನಡೆಸಿ ಆಯಾ ವಿಭಾಗಕ್ಕೆ ಸೇರಿದ ಪ್ರಕರಣಗಳನ್ನು ವಿಚಾರಣೆ ಮಾಡುತ್ತದೆ. ಕರ್ನಾಟಕ ಭೂಕಂದಾಯ ಕಾಯಿದೆ ೧೯೬೪, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ೧೯೫೯, ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ ೧೯೫೮ ಮತ್ತು ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆ ಮುಂತಾದ ಸುಮಾರು ೨೦ಕ್ಕೂ ಹೆಚ್ಚುಕಾಯ್ದೆಗಳಡಿಯಲ್ಲಿ ಈ ನ್ಯಾಯಾಧಿಕರಣವು ಕೆಳ ನ್ಯಾಯಾಲಯ ಆದೇಶಗಳ ವಿರುದ್ಧ ಮೇಲ್ಮನವಿ ಪ್ರಾಧಿಕಾರಿಯಾಗಿರುತ್ತದೆ. ಹಾಗೂ ಇದು ಕರ್ನಾಟಕ ಭೂಕಂದಾಯ ಕಾಯ್ದೆ ೧೯೬೪ರ ಕಲಂ ೫೬ರಂತೆ ರಿವಿಜನ್, ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ, ರೆಗ್ಯುಲೇಷನ್ ೨೮(ಎ) ಮತ್ತು ೨೮(ಬಿ)ರಂತೆ ಮಿಸಲೇನಿಯಸ್, ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ ಕಾಯ್ದೆ ೮ ಮತ್ತು ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ ರೆಗ್ಯುಲೇಷನ್ ೫೭ ರಂತೆ ರಿವ್ಯೂ ಮನವಿಗಳನ್ನು ಪರಿಶೀಲಿಸುತ್ತದೆ.

ಈ ನ್ಯಾಯಾಧಿಕರಣವು ಅಧ್ಯಕ್ಷರನ್ನೊಳಗೊಂಡಂತೆ ೨ ಕಂದಾಯ ೨ ಸಹಕಾರ ಮತ್ತು ೪ ವಾಣಿಜ್ಯ ತೆರಿಗೆ ಸೇರಿ ೮ ಪೀಠಗಳಿದ್ದು ಹಿರಿಯ ಶ್ರೇಣಿಯ ಭಾರತೀಯ ಆಡಳಿತ ಸೇವೆಯ ಅಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ. ಪ್ರತಿಯೊಂದು ಪೀಠದಲ್ಲಿಯೂ ಓರ್ವ ನ್ಯಾಯಾಂಗ ಸದಸ್ಯರು ಹಾಗೂ ಸಂಬಂಧಿಸಿದ ಇಲಾಖಾ ಸದಸ್ಯರು ಕಾರ್ಯ ನಿರ್ವಹಿಸುತ್ತಾರೆ.

### ಗ್ರಾಹಕರ ವ್ಯಾಜ್ಯ ಪರಿಹಾರ ವೇದಿಕೆ / ಗ್ರಾಹಕ ದೂರು ಪರಿಹಾರ ಆಯೋಗ

ಗ್ರಾಹಕರ ಶೋಷಣೆ ತಡೆಯುವ ಉದ್ದೇಶದಿಂದ ಗ್ರಾಹಕ ರಕ್ಷಣಾ ಅಧಿನಿಯಮವನ್ನು ೧೯೮೬ರಲ್ಲಿ ಜಾರಿಗೊಳಿಸಲಾಯಿತು. ಅದರಂತೆ ರಾಜ್ಯದಲ್ಲಿ ಗ್ರಾಹಕ ದೂರು ಪರಿಹಾರ ಆಯೋಗ ಸ್ಥಾಪಿತವಾಯಿತು. ಇದರಡಿ ಪ್ರತಿ ಜಿಲ್ಲೆಯಲ್ಲಿಯೂ ಗ್ರಾಹಕರ ವ್ಯಾಜ್ಯ ಪರಿಹಾರ ವೇದಿಕೆಗಳು ಕಾರ್ಯ ನಿರ್ವಹಿಸುತ್ತಿವೆ. ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ರಾಜ್ಯ ಆಯೋಗದ ಅಧ್ಯಕ್ಷರನ್ನು ನೇಮಿಸುತ್ತದೆ. ಜಿಲ್ಲಾ ನ್ಯಾಯಾಧೀಶರು ಅಥವಾ ತತ್ಸಮಾನ ಅರ್ಹತೆಯುಳ್ಳವರಾಗಿರುವುದು ಅವಶ್ಯಕ. ಇಬ್ಬರು ಸದಸ್ಯರಲ್ಲಿ ಒಬ್ಬರು ಮಹಿಳೆ ಇರಬೇಕು. ೩೫ ವರ್ಷಗಳಿಗೆ ಕಡಿಮೆ ಇಲ್ಲದ ವಯಸ್ಸಿನ, ಪದವೀಧರ, ಸಾರ್ವಜನಿಕ ವ್ಯವಹಾರ ಅಥವಾ ಆಡಳಿತಕ್ಕೆ ಸಂಬಂಧಿಸಿದಂತೆ ೧೦ ವರ್ಷ ಅನುಭವವುಳ್ಳವರಾಗಿರಬೇಕು. ಗ್ರಾಹಕರು ಕೊಂಡ ವಸ್ತು ಅಥವಾ ಪಡೆದ ಸೇವೆಗಳ ಬಗ್ಗೆ ಉದ್ಭವಿಸುವ ವಿವಾದ, ತಕರಾರುಗಳನ್ನು ವಿಚಾರಣೆ ನಡೆಸಿ ಗ್ರಾಹಕರ ಹಿತರಕ್ಷಣೆ ಮಾಡುತ್ತವೆ. ಜಿಲ್ಲಾ ಗ್ರಾಹಕರ ವ್ಯಾಜ್ಯ ಪರಿಹಾರ ವೇದಿಕೆಯು ೨೦ ಲಕ್ಷದವರೆಗಿನ ಮೌಲ್ಯದ ವ್ಯವಹಾರಕ್ಕೆ ಸಂಬಂಧಿಸಿದಂತೆ ದೂರುಗಳನ್ನು ಸ್ವೀಕರಿಸಿ ಇತ್ಯರ್ಥ ಪಡಿಸುತ್ತದೆ.

### ವಕೀಲರ ಸಂಘ (ಬಾರ್ ಅಸೋಸಿಯೇಷನ್)

ವಕೀಲರ ಉಪಯೋಗಕ್ಕಾಗಿ ಕಾನೂನು ಪುಸ್ತಕಗಳ ಗ್ರಂಥಾಲಯ ಹಾಗೂ ವಾಚನಾಲಯವನ್ನು ೧೮೭೯ರಲ್ಲಿ ಪ್ರಾರಂಭಿಸಲಾಯಿತು. ೧೯೦೦ರಲ್ಲಿ ಕಾನೂನು ಸಂಘ (The Law Association)ವನ್ನು ರಚಿಸಿ ಕಾನೂನು ವೃತ್ತಿ ಪ್ರಾರಂಭಿಸಿದವರ ಸದಸ್ಯತ್ವದ ನೋಂದಣಿಯನ್ನು ಮಾಡಿಕೊಳ್ಳಲಾರಂಭಿಸಿತು. ಎಸ್. ರಾಮಸ್ವಾಮಿ ಅಯ್ಯರ್ ಅವರು ಇದರ ಮೊದಲ ಅಧ್ಯಕ್ಷರಾದರು. ೨೮-೧೦-೧೯೦೫ರಲ್ಲಿ ಪ್ರತಿವರ್ಷ ಸಂಘದ ಸದಸ್ಯರನ್ನು ಪ್ರತಿನಿಧಿಸಭೆಗೆ ನಿಯೋಜಿಸುವಂತೆ ಸರ್ಕಾರ ಅನುಮತಿ ನೀಡಿತು. ೧೯೨೩ರವರೆಗೆ ಮುಂದುವರೆದಿತ್ತು. ಸಂಘಕ್ಕೆ ಜಿಲ್ಲಾ ಕಚೇರಿ ಕಟ್ಟಡದಲ್ಲಿ ಎರಡು ಕೊಠಡಿಗಳನ್ನು ನೀಡಿ, ಬೆಂಗಳೂರು ಲಿಟರರಿ ಯೂನಿಯನ್‌ಗೂ ಅವಕಾಶ ಮಾಡಿಕೊಟ್ಟಿತು. ಸಂಘವು ಸಹಕಾರ ಸಂಘಗಳ ನೊಂದಣಿ ಅಧಿನಿಯಮದಂತೆ ನೊಂದಾಯಿಸಲ್ಪಟ್ಟಿತು. (೧೨-೦೬-೧೯೦೩) ಅದುವರೆಗೆ ೫೦ ಸದಸ್ಯರಿದ್ದುದು ೧೯೫೧ರಲ್ಲಿ ೩೧೦ಕ್ಕೇರಿತು. ೧೯೬೧ರಲ್ಲಿ ೪೫೮, (ಇದರಲ್ಲಿ ೪ ಮಹಿಳಾ ವಕೀಲರು) ೧೯೯೦ರಲ್ಲಿ ೩೦೦ ಮಹಿಳಾವಕೀಲರೂ ಸೇರಿದಂತೆ, ೫೦೦೦ ಸದಸ್ಯರಿದ್ದರು. ೧೯೫೪ರಲ್ಲಿ ವಕೀಲರ ಸಂಘವು ಬೆಂಗಳೂರು ವಕೀಲರ Benevolent fund ಎಂಡೋಮೆಂಟ್

ಲೆಕ್ಚರ್ ಫಂಡ್ (ಗೋಪಿವಲ್ಲಭ ಐಯ್ಯಂಗಾರ್ ದತ್ತಿನೀಡಿದ್ದು) ದಿ ಬೆಂಗಳೂರು ಬಾರ್ ಅಸೋಸಿಯೇಷನ್ ಮ್ಯೂಚುವಲ್ ಬೆನಿಫಿಟ್ ಸ್ಕೀಂ, ಲೀಗಲ್ ಏಯ್ಡ್ ಸೊಸೈಟಿ ಮುಂತಾದವುಗಳನ್ನು ಸ್ಥಾಪಿಸಿತು.

ನ್ಯಾಯವಾದಿಗಳು ಹಾಗೂ ವಕೀಲರು ಸಂಘಟನೆಗೊಂಡು ರಚಿಸಿಕೊಂಡಿರುವ ವಕೀಲರ ಸಂಘವು ಇಂದು ಏಷ್ಯಾ ಖಂಡದಲ್ಲಿಯೇ ಅತಿದೊಡ್ಡದು ಎನ್ನಬಹುದು. ಒಂದೇ ಬ್ಯಾನರಿನಡಿಯಲ್ಲಿ ಇಷ್ಟೊಂದು ದೊಡ್ಡಮಟ್ಟದ ಸುಮಾರು ೨೧೦೦೦ಕ್ಕೂ ಹೆಚ್ಚಿನ ಸದಸ್ಯರನ್ನುಳ್ಳ ಬೆಂಗಳೂರಿನ ವಕೀಲರ ಈ ಸಂಘವನ್ನು 'ಬೆಂಗಳೂರು ಬಾರ್ ಅಸೋಸಿಯೇಷನ್ ಎಂದು ಕರೆಯಲಾಗುತ್ತಿದ್ದು, ಸಿಟಿ ಸಿವಿಲ್ ಕೋರ್ಟು, ಹೈಕೋರ್ಟು, ಮ್ಯಾಜಿಸ್ಟ್ರೇಟ್ ಕೋರ್ಟು ಮತ್ತು ಮೇಯೋಹಾಲ್ ಕೋರ್ಟು ಎಂಬುದಾಗಿ ನಾಲ್ಕು ಯೂನಿಟ್‌ಗಳು ಹಿಂದೆ ಪ್ರತ್ಯೇಕವಾಗಿದ್ದವು.

೧೯೬೭ರಲ್ಲಿ ಈ ನಾಲ್ಕು ಅಂಗಗಳು ಏಕೀಭವಿಸಿದವು. ಈ ಸಂಘದ ಸದಸ್ಯತ್ವ ಹೊಂದಿದ್ದ ಇ.ಎಸ್.ವೆಂಟರಾಮಯ್ಯ, ಜಸ್ಟೀಸ್ ಎಂ.ಎನ್.ವೆಂಕಟಾಚಲ, ಶಿವರಾಜ್ ಪಾಟೀಲ್, ಜಸ್ಟೀಸ್ ಕೆ.ಜಗನ್ನಾಥ ಶೆಟ್ಟಿ, ಆರ್.ವಿ.ರವೀಂದ್ರನ್, ವಿ.ಎಸ್.ಮಳಿಮಠ್ ಮುಂತಾದ ಅನೇಕರು ಭಾರತದ ಶ್ರೇಷ್ಠ ನ್ಯಾಯ ಪೀಠದಲ್ಲಿ ಉನ್ನತ ಸ್ಥಾನ ಅಲಂಕರಿಸಿದ್ದಾರೆ. ರಾಮಾಜೋಯಿಸ್ ಅವರು ಪಂಜಾಬ್ ಮತ್ತು ಹರಿಯಾಣ ಹೈ ಕೋರ್ಟ್ ಮುಖ್ಯ ನ್ಯಾಯಾಧೀಶರಾಗಿ, ನಂತರ ಬಿಹಾರ ರಾಜ್ಯದ ರಾಜ್ಯಪಾಲರಾದರು. ಕೆ.ಎ.ಸ್ವಾಮಿ ಅವರು ಮದ್ರಾಸ್ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿ, ವಿ.ಗೋಪಾಲಗೌಡ ಅವರು ಒಡಿಸ್ಸಾದ ನ್ಯಾಯಧೀಶರಾಗಿದ್ದರು. ಮಾಜಿ ಮುಖ್ಯಮಂತ್ರಿಗಳೂ ವಿಧಾನಸೌಧ ನಿರ್ಮಾತೃವೂ ಆದ ಕೆಂಗಲ್ ಹನುಮಂತಯ್ಯ, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಮತ್ತು ಎಂ.ವೀರಪ್ಪ ಮೊಯಿಲಿ ಮುಂತಾದವರು ವಕೀಲರ ಸಂಘದ ಸದಸ್ಯರಾಗಿದ್ದರೆಂಬುದು ಹೆಗ್ಗಳಿಕೆ.

ಬಹುತೇಕ ಸದಸ್ಯರು ಗ್ರಾಮಾಂತರ ಪ್ರದೇಶದಿಂದ ಬಂದವರಾಗಿದ್ದು ವಕೀಲ ವೃತ್ತಿಯಲ್ಲಿ ಯಶಸ್ಸನ್ನು ಸಾಧಿಸಲು ವೃತ್ತಿಪರತೆಯಲ್ಲಿ ಪ್ರೋತ್ಸಾಹ ನೀಡಲು 'ವಕೀಲರ ಅಕಾಡೆಮಿ' ಸ್ಥಾಪಿಸಿದ್ದು ಅನೇಕ ಉಪಯುಕ್ತ ಕಾರ್ಯಕ್ರಮ, ವಿಚಾರ ಸಂಕಿರಣ, ಕಾರ್ಯಾಗಾರ ನಡೆಸಲಾಗುತ್ತಿದೆ. ಸಂಘದ ಅಧ್ಯಕ್ಷರಾಗಿ ೧೯೬೭ರಿಂದ ೨೪ಕ್ಕೂ ಹೆಚ್ಚು ಅಧ್ಯಕ್ಷರು ಸಂಘವನ್ನು ಮುನ್ನಡೆಸಲು ಶ್ರಮಿಸಿರುವರು. ಸಾಹಿತ್ಯಕ ಸಾಂಸ್ಕೃತಿಕ ಚಟುವಟಿಕೆ ಮುಂತಾದವುಗಳನ್ನು ನಡೆಸುವ ಮೂಲಕ ವಕೀಲರ ಸಹಕಾರ ಸಂಘ ನಡೆಸುವ ಮೂಲಕ ವಕೀಲರ ಶ್ರೇಯೋಭಿವೃದ್ಧಿಗೆ ಶ್ರಮಿಸಲಾಗುತ್ತಿದೆ. ರಾಜ್ಯಾದ್ಯಂತ ಎಲ್ಲ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿಯೂ ವಕೀಲರ ಸಂಘ ಕಾರ್ಯನಿರ್ವಹಿಸುತ್ತಿವೆ.

**ಬಾರ್ ಕೌನ್ಸಿಲ್:**

ಬಾರ್ ಕೌನ್ಸಿಲ್ ಆಫ್ ಇಂಡಿಯಾದ ಬೆಂಗಳೂರು ಶಾಖೆ ಪ್ರಾರಂಭವಾಯಿತು. ಹೈಕೋರ್ಟ್ ವಕೀಲರಾಗಿ ಈ ಮೊದಲೇ ನೊಂದಾಯಿಸಲ್ಪಟ್ಟ ವಕೀಲರುಗಳು ಬಾರ್ ಕೌನ್ಸಿಲ್ ಸದಸ್ಯರಾಗಿ ನೋಂದಾಯಿಸ ಬೇಕಿತ್ತು. ೧೯೫೭ರ ನಂತರ ಎಲ್ಲಾ ವಕೀಲರು ನೋಂದಾಯಿಸಲ್ಪಟ್ಟರು.

**೧೯೫೫ ರಿಂದ ಕರ್ನಾಟಕದ ಉನ್ನತ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳ ಪಟ್ಟಿ**

| ಮುಖ್ಯ ನ್ಯಾಯಮೂರ್ತಿಗಳ ಹೆಸರು | ಅವಧಿ | |
|---|---|---|
| | ಇಂದ | ವರೆಗೆ |
| ನ್ಯಾ.ಶ್ರೀ. ಎಲ್.ಆರ್. ವೆಂಕಟರಾಮಯ್ಯ | ೧೦-೦೪-೧೯೫೫ | ೧೫-೦೭-೧೯೫೫ |
| ನ್ಯಾ.ಶ್ರೀ. ಸುಬೋದ್ ರಂಜನ್ ದಾಸ್‌ಗುಪ್ತ | ೨೫-೦೭-೧೯೫೭ | ೧೩-೦೮-೧೯೬೧ |
| ನ್ಯಾ.ಶ್ರೀ. ನಿಟ್ಟೂರು ಶ್ರೀನಿವಾಸ ರಾವ್ | ೨೯-೦೩-೧೯೬೨ | ೦೭-೦೮-೧೯೬೩ |
| ನ್ಯಾ.ಶ್ರೀ. ಹೆಚ್. ಹೊಂಬೇಗೌಡ | ೦೭-೦೮-೧೯೬೩ | ೦೧-೦೮-೧೯೬೯ |
| ನ್ಯಾ.ಶ್ರೀ. ಎ.ಆರ್. ಸೋಮನಾಥ ಅಯ್ಯರ್ | ೨೩-೧೧-೧೯೬೯ | ೨೯-೧೨-೧೯೬೯ |
| ನ್ಯಾ.ಶ್ರೀ. ಎಂ. ಸದಾಶಿವಯ್ಯ | ೩೦-೧೨-೧೯೬೯ | ೧೬-೦೯-೧೯೭೦ |
| ನ್ಯಾ.ಶ್ರೀ. ಎ. ನಾರಾಯಣ ಪೈ | ೧೭-೦೯-೧೯೭೦ | ೦೭-೦೬-೧೯೭೩ |
| ನ್ಯಾ.ಶ್ರೀ. ಜಿ.ಕೆ. ಗೋವಿಂದ ಭಟ್ | ೦೭-೦೬-೧೯೭೩ | ೧೫-೧೨-೧೯೭೭ |
| ನ್ಯಾ.ಶ್ರೀ. ಡಿ.ಎಂ. ಚಂದ್ರಶೇಖರ್ | ೨೩-೦೨-೧೯೭೮ | ೨೫-೦೯-೧೯೮೨ |
| ನ್ಯಾ.ಶ್ರೀ. ಕೆ. ಭೀಮಯ್ಯ | ೨೮-೧೦-೧೯೮೨ | ೧೧-೦೪-೧೯೮೩ |
| ನ್ಯಾ.ಶ್ರೀ. ವಿ.ಎಸ್. ಮಳಿಮಠ | ೦೬-೦೨-೧೯೮೪ | ೨೩-೧೦-೧೯೮೫ |
| ನ್ಯಾ.ಶ್ರೀ. ಪಿ.ಸಿ. ಜೈನ್ | ೨೮-೦೮-೧೯೮೬ | ೧೬-೦೮-೧೯೮೯ |
| ನ್ಯಾ.ಶ್ರೀ. ಎಸ್. ಮೋಹನ್ | ೨೮-೧೦-೧೯೮೯ | ೦೭-೧೦-೧೯೯೧ |

| | | |
|---|---|---|
| ನ್ಯಾ.ಶ್ರೀ. ಬರೂಚ | ೦೧-೧೧-೧೯೯೧ | ೩೦-೦೬-೧೯೯೨ |
| ನ್ಯಾ.ಶ್ರೀ. ಎಸ್.ಬಿ. ಮಜುಂದಾರ್ | ೦೨-೦೭-೧೯೯೩ | ೧೩-೦೯-೧೯೯೪ |
| ನ್ಯಾ.ಶ್ರೀ. ಜಿ.ಟಿ. ನಾನಾವತಿ | ೨೮-೦೯-೧೯೯೪ | ೦೪-೦೩-೧೯೯೫ |
| ನ್ಯಾ.ಶ್ರೀ. ಎಂ.ಎಲ್. ಪೆಂಡ್ಸೆ | ೨೮-೦೩-೧೯೯೫ | ೨೫-೦೩-೧೯೯೬ |
| ನ್ಯಾ.ಶ್ರೀ. ಎಸ್.ಎ. ಹಕೀಂ | ೦೩-೦೫-೧೯೯೬ | ೦೯-೦೫-೧೯೯೬ |
| ನ್ಯಾ.ಶ್ರೀ. ಆರ್. ಪಿ. ಸೇಥಿ | ೨೯-೦೬-೧೯೯೬ | ೦೬-೦೧-೧೯೯೬ |
| ನ್ಯಾ.ಶ್ರೀ. ವೈ. ಭಾಸ್ಕರ ರಾವ್ | ೦೭-೦೧-೧೯೯೬ | ೨೪-೦೬-೨೦೦೦ |
| ನ್ಯಾ.ಶ್ರೀ. ಪಿ.ವಿ. ರೆಡ್ಡಿ | ೨೧-೧೦-೨೦೦೦ | ೧೬-೦೮-೨೦೦೧ |
| ನ್ಯಾ.ಶ್ರೀ. ಎನ್.ಕೆ. ಜೈನ್ | ೩೧-೦೮-೨೦೦೧ | ೧೯-೧೦-೨೦೦೪ |
| ನ್ಯಾ.ಶ್ರೀ. ಎನ್.ಕೆ. ಸೋಧಿ | ೧೯-೧೧-೨೦೦೪ | ೨೮-೧೧-೨೦೦೫ |
| ನ್ಯಾ.ಶ್ರೀ. ಬಿ. ಪದ್ಮರಾಜ್ | ೨೯-೧೧-೨೦೦೫ | ೦೬-೦೧-೨೦೦೬ |
| ನ್ಯಾ.ಶ್ರೀ. ಸಿರಿಯಾಕ್ ಜೋಸೆಫ್ | ೦೭-೦೧-೨೦೦೬ | ೦೭-೦೮-೨೦೦೮ |
| ನ್ಯಾ.ಶ್ರೀ. ಪಿ.ಡಿ. ದಿನಕರನ್ | ೦೮-೦೮-೨೦೦೮ | ೦೭-೦೮-೨೦೧೦ |
| ನ್ಯಾ.ಶ್ರೀ. ಜಗದೀಶ್‌ಸಿಂಗ್ ಕೇಹರ್ | ೦೮-೦೮-೨೦೧೦ | ೧೨-೦೯-೨೦೧೧ |
| ನ್ಯಾ ಶ್ರೀ. ವಿಕ್ರಂಜಿತ್ ಸೇನ್ | ೨೪-೧೨-೨೦೧೧ | ೨೩-೧೨-೨೦೧೨ |
| ನ್ಯಾ.ದೀರೇಂದ್ರ ಹೀರಾಲಾಲ್ ವಾಘೇಲಾ | ೦೧-೦೩-೨೦೧೩ | ೩೧-೦೫-೨೦೧೫ |
| ನ್ಯಾ.ಎಸ್.ಕೆ.ಮುಖರ್ಜಿ | ೦೧-೦೬-೨೦೧೫ | |

## ಸ್ಥಳೀಯ ಸ್ವಯಂ ಆಡಳಿತ

ಪ್ರಾಚೀನ ಕಾಲದಿಂದಲೂ, ಕರ್ನಾಟಕದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ರಂಗಗಳಲ್ಲಿ ಆಗುತ್ತಿದ್ದ ಬದಲಾವಣೆಗಳಿಗೆ ಅನುಗುಣವಾಗಿ ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳು ಬೆಳೆದುಕೊಂಡು ಬಂದಿರುವುದನ್ನು, ಪಾರಂಪರಿಕ ಅಂಶಗಳನ್ನು ಮೈಗೂಡಿಸಿಕೊಂಡಿರುವುದನ್ನು ಇತಿಹಾಸದುದ್ದಕ್ಕೂ ಕಾಣಬಹುದಾಗಿದೆ.

ಪ್ರಾಚೀನ ಕರ್ನಾಟಕದಲ್ಲಿ ಪ್ರಬಲವಾದ ಗ್ರಾಮ ಸಂಸ್ಥೆಗಳ ಪರಂಪರೆಯಿದ್ದಿತು. ಕೇಂದ್ರೀಕೃತ ರಾಜಾಡಳಿತದಲ್ಲಿಯೂ, ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದವು. ಗ್ರಾಮಸಭೆಗಳು ಈ ಸಂಸ್ಥೆಯ ಒಂದು ಮಾದರಿ. ಇವು ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸುತ್ತಿದ್ದವು. ಈ ಸಂಸ್ಥೆಗಳನ್ನು ಊರು (ಪುರ), ಒಕ್ಕಲು(ನೆಲಸಿಗರು), ಪ್ರಜೆ (ಆಡಳಿತಕ್ಕೆ ಒಳಪಟ್ಟವರು), ಪ್ರಜಾಸಮುದಾಯ (ಆಡಳಿತಕ್ಕೆ ಒಳಪಟ್ಟವರ ಗುಂಪು), ಊರ ಹದಿನೆಂಟು ಜಾತಿ (ಗ್ರಾಮದ ೧೮ ಜಾತಿಯವರು) ಮುಂತಾಗಿ ಕರೆಯಲಾಗುತ್ತಿತ್ತು. ಅಗ್ರಹಾರಗಳಲ್ಲಿ ಮಹಾಜನ ಸಮಿತಿಯು (ಬ್ರಾಹ್ಮಣ ಕುಟುಂಬಗಳ ಮುಖ್ಯರು) ಆಡಳಿತ ನಿರ್ವಹಿಸುತ್ತಿತ್ತು. ಗ್ರಾಮ ಸಭೆಯು ಗ್ರಾಮದ ನೀರಾವರಿ ವ್ಯವಸ್ಥೆ, ದೇವಾಲಯಗಳ ಜೀರ್ಣೋದ್ಧಾರ ಕಾರ್ಯಗಳಲ್ಲದೆ, ಇತರ ಸಣ್ಣಪುಟ್ಟ ಸ್ಥಳೀಯ ವಿವಾದಗಳನ್ನು ಪರಿಹರಿಸುತ್ತಿತ್ತು. ಹಲವು ಗ್ರಾಮಗಳ ಒಕ್ಕೂಟವನ್ನು 'ನಾಡು' ಎಂದು ಕರೆಯಲಾಗುತ್ತಿತ್ತು. ಇಂಥವನ್ನು ನಾಡಸಭೆ ಎಂದು ಕರೆಯುತ್ತಿದ್ದರು. ಸುಮಾರು ಹತ್ತನೇ ಶತಮಾನದ ವೇಳೆಗೆ 'ನಾಡು' ಆಧುನಿಕ ಮಂಡಲ ಅಥವಾ ತಾಲೂಕು ಪಂಚಾಯಿತಿಯಾಗಿ ರೂಪುಗೊಂಡಿತ್ತು. ಇವುಗಳ ಪ್ರತಿನಿಧಿಗಳು ಒಕ್ಕೂಟ ಗ್ರಾಮಗಳ ಮುಖ್ಯಸ್ಥರು ಆಗಿರುತ್ತಿದ್ದರು. ಹಲವು ನಾಡುಗಳ ಸಂರಚನೆಯನ್ನು 'ಮಹಾನಾಡು' ಎನ್ನುತ್ತಿದ್ದರು. ಇದರ ಪ್ರತಿನಿಧಿಗಳು ಗ್ರಾಮಗಳು, ಪಟ್ಟಣಗಳು, ವ್ಯಾಪಾರಿ ಸಂಘಗಳು ಮತ್ತು ಅಧಿಕಾರಿ ವರ್ಗಗಳಿಂದ ನೇಮಕವಾಗುತ್ತಿದ್ದರು. 'ಮಹಾನಾಡು' ಒಕ್ಕೂಟವನ್ನು ಇಂದಿನ ಜಿಲ್ಲಾ ಪಂಚಾಯಿತಿಗೆ ಹೋಲಿಸಬಹುದು. ಗ್ರಾಮ ಸಭೆಯು ಅತ್ಯುನ್ನತ ಸ್ಥಳೀಯ ಸಂಸ್ಥೆಯಾಗಿದ್ದಿತು. ಇದು ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಕೈಗೊಳ್ಳಬೇಕಾಗಿತ್ತು. ಈ ಸಂಸ್ಥೆಗೆ ತನ್ನದೇ ಆದ ಆರ್ಥಿಕ ಮೂಲವಿರುತ್ತಿತ್ತು. ಗ್ರಾಮ ಸಭೆಯು ಸಾರ್ವಜನಿಕ ಆಸ್ತಿ ಮತ್ತು ದತ್ತಿಗಳನ್ನು ನೋಡಿಕೊಳ್ಳುವ ಕಾರ್ಯವನ್ನುಮಾಡಬೇಕಾಗುತ್ತಿತ್ತು. ಪ್ರಯತ್ನಶೀಲ ವ್ಯಾಪಾರಿಗಳು ಪ್ರಾರಂಭಿಸಿದ ನಗರ/ಪಟ್ಟಣ ಆಡಳಿತ ವ್ಯವಸ್ಥೆಗೆ ನಗರ ಅಥವಾ ಪಟ್ಟಣವೆಂದು ಕರೆಯುತ್ತಿದ್ದರು. ನಗರ/ಪಟ್ಟಣದ ಮುಖ್ಯಸ್ಥನನ್ನು 'ಪಟ್ಟಣ ಶೆಟ್ಟಿ' ಅಥವಾ 'ಪಟ್ಟಣ ಸ್ವಾಮಿ' ಎಂದು ಕರೆಯುತ್ತಿದ್ದರು. ಈ ಮುಖ್ಯಸ್ಥರ ಸಂಖ್ಯೆಯನ್ನು ಊರಿನ ವ್ಯಾಪ್ತಿಯ ಆಧಾರದ ಮೇಲೆ ನಿರ್ಧರಿಸಲಾಗುತ್ತಿತ್ತು.

**ಕರ್ನಾಟಕದಲ್ಲಿ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳ ಉಗಮ:** ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಿಗೆ ಮಾನ್ಯತೆ ನೀಡಿದ್ದ ಬಗ್ಗೆ ಹಲವಾರು ಪುರಾವೆಗಳು ಕರ್ನಾಟಕದಲ್ಲಿ ಲಭ್ಯವಿರುವ ಶಾಸನಗಳಿಂದ ವ್ಯಕ್ತವಾಗುತ್ತದೆ. ಪ್ರತೀ ಗ್ರಾಮ, ಪಟ್ಟಣ ಹಾಗೂ ಸಮುದಾಯಗಳು ಸ್ಥಳೀಯ ಅವಶ್ಯಕತೆಗನುಗುಣವಾಗಿ ತಮ್ಮದೇ ಆದ ಆಡಳಿತವನ್ನು ಹೊಂದಿದ್ದವು. ನಾಗರಿಕ ಅವಶ್ಯಕತೆಗಳನ್ನು ಒದಗಿಸುವ ಜೊತೆಗೆ ಇವು ತಮ್ಮ ಸರ್ವಾಂಗೀಣ ಪ್ರಗತಿಗೆ ಕಾರಣವಾಗಿದ್ದವು. ಅಂದಿನ ರಾಜರು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಿಗೆ ಮಾನ್ಯತೆ ನೀಡಿದ್ದರಲ್ಲದೆ ಅವುಗಳಿಗೆ ಸಾಕಷ್ಟು ಸ್ವಾಯತ್ತತೆಯನ್ನೂ ಒದಗಿಸಿದ್ದರು. ಇಂದಿನ ಪ್ರಜಾಸತ್ತೆಯ ಸಂದರ್ಭದಲ್ಲಿ ಅಧಿಕಾರ ವಿಕೇಂದ್ರೀಕರಣ ಹಿಂದೆಂದಿಗಿಂತಲೂ ಹೆಚ್ಚು ಮಾನ್ಯತೆ ಪಡೆದಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಶೋಭೆ ತಂದಿದೆ.

### ಪೌರಾಡಳಿತ

ಗಂಗರ ಕಾಲದಲ್ಲಿ ಅವರ ರಾಜ್ಯಾಡಳಿತಕ್ಕೆ ಒಳಪಟ್ಟ ಪಟ್ಟಣಗಳಲ್ಲಿ ಪೌರಸಭೆಗಳಿದ್ದು, ಪಟ್ಟಣಗಳ ನಿರ್ಮಾಣ, ನಾಗರೀಕ ಸೌಲಭ್ಯ, ಧರ್ಮಛತ್ರಗಳ ನಿರ್ವಹಣೆ ಮುಂತಾದ ಪ್ರಮುಖ ಕಾರ್ಯಗಳನ್ನು ಪಟ್ಟಣಸ್ವಾಮಿಯು ನೋಡಿಕೊಳ್ಳುತ್ತಿದ್ದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಪಟ್ಟಣದ ಆಡಳಿತ ವ್ಯವಸ್ಥೆಯಲ್ಲಿ ವರ್ತಕರದೇ ಪ್ರಾಧಾನ್ಯತೆ ಇರುತ್ತಿದ್ದು, ಕೃಷಿಕರು, ಗಾಣಿಗರು, ಕುಂಬಾರರು, ಕಾರ್ಮಿಕರು, ಕುಶಲಕರ್ಮಿಗಳು, ಮೇದರು, ಕಂಚುಗಾರರು, ಪಂಚಮರು, ಕ್ಷೌರಿಕರು, ಚಮ್ಮಾರರು, ಚಿನಿವಾರರು, ನಾಗಸ್ವರ ವಾದ್ಯದವರು, ಡೋಲು ಕುಣಿತ ವೃಂದದವರು, ತಳವಾರರು, ತೋಟಿಗರು ಹಾಗೂ ಲೇವಾದೇವಿದಾರರು ಮುಂತಾದ ವೃತ್ತಿ ಬಾಂಧವರೆಲ್ಲರೂ ಒಟ್ಟಾಗಿ ಸಹಕರಿಸುತ್ತಿದ್ದರು. ಪಟ್ಟಣದ ಎಲ್ಲ ೧೮ ವಿವಿಧ ಕಸಬುಗಳ (ಜಾತಿಯ) ಪ್ರಾತಿನಿಧ್ಯ ಪಟ್ಟಣ ಸಭೆಗಳಲ್ಲಿ ಇರುತ್ತಿದ್ದ ಬಗ್ಗೆ ಶಾಸನಗಳಲ್ಲಿ ದಾಖಲೆಗಳು ದೊರೆಯುತ್ತವೆ. ಪೌರಾಡಳಿತ ಸಭೆಯ ಸಂವಿಧಾನಕ್ಕೆ ಆಚಾರ ವ್ಯವಸ್ಥೆ ಎಂದು ಶಾಸನಗಳಲ್ಲಿ ಉಲ್ಲೇಖವಿದ್ದು, ಪೌರಾಡಳಿತದ ವಿವಿಧ ಅಂಗಸಂಸ್ಥೆಗಳ ಬಗ್ಗೆ ಶಾಸನಗಳಲ್ಲಿ ಪ್ರಸ್ತಾಪವಿದೆ.

ಈ ಎಲ್ಲಾ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು ಸ್ಥಳೀಯ ಜನರ ಅಗತ್ಯಕ್ಕನುಗುಣವಾಗಿ ಹುಟ್ಟಿದವಾಗಿದ್ದು, ಸರಕಾರ ಕೇವಲ ಸಲಹಾ ಮಂಡಳಿಯಂತೆ ವರ್ತಿಸುತ್ತಿತ್ತು. ಸ್ಥಳೀಯ ಸಂಸ್ಥೆಗಳು ತಮ್ಮ ಕಾರ್ಯನಿರ್ವಹಣೆಯಲ್ಲಿ ತಪ್ಪಿದಲ್ಲಿ ಸರ್ಕಾರ ಮಧ್ಯಪ್ರವೇಶ ಮಾಡುತ್ತಿತ್ತು.

ಭಾರತದಲ್ಲಿ ಆರಂಭವಾದ ಬ್ರಿಟೀಷರ ಆಡಳಿತ, ಸ್ಥಳೀಯ ಸಂಸ್ಥೆಗಳ ಕಾರ್ಯಾಚರಣೆಯಲ್ಲಿ ಸಂಮಿಶ್ರ ಬದಲಾವಣೆಗಳನ್ನು ತಂದಿತು. ಪ್ರಾಚೀನ ಗ್ರಾಮ ಸಮುದಾಯಗಳ ಹಿಂದಿನ ವೈಭವವನ್ನು ಮತ್ತೆ ತರುವ ಪ್ರಯತ್ನಿಸಿದವರಲ್ಲಿ ಭಾರತೀಯ ನಾಯಕರಾದ ತಿಲಕ್, ಫಿರೋಜ್‌ಷಾ ಮೆಹ್ತಾ, ಗಾಂಧೀಜಿ ಮತ್ತಿತರರು ಮುಖ್ಯರು. ಆಧುನಿಕ ಅರ್ಥದಲ್ಲಿ ೧೮೬೩ರಲ್ಲಿ ನಿಜವಾದ ಗ್ರಾಮಗಳ ಅಭಿವೃದ್ಧಿಕಾರ್ಯ ಗ್ರಾಮ ನೈರ್ಮಲ್ಯ ಶಾಸನದ ಮೂಲಕ ಅನೇಕ ಪ್ರಾಂತಗಳಲ್ಲಿ (ಮೈಸೂರು ಸಂಸ್ಥಾನವನ್ನೂ ಒಳಗೊಂಡಂತೆ) ಪ್ರಾರಂಭವಾಯಿತು. ಸ್ಥಳೀಯ ಸ್ವಯಂ ಆಡಳಿತ ಚಟುವಟಿಕೆಗಳು ಕರ್ನಾಟಕದಲ್ಲಿ ವಿಲೀನಗೊಂಡ ಹಲವು ಪ್ರದೇಶಗಳಲ್ಲಿ ಬೇರೆ ಬೇರೆ ಸಮಯದಲ್ಲಿ ಪ್ರಾರಂಭವಾದವು.

ಮೈಸೂರು ರಾಜ್ಯದಲ್ಲಿ ಪ್ರಾಯೋಗಿಕವಾಗಿ ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿ ೧೮೬೨ರಲ್ಲಿ ಪುರಸಭೆಗಳು ರಚನೆಗೊಂಡವು. ಸ್ಥಳೀಯ ಮಂಡಳಿಗಳು (ಜಿಲ್ಲಾ ಮತ್ತು ತಾಲೂಕು ಬೋರ್ಡುಗಳು) ಗ್ರಾಮೀಣ ಪ್ರದೇಶದ ಅಭಿವೃದ್ಧಿಗಾಗಿ ೧೯೦೨-೦೩ರಲ್ಲಿ ಕಾರ್ಯಾರಂಭ ಮಾಡಿದವು. ಆದರೆ ೧೮೮೩ರಲ್ಲೇ ಈ ಸಂಸ್ಥೆಗಳ ಉಗಮಕ್ಕೆ ಕರಡು ನಿಯಮಗಳನ್ನು ರೂಪಿಸಲಾಗಿತ್ತು. ಮೊಟ್ಟ ಮೊದಲಿಗೆ ಗ್ರಾಮ ಪಂಚಾಯಿತಿಗಳು ೧೯೧೯ರಲ್ಲಿ ಅಸ್ತಿತ್ವಕ್ಕೆ ಬಂದವು. ಅದೇ ಹಿಂದಿನ ಮುಂಬೈ ಕರ್ನಾಟಕ ಪ್ರದೇಶಗಳಲ್ಲಿ ೧೮೫೦ರ ಈಸ್ಟ್ ಇಂಡಿಯಾ ಕಂಪನಿ ಶಾಸನದನ್ವಯ ಸ್ಥಳೀಯ ಸಂಸ್ಥೆಗಳನ್ನು ರಚಿಸಲಾಗಿತ್ತು. ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ಮೊಟ್ಟ ಮೊದಲಿಗೆ ಬೆಳಗಾವಿ ಪುರಸಭೆಯನ್ನು ೧೮೫೧ರಲ್ಲಿ ರಚಿಸಲಾಯಿತು. ೧೮೫೪ರಲ್ಲಿ ನಿಪ್ಪಾಣಿಯಲ್ಲಿ, ೧೮೫೫ರಲ್ಲಿ ಹುಬ್ಬಳ್ಳಿಯಲ್ಲಿ ಹಾಗೂ ೧೮೫೬ರಲ್ಲಿ ಧಾರವಾಡದಲ್ಲಿ ಪುರಸಭೆಗಳು ರಚನೆಗೊಂಡವು. ಆನಂತರ ೧೯೦೧ರಲ್ಲಿ ಮುಂಬೈ ಜಿಲ್ಲಾ ಮುನಿಸಿಪಾಲಿಟಿಗಳ ಶಾಸನದನ್ವಯ ಮುನಿಸಿಪಾಲಿಟಿಗಳನ್ನು ರಚಿಸಲಾಯಿತು. ೧೯೨೫ರ ಮುಂಬೈ ಬರೊಮುನಿಸಿಪಾಲಿಟಿಗಳ ಶಾಸನದನ್ವಯ ವ್ಯಾಪಕ ಅಧಿಕಾರ ಹೊಂದಿದ ಬರೋಮುನಿಸಿಪಾಲಿಟಿಗಳು ಅಸ್ತಿತ್ವಕ್ಕೆ ಬಂದವು. ಮದರಾಸು ಭಾಗದಲ್ಲಿ ೧೮೬೫ರ (ಟೌನ್ ಇಂಪ್ರೂವ್‌ಮೆಂಟ್ ಆಕ್ಟ್) ಪುರೋಭಿವೃದ್ಧಿ ಶಾಸನದನ್ವಯ ಸ್ಥಳೀಯ ನಗರಾಡಳಿತ ಆರಂಭವಾಯಿತು. ೧೮೭೧ರಲ್ಲಿ ಲೋಕಲ್‌ಫಂಡ್ ಕಾನೂನಿನನ್ವಯ ಲೋಕಲ್ ಬೋರ್ಡುಗಳು ಪ್ರಾರಂಭವಾದವು. ೧೮೮೪ರ ಶಾಸನದನ್ವಯ ಪಂಚಾಯಿತಿ ಬೋರ್ಡ್‌ಗಳನ್ನು ಗ್ರಾಮಕ್ಕೆ ಒಂದರಂತೆ ಅಥವಾ ಹಲವಾರು ಗ್ರಾಮಗಳ ಸಮುದಾಯಕ್ಕೆ ಒಂದರಂತೆ ಪ್ರಾರಂಭಿಸಲಾಯಿತು. ಸ್ಥಳೀಯ ಸುಂಕವನ್ನು ಜಾರಿಗೆ ತರುವುದರ ಮೂಲಕ ೧೮೮೭-೮೮ರಲ್ಲಿ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಆರಂಭವಾದವು. ಕೊಡಗು ಪ್ರದೇಶದಲ್ಲಿ ೧೮೭೦ರಲ್ಲಿ ಪುರಸಭೆಗಳನ್ನು ಸ್ಥಾಪಿಸಲಾಯಿತು.

### ೧೯೫೬ರ ನಂತರದ ಬದಲಾವಣೆಗಳು

ಇತ್ತೀಚಿನ ವರ್ಷಗಳಲ್ಲಿ ನಗರಗಳಿಗೆ ಜನರ ವಲಸೆ ಅಧಿಕವಾಗಿದೆ. ೧೯೯೧ರ ಅಂಕಿ ಅಂಶದ ಪ್ರಕಾರ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ನಗರ ಜನಸಂಖ್ಯೆ ಶೇಕಡಾ ೩೦.೦೧ ಇದ್ದಿತು. ೧೯೮೧ರಲ್ಲಿ ನಗರ ಜನಸಂಖ್ಯೆ ಪ್ರಮಾಣ ಶೇಕಡಾ ೨೮.೮೯ ಇದ್ದಿತು. ಇದು ದೇಶದ ನಗರ ಜನಸಂಖ್ಯಾ ಪ್ರಮಾಣವಾದ ಶೇಕಡಾ ೨೫.೭೨ಕ್ಕಿಂತ ಹೆಚ್ಚಾಗಿ ಇದ್ದಿತು. ರಾಜ್ಯದಲ್ಲಿ ತ್ವರಿತಗತಿಯಲ್ಲಿ ಪಟ್ಟಣಗಳು ಮತ್ತು ನಗರಗಳು ಬೆಳೆದಿವೆ, ಅಂದರೆ ೧೯೭೧ರಲ್ಲಿ ೨೪೫ ಸಂಖ್ಯೆಯಲ್ಲಿ ಇದ್ದ ನಗರಗಳು ೧೯೯೧ರಲ್ಲಿ ೩೦೬ಕ್ಕೆ ಏರಿದ್ದವು. ಹೀಗೆಯೇ ನಗರಗಳು ಮತ್ತು ನಗರ ಸಮುಚ್ಚಯಗಳು

೧೯೭೧ರಲ್ಲಿ ೧೨ ಇದ್ದರೆ ೧೯೯೧ರಲ್ಲಿ ೨೨ ಆದವು. ೧೯೬೪ರ ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮದನ್ವಯ ಪೌರಾಡಳಿತದಲ್ಲಿ ಅನೇಕ ಪ್ರಮುಖ ಬದಲಾವಣೆಗಳನ್ನು ತರಲಾಗಿದೆ. ಈ ಬದಲಾವಣೆಗಳು ವ್ಯಾಪಕವಾಗಿದ್ದು, ಇಡೀ ರಾಜ್ಯಕ್ಕೆ ಅನ್ವಯವಾಗುತ್ತವೆ. ಇವುಗಳ ಕಾರಣದಿಂದಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಮಹಿಳೆಯರಿಗೆ ಹೆಚ್ಚಿನ ಸ್ಥಾನಗಳನ್ನು ಕಾಯ್ದಿರಿಸಲಾಗಿದೆ. ಪುರಸಭೆಗಳಿಗೆ ರಾಜ್ಯ ಸರ್ಕಾರವು ಕುಡಿಯುವ ನೀರಿನ ವ್ಯವಸ್ಥೆ, ನೈರ್ಮಲ್ಯ ಮೊದಲಾದ ಕಾರ್ಯಗಳಿಗೆ ಧಾರಾಳವಾಗಿ ಅಭಿವೃದ್ಧಿ ಅನುದಾನ ನೀಡುತ್ತದೆ. ಪ್ರತೀ ಪುರಸಭೆಯು ತನ್ನ ವೆಚ್ಚದ ಅಂದಾಜು ಪಟ್ಟಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ದುರ್ಬಲ ವರ್ಗಗಳ ಅಭಿವೃದ್ಧಿ ಕಾರ್ಯಗಳಿಗೆ ಶೇ.೧೮ರಷ್ಟು ಹಣವನ್ನು ಮೀಸಲಿಡಬೇಕಾಗಿದೆ. ರಾಜ್ಯದಲ್ಲಿ ಐದು ಬಗೆಯ ನಗರ ಸ್ಥಳೀಯ ಸಂಸ್ಥೆಗಳಿದ್ದವು. ಅವು ಯಾವುವೆಂದರೆ: ೧) ಮಹಾನಗರ ಪಾಲಿಕೆ (ಮುನಿಸಿಪಲ್ ಕಾರ್ಪೋರೇಷನ್) ೨)ನಗರ ಸಭೆ ೩)ಪುರಸಭೆ ೪)ಅನುಸೂಚಿತ ಪ್ರದೇಶದ ಸಮಿತಿಗಳು ೫)ನೈರ್ಮಲ್ಯ ಮಂಡಳಿಗಳು.

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಅಧಿನಿಯಮ ೧೯೭೬ರ ಅನ್ವಯ ಮಹಾನಗರ ಪಾಲಿಕೆಗಳು ಕಾರ್ಯನಿರ್ವಹಿಸುತ್ತಿವೆ. ರಾಜ್ಯದಲ್ಲಿ ೨೦೧೦ರಲ್ಲಿ ಎಂಟು ಮಹಾನಗರ ಪಾಲಿಕೆಗಳಿದ್ದವು. ಅವೆಂದರೆ: ಬೆಂಗಳೂರು(೧೯೪೯): ಹುಬ್ಬಳ್ಳಿ-ಧಾರವಾಡ(೧೯೬೨): ಮೈಸೂರು (೧೯೭೭):ಬೆಳಗಾವಿ (೧೯೭೭): ಮಂಗಳೂರು (೧೯೮೦): ಕಲಬುರಗಿ (೧೯೮೧): ದಾವಣಗೆರೆ ಹಾಗೂ ಬಳ್ಳಾರಿ. ೧೯೯೨ ರಲ್ಲಿ ಶಿವಮೊಗ್ಗ-ಭದ್ರಾವತಿ ಕಾರ್ಪೋರೇಷನ್ ಅಸ್ತಿತ್ವಕ್ಕೆ ಬಂದಿತು. ಆನಂತರ ಅದನ್ನು ರದ್ದು ಪಡಿಸಲಾಯಿತು. ೨೦೧೬ರ ಮಾರ್ಚ್ ಅಂತ್ಯಕ್ಕೆ ೧೦ ಮಹಾನಗರ ಪಾಲಿಕೆಗಳು, ೫೭ ನಗರಸಭೆಗೂ, ೧೧೨ ಪುರಸಭೆಗಳು, ೯೧ ಪಟ್ಟಣ ಪಂಚಾಯಿತಿಗಳು, ೫ ಅನುಸೂಚಿತ ಪ್ರದೇಶಗಳು ರಾಜ್ಯದಲ್ಲಿದ್ದವು.

ರಾಜ್ಯದಲ್ಲಿನ ನಗರಸಭೆ ಮತ್ತು ಪುರಸಭೆಗಳ ಕಾರ್ಯ ಸಮನ್ವಯಕ್ಕಾಗಿ ೧೯೮೪-೮೫ರಲ್ಲಿ ಒಂದು ಪ್ರತ್ಯೇಕ ಪೌರ ಆಡಳಿತ ನಿರ್ದೇಶನಾಲಯವನ್ನು ಸ್ಥಾಪಿಸಲಾಯಿತು. ರಾಜ್ಯದಲ್ಲಿ ೧೯೯೩ರಲ್ಲಿದ್ದ ಒಟ್ಟು ಪೌರ ಕಾರ್ಮಿಕರ ಸಂಖ್ಯೆ ೧೯,೦೦೦. ರಾಜ್ಯದ ಅತ್ಯುತ್ತಮ ನಗರಸಭೆ/ಪುರಸಭೆಗಳಿಗೆ ೧೯೮೪ರಿಂದ ನಗದು ಬಹುಮಾನ ಯೋಜನೆಯನ್ನು ಸರ್ಕಾರ ಜಾರಿಗೆ ತಂದಿದೆ. ನಗರ ಅಥವಾ ಪಟ್ಟಣ ಅಭಿವೃದ್ಧಿ ಪ್ರಾಧಿಕಾರಗಳು ರಚಿಸಲ್ಪಟ್ಟು, ಅದರಿಂದ ರಾಜ್ಯದ ಜಿಲ್ಲಾ ಕೇಂದ್ರ/ಪಟ್ಟಣಗಳ ಸರ್ವತೋಮುಖ ಬೆಳವಣಿಗೆಗೆ ವಿಶೇಷ ಅಭಿವೃದ್ಧಿ ಯೋಜನೆಗಳನ್ನು ರೂಪಿಸಲಾಗಿದೆ. ಆದ್ದರಿಂದ ನಗರಯೋಜನೆ, ನೀರು ಸರಬರಾಜು, ಗೃಹನಿರ್ಮಾಣ, ಒಳಚರಂಡಿ ಹಾಗೂ ಕೊಳಚೆ ನಿರ್ಮೂಲನೆ ಮೊದಲಾದ ಚಟುವಟಿಕೆಗಳನ್ನು ಸಮನ್ವಯಗೊಳಿಸಲು ಸಾಧ್ಯವಾಗಿದೆ. ೧೯೭೯ರಲ್ಲಿ ಜಕಾತಿ (ಆಕ್ಟ್ರಾಯ್) ರದ್ದುಪಡಿಸಿದ ೧೬ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಆಕ್ಟ್ರಾಯ್ ಸುಂಕ, ಪೌರ ಸಮಿತಿಯ ಆದಾಯದ ಪ್ರಧಾನ ಮೂಲವಾಗಿತ್ತು. ಆ ಕಾರಣ ಸರ್ಕಾರ ಆಕ್ಟ್ರಾಯ್ ಸುಂಕ ಅನುದಾನವನ್ನು ನೀಡುತ್ತಿದೆ. ಭಂಗಿಗಳು (ಜಾಡಮಾಲಿಗಳ) ತಲೆ ಮೇಲೆ ಮಲ ಹೊರುವ ಅನೈರ್ಮಲ್ಯ ಕಾರ್ಯಗಳನ್ನು ಶಾಸನದ ಮೂಲಕ ನಿಷೇಧಿಸಿದ ರಾಜ್ಯಗಳಲ್ಲಿ ಕರ್ನಾಟಕವು ದೇಶದಲ್ಲೇ ಮೊದಲನೆಯದು. ೧೯೭೩ರ ಹೊತ್ತಿಗೇ ಮಲಹೊರುವ ಕಾರ್ಯ ನಿಷೇಧಿಸಲ್ಪಟ್ಟಿದ್ದು ಜಾಡಮಾಲಿಗಳನ್ನು ಪೌರಕಾರ್ಮಿಕರೆಂದು ಮರು ನಾಮಕರಣ ಮಾಡಲಾಗಿದೆ.

## ಪಂಚಾಯತಿರಾಜ್ ವ್ಯವಸ್ಥೆ

ಪಂಚಾಯತಿರಾಜ್ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತಂದು ಅದರ ಪರಿಕಲ್ಪನೆ, ರಚನೆ, ಸಂವಿಧಾನ, ಹಾಗೂ ಕಾರ್ಯವಿಧಾನಗಳಲ್ಲಿ ಕಳೆದ ನಾಲ್ಕು ದಶಕಗಳಿಂದ (೧೯೫೨-೧೯೯೩) ಅನುಷ್ಠಾನಗೊಳಿಸಲಾಗಿದೆ. ಕರ್ನಾಟಕದಲ್ಲಿ ಒಂದು ಪ್ರಗತಿಶೀಲ ಕಾಯ್ದೆಯ ಮೂಲಕ 'ಗ್ರಾಮ ಸ್ವರಾಜ್ಯ' ಮತ್ತು 'ಸ್ವರಾಜ್ಯ'ಗಳ ವಿಕೇಂದ್ರೀಕರಣದ ಪರಿಕಲ್ಪನೆಯನ್ನು ಆಡಳಿತಾರೂಢ ಸರ್ಕಾರಗಳು ಕಾಲಕ್ರಮೇಣ ಹಂತ ಹಂತವಾಗಿ ಪ್ರಾಮಾಣಿಕ ಪ್ರಯತ್ನ ಮಾಡಿ, ವಾಸ್ತವವಾಗಿ ಜಾರಿಗೆ ತರುವ ಮೂಲಕ ಯಶಸ್ವಿಗೊಳಿಸಿವೆ.

ರಾಜ್ಯ ಪುನರ್ ಸಂಘಟನೆಗೊಂಡ ನಂತರ ೧೯೬೦ರಲ್ಲಿ ಒಂದು ಒಗ್ಗೂಡಿದ ಸಮಗ್ರವಾದ ಪಂಚಾಯತ್‌ರಾಜ್ ಕಾಯ್ದೆಯು ೧೯೫೯ರ ಕರ್ನಾಟಕ ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯತಿ ಕಾಯ್ದೆಯ ಮೂಲಕ ೧೯೬೦ರಿಂದ ಜಾರಿಗೊಳಿಸಲಾಯಿತು. ಈ ಕಾಯ್ದೆಯಡಿ ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯತಿಗಳು, ತಾಲೂಕು ಮಟ್ಟದಲ್ಲಿ ತಾಲೂಕು ಅಭಿವೃದ್ಧಿ ಮಂಡಳಿಗಳು ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಅಭಿವೃದ್ಧಿ ಪರಿಷತ್‌ಗಳನ್ನು ರಚಿಸಲಾಯಿತು. ಮೂರು ಹಂತದ ಈ ಆಡಳಿತ ವ್ಯವಸ್ಥೆಯಲ್ಲಿ ಕೇವಲ ಗ್ರಾಮ ಪಂಚಾಯತಿಗಳು ಮತ್ತು ತಾಲೂಕು ಅಭಿವೃದ್ಧಿ ಮಂಡಳಿಗಳಲ್ಲಿ ಮಾತ್ರ ಚುನಾಯಿತ ಪ್ರತಿನಿಧಿಗಳು ಇರುತ್ತಿದ್ದು, ಜಿಲ್ಲಾಭಿವೃದ್ಧಿ ಪರಿಷತ್‌ನಲ್ಲಿ ಕೇವಲ ಸಲಹಾ ಮಂಡಳಿಗಳಲ್ಲಿ ಸರ್ಕಾರಿ ಅಧಿಕಾರಿಗಳು ಮತ್ತು ಅಭಿವೃದ್ಧಿ ಕೆಲಸಗಳ ಯೋಜನೆಯ ಸರ್ಕಾರೇತರ ಸದಸ್ಯರುಗಳನ್ನು ಒಳಗೊಂಡಂತಹ ಒಂದು ತಂಡ ಇರುತ್ತದೆ. ಈ ಮೇಲೆ ತಿಳಿಸಿದ ವ್ಯವಸ್ಥೆಯಲ್ಲಿ ಗ್ರಾಮೀಣ ಅಭಿವೃದ್ಧಿ ಯೋಜನೆ ಮತ್ತು ಕೆಲಸ ಕಾರ್ಯಗಳು ತಾಲೂಕು ಅಭಿವೃದ್ಧಿ ಮಂಡಳಿಗಳ ನಿಯಂತ್ರಣದ ಅಡಿಯಲ್ಲಿ ಅನುಷ್ಠಾನಗೊಳಿಸುವಂತೆ ನಿರ್ದೇಶಿಸಲಾಗುತ್ತದೆ. ತಾಲೂಕು ಅಭಿವೃದ್ಧಿ ಮಂಡಳಿಗಳ ನಿಯಂತ್ರಣದಲ್ಲಿ ಗ್ರಾಮೀಣ ಪಂಚಾಯತಿಗಳು ಕಾರ್ಯನಿರ್ವಹಿಸುತ್ತವೆ. ೧೯೮೩ರ ವರೆಗೂ ಈ ರೀತಿಯ ಪಂಚಾಯತ್ ರಾಜ್ ಸಂಸ್ಥೆಗಳು ಮುಂದುವರೆದವು. ಆಡಳಿತದಲ್ಲಿ ವಿಕೇಂದ್ರಿಕರಣವನ್ನು ಜಾರಿಗೊಳಿಸಲು ಹಾಗೂ ಮಂಡಲ ಹಂತದಲ್ಲಿ ಹೆಚ್ಚಿನ ಸಾರ್ವಜನಿಕ ಸಹಭಾಗಿತ್ವದ ಅಭಿವೃದ್ಧಿ ಕಾರ್ಯಗಳ ಪ್ರಕ್ರಿಯೆಯನ್ನು ಸಾಧಿಸಲು, ಈ ಮೊದಲಿದ್ದ ೧೯೫೯ರ ಕಾಯ್ದೆಯನ್ನು ಬದಲಾಯಿಸಲಾಯಿತು. ೧೯೫೯ರ ಕಾಯ್ದೆಯ ಸ್ಥಾನದಲ್ಲಿ ಕರ್ನಾಟಕ ಜಿಲ್ಲಾ ಪರಿಷತ್ತು, ತಾಲೂಕು ಪಂಚಾಯತಿ ಸಮಿತಿ, ಮಂಡಲ ಪಂಚಾಯತಿ ಮತ್ತು ನ್ಯಾಯ ಪಂಚಾಯತಿಗಳ ಕಾಯ್ದೆಯನ್ನು ೧೯೮೩ರಲ್ಲಿಯೇ ರಚಿಸಲಾಯಿತು. ಈ ಕಾಯ್ದೆಯನ್ನು ೧೯೮೫ರಿಂದ ಅನುಷ್ಠಾನಗೊಳಿಸ ಲಾಯಿತು. ಆದರೆ ಇದರಲ್ಲಿ ನ್ಯಾಯ ಪಂಚಾಯತಿಯು ಸೇರ್ಪಡೆಯಾಗಿದ್ದರೂ ಜಾರಿಗೆ ಬರಲಿಲ್ಲ.

ರಾಜ್ಯದಲ್ಲಿ ೧೯೮೭ರಿಂದ ನೂತನ ಪಂಚಾಯತ್ ರಾಜ್ ಸಂಸ್ಥೆಗಳು ಜಾರಿಗೆ ಬಂದವು ಮತ್ತು ಈ ಸಂಸ್ಥೆಗಳಿಗೆ ಮೊಟ್ಟಮೊದಲ ಬಾರಿಗೆ ಚುನಾವಣೆಗಳು ಜರುಗಿದವು. ೧೮ವರ್ಷ ಪೂರೈಸಿದ ಎಲ್ಲರಿಗೂ ಮತ ಚಲಾಯಿಸುವ ಹಕ್ಕನ್ನು ವಿಸ್ತರಿಸಲಾಯಿತು. ಹೊಸ ಕಾಯ್ದೆಯನ್ವಯ ಮೂರು ಹಂತದ ಸಂಸ್ಥೆಗಳೂ ಅಭಿವೃದ್ಧಿ ಪ್ರೇರಿತವಾಗಿ ಆಂತರಿಕ ಸಂಬಂಧ ಹೊಂದಿರುವ ಸಂಸ್ಥೆಗಳಾಗಿದ್ದವು. ಗ್ರಾಮಮಟ್ಟದಲ್ಲಿ ಮಂಡಲ ಪಂಚಾಯತಿ, ತಾಲೂಕು ಮಟ್ಟದಲ್ಲಿ ತಾಲೂಕು ಪಂಚಾಯತಿ ಸಮಿತಿಗಳು ಮತ್ತು ಜಿಲ್ಲಾಮಟ್ಟದಲ್ಲಿ ಜಿಲ್ಲಾ ಪರಿಷತ್‌ಗಳು ಅಸ್ತಿತ್ವಕ್ಕೆ ಬಂದವು. ಈ ಹೊಸ ಪದ್ಧತಿಯಲ್ಲಿ ಕೇವಲ ಮಂಡಲ ಪಂಚಾಯತಿ ಹಾಗೂ ಜಿಲ್ಲಾ ಪರಿಷತ್‌ಗಳು ಮಾತ್ರ ಚುನಾಯಿತ ಪ್ರತಿನಿಧಿಗಳನ್ನೊಳಗೊಂಡ ಸಂಸ್ಥೆಗಳಾಗಿದ್ದವು. ತಾಲೂಕು ಪಂಚಾಯತಿ ಸಮಿತಿಗಳು ಜಿಲ್ಲಾ ಪರಿಷತ್‌ಗಳ ಅಡಿಯಲ್ಲಿ ಮಂಡಲ ಮತ್ತು ಜಿಲ್ಲಾ ಪರಿಷತ್‌ಗಳ ನಡುವೆ ಮೇಲ್ವಿಚಾರಣೆ ಹಾಗೂ ಸಂಯೋಜನೆಗಳಿಗಾಗಿ ಇರುವ ಸಂಸ್ಥೆಯಂತೆ ಕಾರ್ಯ ನಿರ್ವಹಿಸಬೇಕಾಯಿತು. ಹೊಸ ವ್ಯವಸ್ಥೆಯಲ್ಲಿ ಜಿಲ್ಲಾ ಪರಿಷತ್‌ಗಳಿಗೆ ಹೆಚ್ಚಿನ ಅಧಿಕಾರ ಮತ್ತು ಜವಾಬ್ದಾರಿಗಳನ್ನು ವಹಿಸಲಾಯಿತು. ಇವು ಬಹುಪಾಲು ಜಿಲ್ಲೆಗಳಲ್ಲಿ ಸರ್ಕಾರವಾಗಿ ಕಾರ್ಯನಿರ್ವಹಿಸತೊಡಗಿದವು. ರಾಜ್ಯದ ಹೆಚ್ಚಿನ ರೀತಿಯ ಅಭಿವೃದ್ಧಿ ಕಾರ್ಯ ಚಟುವಟಿಕೆಗಳು ಜಿಲ್ಲಾಪರಿಷತ್ ಮತ್ತು ಮಂಡಲಗಳಿಂದ ಕಾರ್ಯರೂಪಕ್ಕೆ ಬರತೊಡಗಿದವು. ಶೇ.೮೦ ರಷ್ಟು ಅಭಿವೃದ್ಧಿ ಖರ್ಚುಗಳು ಜಿಲ್ಲಾ ಪರಿಷತ್ ಅಡಿಯಲ್ಲಿ ನೆರವೇರತೊಡಗಿತು. ದೊಡ್ಡ ಮತ್ತು ಮಧ್ಯಮ ಪ್ರಮಾಣದ ನೀರಾವರಿ ಕಾಮಗಾರಿಗಳನ್ನು ಹೊರತುಪಡಿಸಿ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಜಿಲ್ಲಾ ಪರಿಷತ್‌ಗಳಿಗೆ ವಹಿಸಲಾಯಿತು. ಮಂಡಲಗಳಿಗೆ ಪ್ರತ್ಯೇಕವಾದ ಅಧಿಕಾರದೊಂದಿಗೆ ನಿರ್ದಿಷ್ಟಪಡಿಸಿದ (೨೭) ಅಭಿವೃದ್ಧಿ ಕಾಮಗಾರಿಗಳನ್ನು ಸ್ಥಳೀಯ ಅವಶ್ಯಕತೆಗೆ ಅನುಗುಣವಾಗಿ ವಹಿಸಲಾಯಿತು. ಜಿಲ್ಲಾ ಪರಿಷತ್ ಮತ್ತು ಮಂಡಲಗಳ ವಿಕೇಂದ್ರೀಕೃತ ಆಡಳಿತದ ಪರಿಣಾಮವು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಕಾಣಲಾರಂಬಿಸಿದವು. ಅವುಗಳಲ್ಲಿ ವಿಶೇಷವಾಗಿ ಮತ್ತು ನಿರ್ದಿಷ್ಟವಾಗಿ ಅಂದರೆ ಪ್ರಾಥಮಿಕ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಹಾಜರಾತಿಯಲ್ಲಿ ಸುಧಾರಿತ ಫಲಿತಾಂಶ, ಗ್ರಾಮೀಣ ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿಗಳ ಲಭ್ಯತೆ ಮತ್ತು ಇತರೆ ಇಲಾಖೆಗಳ ಕ್ಷೇತ್ರಾಡಳಿತ ಸಿಬ್ಬಂದಿಗಳ ಸೇವೆ ಇತ್ಯಾದಿಗಳಲ್ಲಿ ಗಮನಾರ್ಹವಾದ ಸುಧಾರಿತ ಬದಲಾವಣೆಗಳಾದವು. ಜಿಲ್ಲಾ ಪರಿಷತ್ ಮತ್ತು ಮಂಡಲಪಂಚಾಯತಿಗಳ ಕಾರ್ಯನಿರ್ವಹಣ ಮೌಲ್ಯ ಮಾಪನಾ ಸಮಿತಿಗಳು ಈ ಸುಧಾರಿತ ಫಲಿತಾಂಶಗಳ ಕುರಿತು ಮಾಹಿತಿ ನೀಡಿವೆ.

ಹಿಂದಿನ ಗ್ರಾಮ ಪಂಚಾಯತಿಗಳಿಗೆ ಹೋಲಿಸಿದರೆ ಗ್ರಾಮಮಂಡಲಗಳ ಕಾರ್ಯನಿರ್ವಹಣೆಯು ಸಾಕಷ್ಟು ಬೃಹದಾಕಾರವಾಗಿದೆ. ಸಾಮಾನ್ಯವಾಗಿ ಒಂದು ಮಂಡಲ ಎಂದರೆ ಹಲವಾರು ಗ್ರಾಮಗಳ ಗುಂಪಾಗಿದ್ದು, ೮,೦೦೦ ರಿಂದ ೧೨,೦೦೦ ಜನಸಂಖ್ಯೆಯುಳ್ಳ ಸಂಯುಕ್ತ ಗ್ರಾಮಗಳ ಒಕ್ಕೂಟವಾಗಿದೆ. ೧೯೯೨ರಲ್ಲಿ ರದ್ದಾಗುವ ಮೊದಲು ರಾಜ್ಯದಲ್ಲಿ ಸುಮಾರು ೨,೫೦೦ ಮಂಡಲಗಳು ಅಸ್ತಿತ್ವದಲ್ಲಿದ್ದವು. ಇದರಲ್ಲಿನ ಚುನಾಯಿತ ಪ್ರತಿನಿಧಿಗಳ ಅಧಿಕಾರಾವಧಿಯು ಐದು ವರ್ಷಗಳಾಗಿತ್ತು. ಮಂಡಲ ಪಂಚಾಯತಿಗೆ ಹಿಂದುಳಿದ ಸಮುದಾಯದವರನ್ನು ನಾಮ ನಿರ್ದೇಶನ ಮಾಡುವ ಅವಕಾಶವನ್ನು ಈ ವ್ಯವಸ್ಥೆಯಲ್ಲಿ ಕಲ್ಪಿಸಲಾಗಿತ್ತು. ಇದರ ಜೊತೆಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಸಮುದಾಯದವರಿಗಾಗಿ ಶೇ. ೧೮ರಷ್ಟು ಸ್ಥಾನಗಳ ಮೀಸಲಾತಿ ಜೊತೆಗೆ ಮಹಿಳೆಯರಿಗೂ ಶೇ.೨೫ ಸ್ಥಾನಗಳನ್ನು ಮೀಸಲಿಡಲಾಗಿತ್ತು. ೧೯೯೨ರ ವರೆಗೂ ಅಂದರೆ ಐದು ವರ್ಷಗಳವರೆಗೂ ಸ್ಥಳೀಯ ಆಡಳಿತದ ಈ ಪದ್ಧತಿಯು ಮುಂದುವರೆಯಿತು. ಜಿಲ್ಲಾ ಪರಿಷತ್‌ಗಳಲ್ಲಿ ಒಟ್ಟು ಚುನಾಯಿತ ಸದಸ್ಯರು ೮೮೭, ಮತ್ತು ಅವುಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಸಮುದಾಯದವರು ೧೭೫, ಹಾಗೂ ೨೧೧ ಮಹಿಳಾ ಸದಸ್ಯರು ಇದ್ದರು. ೨,೪೬೯ ಮಂಡಲ ಪಂಚಾಯತಿಗಳಲ್ಲಿ ಒಟ್ಟು ಚುನಾಯಿತ ಪ್ರತಿನಿಧಿಗಳ ಸಂಖ್ಯೆ ೫೫,೧೮೮ ಆಗಿದ್ದು, ಅವರಲ್ಲಿ ೧೧,೯೬೮ ಸದಸ್ಯರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು ಹಾಗೂ ೧೪,೦೨೫ ಸದಸ್ಯರು ಎಲ್ಲಾ ವರ್ಗಕ್ಕೆ ಸೇರಿದ ಮಹಿಳೆಯರಿದ್ದರು.

## ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆ

ರಾಜ್ಯದಲ್ಲಿ ಗ್ರಾಮೀಣ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಿ, ಅವುಗಳ ಕಾರ್ಯವಿಧಾನವನ್ನು ಸೂಕ್ತ ಹಂತದಲ್ಲಿ ವಿಕೇಂದ್ರೀಕರಣದ ಮೂಲಕ ಉತ್ತಮಗೊಳಿಸುವ ಉದ್ದೇಶದಿಂದ ಹೊಸದಾಗಿ ಪಂಚಾಯತ್‌ರಾಜ್ ಕಾನೂನನ್ನು ೧೯೯೩ ಮೇ ೧೦ ರಂದು ಸರ್ಕಾರವು ಜಾರಿಗೆ ತಂದಿತು.

ಇವುಗಳನ್ನು ಮೊದಲು ಕಾರ್ಯನಿರ್ವಹಿಸುತ್ತಿದ್ದ ಮಂಡಲ ಪಂಚಾಯತ್, ತಾಲೂಕು ಪಂಚಾಯಿತಿ ಸಮಿತಿ ಮತ್ತು ಜಿಲ್ಲಾ ಪರಿಷತ್ತುಗಳಿಗೆ ಬದಲಾಗಿ ರಚಿಸಲಾಗಿದೆ. ರಾಜ್ಯಾಂಗದ ೭೩ನೇ ತಿದ್ದುಪಡಿಯ ನಂತರ ಕಾರ್ಯರೂಪದಲ್ಲಿ ಬಂದಿರುವ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ರಾಷ್ಟ್ರದಲ್ಲಿ ಅರ್ಥಪೂರ್ಣವಾಗಿ ಅನುಷ್ಠಾನಗೊಳಿಸಿದ ಕೀರ್ತಿ ಕರ್ನಾಟಕಕ್ಕೆ ಸಲ್ಲುತ್ತದೆ. ದೇಶದಲ್ಲಿಯೇ ಪ್ರಥಮ ಪಂಚಾಯತ್ ರಾಜ್ ಕಾಯ್ದೆ ಇದಾಗಿದ್ದು ಆಡಳಿತದಲ್ಲಿ ವಿಕೇಂದ್ರೀಕರಣ, ದಕ್ಷತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಿಂದುಳಿದ ವರ್ಗಗಳಿಗೆ, ಶೇ.೨೩ ಹಾಗೂ ಮಹಿಳೆಯರಿಗೆ ಶೇ.೩೩ ಮೀಸಲಾತಿ ಸೌಲಭ್ಯ ಹಾಗೂ ಮೂರು ಹಂತಗಳಲ್ಲಿ ಚುನಾಯಿತ ಮಂಡಳಿಗಳ ರಚನೆ ಇದರ ವೈಶಿಷ್ಟ್ಯವಾಗಿದೆ. ಅಲ್ಲದೆ, ಅಧ್ಯಕ್ಷ ಸ್ಥಾನವನ್ನು ಸರದಿ ಮೂಲಕ ಮೀಸಲಾತಿಗೆ ಒಳಪಡಿಸಲಾಯಿತು.

ಹೊಸ ಕಾಯ್ದೆಯು ೧೦ನೇ ಮೇ ೧೯೯೩ರಿಂದ ಜಾರಿಗೆ ಬಂದಿದೆ. ರಾಜ್ಯದಲ್ಲಿ ಇದೊಂದು ಸಮಗ್ರವಾದ ಮೂರು ಹಂತದ ಪಂಚಾಯತಿ ರಾಜ್ ಪದ್ಧತಿಯನ್ನು ಸ್ಥಾಪನೆಗೊಳಿಸುವ ಉದ್ದೇಶವನ್ನು ಹೊಂದಿದ್ದು, ಗ್ರಾಮಗಳಲ್ಲಿ ತಾಲೂಕುಗಳಲ್ಲಿ ಮತ್ತು ಜಿಲ್ಲಾಮಟ್ಟಗಳಲ್ಲಿ ಚುನಾಯಿತ ಸಂಸ್ಥೆಗಳನ್ನು ಒಳಗೊಂಡಿರುತ್ತದೆ. ಪಂಚಾಯತಿಗಳಿಗೆ ಸಂಬಂಧಿಸಿದಂತೆ ಸಂವಿಧಾನದ ೭೩ನೇ ತಿದ್ದುಪಡಿಯ ಹಿನ್ನೆಲೆಯಲ್ಲಿ ಹೊಸ ಕಾಯ್ದೆ ರೂಪದ ಈ ಪದ್ಧತಿಯು ಜಾರಿಗೆ ಬಂದಿದೆ. ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಹೆಚ್ಚು ಸಂಖ್ಯೆಯ ಜನರು ಪಾಲ್ಗೊಳ್ಳುವಂತೆ ಮಾಡುವಲ್ಲಿ ಈ

ಕಾಯ್ದೆಯು ಸಹಕಾರಿಯಾಗಿದೆ. ಪಂಚಾಯತ್ ಕಾಯ್ದೆಯ ಅಡಿಯಲ್ಲಿ ಗ್ರಾಮ ಪಂಚಾಯತ್ ಗ್ರಾಮೀಣ ಭಾಗದಲ್ಲಿ, ಹಾಗೂ ತಾಲೂಕು ಪಂಚಾಯತ್ ತಾಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಪರಿಷತ್ ಜಿಲ್ಲಾಮಟ್ಟದಲ್ಲಿ ಕಾರ್ಯನಿರ್ವಹಿಸುತ್ತವೆ. ಎಲ್ಲಾ ಮೂರು ಸಂಸ್ಥೆಗಳು ಚುನಾಯಿತ ಪ್ರತಿನಿಧಿಗಳನ್ನು ಹೊಂದಿದ್ದು, ಯಾವುದೇ ಸಂಸ್ಥೆಗಳಿಗೆ ನಾಮ ನಿರ್ದೇಶನ ಮಾಡುವ ಯಾವುದೇ ಅವಕಾಶಗಳು ಸರ್ಕಾರಕ್ಕೆ ಇರುವುದಿಲ್ಲ. ಸಂವಿಧಾನದ ಅವಕಾಶಗಳನ್ನು ಅನುಷ್ಠಾನಗೊಳಿಸಿದ ದೇಶದ ಮೊಟ್ಟ ಮೊದಲ ರಾಜ್ಯ ಕರ್ನಾಟಕವಾಗಿದೆ. ಪ್ರಸಕ್ತ ಕಾಯ್ದೆಯ ಅನ್ವಯದಂತೆ ೧೯೯೩ರ ಡಿಸೆಂಬರ್‌ನಲ್ಲಿ ೫೬೪೫ ಗ್ರಾಮ ಪಂಚಾಯತ್‌ಗಳಿಗೆ ೨೩,೪೫೪ ಮಹಿಳೆಯರನ್ನು ಒಳಗೊಂಡಂತೆ ಒಟ್ಟು ೭೯,೮೬೫ ಸ್ಥಾನಗಳಿಗೆ ಮೊಟ್ಟಮೊದಲ ಬಾರಿಗೆ ಚುನಾವಣೆ ನಡೆಸಲಾಯಿತು. ಆದರೆ ತಾಲೂಕು ಪಂಚಾಯತ್‌ಗಳು ಮತ್ತು ಜಿಲ್ಲಾ ಪರಿಷತ್‌ಗಳಿಗೆ ೧೯೯೫ರ ಮಾರ್ಚ್‌ನಲ್ಲಿ ಚುನಾವಣೆ ನಡೆಸಲಾಯಿತು. ಜಿಲ್ಲಾ ಪರಿಷತ್‌ಗಳಿಗೆ ೯೧೯ ಮತ್ತು ತಾಲೂಕು ಪಂಚಾಯತ್‌ಗಳಿಗೆ ೩,೩೪೦ ಸಂಖ್ಯೆಯಷ್ಟು ಸದಸ್ಯರು ಚುನಾಯಿತರಾದರು. ಸುಮಾರು ಎರಡು ಕೋಟಿಯಷ್ಟು ಮತದಾರರು ಈ ಚುನಾವಣೆಯಲ್ಲಿ ತಮ್ಮ ಮತವನ್ನು ಚಲಾಯಿಸಿದರು. ರಾಜ್ಯದಲ್ಲಿ ೧೯೯೯-೨೦೦೦ರಲ್ಲಿ ನಡೆದ ಚುನಾವಣೆಯಲ್ಲಿ ೫,೬೯೨ ಗ್ರಾಮ ಪಂಚಾಯತಿಗಳಿಗೆ ಒಟ್ಟು ೭೩,೫೪೭(೩೦,೧೫೫) ಸದಸ್ಯರನ್ನು, ತಾಲೂಕು ಪಂಚಾಯತಿಗಳಿಗೆ ೩,೩೪೦(೧,೩೪೫) ಸದಸ್ಯರನ್ನು ಮತ್ತು ಜಿಲ್ಲಾ ಪರಿಷತ್‌ಗಳಿಗೆ ಒಟ್ಟು ೯೧೯(೩೩೫) ಸದಸ್ಯರುಗಳನ್ನು ಚುನಾಯಿಸಿದರು. (ಆವರಣದಲ್ಲಿರುವುದು ಮಹಿಳಾ ಸದಸ್ಯರ ಸಂಖ್ಯೆಯನ್ನು ಸೂಚಿಸುತ್ತದೆ).

ನೂತನ ಕಾಯ್ದೆಯಲ್ಲಿ ಜಿಲ್ಲಾ ಯೋಜನಾ ಸಮಿತಿ, ಹಣಕಾಸು ಆಯೋಗ ಮತ್ತು ಶಾಶ್ವತ ಚುನಾವಣಾ ಆಯೋಗಗಳ ರಚನೆಗೆ ಅವಕಾಶ ಕಲ್ಪಿಸಲಾಗಿದೆ. ಈ ಚುನಾವಣೆಗಳಲ್ಲಿ ತಾಲೂಕು ಪಂಚಾಯತ್‌ಗಳಲ್ಲಿ ಶೇ.೪೦ರಷ್ಟು ಮತ್ತು ಜಿಲ್ಲಾ ಪರಿಷತ್‌ಗಳಲ್ಲಿ ಶೇ.೩೬ರಷ್ಟು ಮಹಿಳಾ ಸದಸ್ಯರು ಪ್ರಾತಿನಿಧ್ಯಗಳಿಸುವ ಅವಕಾಶವಿದೆ. ಹಾಗೆಯೇ ಪರಿಶಿಷ್ಟ ಜಾತಿಯವರಿಗೆ ಶೇ.೧೫ರಷ್ಟು ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ.೫ರಷ್ಟು ಸ್ಥಾನಗಳ ಪ್ರಾತಿನಿಧ್ಯ ಪಡೆಯುವ ಅವಕಾಶವಿದೆ. ಎ-ಪ್ರವರ್ಗಕ್ಕೆ ಸೇರಿದ ಹಿಂದುಳಿದ ಜಾತಿಯವರು ಶೇ.೨೭ರಷ್ಟು ಸ್ಥಾನಗಳ ಮೀಸಲಾತಿಯನ್ನು ತಾಲೂಕು ಪಂಚಾಯತಿಗಳಲ್ಲಿ ಮತ್ತು ಶೇ.೨೬ರಷ್ಟು ಜಿಲ್ಲಾ ಪರಿಷತ್‌ಗಳಲ್ಲಿ ಪಡೆದುಕೊಳ್ಳುವ ಅವಕಾಶವಿದೆ. ಬಿ-ಪ್ರವರ್ಗಕ್ಕೆ ಸೇರಿದ ಹಿಂದುಳಿದ ವರ್ಗಗಳಿಗೆ ಶೆ.೦೭ ರಷ್ಟು ಪ್ರಾತಿನಿಧ್ಯ ಜಿಲ್ಲಾ ಪರಿಷತ್ ಮತ್ತು ತಾಲೂಕು ಪಂಚಾಯತ್ ಗಳಲ್ಲಿ ಎರಡೂ ಕಡೆ ಪಡೆಯಬಹುದಾಗಿದೆ. ಮತ್ತು ಸಾಮಾನ್ಯ ವರ್ಗದವರಿಗೆ ಶೇ.೪೦ ರಷ್ಟು ಮೀಸಲು ಸ್ಥಾನಗಳನ್ನು ಎರಡೂ ಸಂಸ್ಥೆಗಳಲ್ಲಿ ಪಡೆಯಬಹುದಾಗಿದೆ. ೨೮-೦೧-೧೯೯೯ರಂದು, ಕಾಯ್ದೆ ಕಲಂ ೪ ಮತ್ತು ೫ಕ್ಕೆ ತಿದ್ದುಪಡಿ ತರುವುದರ ಮೂಲಕ ಗ್ರಾಮ ಪಂಚಾಯತ್‌ಗಳ ಅವಧಿಪೂರ್ವ ಚುನಾವಣೆ ನಡೆಸುವುದರ ಸಲುವಾಗಿ ಕರ್ನಾಟಕ ಗ್ರಾಮ ಪಂಚಾಯತ್ ಕಾಯ್ದೆ (೨ನೇ ತಿದ್ದುಪಡಿ) ವಿಶೇಷ ಆಜ್ಞೆ ೧೯೯೯(ಸುಗ್ರೀವಾಜ್ಞೆ) ಘೋಷಿಸಲಾಯಿತು. ರಾಜ್ಯ ಸರ್ಕಾರವು ೧೯೯೮ರ ಕರ್ನಾಟಕ ಜಿಲ್ಲಾ ಪಂಚಾಯತ್ (ವ್ಯವಹರಣೆ) ನಿಯಮಾವಳಿಗಳನ್ನು ರಚಿಸಲಾಯಿತು. ಇದರ ಅನ್ವಯ ಸದಸ್ಯರಿಗೆ ಪ್ರತಿ ತಿಂಗಳು ಸಂಭಾವನೆ, ಗ್ರಾಮ ಪಂಚಾಯತಿಗಳಿಗೆ ವಾರ್ಷಿಕ ಅನುದಾನ ಮತ್ತು ಗ್ರಾಮ ಪಂಚಾಯತ್‌ಗಳಲ್ಲಿ ಗ್ರಾಮ ಸಭಾಗಳನ್ನು ನಡೆಸುವ ಅವಕಾಶಗಳನ್ನು ಈ ತಿದ್ದುಪಡಿಯಲ್ಲಿ ಕಲ್ಪಿಸಲಾಗಿದೆ. ಪಂಚಾಯತ್ ರಾಜ್ ಸಂಸ್ಥೆಗಳು ಹೆಚ್ಚು ಉತ್ತರದಾಯಿತ್ವವನ್ನು ಮತ್ತು ಜವಾಬ್ದಾರಿಗಳನ್ನು ಹೊಂದಲು, ಇತ್ತೀಚೆಗೆ ಸರ್ಕಾರವು ಪಂಚಾಯತಿ ಜಮಾಬಂದಿ ವ್ಯವಸ್ಥೆಯನ್ನು ಪರಿಚಯಿಸಿದೆ.

೨೦೧೧ನೇ ಜನಗಣತಿಯ ಪ್ರಕಾರ ರಾಜ್ಯದ ೬.೧೧ಕೋಟಿ ಜನಸಂಖ್ಯೆಯಲ್ಲಿ ೩.೭೬ ಕೋಟಿ ಜನಸಂಖ್ಯೆಯು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದು, ಇವರೆಲ್ಲರ ಜೀವನ ಗುಣಮಟ್ಟವನ್ನು ಹೆಚ್ಚಿಸುವುದೇ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಪ್ರಮುಖ ಧ್ಯೇಯವಾಗಿದೆ. ರಾಜ್ಯದ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯು ಕೃಷಿ ಉತ್ಪಾದಕತೆ ಮತ್ತು ಇತರೆ ಆರ್ಥಿಕ ಚಟುವಟಿಕೆಗಳ ಸುಧಾರಣೆ, ಮೂಲಭೂತ ಸೌಕರ್ಯಗಳ ಲಭ್ಯತೆ ಮತ್ತು ಅವುಗಳ ಗುಣಮಟ್ಟದ ಸುಧಾರಣೆಯನ್ನು ಅವಲಂಬಿಸಿದ್ದು, ಮಾನವ ಸಂಪನ್ಮೂಲಗಳ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ನೇರ ಕೊಡುಗೆಯಾಗಿರುತ್ತದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ಗ್ರಾಮೀಣ ಜನರ ಜೀವನ ಮಟ್ಟ ಸುಧಾರಣೆಗಾಗಿ ಹಾಗೂ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆ ಬೆಳೆಸುವ ದಿಕ್ಕಿನಲ್ಲಿ ಪ್ರಜಾಪ್ರಭುತ್ವದಲ್ಲಿನ ಆಡಳಿತ ವಿಕೇಂದ್ರೀಕರಣಗೊಳಿಸಿ ಗ್ರಾಮದ ಏಳಿಗೆಗೆ ಗ್ರಾಮದ ಜನರೇ ನಿರ್ಧರಿಸಿದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ.

## ಗ್ರಾಮ ಪಂಚಾಯಿತಿಯ ರಚನೆ

ಸಾಮಾನ್ಯವಾಗಿ ೫,೦೦೦ ಕ್ಕಿಂತ ಕಡಿಮೆ ಇಲ್ಲದ ಮತ್ತು ೭,೦೦೦ ಜನಸಂಖ್ಯೆಗೆ ಹೆಚ್ಚಿಗೆ ಇಲ್ಲದ ಗ್ರಾಮವನ್ನು ಅಥವಾ ಗ್ರಾಮಗಳ ಗುಂಪನ್ನು ಒಳಗೊಂಡಿರುವ ಯಾವುದೇ ಪ್ರದೇಶವನ್ನು ಒಂದು ಗ್ರಾಮ ಪಂಚಾಯಿತಿ ಎಂದು ಪರಿಗಣಿಸಲಾಗುತ್ತದೆ. ಬೆಳಗಾವಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಧಾರವಾಡ, ಹಾಸನ, ಕೊಡಗು, ಶಿವಮೊಗ್ಗ, ಉಡುಪಿ, ಚಾಮರಾಜನಗರ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಪ್ರದೇಶಗಳಲ್ಲಿ ೨,೫೦೦ ಕ್ಕಿಂತ ಕಡಿಮೆಯಿಲ್ಲದ ಜನಸಂಖ್ಯೆ ಹೊಂದಿದ ಪ್ರದೇಶವನ್ನು ಹಾಗೂ ಜನಸಂಖ್ಯೆಯನ್ನು ಗಣನೆಗೆ ಪರಿಗಣಿಸದೆ, ಅವಶ್ಯಕ ಎಂದು ಕಂಡುಬರುವಲೆಲ್ಲಾ ಸರ್ಕಾರವು ವಿಶೇಷ ಪ್ರಕರಣವೆಂದು ಬೆಳಗಾವಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ, ಧಾರವಾಡ, ಹಾಸನ, ಕೊಡುಗು, ಶಿವಮೊಗ್ಗ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲಾ ಪ್ರದೇಶಗಳಲ್ಲಿ ಗ್ರಾಮದ ಕೇಂದ್ರದಿಂದ ೫ ಕಿ.ಮೀ. ತ್ರಿಜ್ಯದ(ಹತ್ತು ಕಿ.ಮೀ ವ್ಯಾಸದ) ಒಳಗಿರುವ ಪ್ರದೇಶವನ್ನು ಸರ್ಕಾರವು ಗ್ರಾಮಪಂಚಾಯಿತಿ ಎಂದು ನಿರ್ಧರಿಸಬಹುದಾಗಿದೆ. ಪ್ರತಿ ೪೦೦ ಜನಸಂಖ್ಯೆಗೆ ಅಥವಾ ಅದರ ಭಾಗಕ್ಕೆ ಒಬ್ಬ ಸದಸ್ಯರಂತೆ ಗ್ರಾಮ ಪಂಚಾಯಿತಿಗೆ ಸದಸ್ಯರನ್ನು ಚುನಾವಣೆ ಮೂಲಕ ಆಯ್ಕೆ ಮಾಡಲಾಗುವುದು. ಗ್ರಾಮ ಪಂಚಾಯಿತಿಯ ಸದಸ್ಯರ ಪೈಕಿ ಒಬ್ಬರನ್ನೂ ಅಧ್ಯಕ್ಷರನ್ನಾಗಿಯೂ, ಇನ್ನೊಬ್ಬರನ್ನು ಉಪಾಧ್ಯಕ್ಷರನ್ನಾಗಿಯೂ ಆಯ್ಕೆ ಮಾಡಲಾಗುವುದು. ರಾಜ್ಯದಲ್ಲಿ ೨೦೧೫ರಲ್ಲಿ ನಡೆದ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಜಿಲ್ಲಾವಾರು ಗ್ರಾಮ ಪಂಚಾಯಿತಿಗಳ ಹಾಗೂ ಸದಸ್ಯರುಗಳ ವಿವರಗಳನ್ನು ಕೋಷ್ಟಕ ೯.೧ ರಲ್ಲಿ ನೋಡಿ.

## ಕೋಷ್ಟಕ ೯.೧ : ರಾಜ್ಯದಲ್ಲಿ ೨೦೧೫ರಲ್ಲಿ ನಡೆದ ಗ್ರಾಮ ಪಂಚಾಯಿತಿ ಸದಸ್ಯರುಗಳ ವಿವರ

| ಕ್ರ. ಸಂ. | ಜಿಲ್ಲೆಗಳ ಹೆಸರು | ಒಟ್ಟು | ಒಟ್ಟು ಸ್ಥಾನಗಳ ಸಂಖ್ಯೆ | | | ಅನುಸೂಚಿತ ಜಾತಿ | | |
|---|---|---|---|---|---|---|---|---|
| | | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ೧ | ಬೆಂಗಳೂರು | ೧೦೪ | ೧೪೧೫ | ೧೪೬೦ | ೨೮೭೫ | ೨೬೯ | ೩೨೪ | ೫೯೩ |
| ೨ | ಬೆಂಗಳೂರು | ೧೦೫ | ೯೩೫ | ೯೮೯ | ೧೯೨೪ | ೨೧೨ | ೨೬೧ | ೪೭೩ |
| ೩ | ಚಿತ್ರದುರ್ಗ | ೧೯೦ | ೧೬೮೩ | ೧೭೭೭ | ೩೪೬೦ | ೩೭೯ | ೪೮೭ | ೮೬೬ |
| ೪ | ದಾವಣಗೆರೆ | ೨೩೫ | ೧೬೭೧ | ೧೭೭೩ | ೩೪೪೪ | ೩೫೫ | ೪೭೦ | ೮೨೫ |
| ೫ | ಕೋಲಾರ | ೧೫೬ | ೧೩೫೯ | ೧೪೩೧ | ೨೭೯೦ | ೪೦೩ | ೪೭೨ | ೮೭೫ |
| ೬ | ಶಿವಮೊಗ್ಗ | ೨೭೧ | ೧೪೦೩ | ೧೫೫೫ | ೨೯೫೮ | ೨೧೩ | ೪೦೬ | ೬೧೯ |
| ೭ | ತುಮಕೂರು | ೩೩೧ | ೨೬೧೨ | ೨೭೮೮ | ೫೪೦೦ | ೪೭೯ | ೬೪೯ | ೧೧೧೮ |
| ೮ | ರಾಮನಗರಂ | ೧೩೦ | ೧೦೩೬ | ೧೦೯೯ | ೨೧೩೫ | ೧೮೦ | ೨೪೩ | ೪೨೩ |
| ೯ | ಚಿಕ್ಕಬಳ್ಳಾಪುರ | ೧೫೭ | ೧೨೩೨ | ೧೩೧೮ | ೨೫೫೦ | ೩೧೩ | ೩೯೦ | ೭೦೩ |
| ೧೦ | ಚಾಮರಾಜನಗರ | ೧೩೦ | ೧೦೫೩ | ೧೧೧೮ | ೨೧೭೧ | ೨೫೨ | ೩೨೦ | ೫೭೨ |
| ೧೧ | ಚಿಕ್ಕಮಗಳೂರು | ೨೨೭ | ೧೧೧೭ | ೧೨೩೯ | ೨೩೫೬ | ೨೨೯ | ೩೪೮ | ೫೭೭ |
| ೧೨ | ದಕ್ಷಿಣ ಕನ್ನಡ | ೨೩೨ | ೧೭೧೭ | ೧೮೩೯ | ೩೫೫೬ | ೭೬ | ೨೪೯ | ೩೨೫ |
| ೧೩ | ಹಾಸನ | ೨೬೬ | ೧೮೧೧ | ೧೯೪೯ | ೩೭೬೦ | ೩೨೫ | ೪೫೯ | ೭೮೪ |
| ೧೪ | ಕೊಡಗು | ೧೦೪ | ೬೦೫ | ೬೫೫ | ೧೨೬೦ | ೫೪ | ೧೨೫ | ೧೭೯ |
| ೧೫ | ಮಂಡ್ಯ | ೨೩೪ | ೧೮೮೭ | ೨೦೦೨ | ೩೮೮೯ | ೨೩೮ | ೩೩೯ | ೫೭೭ |
| ೧೬ | ಮೈಸೂರು | ೨೬೬ | ೨೩೦೧ | ೨೪೪೩ | ೪೭೪೪ | ೪೩೦ | ೫೭೨ | ೧೦೦೨ |
| ೧೭ | ಉಡುಪಿ | ೧೫೮ | ೧೧೯೬ | ೧೨೮೧ | ೨೪೭೭ | ೨೮ | ೧೬೨ | ೧೯೦ |
| ೧೮ | ಬಳ್ಳಾರಿ | ೨೦೫ | ೧೯೬೨ | ೨೦೬೭ | ೪೦೨೯ | ೪೨೭ | ೫೨೪ | ೯೫೧ |
| ೧೯ | ಬೀದರ್ | ೧೮೬ | ೧೬೧೭ | ೧೬೯೭ | ೩೩೧೪ | ೩೮೧ | ೪೮೭ | ೮೬೮ |
| ೨೦ | ಕಲಬುರಗಿ | ೨೬೪ | ೨೧೯೬ | ೨೩೩೧ | ೪೫೨೭ | ೫೫೬ | ೭೧೩ | ೧೨೬೯ |
| ೨೧ | ಯಾದಗಿರಿ | ೧೨೫ | ೧೨೦೧ | ೧೨೭೩ | ೨೪೭೪ | ೨೭೯ | ೩೪೩ | ೬೨೨ |
| ೨೨ | ಕೊಪ್ಪಳ | ೧೫೭ | ೧೪೬೭ | ೧೫೪೮ | ೩೦೧೫ | ೨೫೭ | ೩೨೯ | ೫೮೬ |
| ೨೩ | ರಾಯಚೂರು | ೧೮೫ | ೧೮೩೮ | ೧೯೩೧ | ೩೭೬೯ | ೩೬೨ | ೪೬೧ | ೮೨೩ |
| ೨೪ | ಬಾಗಲಕೋಟೆ | ೨೦೧ | ೧೬೪೯ | ೧೭೪೮ | ೩೩೯೭ | ೨೬೦ | ೩೬೧ | ೬೨೧ |
| ೨೫ | ಬೆಳಗಾವಿ | ೫೧೭ | ೪೬೪೩ | ೪೯೧೫ | ೯೫೫೮ | ೪೪೮ | ೭೭೮ | ೧೨೨೬ |
| ೨೬ | ವಿಜಯಪುರ | ೨೨೦ | ೨೦೮೯ | ೨೨೦೪ | ೪೨೯೩ | ೪೧೮ | ೫೧೮ | ೯೩೬ |
| ೨೭ | ಧಾರವಾಡ | ೧೪೩ | ೯೯೫ | ೧೦೬೯ | ೨೦೬೪ | ೪೪ | ೧೫೪ | ೧೯೮ |
| ೨೮ | ಗದಗ | ೧೨೦ | ೮೫೩ | ೯೧೩ | ೧೭೬೯ | ೧೩೦ | ೨೦೧ | ೩೩೧ |
| ೨೯ | ಹಾವೇರಿ | ೨೨೩ | ೧೫೭೦ | ೧೬೭೨ | ೩೨೪೨ | ೧೭೯ | ೩೧೩ | ೪೯೨ |
| ೩೦ | ಉತ್ತರ ಕನ್ನಡ | ೨೩೧ | ೧೩೨೭ | ೧೪೫೪ | ೨೭೮೧ | ೫೪ | ೨೫೭ | ೩೧೧ |
| | **ಒಟ್ಟು** | **೬೦೭೩** | **೪೮೪೪೦** | **೫೧೫೪೧** | **೯೯೯೮೧** | **೮೨೩೦** | **೧೧೭೧೫** | **೧೯೯೪೫** |

### ಕೋಷ್ಟಕ ೯.೧ ಮುಂದುವರೆದಿದೆ

| ಅನುಸೂಚಿತ ಪಂಗಡ | | | ಹಿಂದುಳಿದ "ಅ" ವರ್ಗ | | | ಹಿಂದುಳಿದ "ಬ" ವರ್ಗ | | | ಸಾಮಾನ್ಯ | | |
|---|---|---|---|---|---|---|---|---|---|---|---|
| ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ೧೯ | ೧೦೮ | ೧೨೭ | ೨೫೧ | ೨೯೪ | ೫೪೫ | ೬೩ | ೭೦ | ೧೩೩ | ೮೧೩ | ೬೬೪ | ೧೪೭೭ |
| ೩೧ | ೧೧೫ | ೧೪೬ | ೯೨ | ೧೬೦ | ೨೫೨ | ೪೨ | ೨೧ | ೬೩ | ೫೫೮ | ೪೩೨ | ೯೯೦ |
| ೨೯೦ | ೪೧೨ | ೭೦೨ | ೭೨ | ೧೭೦ | ೨೪೨ | ೪೪ | ೮ | ೫೨ | ೮೯೮ | ೭೦೦ | ೧೫೯೮ |
| ೧೮೪ | ೩೪೦ | ೫೨೪ | ೧೨೨ | ೨೨೪ | ೩೪೬ | ೪೫ | ೨೪ | ೬೯ | ೯೬೫ | ೭೧೫ | ೧೬೮೦ |
| ೫೮ | ೧೭೮ | ೨೩೬ | ೬೨ | ೧೬೦ | ೨೨೨ | ೪೧ | ೫ | ೪೬ | ೭೯೫ | ೬೧೬ | ೧೪೧೧ |
| ೨೦ | ೨೭೨ | ೨೯೨ | ೧೩೧ | ೩೧೪ | ೪೪೫ | ೭೭ | ೧೨ | ೮೯ | ೯೬೨ | ೫೫೧ | ೧೫೧೩ |
| ೧೫೪ | ೩೯೯ | ೫೫೩ | ೨೭೦ | ೫೦೧ | ೭೭೧ | ೧೩೩ | ೭೧ | ೨೦೪ | ೧೫೮೬ | ೧೧೬೮ | ೨೭೫೪ |
| ೯ | ೧೩೧ | ೧೪೦ | ೧೩೩ | ೨೩೬ | ೩೬೯ | ೭೦ | ೩೨ | ೧೦೨ | ೬೪೪ | ೪೫೭ | ೧೧೦೧ |
| ೧೪೧ | ೨೩೨ | ೩೭೩ | ೪೧ | ೧೨೪ | ೧೬೫ | ೨೫ | ೧ | ೨೬ | ೭೧೨ | ೫೭೧ | ೧೨೮೩ |
| ೯೩ | ೧೮೭ | ೨೮೦ | ೭೨ | ೧೪೩ | ೨೧೫ | ೪೦ | ೮ | ೪೮ | ೫೯೬ | ೪೬೦ | ೧೦೫೬ |
| ೧೫ | ೨೩೧ | ೨೪೬ | ೭೭ | ೨೦೩ | ೨೮೦ | ೪೨ | ೭ | ೪೯ | ೭೫೪ | ೪೫೦ | ೧೨೦೪ |
| ೪೪ | ೨೪೨ | ೨೮೬ | ೩೪೭ | ೪೭೭ | ೮೨೪ | ೧೦೭ | ೧೦೧ | ೨೦೮ | ೧೧೪೩ | ೭೭೦ | ೧೯೧೩ |
| ೬ | ೨೬೮ | ೨೭೪ | ೨೪೦ | ೩೭೦ | ೬೧೦ | ೭೮ | ೬೮ | ೧೪೬ | ೧೧೬೨ | ೭೮೪ | ೧೯೪೬ |
| ೪೯ | ೧೩೧ | ೧೮೦ | ೬೪ | ೧೪೧ | ೨೦೫ | ೩೭ | ೧೧ | ೪೮ | ೪೦೧ | ೨೪೭ | ೬೪೮ |
| ೨ | ೨೩೫ | ೨೩೭ | ೩೭೪ | ೪೬೯ | ೮೪೩ | ೯೯ | ೧೧೪ | ೨೧೩ | ೧೧೭೪ | ೮೪೫ | ೨೦೧೯ |
| ೨೬೭ | ೪೫೯ | ೭೨೬ | ೨೦೬ | ೩೪೩ | ೫೪೯ | ೭೯ | ೫೭ | ೧೩೬ | ೧೩೧೯ | ೧೦೧೨ | ೨೩೩೧ |
| ೩೨ | ೧೬೯ | ೨೦೧ | ೨೬೯ | ೩೩೪ | ೬೦೩ | ೬೮ | ೮೨ | ೧೫೦ | ೭೯೯ | ೫೩೪ | ೧೩೩೩ |
| ೩೭೮ | ೪೯೯ | ೮೭೭ | ೮೭ | ೧೭೩ | ೨೬೦ | ೩೭ | ೧೯ | ೫೬ | ೧೦೩೩ | ೮೫೨ | ೧೮೮೫ |
| ೨೩೧ | ೩೨೦ | ೫೫೧ | ೭೦ | ೧೫೮ | ೨೨೮ | ೨೯ | ೮ | ೩೭ | ೯೦೬ | ೭೨೪ | ೧೬೩೦ |
| ೨೩ | ೨೭೦ | ೨೯೩ | ೧೭೮ | ೩೬೧ | ೫೩೯ | ೯೭ | ೩೯ | ೧೩೬ | ೧೩೩೨ | ೯೪೮ | ೨೨೮೦ |
| ೧೩೪ | ೨೨೧ | ೩೫೫ | ೮೧ | ೧೪೮ | ೨೨೯ | ೩೫ | ೧೯ | ೫೪ | ೬೭೨ | ೫೪೨ | ೧೨೧೪ |
| ೧೬೦ | ೨೫೧ | ೪೧೧ | ೧೪೫ | ೨೪೫ | ೩೯೦ | ೬೫ | ೩೩ | ೯೮ | ೮೪೦ | ೬೯೦ | ೧೫೩೦ |
| ೩೭೬ | ೪೮೭ | ೮೬೩ | ೯೨ | ೧೭೨ | ೨೬೪ | ೪೧ | ೨೦ | ೬೧ | ೯೬೭ | ೭೯೧ | ೧೭೫೮ |
| ೬೮ | ೨೨೮ | ೨೯೬ | ೨೪೫ | ೩೬೦ | ೬೦೫ | ೮೦ | ೭೪ | ೧೫೪ | ೯೯೬ | ೭೨೫ | ೧೭೨೧ |
| ೨೪೭ | ೬೮೬ | ೯೩೩ | ೮೫೫ | ೧೧೧೧ | ೧೯೬೬ | ೨೫೨ | ೨೫೧ | ೫೦೩ | ೨೮೪೧ | ೨೦೮೯ | ೪೯೩೦ |
| ೯ | ೨೨೨ | ೨೩೧ | ೩೨೦ | ೪೩೧ | ೭೫೧ | ೧೦೦ | ೯೩ | ೧೯೩ | ೧೨೪೨ | ೯೪೦ | ೨೧೮೨ |
| ೨೭ | ೧೪೬ | ೧೭೩ | ೧೯೨ | ೨೮೨ | ೪೭೪ | ೭೬ | ೫೦ | ೧೨೬ | ೬೫೬ | ೪೩೭ | ೧೦೯೩ |
| ೨೯ | ೧೨೫ | ೧೫೪ | ೧೧೪ | ೧೯೧ | ೩೦೫ | ೫೨ | ೨೭ | ೭೯ | ೫೨೮ | ೩೭೨ | ೯೦೦ |
| ೧೦೫ | ೨೫೫ | ೩೬೦ | ೧೯೪ | ೩೭೫ | ೫೬೯ | ೧೦೮ | ೪೨ | ೧೫೦ | ೯೮೪ | ೬೮೭ | ೧೬೭೧ |
| ೧೫ | ೨೩೫ | ೨೫೦ | ೨೩೨ | ೩೭೧ | ೬೦೩ | ೮೦ | ೫೨ | ೧೩೨ | ೯೪೬ | ೫೩೯ | ೧೪೮೫ |
| **೩೨೧೬** | **೮೦೫೪** | **೧೧೨೭೦** | **೫೬೨೮** | **೯೦೪೧** | **೧೪೬೬೯** | **೨೧೪೨** | **೧೪೧೯** | **೩೫೬೧** | **೨೯೨೨೪** | **೨೧೩೧೨** | **೫೦೫೩೬** |

ಮಂಡಲ ಪಂಚಾಯಿತಿಗಳ ಆಡಳಿತ ವಿಧಾನಗಳಲ್ಲಿದ್ದ ಲೋಪದೋಷಗಳನ್ನು ಗುರುತಿಸಿ, ಅವುಗಳ ಕಾರ್ಯವ್ಯಾಪ್ತಿ ಮೊಟಕುಗೊಳಿಸಿ, ಗ್ರಾಮಪಂಚಾಯಿತಿಗಳನ್ನು ಪುನಃ ಅಸ್ತಿತ್ವಗೊಳಿಸಲಾಯಿತು. ಗ್ರಾಮದ ಸಾರ್ವಜನಿಕ ವೇದಿಕೆಯಾಗಿದ್ದ ಗ್ರಾಮಸಭೆಯನ್ನು ಸದೃಢಗೊಳಿಸಲಾಯಿತು. ಕಾನೂನಿನ ತಿದ್ದುಪಡಿ ಮೂಲಕ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ನಿರ್ದಿಷ್ಟಪಡಿಸಲಾಯಿತು. ಪ್ರತಿ ಗ್ರಾಮ ಪಂಚಾಯಿತಿಗೆ ಪ್ರಾರಂಭದಲ್ಲಿ ರೂ.ಒಂದು ಲಕ್ಷಗಳ ವಾರ್ಷಿಕ ಅನುದಾನ ಒದಗಿಸಲಾಗಿತ್ತು. ಈ ಹಣವು ನೀರು ಪೂರೈಕೆ ಮತ್ತು ದೀಪ ವ್ಯವಸ್ಥೆಗೆ ಮಾತ್ರ ಬಳಕೆಯಾಗಬೇಕಾಗಿತ್ತು. ಪ್ರಸ್ತುತ ಈ ವಾರ್ಷಿಕ ಅನುದಾನವನ್ನು ಐದು ಲಕ್ಷ ರೂಗಳಿಗೆ ಹೆಚ್ಚಿಸಲಾಗಿದೆ.

**ಶಾಸನಬದ್ಧ ಅನುದಾನ** : ಸರ್ಕಾರವು ಗ್ರಾಮ ಪಂಚಾಯಿತಿಗಳು ತಮ್ಮ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಹಾಯವಾಗುವಂತೆ ಹೆಚ್ಚು ಮುಕ್ತ ಅನುದಾನ ನೀಡಲು ಕ್ರಮಕೈಗೊಂಡಿದೆ. ೧೯೯೩ರಲ್ಲಿ ಗ್ರಾಮ ಪಂಚಾಯಿತಿಗಳಿಗೆ ನೀಡುತ್ತಿದ್ದ ಶಾಸನಬದ್ಧ ಅನುದಾನ ಕೇವಲ ರೂ. ಒಂದು ಲಕ್ಷ ಮಾತ್ರ ಆಗಿತ್ತು. ಇದನ್ನು ರೂ. ೩.೫ ಲಕ್ಷಗಳಿಗೆ ಹೆಚ್ಚಿಸಲಾಯಿತು. ೨೦೦೩ರಲ್ಲಿ ಕಾನೂನಿಗೆ ತಿದ್ದುಪಡಿ ತರುವ ಮೂಲಕ ಪ್ರತಿ ಗ್ರಾಮ ಪಂಚಾಯಿತಿಗೆ ಕನಿಷ್ಠ ಶಾಸನಬದ್ಧ ಅನುದಾನವನ್ನು ರೂ. ಐದು ಲಕ್ಷಕ್ಕೆ ನಿಗದಿಪಡಿಸಲಾಗಿದೆ. ಗ್ರಾಮಪಂಚಾಯಿತಿಗಳಿಗೆ ಅನುದಾನವನ್ನು ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳ ಮೂಲಕ ನೇರ ಬಿಡುಗಡೆ ಮಾಡುವ ವಿಧಾನವನ್ನು ಜಾರಿಗೆ ತರಲಾಗಿದೆ. ಈ ವ್ಯವಸ್ಥೆಯನ್ನು ನವೆಂಬರ್ ೨೦೦೩ ರಿಂದ ಜಾರಿಗೆ ತರಲಾಗಿದೆ.

ನೀರು ಪೂರೈಕೆ ಮತ್ತು ಬೀದಿ ದೀಪಗಳಿಗೆ ಬಳಸಿದ ವಿದ್ಯುಚ್ಛಕ್ತಿ ಬಿಲ್ ಪಾವತಿ ಮಾಡುವಲ್ಲಿ ಗ್ರಾಮ ಪಂಚಾಯಿತಿಗಳು ಎಸ್ಕಾಂಗಳಿಗೆ ನಿಯಮಿತವಾಗಿ ತುಂಬಲು ವಿವರವಾದ ಕೈಪಿಡಿಯನ್ನು ಸರ್ಕಾರವು ೨೦೦೪ ರಿಂದ ಹೊರಡಿಸಿದೆ.

ಗ್ರಾಮ ಪಂಚಾಯಿತಿ ಪ್ರದೇಶದಲ್ಲಿ ಜಿಲ್ಲಾ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿಗಳು ಕೈಗೊಂಡ ಕಾಮಗಾರಿಗಳು, ಬರ ಪರಿಹಾರ ಕಾಮಗಾರಿಗಳು ತೃಪ್ತಿಕರವಾಗಿ ಪೂರ್ಣಗೊಳ್ಳಬೇಕು. ಅವುಗಳ ಗುಣಮಟ್ಟದಲ್ಲಿ ಸುಧಾರಣೆಯಾಗಬೇಕೆಂಬ ಉದ್ದೇಶದಿಂದ ಗ್ರಾಮ ಪಂಚಾಯಿತಿಗಳು ಪ್ರಮಾಣೀಕರಿಸದ ಹೊರತು ಅಂತಹ ಕಾಮಗಾರಿಗಳ ಬಿಲ್‌ಗಳನ್ನು ಪಾವತಿ ಮಾಡತಕ್ಕದ್ದಲ್ಲ ಎಂಬ ಸೂಚನೆಗಳನ್ನು ಸರ್ಕಾರ ಹೊರಡಿಸಿದೆ.

ಗ್ರಾಮಪಂಚಾಯಿತಿ ಸದಸ್ಯರ ತರಬೇತಿಗಾಗಿ ಮೈಸೂರಿನ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯನ್ನು ನೋಡಲ್ ಸಂಸ್ಥೆಯಾಗಿ ಸ್ಥಾಪಿಸಲಾಗಿದೆ. ಇಲ್ಲಿ ಸ್ಥಾಪಿಸಿರುವ ಉಪಗ್ರಹ ಕೇಂದ್ರದ ಮೂಲಕ ಪ್ರಸಾರ ಮಾಡಲು ರಾಜ್ಯಾದ್ಯಂತ ಎಲ್ಲಾ ಕೇಂದ್ರಗಳಲ್ಲಿ ಏಕಕಾಲಕ್ಕೆ ಒಂದು ಕಡೆ ದೃಶ್ಯ. ಎರಡು ಕಡೆ ವಾಕ್ ಶ್ರವಣ ಮೂಲಕ ತರಬೇತಿಯನ್ನು ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ತರಬೇತಿಯಲ್ಲಿ ಚಲನಚಿತ್ರಗಳು, ಸ್ಥಳೀಯ ಅಂತರ ಸಂವಾದ ಮತ್ತು ಸಮುದಾಯ ಸಂಘಟನೆಯಂತಹ ವಿಷಯಗಳನ್ನು ಅಳವಡಿಸಲಾಗಿದೆ. ಪಂಚಾಯತ್ ರಾಜ್ ಇತಿಹಾಸ ಮತ್ತು ರಚನೆ, ಗ್ರಾಮಸಭೆ, ಗ್ರಾಮಪಂಚಾಯಿತಿ ನಿಯಮಗಳು ಮತ್ತು ಪಂಚಾಯತ್ ಆಯವ್ಯಯ, ಲೆಕ್ಕಪತ್ರ ಮತ್ತು ಜಮಾಬಂದಿ, ಶಿಕ್ಷಣ, ಆರೋಗ್ಯ, ಪೌಷ್ಟಿಕತೆ, ಶಿಶುಸಂರಕ್ಷಣೆ, ನೀರು ನೈರ್ಮಲ್ಯ ಕುರಿತು ವಲಯವಾರು ವಿಚಾರಗಳು ಮತ್ತು ಸಾಮಾನ್ಯ ಆಸ್ತಿಪಾಸ್ತಿಗಳು, ಒಟ್ಟಾರೆ ಅಭಿವೃದ್ಧಿ ಮತ್ತು ಸ್ಥಳೀಯ ಯೋಜನೆ ರೂಪಿಸುವಿಕೆಯಲ್ಲಿ ಗ್ರಾಮ ಪಂಚಾಯಿತಿ ಪಾತ್ರ, ಮಾಹಿತಿ ಹಕ್ಕು ಮತ್ತು ಸ್ಥಳೀಯ ಕಂದಾಯ ಸಂಗ್ರಹಣೆ ಸೇರಿದಂತೆ ಸಾಮಾನ್ಯ ವಿಷಯಗಳನ್ನು ಅಳವಡಿಸಲಾಗಿದೆ. ಅಲ್ಲದೆ ಗ್ರಾಮ ಪಂಚಾಯಿತಿ ಸದಸ್ಯರಿಗೆ ತರಬೇತಿ ನೀಡಲಾಗಿದೆ.

## ಗ್ರಾಮ ಪಂಚಾಯಿತಿಗಳ ಕಂಪ್ಯೂಟರೀಕರಣ

ರಾಜ್ಯದ ಎಲ್ಲಾ ೫೭೭೩ ಗ್ರಾಮ ಪಂಚಾಯಿತಿಗಳನ್ನು ಕಂಪ್ಯೂಟರೀಕರಿಸುವ ಪ್ರಮುಖ ಸಾಹಸ ಕಾರ್ಯದಲ್ಲಿ ರಾಜ್ಯ ಸರ್ಕಾರ ಯಶಸ್ವಿಯಾಗಿದೆ. ಜಮೀನುಗಳ ಸರ್ವೇ ನಂ, ಅವುಗಳ ವಿವರಗಳು, ಸರ್ವಕುಟುಂಬ ಸಮೀಕ್ಷೆ ಮತ್ತು ಆಸ್ತಿ ತೆರಿಗೆ ಇತ್ಯಾದಿ ಅಗತ್ಯವಾದ ತಂತ್ರಾಂಶಗಳನ್ನು ಈಗಾಗಲೇ ಅಭಿವೃದ್ಧಿ ಪಡಿಸಿದೆ. ತಂತ್ರಾಂಶ ಕುರಿತಂತೆ ತರಬೇತಿದಾರರು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಹಾಗೂ ಸಿಬ್ಬಂದಿಗೆ ಕಂಪ್ಯೂಟರ್ ತರಬೇತಿಯನ್ನು ನೀಡುತ್ತಿದೆ.

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ವಿವಿಧ ವಲಯಗಳ ಯೋಜನೆ ಜನವಸತಿಗಳ ೨೦ ವಲಯಗಳ ಸುಮಾರು ೩೩೫ ಅಂಶಗಳಲ್ಲಿ ಮಾಹಿತಿಯನ್ನು "ಸಾಮಾನ್ಯ ಮಾಹಿತಿ" ಎಂಬ ಶೀರ್ಷಿಕೆಯಡಿ ಸಂಗ್ರಹಿಸಿ ಅಂತರ್ಜಾಲ ತಾಣ (ವೆಬ್‌ಸೈಟ್)ದಲ್ಲಿ ಅಳವಡಿಸಲಾಗಿದೆ. ಜಿಲ್ಲಾಧಿಕಾರಿಗಳ ಕಚೇರಿ, ಜಿಲ್ಲಾಪಂಚಾಯಿತಿ ಅಧ್ಯಕ್ಷರ ಕಚೇರಿ, ವಿಧಾನಸೌಧ, ಶಾಸಕರಭವನ, ಬಹುಮಹಡಿ ಕಟ್ಟಡ, ಎಲ್ಲಾ ಸಚಿವಾಲಯ ಹಾಗೂ ಇಲಾಖಾ ಕಾರ್ಯದರ್ಶಿಗಳ ಕೊಠಡಿಗಳಲ್ಲಿ ಈ ಮಾಹಿತಿಯುಳ್ಳ 'ಕಿಯೋಸ್ಕ್‌ಗಳನ್ನು' ಸಾರ್ವಜನಿಕರ ಮಾಹಿತಿಗಾಗಿ ಇಡಲಾಗಿದೆ. ಈ ಮಾಹಿತಿಯನ್ನು ಪ್ರತಿ ವರ್ಷವೂ ಪರಿಷ್ಕರಿಸುವುದರಿಂದ ತಾಜಾ ಮಾಹಿತಿ ಲಭ್ಯವಾಗಿ ಪಂಚಾಯಿತಿಗಳು ನಿರ್ಧಾರಗಳನ್ನು ಕೈಗೊಳ್ಳಲು ಸಹಾಯಕವಾಗಿದೆ.

**ಗ್ರಾಮ ಪಂಚಾಯಿತಿಯ ಸ್ಥಾಯಿ ಸಮಿತಿ ರಚನೆ:** ಗ್ರಾಮ ಪಂಚಾಯಿತಿಯು ಮೂರು ಸ್ಥಾಯಿ ಸಮಿತಿಗಳನ್ನು ಹೊಂದಿರುತ್ತದೆ.

**೧) ಉತ್ಪಾದನಾ ಸಮಿತಿ**

ಕೃಷಿ ಉತ್ಪಾದನೆ, ಪಶುಸಂಗೋಪನೆ ಮತ್ತು ಗ್ರಾಮಾಂತರ ಕೈಗಾರಿಕೆಗಳು ಮತ್ತು ಬಡತನ ನಿವಾರಣಾ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನೆರವೇರಿಸಲು ಉತ್ಪಾದನಾ ಸಮಿತಿ ಇರುತ್ತದೆ.

**೨) ಸಾಮಾಜಿಕ ನ್ಯಾಯ ಸಮಿತಿ**

**(ಎ)** ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳು ಮತ್ತು ಇತರ ವರ್ಗಗಳ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಇತರ ಹಿತದೃಷ್ಟಿಗಳಿಗೆ ಉತ್ತೇಜನ ನೀಡುವುದಕ್ಕೆ.

**(ಬಿ)** ಸಾಮಾಜಿಕ ಅನ್ಯಾಯ ಮತ್ತು ಯಾವುದೇ ರೀತಿಯ

ಶೋಷಣೆಗಳಿಂದ ಅಂತಹ ಜಾತಿಗಳಿಗೆ ಮತ್ತು ವರ್ಗಗಳಿಗೆ ರಕ್ಷಣೆ ಕೊಡುವುದಕ್ಕೆ.

**(ಸಿ)** ಮಹಿಳೆ ಮತ್ತು ಮಕ್ಕಳ ಕಲ್ಯಾಣಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನೆರವೇರಿಸಲು ಸಾಮಾಜಿಕ ನ್ಯಾಯ ಸಮಿತಿ ಕಾರ್ಯನಿರ್ವಹಿಸುತ್ತದೆ.

**೩) ಸೌಕರ್ಯಗಳ ಸಮಿತಿ**

ಶಿಕ್ಷಣ, ಸಾರ್ವಜನಿಕ ಆರೋಗ್ಯ, ಲೋಕೋಪಯೋಗಿ ಕಾಮಗಾರಿಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ಮತ್ತು ಗ್ರಾಮ ಪಂಚಾಯಿತಿಯ ಇತರ ಕಾರ್ಯಗಳನ್ನು ನಿರ್ವಹಿಸಲು ಸೌಕರ್ಯಗಳ ಸಮಿತಿಯಿದೆ.

ಗ್ರಾಮ ಪಂಚಾಯಿತಿಯ ಆಡಳಿತ ವಿಭಾಗವು ಅನೇಕ ಖಾಸಗಿ ಹಾಗೂ ನೇಮಕ ಸದಸ್ಯರುಗಳನ್ನು ಹೊಂದಿದ್ದು, ೧) ಪ್ರತಿಯೊಂದು ಸ್ಥಾಯಿ ಸಮಿತಿಯಲ್ಲಿ ಗ್ರಾಮ ಪಂಚಾಯಿತಿಯ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಮೂರು ಅಥವಾ ಐದು ಜನ ಸದಸ್ಯರು ಇರುತ್ತಾರೆ. ೨) ಗ್ರಾಮ ಪಂಚಾಯಿತಿಯ ಅಧ್ಯಕ್ಷನು ಉತ್ಪಾದನಾ ಸಮಿತಿ ಮತ್ತು ಸೌಕರ್ಯ ಸಮಿತಿಯ ಪದನಿಮಿತ್ತ ಸದಸ್ಯ ಸಭಾಪತಿಯಾಗಿರುತ್ತಾರೆ. ಉಪಾಧ್ಯಕ್ಷನು ಸಾಮಾಜಿಕ ನ್ಯಾಯಸಮಿತಿಯ ಪದನಿಮಿತ್ತ ಸದಸ್ಯ ಮತ್ತು ಸಭಾಪತಿಯಾಗಿರುತ್ತಾರೆ. ೩) ಸಾಮಾಜಿಕ ನ್ಯಾಯ ಸಮಿತಿಯಲ್ಲಿ ಕನಿಷ್ಠ ಪಕ್ಷ ಒಬ್ಬ ಮಹಿಳಾ ಸದಸ್ಯೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಒಬ್ಬ ಸದಸ್ಯ ಇರಲೇಬೇಕು.

ಪ್ರತಿಯೊಂದು ಸಮಿತಿಯು, ಗೊತ್ತುಪಡಿಸಿರುವ ರೀತಿಯಲ್ಲಿ ರೈತರ, ಕ್ಲಬ್‌ಗಳ, ಮಹಿಳಾ ಮಂಡಳಿಗಳ, ಯುವಕ ಮಂಡಳಿಗಳ ಮತ್ತು ಸರ್ಕಾರವು ಅಂಗೀಕರಿಸಿದ ಇತರ ಅಂತಹುದೇ ಮಂಡಳಿಗಳ ಸದಸ್ಯರನ್ನು ಸಹ ಆಯ್ಕೆ ಮಾಡಿಕೊಳ್ಳಲು ಸಕ್ಷಮವಾಗಿರತಕ್ಕದ್ದು. ಪಂಚಾಯಿತಿ ಪ್ರದೇಶದಲ್ಲಿರುವ ಸಹಕಾರ ಸಂಘಗಳ ಒಬ್ಬ ಪ್ರತಿನಿಧಿಯನ್ನು ಉತ್ಪಾದನಾ ಸಮಿತಿಗೆ ಕೋ-ಆಪ್ಟ್ ಮಾಡಿಕೊಳ್ಳತಕ್ಕದ್ದು.

## ಪಂಚಾಯತ್ ಅಭಿವೃದ್ಧಿ ಅಧಿಕಾರಿಯ ಕರ್ತವ್ಯಗಳು

ಕರ್ನಾಟಕದ ೧೭೬ ತಾಲೂಕುಗಳಲ್ಲಿ ತಾಲೂಕು ಪಂಚಾಯಿತಿಗಳನ್ನು ಈ ಕೆಳಗಿನ ಸದಸ್ಯರನ್ನು ಹೊಂದಿರುವಂತೆ ರಚಿಸಲಾಗಿದೆ.

೧. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಗ್ರಾಮ ಪಂಚಾಯಿತಿ ಮಟ್ಟದ ನೌಕರನಾಗಿದ್ದು, ಆತನು ಕರ್ತವ್ಯ ನಿರ್ವಹಿಸುವ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಸಂಬಂಧಪಟ್ಟ ಕರ್ತವ್ಯಗಳನ್ನು ಹಾಗೂ ಯೋಜನೆಗಳನ್ನು ನಿರ್ವಹಿಸಲು ಬದ್ಧನಾಗಿರತಕ್ಕದ್ದು.

೨. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, ೧೯೯೩ ರಡಿಯಲ್ಲಿ ರಚಿಸಲಾದ ಯಾವುದೇ ನಿಯಮಗಳ ಅಥವಾ ಉಪವಿಧಿಗಳ ಮೂಲಕ ಅಥವಾ ಅಡಿಯಲ್ಲಿ ಅವನಿಗೆ ವಿಧಿಸಲಾದ ಎಲ್ಲಾ ಕರ್ತವ್ಯಗಳು/ಅಧಿಕಾರಿಗಳನ್ನು ನಿರ್ವಹಿಸತಕ್ಕದ್ದು.

೩. ಗ್ರಾಮ ಪಂಚಾಯತ್ ನಿಧಿಯ ಡ್ರಾಯಿಂಗ್ ಮತ್ತು ಡಿಸ್‌ಬರ್ಸಿಂಗ್ ಆಫೀಸರ್ (Drawing and Disbursing Officer) ಆಗಿ ಕರ್ತವ್ಯ ನಿರ್ವಹಿಸತಕ್ಕದ್ದು.

೪. ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆ, ವಿಶೇಷ ಸಭೆ ನಡೆಸುವುದು ಹಾಗೂ ನಿರ್ಣಯಗಳನ್ನು ಜಾರಿಗೊಳಿಸುವುದು.

೫. ಗ್ರಾಮ ಪಂಚಾಯಿತಿಯ ಲೆಕ್ಕಗಳ ಮತ್ತು ಬಜೆಟ್ ಮಂಡನೆ ಮಾಡಲು ಸಂಪೂರ್ಣ ಜವಾಬ್ದಾರಿ ಹೊಂದಿರತಕ್ಕದ್ದು.

೬. ಗ್ರಾಮ ಪಂಚಾಯತ್‌ನ ತೆರಿಗೆ ವಸೂಲಾತಿ ಮೇಲ್ವಿಚಾರಣೆ.

೭. ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಗ್ರಾಮೀಣಾಭಿವೃದ್ಧಿ ಯೋಜನೆಗಳ ಸಮರ್ಪಕ ಮತ್ತು ಸಕಾಲಿಕ ಅನುಷ್ಠಾನ.

೮. ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಿಗೆ ಮಾಸಿಕ ಪ್ರಗತಿ ವರದಿ ಸಲ್ಲಿಸುವುದು.

೯. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನ, ಮೇಲ್ವಿಚಾರಣೆ, ಎಂ.ಐ.ಎಸ್.ನಿರ್ವಹಣೆ ಹಾಗೂ ಸದರಿ ಯೋಜನೆಯಡಿ ಹೊರಡಿಸುವ ಸರ್ಕಾರದ ಎಲ್ಲಾ ನಿರ್ದೇಶನಗಳನ್ನು ಪಾಲಿಸುವುದು.

೧೦. ಪಂಚತಂತ್ರ ತಂತ್ರಾಂಶ, ಇ-ಪಂಚಾಯತ್ ಮತ್ತು ಇ-ಸ್ವತ್ತು ಮೊದಲಾದ ಕಂಪ್ಯೂಟರ್ ಆಧಾರಿತ ಕಾರ್ಯಕ್ರಮಗಳ ನಿರ್ವಹಣೆ.

೧೧. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಮಾಹಿತಿ ಕ್ರೋಢೀಕರಣ ಹಾಗೂ ವಿವಿಧ ಇಲಾಖೆಗಳೊಂದಿಗೆ ಸಮನ್ವಯತೆ

೧೨. ೨೦೦೫ ರ ಮಾಹಿತಿ ಹಕ್ಕು ಅಧಿನಿಯಮದಡಿ ಮೇಲ್ಮನವಿ ಪ್ರಾಧಿಕಾರವಾಗಿ ಕರ್ತವ್ಯ ನಿರ್ವಹಣೆ.

೧೩. ಸಕಾಲ ಸೇವೆಗಳ ನಿರ್ವಹಣೆ

೧೪. ಕಾಲಕಾಲಕ್ಕೆ ಸರ್ಕಾರದಿಂದ ವಹಿಸಬಹುದಾದ ಇತರೆ ಕಾರ್ಯಗಳು.

## ತಾಲೂಕು ಪಂಚಾಯಿತಿ

೧೯೯೩ರ ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆಯು ಪ್ರತಿ ತಾಲೂಕಿಗೆ ಒಂದರಂತೆ ತಾಲೂಕು ಪಂಚಾಯಿತಿ ರಚನೆಗೆ ಅವಕಾಶ ನೀಡಿದೆ. ಸಂಪೂರ್ಣವಾಗಿ ಚುನಾಯಿತ ಪ್ರತಿನಿಧಿಗಳನ್ನೊಳಗೊಂಡ ಇವು ಆಯಾ ತಾಲೂಕಿನ ನಗರ ಸಭೆ ಪುರಸಭೆಗಳನ್ನು ಹೊರತುಪಡಿಸಿ ಉಳಿದವು ಗ್ರಾಮೀಣ ಪ್ರದೇಶಕ್ಕೆ ಸೀಮಿತವಾಗಿವೆ. ತಾಲೂಕಿನ ವ್ಯಾಪ್ತಿಯಲ್ಲಿರುವ ಲೋಕಸಭೆ ಮತ್ತು ರಾಜ್ಯ ವಿಧಾನಸಭೆ ಕ್ಷೇತ್ರಗಳನ್ನು ಪೂರ್ಣವಾಗಿ ಇಲ್ಲವೇ ಭಾಗಶಃ ಪ್ರತಿನಿಧಿಸುವ ಚುನಾಯಿತ ಸದಸ್ಯರು, ಆಯಾ ತಾಲೂಕಿನ ಮತದಾರರು ಎಂದು ನೊಂದಾಯಿಸಲ್ಪಟ್ಟ ಲೋಕಸಭೆ ಹಾಗೂ ರಾಜ್ಯಸಭೆ ಸದಸ್ಯರು ಇದರ ಸದಸ್ಯರಾಗಿರುತ್ತಾರೆ.

ತಾಲೂಕು ಪಂಚಾಯಿತಿಗಳು ಕನಿಷ್ಠ ತಿಂಗಳಿಗೊಮ್ಮೆ ಸಭೆ ಸೇರಿ ತನ್ನ ಕಲಾಪ ನಡೆಸಬೇಕು. ತಾಲೂಕು ಪಂಚಾಯಿತಿ ಅಧ್ಯಕ್ಷರು ತಾಲೂಕಿನ ಎಲ್ಲಾ ವಿವಿಧ ಅಭಿವೃದ್ಧಿ ಯೋಜನೆಗಳ ಅನುಷ್ಠಾನ, ಸಿಬ್ಬಂದಿ ಮೇಲ್ವಿಚಾರಣೆ, ಹಣಕಾಸಿನ ನಿರ್ವಹಣೆ, ಗೊತ್ತುವಳಿಗಳ ನಿರ್ಣಯ, ಸ್ಥಾಯಿ ಸಮಿತಿಗಳ ನಿರ್ವಹಣೆ ಮುಂತಾದ ಅಧಿಕಾರಿಗಳನ್ನು ಹೊಂದಿರುವರು. ಇದರ ಸಿಬ್ಬಂದಿ ವೆಚ್ಚವನ್ನು ಸರ್ಕಾರದ ಅನುದಾನದಿಂದ ಭರಿಸಲಾಗುತ್ತದೆ. ತಾಲೂಕು ಪಂಚಾಯಿತಿಯು ಕಾಲಕಾಲಕ್ಕೆ ಸರ್ಕಾರ ಸೂಚಿಸುವ ಯಾವುದೇ ಕರ್ತವ್ಯವನ್ನು ನಿರ್ವಹಿಸ ಬೇಕಾಗುತ್ತದೆ. ತಾಲೂಕು ಪಂಚಾಯಿತಿಗೆ ಸರ್ಕಾರವು ೨೭ ವಿವಿಧ ಕಾರ್ಯಗಳ ಜವಾಬ್ದಾರಿಗಳನ್ನು ವಹಿಸಿಕೊಟ್ಟಿದೆ. ಅವುಗಳಲ್ಲಿ ಪ್ರಮುಖವಾದುವೆಂದರೆ ಜಿಲ್ಲಾ ಪಂಚಾಯಿತಿ ಸೂಚಿಸಿದ ವಾರ್ಷಿಕ ಯೋಜನೆಯ ಕರಡು ತಯಾರಿಕೆ ಮತ್ತು ತಾಲೂಕಿನ ಆಯವ್ಯಯ ಪತ್ರ ತಯಾರಿಸುವುದು, ವ್ಯವಸಾಯ ಹಾಗೂ ಅದರ ವಿಸ್ತರಣಾ ಯೋಜನೆಗಳು, ಜಮೀನು ಅಭಿವೃದ್ಧಿ ಹಾಗೂ ಭೂಸಾರ ಸಂರಕ್ಷಣೆ, ಸಣ್ಣ ನೀರಾವರಿ ಯೋಜನೆಗಳ ನಿರ್ಮಾಣ, ಪಶುಪಾಲನೆ ಹಾಗೂ ಹೈನು ಅಭಿವೃದ್ಧಿ, ಮೀನುಗಾರಿಕೆ, ಗೃಹ ಕೈಗಾರಿಕೆ, ಗ್ರಾಮೀಣ ವಸತಿ ಯೋಜನೆ, ಗ್ರಾಮಾಂತರ ಕುಡಿಯುವ ನೀರಿನ ಯೋಜನೆ, ಅಸಾಂಪ್ರದಾಯಿಕ ಇಂಧನ ಶಕ್ತಿಯ ಬಳಕೆ, ಗ್ರಾಮೀಣ ನೈರ್ಮಲ್ಯ, ರಸ್ತೆ ಚರಂಡಿಗಳ ನಿರ್ಮಾಣ, ತಾಲೂಕು ಪಂಚಾಯಿತಿಗಳ ಆಸ್ತಿ ನಿರ್ವಹಣೆ ಮತ್ತು ರಕ್ಷಣೆ, ಶಿಕ್ಷಣ (ಪ್ರಾಥಮಿಕ, ಪ್ರೌಢ, ತಾಂತ್ರಿಕ, ವೃತ್ತಿಪರ) ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಭಿವೃದ್ಧಿ ಚಟುವಟಿಕೆಗಳು, ಸಮಾಜ ಕಲ್ಯಾಣ, ಗ್ರಾಮೀಣ ವಿದ್ಯುದೀಕರಣ ಹಾಗೂ ಸಹಕಾರಿ ಚಟುವಟಿಕೆಗಳಾಗಿವೆ.

**ತಾಲೂಕು ಪಂಚಾಯಿತಿಯ ಸ್ಥಾಯಿ ಸಮಿತಿಯ ರಚನೆ:** ತಾಲೂಕು ಪಂಚಾಯಿತಿಯು ಈ ಕೆಳಕಂಡ ಸ್ಥಾಯಿ ಸಮಿತಿಗಳನ್ನು ಹೊಂದಿರುತ್ತದೆ, ೧) ಸಾಮಾನ್ಯ ಸ್ಥಾಯಿ ಸಮಿತಿ, ೨) ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ೩) ಯೋಜನಾ ಸಮಿತಿ, ಈ ಮೂರು ಸಮಿತಿಗಳ ರಚನೆ ಮತ್ತು ಕಾರ್ಯವಿಧಾನ, ಸಾಮಾನ್ಯವಾಗಿ ಜಿಲ್ಲಾ ಪಂಚಾಯಿತಿಯ ಎಲ್ಲಾ ಸ್ಥಾಯಿ ಸಮಿತಿಗಳ ಕಾರ್ಯಕಲಾಪಗಳಂತೆ ನಿರ್ವಹಿಸುತ್ತದೆ.ವಿವರಗಳಿಗೆ ಕೋಷ್ಟಕ ೯.೨ ಅನ್ನು ನೋಡಿ.

**ಕೋಷ್ಟಕ ೯.೨: ರಾಜ್ಯದಲ್ಲಿ ೨೦೧೬ರಲ್ಲಿ ನಡೆದ ತಾಲ್ಲೂಕು ಪಂಚಾಯಿತಿ ಚುನಾವಣೆಯ ಜಿಲ್ಲಾವಾರು, ವರ್ಗವಾರು ಸದಸ್ಯರ ಸ್ಥಾನಗಳ ವಿವರ**

| ಕ್ರ. ಸಂ. | ಜಿಲ್ಲೆ | ಒಟ್ಟು ಸ್ಥಾನಗಳ ಸಂಖ್ಯೆ | ವರ್ಗವಾರು ಸ್ಥಾನಗಳ ವಿವರ | | | | |
|---|---|---|---|---|---|---|---|
| | | | ಅ.ಜಾತಿ | ಅ.ಪಂ. | ಹಿಂ.ವರ್ಗ (ಅ) | ಹಿಂ.ವರ್ಗ (ಬ) | ಸಾಮಾನ್ಯ |
| ೧ | ೨ | ೩ | ೪ | ೫ | ೬ | ೭ | ೮ |
| ೧ | ಬೆಂಗಳೂರು ನಗರ | ೯೭(೫೦) | ೨೨(೧೨) | ೪(೪) | ೧೭(೯) | ೪(೩) | ೫೦(೨೨) |
| ೨ | ಬೆಂಗಳೂರು (ಗ್ರಾ) | ೭೭(೩೯) | ೧೮(೧೦) | ೫(೪) | ೧೨(೭) | ೩(೨) | ೩೯(೧೬) |
| ೩ | ರಾಮನಗರ | ೮೧(೪೧) | ೧೭(೯) | ೪(೪) | ೧೪(೯) | ೫(೧) | ೪೧(೧೮) |
| ೪ | ಚಿತ್ರದುರ್ಗ | ೧೩೬(೭೦) | ೩೫(೧೯) | ೨೭(೧೫) | ೫(೫) | ೨(೦) | ೬೭(೩೧) |
| ೫ | ದಾವಣಗೆರೆ | ೧೩೩(೬೮) | ೩೨(೧೭) | ೨೦(೧೦) | ೧೧(೭) | ೨(೦) | ೬೮(೩೪) |
| ೬ | ಕೋಲಾರ | ೧೧೧(೫೭) | ೩೫(೧೯) | ೭(೫) | ೯(೮) | ೩(೦) | ೫೭(೨೫) |
| ೭ | ಚಿಕ್ಕಬಳ್ಳಾಪುರ | ೧೦೮(೫೬) | ೩೧(೧೮) | ೧೬(೯) | ೫(೩) | ೦(೦) | ೫೬(೨೬) |
| ೮ | ಶಿವಮೊಗ್ಗ | ೧೧೬(೬೧) | ೨೨(೧೪) | ೭(೭) | ೧೯(೧೪) | ೭(೧) | ೬೧(೨೫) |
| ೯ | ತುಮಕೂರು | ೨೧೫(೧೦೯) | ೪೪(೨೩) | ೨೧(೧೩) | ೩೩(೧೯) | ೮(೪) | ೧೦೯(೫೦) |
| ೧೦ | ಚಿಕ್ಕಮಗಳೂರು | ೧೦೭(೫೬) | ೨೪(೧೪) | ೮(೭) | ೧೬(೧೦) | ೩(೧) | ೫೬(೨೪) |
| ೧೧ | ದಕ್ಷಿಣ ಕನ್ನಡ | ೧೩೬(೬೯) | ೧೧(೬) | ೮(೫) | ೩೪(೨೦) | ೯(೪) | ೭೪(೩೪) |
| ೧೨ | ಉಡುಪಿ | ೯೮(೫೦) | ೬(೩) | ೪(೩) | ೨೭(೧೪) | ೬(೩) | ೫೫(೨೭) |
| ೧೩ | ಹಾಸನ | ೧೫೩(೮೦) | ೩೩(೧೮) | ೮(೮) | ೨೫(೧೪) | ೭(೩) | ೮೦(೩೭) |
| ೧೪ | ಕೊಡಗು | ೫೦(೨೬) | ೬(೪) | ೬(೪) | ೯(೬) | ೩(೧) | ೨೬(೧೧) |
| ೧೫ | ಮಂಡ್ಯ | ೧೫೫(೭೯) | ೨೩(೧೩) | ೭(೭) | ೩೬(೧೮) | ೧೦(೬) | ೭೯(೩೫) |

| ಕ್ರ. ಸಂ. | ಜಿಲ್ಲೆ | ಒಟ್ಟು ಸ್ಥಾನಗಳ ಸಂಖ್ಯೆ | ವರ್ಗವಾರು ಸ್ಥಾನಗಳ ವಿವರ | | | | |
|---|---|---|---|---|---|---|---|
| | | | ಪ.ಜಾತಿ | ಪ.ಪಂ. | ಹಿಂ.ವರ್ಗ (ಅ) | ಹಿಂ.ವರ್ಗ (ಬ) | ಸಾಮಾನ್ಯ |
| ೧ | ೨ | ೩ | ೪ | ೫ | ೬ | ೭ | ೮ |
| ೧೬ | ಮೈಸೂರು | ೧೮೭(೯೪) | ೩೯(೨೧) | ೨೭(೧೫) | ೨೨(೧೨) | ೬(೩) | ೯೩(೪೩) |
| ೧೭ | ಚಾಮರಾಜನಗರ | ೮೯(೪೬) | ೨೩(೧೨) | ೧೦(೬) | ೮(೬) | ೩(೦) | ೪೫(೨೨) |
| ೧೮ | ಬೆಳಗಾವಿ | ೩೪೫(೧೭೫) | ೪೨(೨೪) | ೨೭(೧೮) | ೮೦(೪೧) | ೨೦(೧೧) | ೧೭೬(೮೧) |
| ೧೯ | ವಿಜಯಪುರ | ೧೫೯(೮೧) | ೩೫(೧೯) | ೫(೫) | ೩೦(೧೫) | ೮(೫) | ೮೧(೩೭) |
| ೨೦ | ಬಾಗಲಕೋಟೆ | ೧೩೦(೬೭) | ೨೪(೧೩) | ೯(೭) | ೨೪(೧೨) | ೬(೪) | ೬೭(೩೧) |
| ೨೧ | ಧಾರವಾಡ | ೮೨(೪೨) | ೭(೫) | ೬(೫) | ೨೧(೧೧) | ೬(೪) | ೪೨(೧೭) |
| ೨೨ | ಗದಗ | ೭೫(೩೯) | ೧೪(೯) | ೫(೫) | ೧೪(೮) | ೩(೨) | ೩೯(೧೫) |
| ೨೩ | ಹಾವೇರಿ | ೧೨೮(೬೫) | ೧೯(೧೧) | ೧೨(೭) | ೨೫(೧೪) | ೭(೪) | ೬೫(೨೯) |
| ೨೪ | ಉತ್ತರ ಕನ್ನಡ | ೧೩೦(೭೦) | ೧೨(೧೧) | ೧೧(೧೧) | ೨೭(೨೧) | ೧೦(೧) | ೭೦(೨೬) |
| ೨೫ | ಬೀದರ್ | ೧೩೧(೬೬) | ೩೪(೧೮) | ೨೨(೧೩) | ೮(೬) | ೧(೦) | ೬೬(೨೯) |
| ೨೬ | ಬಳ್ಳಾರಿ | ೧೫೦(೭೬) | ೩೬(೨೦) | ೩೩(೧೭) | ೬(೪) | ೦(೦) | ೭೫(೩೫) |
| ೨೭ | ರಾಯಚೂರು | ೧೪೨(೭೨) | ೩೧(೧೬) | ೩೩(೧೮) | ೭(೪) | ೧(೦) | ೭೦(೩೪) |
| ೨೮ | ಕಲಬುರಗಿ | ೧೭೯(೯೦) | ೫೦(೨೭) | ೮(೭) | ೨೫(೧೩) | ೬(೪) | ೯೦(೩೯) |
| ೨೯ | ಯಾದಗಿರಿ | ೯೪(೪೮) | ೨೪(೧೩) | ೧೨(೭) | ೭(೬) | ೩(೦) | ೪೮(೨೨) |
| ೩೦ | ಕೊಪ್ಪಳ | ೧೦೯(೫೬) | ೨೨(೧೨) | ೧೫(೯) | ೧೨(೮) | ೪(೧) | ೫೬(೨೬) |
| | **ಒಟ್ಟು** | **೩೯೦೩(೧೯೯೮)** | **೭೭೧(೪೩೦)** | **೩೮೭(೨೫೫)** | **೫೮೮(೩೪೪)** | **೧೫೬(೬೮)** | **೨೦೦೧(೯೦೧)** |

## ಜಿಲ್ಲಾ ಪಂಚಾಯಿತಿ

ಪ್ರತಿ ಜಿಲ್ಲೆಗೊಂದು ಜಿಲ್ಲಾ ಪಂಚಾಯಿತಿ ಇದ್ದು, ಪ್ರತಿ ೪೦,೦೦೦ ಜನಸಂಖ್ಯೆಗೆ ಅಥವಾ ಅದರ ಭಾಗಕ್ಕೆ ಒಬ್ಬ ಪ್ರತಿನಿಧಿಯನ್ನು ಆಯ್ಕೆ ಮಾಡಲಾಗುತ್ತದೆ. ಚಿಕ್ಕಮಗಳೂರು ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಸಂದರ್ಭದಲ್ಲಿ ಪ್ರತಿ ೩೦,೦೦೦ ಜನಸಂಖ್ಯೆಗೆ ಒಬ್ಬರಂತೆ, ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ೧೮,೦೦೦ ಜನಸಂಖ್ಯೆಗೆ ಅಥವಾ ಅದರ ಒಂದು ಭಾಗಕ್ಕೆ ಒಬ್ಬರಂತೆ ಸದಸ್ಯರನ್ನು ಆಯ್ಕೆ ಮಾಡಲಾಗುವುದು. ಹಾಗೂ ಜಿಲ್ಲೆಯ ವ್ಯಾಪ್ತಿಯೊಳಗೆ ಮತದಾರರೆಂದು ನೋಂದಾಯಿತರಾದ ವಿಧಾನಸಭಾ ಸದಸ್ಯರು, ಲೋಕಸಭಾ ಸದಸ್ಯರು, ರಾಜ್ಯಸಭೆ ಮತ್ತು ವಿಧಾನ ಪರಿಷತ್ತು ಸದಸ್ಯರು ಹಾಗೂ ಜಿಲ್ಲೆಯ ತಾಲೂಕು ಪಂಚಾಯಿತಿಗಳ ಅಧ್ಯಕ್ಷರುಗಳು ಇರುತ್ತಾರೆ.

## ಸ್ಥಾನಗಳ ಮೀಸಲಾತಿ

ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಸ್ಥಾನಗಳ ಮೀಸಲಾತಿ ಈ ಕೆಳಗಿನಂತಿದೆ.

೧. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮೀಸಲಾತಿ ಕ್ರಮವಾಗಿ ಒಟ್ಟು ಸ್ಥಾನಗಳ ಸಂಖ್ಯೆಯ ಶೇ. ೧೫ರಷ್ಟು ಮತ್ತು ಶೇ. ೩ ರಷ್ಟಿರಬೇಕು.

೨. ಒಟ್ಟು ಸ್ಥಾನಗಳಲ್ಲಿ ⅓ ಸ್ಥಾನಗಳನ್ನು ಹಿಂದುಳಿದ "ಅ" ಮತ್ತು "ಬ" ಪ್ರವರ್ಗಗಳಿಗೆ, ಈ ⅓ ಸ್ಥಾನಗಳ ಪೈಕಿ ಈ ಪ್ರವರ್ಗಗಳಿಗೆ ಕ್ರಮವಾಗಿ ಶೇ. ೮೦ ಮತ್ತು ಶೇ. ೨೦ನ್ನು ಮೀಸಲಾಗಿಡುವುದು. ಹಿಂದುಳಿದ ವರ್ಗದವರು ಅವಕಾಶ ವಂಚಿತರಾಗಬಾರದೆಂಬ ಉದ್ದೇಶದಿಂದ "ಅ" ಪ್ರವರ್ಗದ ಯಾವುದೇ ವ್ಯಕ್ತಿಯು ಲಭ್ಯವಾಗದಿದ್ದಲ್ಲಿ ಆ ಪ್ರವರ್ಗಕ್ಕೆ ಮೀಸಲಿಟ್ಟ ಹುದ್ದೆಗಳನ್ನು "ಬ" ಪ್ರವರ್ಗದ ವ್ಯಕ್ತಿಗಳಿಗೂ ಹಾಗೂ "ಬ" ಪ್ರವರ್ಗದ ಯಾವುದೇ ವ್ಯಕ್ತಿಯು ಲಭ್ಯವಾಗದಿದ್ದಲ್ಲಿ "ಅ" ಪ್ರವರ್ಗದ ವ್ಯಕ್ತಿಗಳಿಗೂ ಆ ಹುದ್ದೆಗಳನ್ನು ತುಂಬಲಾಗುವುದು.

೩. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ, ಹಿಂದುಳಿದ ವರ್ಗ ಮತ್ತು ಸಾಮಾನ್ಯ ವರ್ಗದ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ⅓ ರಷ್ಟು ಸ್ಥಾನಗಳನ್ನು ಆಯಾ ವರ್ಗದ ಮಹಿಳೆಯರಿಗೆ ಮೀಸಲಿಡಲಾಗುವುದು.

೪. ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳಿಗೂ ಸಹ ಮೀಸಲಾತಿಯನ್ನು ಆವರ್ತನ (ಸರದಿಯ) ಪದ್ಧತಿಯ ಮೇರೆಗೆ ಮಾಡಲಾಗುವುದು.

೫. ಈ ಎಲ್ಲಾ ಮೀಸಲಾತಿಯನ್ನು ಅಳವಡಿಸಿಕೊಂಡು ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಚುನಾವಣೆ ನಡೆಸಲಾಗುತ್ತದೆ.೨೦೧೬ರಲ್ಲಿ ನಡೆದ ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಆಯ್ಕೆಯಾದ ಸದಸ್ಯರುಗಳ ವಿವರಗಳಿಗೆ ಕೋಷ್ಟಕ ೯.೩ ರಲ್ಲಿ ನೋಡಿ.

**ಕೋಷ್ಟಕ ೯.೩: ರಾಜ್ಯದಲ್ಲಿ ೨೦೧೬ರಲ್ಲಿ ನಡೆದ ಜಿಲ್ಲಾ ಪಂಚಾಯತಿ ಚುನಾವಣೆಯ ಜಿಲ್ಲಾವಾರು, ವರ್ಗವಾರು ಸದಸ್ಯ ಸ್ಥಾನಗಳ ವಿವರ.**

| ಕ್ರ. ಸಂ. | ಜಿಲ್ಲೆ | ವರ್ಗವಾರು ಮೀಸಲರಿಸಿದ ಸ್ಥಾನಗಳ ಸಂಖ್ಯೆ | | | | | |
|---|---|---|---|---|---|---|---|
| | | ಒಟ್ಟು ಸ್ಥಾನಗಳ ಸಂಖ್ಯೆ | ಅನುಸೂಚಿತ ಜಾತಿ | ಅನುಸೂಚಿತ ಪಂಗಡ | ಹಿಂದುಳಿದ “ಅ” ವರ್ಗ | ಹಿಂದುಳಿದ “ಬ” ವರ್ಗ | ಸಾಮಾನ್ಯ |
| ೧ | ೨ | ೩ | ೪ | ೫ | ೬ | ೭ | ೮ |
| ೧ | ಬೆಂಗಳೂರು ನಗರ | ೫೦(೨೫) | ೧೧(೬) | ೨(೧) | ೧೦(೫) | ೨(೧) | ೨೫(೧೨) |
| ೨ | ಬೆಂಗಳೂರು (ಗ್ರಾ) | ೨೧(೧೧) | ೫(೩) | ೧(೧) | ೩(೨) | ೧(೦) | ೧೧(೫) |
| ೩ | ರಾಮನಗರ | ೨೨(೧೧) | ೪(೨) | ೧(೧) | ೫(೨) | ೧(೧) | ೧೧(೫) |
| ೪ | ಚಿತ್ರದುರ್ಗ | ೩೭(೧೯) | ೯(೫) | ೭(೪) | ೨(೧) | ೦(೦) | ೧೯(೯) |
| ೫ | ದಾವಣಗೆರೆ | ೩೬(೧೮) | ೯(೫) | ೫(೩) | ೩(೨) | ೧(೦) | ೧೮(೮) |
| ೬ | ಕೋಲಾರ | ೩೦(೧೫) | ೯(೫) | ೨(೧) | ೩(೨) | ೧(೦) | ೧೫(೭) |
| ೭ | ಚಿಕ್ಕಬಳ್ಳಾಪುರ | ೨೮(೧೪) | ೮(೪) | ೪(೨) | ೨(೧) | ೦(೦) | ೧೪(೭) |
| ೮ | ಶಿವಮೊಗ್ಗ | ೩೧(೧೬) | ೬(೩) | ೧(೧) | ೬(೩) | ೨(೧) | ೧೬(೮) |
| ೯ | ತುಮಕೂರು | ೫೭(೨೯) | ೧೨(೬) | ೫(೩) | ೯(೫) | ೨(೧) | ೨೯(೧೪) |
| ೧೦ | ಚಿಕ್ಕಮಗಳೂರು | ೩೩(೧೭) | ೮(೪) | ೧(೧) | ೬(೩) | ೧(೧) | ೧೭(೮) |
| ೧೧ | ದಕ್ಷಿಣ ಕನ್ನಡ | ೩೬(೧೮) | ೩(೨) | ೨(೧) | ೧೦(೫) | ೨(೧) | ೧೯(೯) |
| ೧೨ | ಉಡುಪಿ | ೨೬(೧೩) | ೨(೧) | ೧(೧) | ೭(೪) | ೨(೧) | ೧೪(೬) |
| ೧೩ | ಹಾಸನ | ೪೦(೨೦) | ೮(೪) | ೧(೧) | ೯(೫) | ೨(೧) | ೨೦(೯) |
| ೧೪ | ಕೊಡಗು | ೨೯(೧೫) | ೪(೨) | ೩(೨) | ೬(೩) | ೧(೧) | ೧೫(೭) |
| ೧೫ | ಮಂಡ್ಯ | ೪೧(೨೧) | ೬(೩) | ೧(೧) | ೧೦(೬) | ೩(೧) | ೨೧(೧೦) |
| ೧೬ | ಮೈಸೂರು | ೪೯(೨೫) | ೧೦(೫) | ೭(೪) | ೬(೩) | ೧(೧) | ೨೫(೧೨) |
| ೧೭ | ಚಾಮರಾಜನಗರ | ೨೩(೧೨) | ೬(೩) | ೩(೨) | ೨(೧) | ೦(೦) | ೧೨(೬) |
| ೧೮ | ಬೆಳಗಾವಿ | ೯೦(೪೫) | ೧೧(೬) | ೭(೪) | ೨೨(೧೧) | ೫(೩) | ೪೫(೨೧) |
| ೧೯ | ವಿಜಯಪುರ | ೪೨(೨೧) | ೯(೫) | ೧(೧) | ೯(೫) | ೨(೧) | ೨೧(೯) |
| ೨೦ | ಬಾಗಲಕೋಟೆ | ೩೬(೧೮) | ೭(೪) | ೨(೧) | ೭(೪) | ೨(೧) | ೧೮(೮) |
| ೨೧ | ಧಾರವಾಡ | ೨೨(೧೧) | ೨(೧) | ೧(೧) | ೬(೩) | ೧(೧) | ೧೨(೫) |
| ೨೨ | ಗದಗ | ೧೯(೧೦) | ೪(೨) | ೧(೧) | ೩(೨) | ೧(೦) | ೧೦(೫) |
| ೨೩ | ಹಾವೇರಿ | ೩೪(೧೭) | ೫(೩) | ೩(೨) | ೭(೪) | ೨(೧) | ೧೭(೭) |
| ೨೪ | ಉತ್ತರ ಕನ್ನಡ | ೩೯(೨೦) | ೩(೨) | ೧(೧) | ೧೦(೬) | ೩(೧) | ೨೨(೧೦) |
| ೨೫ | ಬೀದರ್ | ೩೪(೧೭) | ೯(೫) | ೬(೩) | ೨(೧) | ೦(೦) | ೧೭(೮) |
| ೨೬ | ಬಳ್ಳಾರಿ | ೪೦(೨೦) | ೯(೫) | ೯(೫) | ೨(೧) | ೦(೦) | ೨೦(೯) |
| ೨೭ | ರಾಯಚೂರು | ೩೮(೧೯) | ೮(೪) | ೯(೫) | ೨(೧) | ೦(೦) | ೧೯(೯) |
| ೨೮ | ಕಲಬುರಗಿ | ೪೭(೨೪) | ೧೩(೭) | ೧(೧) | ೭(೪) | ೨(೧) | ೨೪(೧೧) |
| ೨೯ | ಯಾದಗಿರಿ | ೨೪(೧೨) | ೬(೩) | ೩(೨) | ೨(೨) | ೧(೦) | ೧೨(೫) |
| ೩೦ | ಕೊಪ್ಪಳ | ೨೯(೧೫) | ೬(೩) | ೪(೨) | ೩(೨) | ೧(೦) | ೧೫(೮) |
| | **ಒಟ್ಟು** | **೧೦೮೩(೫೪೮)** | **೨೧೨(೧೧೩)** | **೯೫(೫೯)** | **೧೮೧(೯೯)** | **೪೨(೨೦)** | **೫೫೩(೨೫೭)** |

### ಜಿಲ್ಲಾ ಯೋಜನಾ ಸಮಿತಿ

ರಾಜ್ಯಾಂಗದ ೭೪ನೇ ತಿದ್ದುಪಡಿಯ ಕಲಂ ೨೪೩ ಜಿಲ್ಲೆಗೆ ಒಂದರಂತೆ ಜಿಲ್ಲಾ ಯೋಜನಾ ಸಮಿತಿಯನ್ನು ರಚಿಸಲು ಹೊಸ ಕಾಯಿದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಪಂಚಾಯಿತಿಗಳು ಹಾಗೂ ಪಟ್ಟಣ ಸ್ಥಳೀಯ ಸಂಸ್ಥೆಗಳು ತಯಾರಿಸಿದ ಯೋಜನೆಗಳನ್ನು ಈ ಸಮಿತಿಯು ಸಮಗ್ರೀಕರಿಸಿ ಪಂಚಾಯಿತಿ ಮತ್ತು ಪುರಸಭೆಗಳ ನಡುವೆ ಪ್ರಾದೇಶಿಕ ಯೋಜನೆ ರೂಪಿಸುವುದು, ನೀರು ಹಂಚಿಕೆ ಮತ್ತು ಇತರೆ ಪ್ರಾಕೃತಿಕ ಹಾಗೂ ಭೌತಿಕ ಸಂಪನ್ಮೂಲಗಳನ್ನೂ ಸೇರಿ ಸಾಮಾನ್ಯ ಆಸಕ್ತಿಯ ವಿಚಾರಗಳಿಗೆ ಸಂಬಂಧಪಟ್ಟಂತೆ ಇಡಿಯಾಗಿ ಪರಿಗಣಿಸಿ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುತ್ತದೆ. ಮೂಲ ಸೌಕರ್ಯಗಳ ಸಮಗ್ರ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ, ಹಣಕಾಸು ಮತ್ತು ಇತರ ಸಂಪನ್ಮೂಲಗಳ ಲಭ್ಯತೆಯ ಅಂಶಗಳನ್ನು ಅದು ಒಳಗೊಂಡಿರುತ್ತದೆ. ಈ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿರ್ವಹಿಸುವ ನಿಟ್ಟಿನಲ್ಲಿ ಜಿಲ್ಲಾ ಯೋಜನಾ ಸಮಿತಿ ಕಾರ್ಯತಂತ್ರವನ್ನು ರೂಪಿಸುತ್ತದೆ.

ಪಂಚಾಯತ್ ರಾಜ್ ಸಂಸ್ಥೆಗಳು ಮಾರ್ಗದರ್ಶನವನ್ನು ಮಾಡುತ್ತವೆ. ಸ್ಥಳೀಯ ಸಂಸ್ಥೆಗಳು ತಯಾರಿಸುವ ಪಂಚ ವಾರ್ಷಿಕ ಯೋಜನೆಗಳನ್ನು ಚರ್ಚಿಸಿ, ಜಿಲ್ಲಾ ಅಭಿವೃದ್ಧಿ ಯೋಜನೆಯಲ್ಲಿ ಅಳವಡಿಸುವ ಕಾರ್ಯಗಳ ಅನುಷ್ಠಾನದ ಮೌಲ್ಯಮಾಪನ ಅಧ್ಯಯನಗಳನ್ನು ಕೈಗೊಳ್ಳುವ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಯೋಜನೆ ಹಾಗೂ ಇತರೆ ವಿಷಯಗಳಲ್ಲಿ ಸಮನ್ವಯ ಸಾಧಿಸುವ ವಿಶೇಷ ಅಧ್ಯಯನಗಳನ್ನು, ವಿಚಾರ ಸಂಕಿರಣಗಳನ್ನು ಹಾಗೂ ಹೊಸ ಸುಧಾರಣೆಗಳನ್ನು ತರುವ ಪ್ರಕಾರ್ಯಗಳನ್ನು ಜಿಲ್ಲಾ ಯೋಜನಾ ಸಮಿತಿಗೆ ವಹಿಸಲಾಗಿದೆ.

ಪಂಚಾಯತ್ ರಾಜ್ ಹಣಕಾಸು ವ್ಯವಸ್ಥೆಯನ್ನು ಐದು ವರ್ಷಗಳಿಗೆ ಒಮ್ಮೆ ಪರಿಶೀಲಿಸಲು ಹಣಕಾಸು ಆಯೋಗ ಮತ್ತು ಖಾಯಂ ಆದ ಚುನಾವಣಾ ಆಯೋಗವನ್ನು ರಚಿಸಲು ಅವಕಾಶ ಮಾಡಿಕೊಡಲಾಗಿದೆ. ರಾಜ್ಯ ಸರ್ಕಾರವು ಈಗಾಗಲೇ ಪ್ರತ್ಯೇಕವಾದ ರಾಜ್ಯ ಚುನಾವಣಾ ಆಯೋಗ ಮತ್ತು ಹಣಕಾಸು ಆಯೋಗಗಳನ್ನು ನೇಮಿಸಿದೆ. ಈ ಸಂಸ್ಥೆಗಳಿಗೆ ಪ್ರತಿ ಐದು ವರ್ಷಗಳಿಗೆ ಒಮ್ಮೆ ತಪ್ಪದೇ ಚುನಾವಣೆ ನಡೆಸುವುದನ್ನು ಕಡ್ಡಾಯಗೊಳಿಸಲಾಗಿದೆ. ಪ್ರತಿಯೊಂದು ಹಂತದಲ್ಲಿ ಚುನಾಯಿತ ಪ್ರತಿನಿಧಿ ಹಾಗೂ ಮುಖ್ಯ ನಿರ್ವಹಣಾ ಅಧಿಕಾರಿಗಳ ಹೊಣೆಗಾರಿಕೆಯ ಬಗ್ಗೆ ಕಾಯ್ದೆಯು ಸೂಕ್ತ ಗಮನ ನೀಡಿದೆ. ಜಿಲ್ಲಾ ಪರಿಷತ್ತಿನ ಮುಖ್ಯ ಅಧಿಕಾರಿಯನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ" (ಸಿ.ಇ.ಓ) ಎಂದು ಕರೆಯಲಾಗುತ್ತದೆ. ಜಿಲ್ಲಾ ಮತ್ತು ತಾಲೂಕು ಪಂಚಾಯಿತಿಯ ಅಧ್ಯಕ್ಷರನ್ನು ಮೂರನೆಯ ಎರಡು (⅔) ಬಹುಮತದ ಆಧಾರದ ಮೇಲೆ ಮಾತ್ರ ಪದಚ್ಯುತಿಗೊಳಿಸಬಹುದಾಗಿದೆ. ಇಂತಹ ವ್ಯವಸ್ಥೆಯಿಂದ ಗ್ರಾಮ ಪಂಚಾಯಿತಿ ಸಂಸ್ಥೆಗಳಿಗೆ ಸ್ಥಿರತೆಯನ್ನು ಒದಗಿಸುವುದಕ್ಕೆ ಸಹಾಯಕವಾಗುತ್ತದೆ.

ಸೂಕ್ತ ಸಂದರ್ಭದಲ್ಲಿ ಸರ್ಕಾರವು ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿಗಳನ್ನು ಸಕಾರಣವಿದ್ದಲ್ಲಿ ವಿಚಾರಣೆಗೆ ಒಳಪಡಿಸಿ ಅಂತಹ ಪಂಚಾಯಿತಿಗಳನ್ನು ರದ್ದುಪಡಿಸಬಹುದು. ಹೊಸ ಕಾನೂನಿನನ್ವಯ ಪಂಚಾಯತ್ ರಾಜ್ ವ್ಯವಸ್ಥೆಯ ಒಟ್ಟು ಸಿಬ್ಬಂದಿಯ ವರ್ಗಾವಣೆ ಅಧಿಕಾರವನ್ನು ಸರ್ಕಾರ ಹೊಂದಿದೆ. ಹಾಗೆಯೇ ಪಂಚಾಯಿತಿಗಳು ಯಾವುದೇ ಗ್ರಾಮದ ಹಿತಕ್ಕೆ ಮಾರಕವಾದ ಕೆಲಸ ಮಾಡುವ ಅಥವಾ ಸಭೆಯಲ್ಲಿ ನಿರ್ಣಯಿಸಿದ ಗೊತ್ತುವಳಿಗಳನ್ನು ರದ್ದುಪಡಿಸುವ ಹಕ್ಕು ಸರ್ಕಾರಕ್ಕೆ ಇದೆ. ಪ್ರತಿ ಗ್ರಾಮಪಂಚಾಯಿತಿ, ತಾಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗೆ ಪ್ರತ್ಯೇಕವಾದ ನಿಧಿಯನ್ನು ರೂಪಿಸಲು ಅವಕಾಶ ಮಾಡಿಕೊಡಲಾಗಿದೆ. ಜಿಲ್ಲಾ ಪಂಚಾಯಿತಿಯ ಕೆಲಸ ಕಾರ್ಯಗಳನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿ ಅಥವಾ ವಿಭಾಗಾಧಿಕಾರಿ ಪರಿಶೀಲಿಸಬಹುದು.

### ಪಂಚಾಯಿತಿಗಳಿಗೆ ಬಹುಮಾನ

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅತ್ಯುತ್ತಮ ಸಾಧನೆಯನ್ನು ಮಾಡುವ ಮೂರು ಹಂತದ ಪಂಚಾಯಿತಿಗಳಿಗೆ ಬಹುಮಾನ ನೀಡಿ ಪುರಸ್ಕರಿಸಲು ರಾಜ್ಯ ಸರ್ಕಾರ ೧೯೯೭ರಲ್ಲಿ ಒಂದು ಆಜ್ಞೆಯನ್ನು ಹೊರಡಿಸಿದೆ. ಅದರ ಅನ್ವಯ ಗ್ರಾಮ ಪಂಚಾಯಿತಿಗಳಿಗೆ ರಾಜ್ಯ ಮಟ್ಟದಲ್ಲಿ ಮೂರು ಬಹುಮಾನಗಳನ್ನು (ರೂ. ಒಂದು ಲಕ್ಷ, ರೂ. ೫೦ ಸಾವಿರ ಮತ್ತು ರೂ. ೨೫ ಸಾವಿರ), ತಾಲೂಕು ಪಂಚಾಯಿತಿಗಳಿಗೂ ಮೂರು ಬಹುಮಾನಗಳನ್ನು (ರೂ. ಎರಡು ಲಕ್ಷ, ರೂ. ಒಂದು ಲಕ್ಷ, ಮತ್ತು ರೂ. ೫೦ಸಾವಿರ ) ಹಾಗೂ ರಾಜ್ಯ ಮಟ್ಟದ ಅತ್ಯುತ್ತಮ ಜಿಲ್ಲಾ ಪಂಚಾಯಿತಿಗೆ ರೂ. ಐದು ಲಕ್ಷದ ಬಹುಮಾನ ನೀಡುವ ಅವಕಾಶ ಮಾಡಿಕೊಡಲಾಗಿದೆ.

ಕರ್ನಾಟಕ ಪಂಚಾಯತ್‌ರಾಜ್ ಕಾನೂನಿನ್ವಯ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಇದ್ದ ಜಿಲ್ಲಾ ಪರಿಷತ್ತುಗಳ ಸ್ಥಾನದಲ್ಲಿ ಹೆಚ್ಚು ಬಲಿಷ್ಠ ಹಾಗೂ ವಿಶಿಷ್ಟ ಅಧಿಕಾರಗಳುಳ್ಳ ಜಿಲ್ಲಾ ಪಂಚಾಯಿತಿ ರಚಿಸಲಾಯಿತು. ಗ್ರಾಮೀಣ ಜನತೆಯ ಆಶೋತ್ತರಗಳಿಗನುಗುಣವಾಗಿ ಸರ್ಕಾರವು ಕೈಗೊಳ್ಳುವ ಬಹುತೇಕ ಅಭಿವೃದ್ಧಿ ಯೋಜನೆಗಳು ಹೆಚ್ಚು ಪರಿಣಾಮಕಾರಿಯಾಗಿ ಜಿಲ್ಲಾ ಪಂಚಾಯಿತಿಗಳ ಮೂಲಕ ಕಾರ್ಯಗತಗೊಳ್ಳುತ್ತವೆ. ಜಿಲ್ಲಾ ಪಂಚಾಯಿತಿ ವ್ಯಾಪ್ತಿಯು ಆಯಾ ಜಿಲ್ಲೆಯಲ್ಲಿ ಬರುವ ಪುರಸಭೆ, ನಗರಸಭೆ, ಮಹಾನಗರಪಾಲಿಕೆ, ನೈರ್ಮಲ್ಯ ಮಂಡಳಿ, ಅಧಿಸೂಚಿತ ಪ್ರದೇಶ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರ ಹೊರತುಪಡಿಸಿ ಗ್ರಾಮೀಣ ಪ್ರದೇಶಕ್ಕೆ ಸೀಮಿತವಾಗಿದೆ. ಪರಿಶಿಷ್ಟ ಜಾತಿ/ಪಂಗಡ, ಹಿಂದುಳಿದ ವರ್ಗದವರಿಗೆ ಕಾನೂನಿನನ್ವಯ ಮೀಸಲಾತಿ ಸೌಲಭ್ಯವನ್ನು ಒದಗಿಸಲಾಗಿದೆ. ಮಹಿಳೆಯರಿಗೆ ಚುನಾಯಿತ ಸದಸ್ಯ ಬಲದ ಮೂರನೇ ಒಂದು ಭಾಗದಷ್ಟು ಸ್ಥಾನಗಳನ್ನು ಮೀಸಲಿರಿಸಲಾಗಿದೆ. ಎಲ್ಲಾ ಚುನಾಯಿತ ಸದಸ್ಯರ ಅಧಿಕಾರಾವಧಿ ಐದು ವರ್ಷಗಳು.

### ಅಧ್ಯಕ್ಷರು/ಉಪಾಧ್ಯಕ್ಷರು

ಚುನಾಯಿತ ಸದಸ್ಯರು ತಮ್ಮಲ್ಲಿಯೇ ಅಧ್ಯಕ್ಷ ಹಾಗೂ ಉಪಾಧ್ಯಕ್ಷರೆಂದು ಆಯ್ಕೆ ಮಾಡಿಕೊಳ್ಳುವರು. ಹೀಗೆ ಆಯ್ಕೆಯಾದವರು ಸರ್ಕಾರ ನಿರ್ದಿಷ್ಟಪಡಿಸಿದಷ್ಟು ಸಂಬಳ, ಸಾರಿಗೆ ಭತ್ಯೆ ಹಾಗೂ ಇತರೆ ಸೌಲಭ್ಯ ಪಡೆಯುವರು. ಜಿಲ್ಲಾ ಪಂಚಾಯತ್‌ನ ಅಧ್ಯಕ್ಷ/ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲಾತಿ ಇರುತ್ತದೆ.

## ಆಡಳಿತ

ಕಾನೂನಿನನ್ವಯ ಜಿಲ್ಲಾ ಪಂಚಾಯತ್ ಕನಿಷ್ಟ ಎರಡು ತಿಂಗಳಿಗೊಮ್ಮೆ ಸಭೆ ಸೇರಬೇಕು. ಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆದ ಗೊತ್ತುವಳಿ ನಕಲನ್ನು ವಿಭಾಗೀಯ ಕಮಿಷನರಿಗೆ ಸಲ್ಲಿಸಬೇಕು. ಆಡಳಿತ ಸುಗಮ ಹಾಗೂ ಪರಿಣಾಮಕಾರಿಯಾಗಿ ನಡೆಯಲು ಅನುಕೂಲವಾಗುವಂತೆ ಚುನಾಯಿತ ಸದಸ್ಯರು ಒಳಗೊಂಡಿರುವ ಸ್ಥಾಯಿಸಮಿತಿಗಳನ್ನು ರಚಿಸಿಕೊಳ್ಳಲು ಕಾನೂನಿನಲ್ಲಿ ಅವಕಾಶವಿದೆ. ಜಿಲ್ಲಾ ಪಂಚಾಯ್ತಿಗಳು ರಚಿಸಿಕೊಂಡ ಸ್ಥಾಯಿಸಮಿತಿಗಳು ಯಾವುವೆಂದರೆ (೧) ಸಾಮಾನ್ಯ ಸಮಿತಿ ೨) ಹಣಕಾಸು, ಲೆಕ್ಕ ಪರಿಶೋದನೆ ಮತ್ತು ಯೋಜನೆ ಸಮಿತಿ ೩) ಸಾಮಾಜಿಕ ನ್ಯಾಯ ಸಮಿತಿ ೪) ಶಿಕ್ಷಣ ಮತ್ತು ಆರೋಗ್ಯ ೫) ವ್ಯವಸಾಯ ಮತ್ತು ಕೈಗಾರಿಕಾ ಸಮಿತಿ.

ಗ್ರಾಮ, ತಾಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ ಚುನಾವಣೆಯನ್ನು ರಾಜ್ಯ ಚುನಾವಣಾ ಆಯೋಗ ನಡೆಸುತ್ತದೆ. ಜಿಲ್ಲಾಧಿಕಾರಿ ದರ್ಜೆಯ ಅಧಿಕಾರಿಯು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿರುತ್ತಾರೆ. ಜಿಲ್ಲಾ ಪಂಚಾಯಿತಿಯ ಆಡಳಿತದ ಪ್ರತಿಯೊಂದು ವಿಭಾಗ, ಅಭಿವೃದ್ಧಿ ಯೋಜನೆಗಳ ಅನುಷ್ಠಾನ, ಆಡಳಿತಾತ್ಮಕ ಹಾಗೂ ಹಣಕಾಸಿನ ನಿರ್ವಹಣೆ, ಸಿಬ್ಬಂದಿ ನಿಯಂತ್ರಣ ಮುಂತಾದವುಗಳ ಮೇಲೆ ಅಧ್ಯಕ್ಷರ ಪರಮಾಧಿಕಾರವಿರುತ್ತದೆ. ನೈಸರ್ಗಿಕ ವಿಪತ್ತು ಬರಗಾಲದಂತಹ ತುರ್ತು ಸಂದರ್ಭಗಳಲ್ಲಿ ಪರಿಹಾರ ಕ್ರಮ ಕೈಗೊಳ್ಳಲು ಅನುವಾಗುವಂತೆ ಅಧ್ಯಕ್ಷರು ರೂ. ಒಂದು ಲಕ್ಷಗಳನ್ನು ಮಂಜೂರು ಮಾಡಬಹುದು. ಹೊಸ ಕಾನೂನಿನ್ವಯ ಜಿಲ್ಲೆಗೊಂದರಂತೆ ಜಿಲ್ಲಾ ಯೋಜನಾ ಸಮಿತಿಗಳ ರಚನೆಗೆ ಅವಕಾಶ ಕಲ್ಪಿಸಲಾಗಿದೆ.

## ಜಿಲ್ಲಾ ಪಂಚಾಯಿತಿಯ ಕರ್ತವ್ಯಗಳು

ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಅಗತ್ಯ ಯೋಜನೆಗಳ ರೂಪಿಸಿ ಅನುಷ್ಠಾನಗೊಳಿಸುವುದು, ತಾಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ನಡುವೆ ಪರಸ್ಪರ ಸಾಮರಸ್ಯ ಉಂಟು ಮಾಡುವುದು, ಅವು ಕೈಗೊಂಡಿರುವ ಅಭಿವೃದ್ಧಿ ಯೋಜನೆಯ ಕಾರ್ಯಪಾಲನೆ, ಪ್ರಗತಿ ಪರಿಶೀಲಿಸಿ ಅವಶ್ಯಕ ಮಾರ್ಗದರ್ಶನ ನೀಡುವುದು ಜಿಲ್ಲಾ ಪಂಚಾಯ್ತಿಯ ಸಾಮಾನ್ಯ ಕರ್ತವ್ಯಗಳಾಗಿವೆ. ಕಾಯ್ದೆಯಲ್ಲಿ ನಿಗದಿಗೊಳಿಸಿರುವಂತೆ ಜಿಲ್ಲಾ ಪಂಚಾಯ್ತಿಯು ೩೦ ವಿವಿಧ ಇಲಾಖೆಯ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಬೇಕಾಗುವುದು. ಅವುಗಳಲ್ಲಿ ಮುಖ್ಯವಾದವೆಂದರೆ, ೧. ವ್ಯವಸಾಯ ಮತ್ತು ತೋಟಗಾರಿಕೆ, ೨. ಭೂ ಅಭಿವೃದ್ಧಿ ಮತ್ತು ಭೂ ಸಾರ ಸಂರಕ್ಷಣೆ ೩. ಸಣ್ಣ ನೀರಾವರಿ ೪. ಪಶುಸಂಗೋಪನೆ ಮತ್ತು ಹೈನುಗಾರಿಕೆ, ೫. ಆಹಾರ ಸಂರಕ್ಷಣೆ ೬. ಸಣ್ಣ ಕೈಗಾರಿಕೆ ಅಭಿವೃದ್ಧಿ ೭. ಗ್ರಾಮೀಣ ವಸತಿ, ನೈರ್ಮಲ್ಯ ಮತ್ತು ಕುಡಿಯುವ ನೀರಿನ ಪೂರೈಕೆ ೮. ರಸ್ತೆಗಳು, ಕಟ್ಟಡಗಳು ಮತ್ತು ಸೇತುವೆ ನಿರ್ಮಾಣ ೯. ಅಸಾಂಪ್ರದಾಯಿಕ ಇಂಧನ ಬಳಕೆ ಅಭಿವೃದ್ಧಿ ೧೦. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಬಡತನ ನಿರ್ಮೂಲನೆ ಯೋಜನೆಗಳ ಅನುಷ್ಠಾನ ೧೧. ಪ್ರಾಥಮಿಕ, ಪ್ರೌಢ ಮತ್ತು ವೃತ್ತಿ ಹಾಗೂ ತಾಂತ್ರಿಕ ಶಿಕ್ಷಣ ವ್ಯವಸ್ಥೆಯ ನಿರ್ವಹಣೆ ೧೨. ಮಹಿಳಾ ಮತ್ತು ಮಕ್ಕಳ ಕಲ್ಯಾಣ ೧೩. ಸಮಾಜ ಕಲ್ಯಾಣ, ಪರಿಶಿಷ್ಟ ಜಾತಿ ಮತ್ತು ಪಂಗಡ ಕಲ್ಯಾಣ ಅಭಿವೃದ್ಧಿ ಯೋಜನೆ ೧೪. ಸಾರ್ವಜನಿಕ ಆಸ್ತಿಪಾಸ್ತಿ ಸಂರಕ್ಷಣೆ ೧೫. ಸಾರ್ವಜನಿಕ ಆಹಾರ ಸರಬರಾಜು ೧೬. ಗ್ರಾಮೀಣ ವಿದ್ಯುದೀಕರಣ ೧೭. ಸಹಕಾರ ೧೮. ಗ್ರಂಥಾಲಯ ಅಭಿವೃದ್ಧಿ ಯೋಜನೆಗಳು ಮುಂತಾದವು.

## ಹಣಕಾಸು

ಜಿಲ್ಲಾ ಪಂಚಾಯತ್‌ಗೆ ತನ್ನದೇ ಆದ ಪಂಚಾಯಿತಿ ನಿಧಿ ಇರುತ್ತದೆ. ಈ ನಿಧಿಯು ೧. ರಾಜ್ಯ ಸಂಚಿತ ನಿಧಿಯಿಂದ ವರ್ಗಾಯಿಸಿದ ಹಣ ೨. ಸರ್ಕಾರದ ಅನುದಾನ ೩. ಸಾಲಗಳು ೪. ಮುಂಗಡಗಳು ೫. ವಂತಿಕೆಗಳು ೬. ಆಸ್ತಿಗಳಿಂದ ಸಂದಾಯವಾಗುವ ಬಾಡಿಗೆ ೭. ವಿವಿಧ ಸೇವೆಗಳ ಶುಲ್ಕಗಳು ೮. ಬಡ್ಡಿ ಮುಂತಾದ ಸಂಪನ್ಮೂಲಗಳಿಂದ ಆದಾಯ ಸಂಗ್ರಹಿಸುತ್ತದೆ. ಜಿಲ್ಲಾ ಪಂಚಾಯಿತಿಯು ತನ್ನ ಆದಾಯದ ಕನಿಷ್ಟ ಶೇ. ೨೦ ರಷ್ಟು ಮೊತ್ತವನ್ನು ಪರಿಶಿಷ್ಟ ಜಾತಿ/ಪಂಗಡಗಳ ಅಭಿವೃದ್ಧಿಗೆ ವಿನಿಯೋಗಿಸಬೇಕು.

ಜಿಲ್ಲಾ ಪಂಚಾಯತ್‌ನಲ್ಲಿ ಆರು ಸ್ಥಾಯಿ ಸಮಿತಿಗಳಿದ್ದು, ಅವುಗಳು ನಿರ್ವಹಿಸಬೇಕಾದ ಕಾರ್ಯಚಟುವಟಿಕೆಗಳನ್ನು ಮುಂದೆ ನೀಡಲಾಗಿದೆ.

೧. **ಸಾಮಾನ್ಯ ಸ್ಥಾಯಿ ಸಮಿತಿ:** ಇದು ತನ್ನ ವ್ಯಾಪ್ತಿಯ ಇಲಾಖೆಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಪರಿಶೀಲನೆ ಹಾಗೂ ಅವುಗಳ ಬಗ್ಗೆ ತೀರ್ಮಾನ ಕೈಗೊಳ್ಳುತ್ತದೆ. ಸಿಬ್ಬಂದಿ ವಿಷಯಗಳು, ಸಂಪರ್ಕ, ಕಟ್ಟಡಗಳು, ಗ್ರಾಮೀಣ ಗೃಹ ನಿರ್ಮಾಣ, ವಿಸ್ತರಣಾ ಕಾರ್ಯಗಳು, ಪ್ರಕೃತಿ ವಿಕೋಪಗಳಿಗಾಗಿ ಪರಿಹಾರ ಇತ್ಯಾದಿ.

೨. **ಹಣಕಾಸು ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ:** ಯೋಜನೆಗಳು, ಹಣಕಾಸು ಹಾಗೂ ಬಜೆಟ್ ರೂಪಿಸುತ್ತದೆ. ಲೆಕ್ಕಪತ್ರ ತಪಾಸಣೆಯ ವ್ಯವಹಾರಗಳ ಪರಿಶೀಲನೆ, ಅನುಮೋದನೆ, ಮಂಜೂರಾತಿ ನೀಡುವುದು ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತದೆ.

೩. **ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ:** ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳ ಕಾರ್ಯಕ್ರಮಗಳು, ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಿತಾಸಕ್ತಿಗಳ ಸಂರಕ್ಷಣೆ. ಸಾಮಾಜಿಕ ನ್ಯಾಯ ಹಾಗೂ ಎಲ್ಲಾ ರೀತಿಯ ಶೋಷಣೆಗಳಿಂದ ಅವರನ್ನು ಸಂರಕ್ಷಿಸುವುದು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿ, ಇತರ ದುರ್ಬಲ ವರ್ಗದವರಿಗೆ, ಅಲ್ಪಸಂಖ್ಯಾತರಿಗೆ, ಮಹಿಳೆಯರಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡುವುದು.

೪. **ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ:** ಜಿಲ್ಲಾ ಪಂಚಾಯಿತಿಯು ಎಲ್ಲಾ ಶೈಕ್ಷಣಿಕ ಚಟುವಟಿಕೆಗಳ ಹೊಣೆಗಾರಿಕೆ ಹೊಂದಿದ್ದು, ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ರಾಷ್ಟ್ರೀಯ ಮತ್ತು ರಾಜ್ಯ ಯೋಜನೆಗಳ ಚೌಕಟ್ಟಿನೊಳಗೆ ಜಿಲ್ಲೆಯಲ್ಲಿ ಶಿಕ್ಷಣ ಯೋಜನೆಗಳನ್ನು ಕೈಗೊಳ್ಳುವುದು.

ಶೈಕ್ಷಣಿಕ ಚಟುವಟಿಕೆಗಳ ಸಮೀಕ್ಷೆ ಮತ್ತು ಮೌಲ್ಯ ನಿರ್ಣಯ ಮಾಡುವುದು, ಶಿಕ್ಷಣ, ವಯಸ್ಕರ ಶಿಕ್ಷಣ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಸಂಬಂಧಿತ ಕಾರ್ಯಗಳನ್ನು ನೆರವೇರಿಸುವುದು, ಆರೋಗ್ಯ ಸೇವೆಗಳು, ಆಸ್ಪತ್ರೆಗಳು, ನೀರು ಸರಬರಾಜು, ಕುಟುಂಬ ಕಲ್ಯಾಣ ಮತ್ತು ಇತರ ಕಾರ್ಯಗಳನ್ನು ನಿರ್ವಹಿಸುವುದು.

೫. **ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ**: ಕೃಷಿ ಉತ್ಪಾದನೆ, ಬದು ನಿರ್ಮಾಣ ಮತ್ತು ಭೂಮಿಯನ್ನು ಕೃಷಿ ಯೋಗ್ಯವನ್ನಾಗಿ ಮಾಡುವುದು. ಪಶುಸಂಗೋಪನೆ, ರೇಷ್ಮೆ, ಸಹಕಾರಗಳಿಗೆ ಸಂಬಂಧಿತ ಕಾರ್ಯ ನೆರವೇರಿಸುವುದು. ಗೃಹ ಹಾಗೂ ಗುಡಿ ಕೈಗಾರಿಕೆಗಳು ಸೇರಿದಂತೆ ಜಿಲ್ಲೆಯಲ್ಲಿ ಕೈಗಾರಿಕಾ ಅಭಿವೃದ್ಧಿಯನ್ನು ಉತ್ತೇಜಿಸುವುದು.

೬. **ಖರೀದಿ ಸಮಿತಿ**: ಜಿಲ್ಲಾ ಪಂಚಾಯಿತಿ ಆಡಳಿತ ವ್ಯಾಪ್ತಿಯ ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದ ಸಾಮಗ್ರಿಗಳ ಖರೀದಿ ಬಗ್ಗೆ ಚರ್ಚಿಸಿ, ನಿರ್ಧಾರ ಕೈಗೊಳ್ಳುವ ಕಾರ್ಯವನ್ನು ಹೊಂದಿರುತ್ತದೆ.

## ಸ್ಥಾಯಿ ಸಮಿತಿಗಳ ಕಾರ್ಯಾಚರಣೆ

೧) ಪ್ರತಿಯೊಂದು ಸ್ಥಾಯಿ ಸಮಿತಿಯು ಅಧ್ಯಕ್ಷರನ್ನು ಒಳಗೊಂಡಂತೆ ಏಳು ಚುನಾಯಿತ ಸದಸ್ಯರನ್ನು ಒಳಗೊಂಡಿರುತ್ತದೆ. ೨) ಯಾವ ಸದಸ್ಯರು ಎರಡಕ್ಕಿಂತ ಹೆಚ್ಚು ಸ್ಥಾಯಿ ಸಮಿತಿಗಳಿಗೆ ಸದಸ್ಯನಾಗಿರುವಂತಿಲ್ಲ. ೩) ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು, ಹಣಕಾಸು ಮತ್ತು ಲೆಕ್ಕ ಪರಿಶೋಧನೆ ಹಾಗೂ ಯೋಜನಾ ಸಮಿತಿಯ ಪದನಿಮಿತ್ತ ಸದಸ್ಯ ಹಾಗೂ ಅಧ್ಯಕ್ಷರಾಗಿರುತ್ತಾರೆ. ೪) ಜಿಲ್ಲಾ ಪಂಚಾಯಿತಿಯ ಉಪಾಧ್ಯಕ್ಷರು, ಸಾಮಾನ್ಯ ಸ್ಥಾಯಿ ಸಮಿತಿಯ ಪದನಿಮಿತ್ತ ಸದಸ್ಯ ಹಾಗೂ ಅಧ್ಯಕ್ಷರಾಗಿರುತ್ತಾರೆ. ೫) ಇನ್ನುಳಿದ ಸಮಿತಿಗಳು ಆಯಾ ಸಮಿತಿಯ ಸದಸ್ಯರುಗಳ ಪೈಕಿಯಿಂದ ಒಬ್ಬನನ್ನು ಅಧ್ಯಕ್ಷನನ್ನಾಗಿ ಚುನಾಯಿಸಿಕೊಳ್ಳುತ್ತದೆ. ೬) ಸಾಮಾಜಿಕ ನ್ಯಾಯ ಸಮಿತಿಯು ಒಬ್ಬ ಮಹಿಳಾ ಸದಸ್ಯೆ ಮತ್ತು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ಇತರ ವರ್ಗಗಳಿಗೆ ಸೇರಿದ ಸದಸ್ಯರನ್ನು ಒಳಗೊಂಡಿರುತ್ತದೆ. ೭) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಸಾಮಾನ್ಯ ಸ್ಥಾಯಿ ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿರುತ್ತಾರೆ ಮತ್ತು ಇನ್ನುಳಿದ ಸಮಿತಿಗಳಿಗೆ ಉಪ ಕಾರ್ಯದರ್ಶಿಗಳನ್ನು ಪದನಿಮಿತ್ತ ಕಾರ್ಯದರ್ಶಿಗಳನ್ನಾಗಿ ನಾಮ ನಿರ್ದೇಶನ ಮಾಡುತ್ತಾರೆ. ೮) ಸ್ಥಾಯಿ ಸಮಿತಿಗಳ ಸದಸ್ಯರ ಮತ್ತು ಪದಾಧಿಕಾರಿಗಳ ಅವಧಿಯು ೨೦ ತಿಂಗಳು ಅಥವಾ ಜಿಲ್ಲಾ ಪಂಚಾಯಿತಿಯ ಸದಸ್ಯತ್ವ ಅವಧಿ ಮುಕ್ತಾಯವಾಗುವವರೆಗೆ ಇದರಲ್ಲಿ ಯಾವುದೂ ಮೊದಲೋ ಆ ಅವಧಿಯಾಗಿರುತ್ತದೆ. ಮತ್ತು ೯) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಎಲ್ಲಾ ಸ್ಥಾಯಿ ಸಮಿತಿಗಳ ಸಭೆಯಲ್ಲಿ ಭಾಗವಹಿಸುವ ಹಕ್ಕನ್ನು ಹೊಂದಿರುತ್ತಾರೆ.

**ಗ್ರಾಮೀಣ ನೀರು ಸರಬರಾಜು** : ಸ್ವಾತಂತ್ರ್ಯಾ ನಂತರದ ದಶಕಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧವಾದ ಕುಡಿಯುವ ನೀರನ್ನು ಒದಗಿಸುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವಾರು ಯೋಜನೆಗಳನ್ನು ಜಾರಿಗೆ ತಂದಿವೆ. ಗ್ರಾಮೀಣ ನೀರು ಪೂರೈಕೆಯ ಯೋಜನೆಯನ್ನು ನೋಡಿಕೊಳ್ಳಲು ಸಾರ್ವಜನಿಕ ಆರೋಗ್ಯ ಮತ್ತು ಇಂಜಿನಿಯರಿಂಗ್ (ಪಿ.ಎಚ್.ಇ) ವಿಭಾಗಗಳು ಜಿಲ್ಲಾಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಪ್ರಸ್ತುತ ಈ ಕಾರ್ಯವನ್ನು ಜಿಲ್ಲಾ ಪಂಚಾಯಿತಿಗೆ ವಹಿಸಿಕೊಡಲಾಗಿದೆ. ಗ್ರಾಮೀಣ ನೀರು ಪೂರೈಕೆ ಯೋಜನೆಯನ್ನು ರಾಜ್ಯ ವಲಯ ಯೋಜನೆ, ರಾಷ್ಟ್ರೀಯ ಗ್ರಾಮೀಣ ನೀರು ಪೂರೈಕೆ ಯೋಜನೆ ಮತ್ತು ತ್ವರಿತ ಗ್ರಾಮೀಣ ನೀರು ಪೂರೈಕೆ ಯೋಜನೆ (ಕೇಂದ್ರ ವಲಯ) ಎಂದು ಪ್ರಮುಖ ವಲಯಗಳಾಗಿ ವಿಂಗಡಿಸಲಾಗಿದೆ. ಈ ಪ್ರಮುಖ ಯೋಜನೆಗಳಲ್ಲದೆ ಜಿಲ್ಲಾ ಕಿರು ನೀರು ಸರಬರಾಜು ಯೋಜನೆ, ತೆರೆದ ಬಾವಿ ಯೋಜನೆ ಮುಂತಾದ ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಸತಿ ಪ್ರದೇಶಗಳಿಗೆ ಪ್ರತ್ಯೇಕ ಕುಡಿಯುವ ನೀರಿನ ಯೋಜನೆಗಳನ್ನು ವಿಶೇಷ ಘಟಕ ಯೋಜನೆಗಳಡಿ ಅಳವಡಿಸಲಾಗಿದೆ. ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆಯ ಮೂಲಕ ಕುಡಿಯುವ ನೀರನ್ನು ಸಾರ್ವಜನಿಕರಿಗೆ ಕೊಳಾಯಿಗಳ ಮೂಲಕ ಒದಗಿಸಲಾಗುತ್ತಿದೆ. ಒಂದು ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆಯಿರುವ ಗ್ರಾಮಗಳಿಗೆ ಕೊಳಾಯಿ ನೀರಿನ ಸರಬರಾಜು ಯೋಜನೆಗಳನ್ನು, ನೀರಿನ ಕೊರತೆಯಿರುವ ಎಲ್ಲಾ ಗ್ರಾಮಗಳಿಗೆ ಟ್ಯಾಂಕುಗಳಲ್ಲಿ ನೀರು ಪೂರೈಕೆ ಮಾಡುವುದು ಸರ್ಕಾರದ ಕಾರ್ಯನೀತಿಯಾಗಿದೆ. ನೀರು ಸರಬರಾಜು ಯೋಜನೆಯ ವೆಚ್ಚವನ್ನು ಸರ್ಕಾರವು ಭರಿಸುತ್ತಿದೆ. ಇವುಗಳ ಕಾರ್ಯನಿರ್ವಹಣೆಯನ್ನು ಜಿಲ್ಲೆಯ ಸಾರ್ವಜನಿಕ ಆರೋಗ್ಯ ಇಂಜಿನಿಯರಿಂಗ್ (ಪಿ.ಹೆಚ್.ಇ-೩) ವಿಭಾಗ ನೋಡಿಕೊಳ್ಳುತ್ತದೆ.

## ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆ (ವಿಶ್ವಬ್ಯಾಂಕ್ ನೆರವು)

ಕರ್ನಾಟಕ ಸರ್ಕಾರವು ಕರ್ನಾಟಕದ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆಗೆ ರೂ. ೪೪೨.೨೦ ಕೋಟಿಗಳ ಸಾಲವನ್ನು ವಿಶ್ವ ಬ್ಯಾಂಕಿನಿಂದ ಪಡೆದಿದ್ದು, ಈ ಯೋಜನೆಯು ೧,೨೦೦ ಹಳ್ಳಿಗಳನ್ನು ಒಳಗೊಂಡಿದೆ. ಈ ಯೋಜನೆಯ ಮೊದಲನೆಯ ಹಂತದಲ್ಲಿ ೨೫೦ ಹಳ್ಳಿಗಳು ಮತ್ತು ಎರಡನೇ ಹಂತದಲ್ಲಿ ೯೫೦ ಹಳ್ಳಿಗಳು ಸೇರಿವೆ. ಈ ಹಳ್ಳಿಗಳನ್ನು ಕರ್ನಾಟಕದ ೧೩ ಜಿಲ್ಲೆಗಳಾದ ಬೆಂಗಳೂರು ಗ್ರಾಮಾಂತರ, ಮೈಸೂರು, ಮಂಡ್ಯ, ಚಾಮರಾಜನಗರ, ದಕ್ಷಿಣಕನ್ನಡ, ಶಿವಮೊಗ್ಗ, ಬೆಳಗಾವಿ, ಬಳ್ಳಾರಿ, ರಾಯಚೂರು, ಗುಲಬರ್ಗಾ, ಬೀದರ್, ತುಮಕೂರು ಮತ್ತು ಹಾಸನ ಜಿಲ್ಲೆಗಳಿಂದ ಆಯ್ಕೆ ಮಾಡಲಾಗಿದೆ.

ಈ ಕೆಳಕಂಡ ಮಾನದಂಡಗಳ ಅಡಿಯಲ್ಲಿ ಬರುವ ಹಳ್ಳಿಗಳನ್ನು ಆಯ್ಕೆ ಮಾಡಲಾಗಿದ್ದು, ಅವು ನಿರ್ವಹಿಸಬೇಕಾದ ಕಾರ್ಯಗಳೆಂದರೆ- ೧) ಅತೀ ತೀವ್ರವಾದ ನೀರಿನ ಕೊರತೆ ಇರುವ ಹಳ್ಳಿಗಳು. ೨) ನಾರು ಹುಣ್ಣಿನ ಹುಳು, ಫ್ಲೋರೋಸಿಸ್, ಹೆಪಟೈಟಿಸ್, ಕಾಲರ ಮತ್ತು ಜಠರ-ಕರುಳು ಬೇನೆಯಂತಹ ಆರೋಗ್ಯ ಸಮಸ್ಯೆಗಳನ್ನು ಹೊಂದಿರುವ ನೀರಿನ ಸರಬರಾಜು ಹೊಂದಿರುವ ಹಳ್ಳಿಗಳು. ೩) ಪ್ರಾಂತೀಯ ನೀರು ಸರಬರಾಜು ಯೋಜನೆಗಳು ಅಗತ್ಯವಿರುವ ಸಾಕಷ್ಟು ಅಂತರ್ಜಲ ಮೂಲವಿಲ್ಲದ ಹಳ್ಳಿಗಳು. ೪) ೪೦ ಎಲ್.ಪಿ.ಸಿ.ಡಿ. ಗಿಂತ ಕಡಿಮೆ ನೀರು ಸರಬರಾಜು ಆಗುತ್ತಿರುವ ಹಳ್ಳಿಗಳು. ಮತ್ತು ೫) ಶೌಚಾಲಯ ಹಾಗೂ ಒಳಚರಂಡಿ ಸಮಸ್ಯೆ

ಇರುವ ಹಳ್ಳಿಗಳು. ಇಲ್ಲಿ ನಮೂದಿಸಿರುವ ಕಾರ್ಯಾನುಷ್ಠಾನ ನಿಯಮಗಳನ್ನು ಉಪಯೋಗಿಸಿಕೊಂಡು ತಮ್ಮ ಜಿಲ್ಲೆಯಲ್ಲಿರುವ ಹಳ್ಳಿಗಳನ್ನು ಆದ್ಯತೆಯ ಮೇಲೆ ಆರಿಸಿಕೊಳ್ಳುವ ಜವಾಬ್ದಾರಿಯು ಜಿಲ್ಲಾ ಪಂಚಾಯಿತಿಯದಾಗಿದೆ.

ಜಿಲ್ಲಾ ಪಂಚಾಯಿತಿಯು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಹಾಗೂ ಮುಖ್ಯ ಕಾರ್ಯ ಚಟುವಟಿಕೆಗಳೆಂದರೆ.

ಅ) ಅಭಿವೃದ್ಧಿ ಕಾರ್ಯಗಳು – ೧. ಗ್ರಾಮೀಣ ನೀರು ಸರಬರಾಜು, ೨. ಪರಿಸರ ನೈರ್ಮಲ್ಯ.

ಆ) ಗ್ರಾಮದ ರಸ್ತೆಗಳು ಮತ್ತು ಒಳಚರಂಡಿ.

ಇ) ವಾಸಸ್ಥಳದ ಅಭಿವೃದ್ಧಿ– ೧. ಅಂತರ್ಜಲ ನವೀಕರಣ, ೨. ಸೋರುವಿಕೆಯನ್ನು ಕಂಡು ಹಿಡಿಯುವ ಸರ್ವೆ ಮತ್ತು ರಿಪೇರಿ ಕಾರ್ಯಗಳು.

ಈ) ನೀರಿನ ಗುಣಮಟ್ಟವನ್ನು ಪರೀಕ್ಷಿಸುವ ಪ್ರಯೋಗಾಲಯಗಳ ನಿರ್ಮಾಣ.

ಉ) ಜಾಗೃತಿಯನ್ನುಂಟು ಮಾಡಲು ಮತ್ತು ಸಮುದಾಯ ಸಹಭಾಗಿತ್ವಕ್ಕೆ ಸರಕಾರೇತರ ಸಂಸ್ಥೆಗಳನ್ನು ತೊಡಗಿಸುವುದು.

ಊ) ತರಬೇತಿ ಕಾರ್ಯಕ್ರಮಗಳು ಮತ್ತು

ಋ) ಸಮುದಾಯ ಜಾಗೃತಿ ಮತ್ತು ಉತ್ತಮವಾದ ಆರೋಗ್ಯಕ್ಕೆ ಸಂಪರ್ಕ ಮುಂತಾದವು.

ಕರ್ನಾಟಕ ಸರ್ಕಾರವು ನೀರು ಸರಬರಾಜು ಕಾರ್ಯಗಳಿಗೆ ಶೇ. ೧೦೦ರಷ್ಟು ಹಣ ಒದಗಿಸುತ್ತದೆ. ಆದರೆ, ಪರಿಸರ ನೈರ್ಮಲ್ಯದ ವೆಚ್ಚದಲ್ಲಿ ಶೇ. ೭೦ ರಷ್ಟನ್ನು ಒದಗಿಸಿ ಉಳಿದ ಶೇ. ೩೦ರಷ್ಟು ಹಣ ಅಥವಾ ವಸ್ತು ಅಥವಾ ಶ್ರಮದ ರೂಪದಲ್ಲಿ ಅಥವಾ ಈ ಮೂರು ಸೇರಿದಂತೆ ಗ್ರಾಮಸ್ಥರು ಒದಗಿಸಬೇಕು. ಕರ್ನಾಟಕ ಸರ್ಕಾರವು ಮಾಡಿದ ವೆಚ್ಚವನ್ನು ತದನಂತರ ವಿಶ್ವಬ್ಯಾಂಕು ಭರಿಸುತ್ತದೆ. ಈ ಯೋಜನೆಯಡಿ ತುಮಕೂರು ಜಿಲ್ಲೆಯಲ್ಲಿ ಒಂದನೇ ಹಂತದಲ್ಲಿ ೩೦ ಮತ್ತು ಎರಡನೇ ಹಂತದಲ್ಲಿ ೭೦ ಹಳ್ಳಿಗಳನ್ನು ಆರಿಸಲಾಗಿದೆ.

ಸರ್ಕಾರವು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಡಿ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಯೋಜಿಸಿ ಆರ್ಥಿಕ ನೆರವು ಹಾಗೂ ಅನುದಾನ ನೀಡುವ ಮೂಲಕ ಅವುಗಳನ್ನು ಕಾರ್ಯಗತಗೊಳಿಸುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಅನುಮೋದನೆಗೊಂಡ ಕೆಳಗೆ ನೀಡಲಾದ ಅಭಿವೃದ್ಧಿ ಯೋಜನೆ ಹಾಗೂ ಕಾರ್ಯಕ್ರಮಗಳಿಗೆ ಜಿಲ್ಲಾ ಪಂಚಾಯಿತಿ ಹಣ ಸಹಾಯ ಒದಗಿಸಿ ಮೇಲ್ವಿಚಾರಣೆ ಕೈಗೊಳ್ಳುತ್ತದೆ. ೧) ಸ್ವರ್ಣ ಜಯಂತಿ ರೋಜ್‌ಗಾರ್ ಯೋಜನೆ ೨) ಸ್ವರ್ಣ ಜಯಂತಿ ಗ್ರಾಮೀಣ ಸ್ವರೋಜ್‌ಗಾರ್ ಯೋಜನೆ ೩) ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ ೪) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ೫) ಇಂದಿರಾ ಆವಾಸ್ ಯೋಜನೆ ೬) ಅಂಬೇಡ್ಕರ್ ಆವಾಸ್ ಯೋಜನೆ ೭) ಆಶ್ರಯ ಯೋಜನೆ ೮) ಉದ್ಯೋಗ ಭರವಸೆ ಯೋಜನೆ ೯) ಸಮಗ್ರ ಗ್ರಾಮೀಣ ಇಂಧನ ಶಕ್ತಿ ಯೋಜನೆ ೧೦) ಸುಧಾರಿತ ಅಸ್ತ್ರ ಒಲೆ ಯೋಜನೆ ೧೧) ಜೈವಿಕ ಅನಿಲ ಯೋಜನೆ ೧೨) ಗ್ರಾಮೀಣ ಸಾಮೂಹಿಕ ವಿಮಾ ಯೋಜನೆ ೧೩) ಸ್ವಸ್ತಿ ಗ್ರಾಮ ಯೋಜನೆ ೧೪) ನಿರ್ಮಲ ಗ್ರಾಮಯೋಜನೆ ೧೫) ನವ ಗ್ರಾಮ ಯೋಜನೆ ೧೬) ಕುಟೀರ ಜ್ಯೋತಿ ಯೋಜನೆ ೧೭) ನೆರಳಿನ ಭಾಗ್ಯ ಯೋಜನೆ ೧೮) ಸುವರ್ಣ ಗ್ರಾಮ ಯೋಜನೆ.

## ಪುರಸಭೆಗಳು

೧೮೫೦ರ ಕಾಯ್ದೆಯ ಪ್ರಕಾರ, ಸ್ಥಳೀಯ ಸಂಸ್ಥೆಗಳನ್ನು ಕಮೀಷನರ್‌ಗಳ ಆಳ್ವಿಕೆಯ ಕಾಲದಲ್ಲಿ ಮೈಸೂರು ಮತ್ತು ಬೆಂಗಳೂರುಗಳಲ್ಲಿ ಪ್ರಯೋಗಾರ್ಥವಾಗಿ ಪ್ರಾರಂಭಿಸಲಾಯಿತು. ೧೮೬೫ರ ಹೊತ್ತಿಗೆ ಉಳಿದ ಜಿಲ್ಲಾ ಕೇಂದ್ರಗಳಿಗೆ ಇಂತಹುದೇ ಸಮಿತಿಗಳನ್ನು ರಚಿಸಲಾಯಿತು. ಹಾಗೂ ೧೯೦೨ ಮತ್ತು ೧೯೦೬ರಲ್ಲಿ ಈ ಪೌರ ಸಂಸ್ಥೆಗಳಿಗೆ ಶಾಸನಬದ್ಧ ನೆಲೆ ನೀಡಲಾಯಿತು.

## ೧೯೪೭ರ ನಂತರದ ಬೆಳವಣಿಗೆಗಳು

ಸ್ವಾತಂತ್ರ್ಯಾನಂತರದ ಕಾಲದಲ್ಲಿ ಸ್ಥಳೀಯ ಸಂಸ್ಥೆಗಳು ತಮ್ಮ ತಮ್ಮ ಪ್ರದೇಶಗಳಿಗೆ ಸೀಮಿತಗೊಂಡಂತೆ, ಮೂಲಭೂತ ಪೌರಸೌಲಭ್ಯ ಒದಗಿಸುವ ಹಾಗೂ ಜನೋಪಯೋಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಪ್ರಯತ್ನದಲ್ಲಿ ಪ್ರಗತಿ ಸಾಧಿಸಿವೆ. ಸರ್ಕಾರವು ಸಹ ಈ ಸಂಸ್ಥೆಗಳನ್ನು ಆರ್ಥಿಕವಾಗಿ ಸದೃಢಗೊಳ್ಳಲು ಹಾಗೂ ಕಾಲಕಾಲಕ್ಕೆ ಅವುಗಳ ವರಮಾನ ಅಧಿಕಗೊಳ್ಳುವ ದಿಸೆಯಲ್ಲಿ ವಿವಿಧ ಆರ್ಥಿಕ ಮೂಲಗಳನ್ನು ಯೋಜಿಸಿ ಅವುಗಳ ತೆರಿಗೆ ಜಾಲವನ್ನು ವಿಸ್ತರಿಸುತ್ತಾ ಬಂದಿದೆ. ೧೯೫೧ರ ಪುರಸಭೆಗಳ ಕಾಯ್ದೆಯು ಚುನಾಯಿತ ಸದಸ್ಯರು ತಮ್ಮೊಳಗೇ ಅಧ್ಯಕ್ಷ, ಉಪಾಧ್ಯಕ್ಷರನ್ನು ಚುನಾಯಿಸಿಕೊಳ್ಳುವ ಹಕ್ಕು ನೀಡಿತು. ಅಧಿಕಾರ ವಿಕೇಂದ್ರೀಕರಣ, ಆರ್ಥಿಕ ಸ್ವಾಯತ್ತತೆ ಮುಂತಾದ ಪ್ರಗತಿಪರ ಹೆಜ್ಜೆಗಳು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳನ್ನು ಶಕ್ತಿ ಸಂವರ್ಧನೆಗೊಳಿಸುತ್ತಾ ಬಂದಿವೆ. ರಾಜ್ಯ ಪುನರ್ವಿಂಗಡಣೆ ನಂತರ, ರಾಜ್ಯದಲ್ಲಿರುವ ಮುನಿಸಿಪಲ್ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಹೆಚ್ಚು ವ್ಯಾಪಕವಾದ ಮತ್ತು ಏಕರೂಪವಾದ ಕಾನೂನನ್ನು ೧೯೬೪ರ ಏಪ್ರಿಲ್ ಒಂದರಿಂದ ಜಾರಿಗೆ ತರಲಾಯಿತು.

## ನಗರ ಪ್ರದೇಶದ ಸ್ವಯಂ ಆಡಳಿತ ಸಂಸ್ಥೆಗಳು

ಕರ್ನಾಟಕದಲ್ಲಿ ನಗರ ಸ್ವಯಂ ಆಡಳಿತ ಸಂಸ್ಥೆಗಳಲ್ಲಿ ಐದು ಬಗೆ ಇದೆ. ೧)ಮಹಾನಗರ ಪಾಲಿಕೆ (ಸಿಟಿ ಮುನಿಸಿಪಲ್ ಕಾರ್ಪೊರೇಷನ್) ೨)ನಗರ ಸಭೆಗಳು (ಸಿಟಿ ಮುನಿಸಿಪಲ್ ಕೌನ್ಸಿಲ್), ೩)ಪುರಸಭೆಗಳು (ಟೌನ್ ಮುನಿಸಿಪಲ್ ಕೌನ್ಸಿಲ್), ೪) ಅಧಿಸೂಚಿತ ಪ್ರದೇಶ ಸಮಿತಿ (ನೋಟಿಫೈಡ್ ಏರಿಯ ಕಮಿಟಿ) ಮತ್ತು ೫)ನೈರ್ಮಲ್ಯ ಮಂಡಳಿಗಳು. ೧೯೪೯ರ ಬೆಂಗಳೂರು ನಗರಪಾಲಿಕೆಯ ಅಧಿನಿಯಮ ಮತ್ತು ಮುಂಬಯಿ ಪ್ರಾಂತೀಯ ಮಹಾನಗರಪಾಲಿಕೆ ೧೯೪೯ರ ಅಧಿನಿಯಮದ ಬದಲಾಗಿ ರೂಪಿಸಿದ ೧೯೬೪ರ ಕರ್ನಾಟಕ ಪುರಸಭೆಗಳ ೨೨ನೆಯ ಅಧಿನಿಯಮ ಮತ್ತು ೧೯೭೬ರ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮದನ್ವಯ ಕೆಲಸ ಮಾಡುತ್ತಿವೆ. ೨೦೧೬ರ ಮಾರ್ಚ್ ಅಂತ್ಯಕ್ಕೆ ೧೦ ಮಹಾನಗರ ಪಾಲಿಕೆಗಳು ಬೆಂಗಳೂರು

ಬೃಹತ್ ಮಹಾನಗರ ಪಾಲಿಕೆ ಹೊರತುಪಡಿಸಿ, ೫೭ ನಗರ ಸಭೆಗಳು, ೧೧೨ ಪುರಸಭೆಗಳು, ೯೧ಪಟ್ಟಣ ಪಂಚಾಯತಿಗಳು ಹಾಗೂ ಐದು ಅಧಿಸೂಚಿತ ಪ್ರದೇಶಗಳು.

**ಮಹಾನಗರ ಪಾಲಿಕೆ:** ಎರಡು ಲಕ್ಷಕ್ಕಿಂತ ಕಡಿಮೆ ಇಲ್ಲದಷ್ಟು ಜನಸಂಖ್ಯೆ ಇರುವೆಡೆ ಮಹಾನಗರಪಾಲಿಕೆ (ಕಾರ್ಪೋರೇಷನ್) ಇರಬಹುದು. ೧೯೮೩ರಲ್ಲಿ ರಾಜ್ಯದಲ್ಲಿ ಆರು ಮಹಾನಗರ ಪಾಲಿಕೆಗಳಿದ್ದವು. ಅವೆಂದರೆ, ೧.ಬೆಂಗಳೂರು. ೨.ಹುಬ್ಬಳ್ಳಿ-ಧಾರವಾಡ, ೩.ಮೈಸೂರು, ೪.ಬೆಳಗಾವಿ, ೫.ಮಂಗಳೂರು ಮತ್ತು ೬.ಕಲ್ಬುರ್ಗಿ, ೧೯೮೨ರಲ್ಲಿ ಅಂಗೀಕೃತವಾದ ೧೯೮೨ರ ಕರ್ನಾಟಕ ಪೌರ ಕಾರ್ಪೋರೇಷನ್ (ತಿದ್ದುಪಡಿ) ಮಸೂದೆಯ ಪ್ರಕಾರ ಹೊಸದಾಗಿ ರಚಿಸಿದ ಕಾರ್ಪೋರೇಷನ್‌ಗಳ ಮೇಯರ್ ಉಪಮೇಯರ್ ಮತ್ತು ಪ್ರಥಮ ಸದಸ್ಯರುಗಳನ್ನು ನಾಮಕರಣ ಮಾಡುವ ಅಧಿಕಾರ ಸರ್ಕಾರಕ್ಕಿದೆ. ೧೯೭೯ರಲ್ಲಿ ಸುಂಕವನ್ನು ರದ್ದುಪಡಿಸಿದ್ದರಿಂದಾದ ನಷ್ಟವನ್ನು ಪರಿಹರಿಸುವುದಕ್ಕಾಗಿ ೧೯೮೧-೮೨ರಲ್ಲಿ ಆರು ಕಾರ್ಪೋರೇಷನ್‌ಗಳಿಗೆ ೧೯.೨೫ ಕೋಟಿ ರೂ.ಲೆಕ್ಕಾಚಾರದ ಅನುದಾನವನ್ನು ಕೊಡಲಾಯಿತು. ಅದರ ಹಿಂದಿನ ವರ್ಷಕ್ಕೆ ೧೫.೭೦ ಕೋಟಿ ರೂ.ಕೊಡಲಾಗಿತ್ತು. ೨೦೧೬ರ ಮಾರ್ಚಿ ಅಂತ್ಯಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹೊರತುಪಡಿಸಿ ತುಮಕೂರು, ದಾವಣಗೆರೆ, ಶಿವಮೊಗ್ಗ, ಮೈಸೂರು, ಮಂಗಳೂರು (ದಕ್ಷಿಣ ಕನ್ನಡ), ಬೆಳಗಾವಿ, ವಿಜಯಪುರ, ಹುಬ್ಬಳ್ಳಿ, ಧಾರವಾಡ, ಕಲಬುರ್ಗಿ ಹಾಗೂ ಬಳ್ಳಾರಿ ೧೦ ಮಹಾನಗರ ಪಾಲಿಕೆಗಳಿದ್ದವು.

ಈ ಪೈಕಿ ೧೯೮೧-೮೨ರಲ್ಲಿ ಬೆಂಗಳೂರು ಕಾರ್ಪೋರೇಷನ್‌ಗೆ ಕೊಟ್ಟ ಒಟ್ಟು ಮೊತ್ತ ೧೩.೨೩ ಕೋಟಿ ರೂ. ಮತ್ತು ಹುಬ್ಬಳ್ಳಿ ಧಾರವಾಡಕ್ಕೆ ೨.೧೯ಕೋಟಿ ರೂ.ಆಗಿತ್ತು. ೧೯೮೦-೮೧ರಲ್ಲಿ ಬೆಂಗಳೂರು ಮತ್ತು ಹುಬ್ಬಳ್ಳಿ-ಧಾರವಾಡ ಕಾರ್ಪೋರೇಷನ್‌ಗೆ ಕೊಟ್ಟ ಇಂತಹ ಮೊತ್ತ ಅನುಕ್ರಮವಾಗಿ ೧೧.೩೫ ಮತ್ತು ೧.೪೩ ಕೋಟಿ ರೂ ಆಗಿತ್ತು. ಈ ಅಧಿನಿಯಮದನ್ವಯ ಪ್ರತಿಯೊಂದು ನಿಗಮ ಹಾಗೂ ಮಂಡಳಿಗೂ ಐವತ್ತಕ್ಕಿಂತ ಕಡಿಮೆ ಇಲ್ಲದ ಹಾಗೂ ಒಂದು ನೂರಕ್ಕಿಂತ ಹೆಚ್ಚಿಲ್ಲದ ಸದಸ್ಯರು ಐದು ವರ್ಷಕ್ಕಾಗಿ ನೇರವಾಗಿ ಚುನಾಯಿಸಲ್ಪಡುತ್ತಾರೆ. ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಬುಡಕಟ್ಟುಗಳು, ಸ್ತ್ರೀಯರು ಮತ್ತು ಕೈಗಾರಿಕಾ ಕಾರ್ಮಿಕರಿಗಾಗಿ ಸ್ಥಳಗಳನ್ನು ಕಾಯ್ದಿರಿಸಲಾಗಿದೆ. ನಗರವನ್ನು ಭಾಗಶಃ ಅಥವಾ ಇಡಿಯಾಗಿ ಪ್ರತಿನಿಧಿಸುವ ವಿಧಾನಸಭಾ ಸದಸ್ಯರು ಸಭೆಗಳಲ್ಲಿ ಭಾಗವಹಿಸಬಹುದು. ಆದರೆ ಅವರಿಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ.

ಸದಸ್ಯರೊಳಗಿಂದ ಒಂದು ವರ್ಷದ ಅವಧಿಗಾಗಿ ಮೇಯರ್ ಮತ್ತು ಉಪಮೇಯರ್ ಅವರನ್ನು ಆಯ್ಕೆ ಮಾಡಲಾಗುತ್ತದೆ. ಪ್ರತಿಯೊಂದು ಮಹಾನಗರ ಪಾಲಿಕೆಯಲ್ಲಿ ಮೂರು ಸ್ಥಾಯಿ ಸಮಿತಿಗಳಿರುತ್ತವೆ: ೧.ತೆರಿಗೆ ವಿಧಿಸುವ ಮತ್ತು ಆರ್ಥಿಕ ಸಮಿತಿ, ೨.ಸಾರ್ವಜನಿಕ ಆರೋಗ್ಯ ಮತ್ತು ೩.ಸಾರ್ವಜನಿಕ ಕಾಮಗಾರಿ. ಪ್ರತಿಯೊಂದು ಸಮಿತಿಯಲ್ಲೂ ಸದಸ್ಯರುಗಳೊಳಗಿಂದ ಒಂದು ವರ್ಷದ ಅವಧಿಗಾಗಿ ಆಯ್ಕೆ ಮಾಡಿದ ಏಳು ಸದಸ್ಯರಿರುತ್ತಾರೆ. ಪ್ರತಿಯೊಂದು ಸಮಿತಿಯ ಸದಸ್ಯರೊಳಗಿಂದ ಅಧ್ಯಕ್ಷರನ್ನು ಆಯ್ಕೆ ಮಾಡಲಾಗುತ್ತದೆ. ಮೇಯರ್ ಮತ್ತು ಉಪಮೇಯರ್ ಪದನಿಮಿತ್ತ ಸದಸ್ಯರಾಗಿರುತ್ತಾರೆ. ಆಯುಕ್ತರು ಆಡಳಿತ ಮುಖ್ಯಾಧಿಕಾರಿಯಾಗಿರುತ್ತಾರೆ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೆಂಗಳೂರು ನಗರದ ಮುನಿಸಿಪಲ್ ಆಡಳಿತದ ಉಗಮವನ್ನು ಗಮನಿಸಿದರೆ ಬೆಂಗಳೂರು ನಗರ ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ಮಾರ್ಚ್ ೧೮೬೨ರಲ್ಲಿ ಹಳೇ ಬೆಂಗಳೂರು ಪೇಟೆಗೆ ಒಂದು ಮುನಿಸಿಪಲ್ ಮಂಡಳಿಯನ್ನು ಸ್ಥಾಪಿಸಲಾಗಿತ್ತು. ಈ ಮಂಡಳಿಯು ಅಧಿಕೃತವಾಗಿ ೨೭ನೇ ಮಾರ್ಚ್ ೧೮೬೨ರಲ್ಲಿ ಅಸ್ತಿತ್ವಕ್ಕೆ ಬಂದಿತು. ಬೆಂಗಳೂರು ತಾಲೂಕಿನ ಅಮಿಲ್ದಾರರನ್ನು ಈ ಮಂಡಳಿಯ ಕಾರ್ಯನಿರ್ವಾಹಕ ಅಧಿಕಾರಿಯನ್ನಾಗಿ ನೇಮಿಸಲಾಯಿತು. ಕ್ರಮೇಣ ಬೆಂಗಳೂರಿನ ಪೂರ್ವ ಭಾಗದಲ್ಲಿದ್ದ ದಂಡು ಪ್ರದೇಶವನ್ನು ಸಿವಿಲ್ ಮಿಲಿಟರಿ ಸ್ಟೇಶನ್ ಎಂದು ನಾಮಕರಣ ಮಾಡಿ ಪ್ರತ್ಯೇಕ ಮುನಿಸಿಪಲ್ ಮಂಡಳಿಯನ್ನು ರಚಿಸಲಾಯಿತು. ಮೈಸೂರಿನ ಆಡಳಿತವನ್ನು ಬ್ರಿಟಿಷರು ೧೮೮೧ರಲ್ಲಿ ಮಹಾರಾಜರಿಗೆ ಪುನರ್ ಹಸ್ತಾಂತರಿಸುವ (Rendition) ಪ್ರಕ್ರಿಯೆಯನ್ನು ಆರಂಭಿಸಿದ ಕಾರಣ ಸಿವಿಲ್ ಮಿಲಿಟರಿ ಸ್ಟೇಷನ್ ಮುನಿಸಿಪಲ್ ಮಂಡಳಿಯ ಆಡಳಿತವನ್ನು ಬ್ರಿಟಿಷ್ ರೆಸಿಡೆಂಟರ ಉಸ್ತುವಾರಿಯಲ್ಲಿ ಹಲವು ಕಾಲ ಮುಂದುವರಿಸಿತು. ದಂಡು ಪ್ರದೇಶವನ್ನು ವಿಸ್ತರಿಸಿ ೧೮೯೦ರಲ್ಲಿ ೧೩ ಗ್ರಾಮಗಳನ್ನು ತನ್ನ ಆಡಳಿತ ವ್ಯಾಪ್ತಿಗೆ ಒಳಪಡಿಸಿ ಮುಂದುವರಿಸಲಾಗಿತ್ತು. ಬೆಂಗಳೂರು ನಗರದ ಮುನಿಸಿಪಾಲಿಟಿಗೆ ೧೯೨೩ರಲ್ಲಿ ಮುನಿಸಿಪಲ್ ಕಮೀಷನರರನ್ನು ಪ್ರಥಮ ಬಾರಿಗೆ ನೇಮಿಸಲಾಯಿತು. ಅನಂತರ ನಗರದ ಏಕ ರೀತಿಯ ಆಡಳಿತದ ದೃಷ್ಟಿಯಿಂದ ೧೯೪೯ರಲ್ಲಿ ನಗರ ಮತ್ತು ಸಿವಿಲ್ ಮಿಲಿಟರಿ ಸ್ಟೇಷನ್ ಮುನಿಸಿಪಾಲಿಟಿ ಮಂಡಳಿಗಳನ್ನು ಒಟ್ಟುಗೂಡಿಸಿ ಬೆಂಗಳೂರು ನಗರ ಮುನಿಸಿಪಲ್ ಕಾರ್ಪೋರೇಷನ್ ಎಂದು ನಾಮಕರಣ ಮಾಡಿ ಒಂದೇ ರೀತಿಯ ಮುನಿಸಿಪಲ್ ಆಳ್ವಿಕೆಯನ್ನು ಜಾರಿಗೆ ತರಲಾಯಿತು. ಬೆಂಗಳೂರು ನಗರ ಮುನಿಸಿಪಲ್ ಕಾರ್ಪೋರೇಷನ್ ಅನ್ನು ೧೯೭೬ರ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆಯನ್ವಯ ಮಹಾನಗರಪಾಲಿಕೆಯೆಂದು ಪುನರ್ ನಾಮಕರಣ ಮಾಡಲಾಯಿತು. ನಗರವು ಶೀಘ್ರವಾಗಿ ವಿಸ್ತರಣೆ ಹೊಂದಿ ಅಗಾಧವಾದ ವ್ಯಾಪ್ತಿಯನ್ನು ಹೊಂದಿದ ಕಾರಣ ೨೦೦೭ರಲ್ಲಿ ಇದರ ಸರಹದ್ದನ್ನು ವಿಸ್ತರಿಸಿ "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ"ಯೆಂದು ಪುನರ್ ನಾಮಕರಣ ಮಾಡಿ ಹೊಸ ಆಡಳಿತ ಸ್ವರೂಪವನ್ನು ಅಸ್ತಿತ್ವಕ್ಕೆ ತರಲಾಯಿತು. ಪ್ರಸ್ತುತ ಈ ಬೃಹತ್ ಮಹಾನಗರ ಪಾಲಿಕೆಯು ಬೆಂಗಳೂರು ನಗರದ ಮೂಲಭೂತ ಸೌಕರ್ಯಗಳು, ನೈರ್ಮಲ್ಯೀಕರಣ, ಆರೋಗ್ಯ ಸಂರಕ್ಷಣೆ, ಕೈಗಾರಿಕಾ ವಸಾಹತುಗಳ ಬೆಳವಣಿಗೆ, ಶಿಕ್ಷಣ, ಶುದ್ಧ ನೀರು ಸರಬರಾಜು ಮತ್ತು ಒಳಚರಂಡಿ ಮೊದಲಾದ ವ್ಯವಸ್ಥೆಗಳನ್ನು ಜನತೆಗೆ ಒದಗಿಸುವಲ್ಲಿ ಕಟಿಬದ್ಧವಾಗಿರುತ್ತದೆ. ಈ ಮಹಾನಗರದ ಅಗತ್ಯ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ಶುದ್ಧ ನೀರು ಸರಬರಾಜು ಮತ್ತು ಇತರೆ ನಿರ್ಮಲೀಕರಣದ ಕಾರ್ಯಗಳನ್ನು ವಿವಿಧ ಸ್ವಾಯತ್ತ ಸಂಸ್ಥೆಗಳಿಂದ, ನಿಗಮ ಹಾಗೂ ಮಂಡಳಿಗಳಿಂದ ಏಕರೂಪವಾಗಿ ನಿರ್ವಹಿಸುವುದು ಮಹಾನಗರ ಪಾಲಿಕೆಯ ಮೂಲಭೂತ ಜವಾಬ್ದಾರಿಯಾಗಿರುತ್ತದೆ. ಈ ಬೃಹತ್ ನಗರ

ಪಾಲಿಕೆಯು ೧೯೭೫ರಲ್ಲಿ ಜಾರಿಗೊಂಡ ಕರ್ನಾಟಕ ಭಿಕ್ಷಾಟಣಾ ನಿಷೇಧ ಕಾಯ್ದೆಯನ್ನು ಹಂತ ಹಂತವಾಗಿ ಜಾರಿಗೊಳಿಸಿರುತ್ತದೆ.

ರಾಜ್ಯಾದ್ಯಂತ ನಗರಪಾಲಿಕೆ, ನಗರಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯತ್‌ಗಳಿಂದ ದಿನಾಂಕ:೦೧-೦೪-೨೦೦೦ ದಿಂದ ಜಾರಿಗೆ ಬರುವಂತೆ ಭಿಕ್ಷುಕರ ಕರವನ್ನು ವಿಧಿಸಿ ಸ್ಥಳೀಯ ಸಂಸ್ಥೆಗಳಿಂದ ಶುಲ್ಕ ವಸೂಲಿ ಮಾಡಿ ಜಮಾ ಮಾಡಲು ಸೂಚಿಸಲಾಗಿದೆ.

### ಕೇಂದ್ರ ಪರಿಹಾರ ಸಮಿತಿ (ಸಿಆರ್‌ಸಿ)

ನಿರಾಶ್ರಿತರ ಪುನರ್‌ವಸತಿ ತರಬೇತಿ ಹಾಗೂ ಇತರೆ ಯೋಜನಾ ಕಾರ್ಯಕ್ರಮಗಳು:- ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ಭೀಕ್ಷಾಟನಾ ನಿಷೇಧ ಕಾಯಿದೆ ೧೯೭೫ ರ ಪ್ರಕಾರ ಭಿಕ್ಷಾಟನೆಯನ್ನು ನಿಷೇಧಿಸಲಾಗಿದೆ. ಭಿಕ್ಷಾಟನೆಯಲ್ಲಿ ನಿರತರಾದ ವ್ಯಕ್ತಿಗಳನ್ನು ಈ ಕಾಯ್ದೆಯಡಿ ಬಂಧಿಸಿ ಅವರಿಗೆ ನಿಯಮಾನುಸಾರ ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ ಪರಿಹಾರ ಮತ್ತು ಪುನರ್ವಸತಿ ಕಲ್ಪಿಸಲಾಗುತ್ತಿದೆ.

ರಾಜ್ಯ ಮಟ್ಟದಲ್ಲಿ 'ಕೇಂದ್ರ ಪರಿಹಾರ ಸಮಿತಿ' ಇದ್ದು, ಮೂರು ಅಧಿಕಾರಿ ಸದಸ್ಯರು ನಾಲ್ಕು ಅಧಿಕಾರೇತರ ಸದಸ್ಯರಿರುತ್ತಾರೆ. ಸಮಿತಿ ಅಧ್ಯಕ್ಷರನ್ನು ಸರ್ಕಾರ ನೇಮಿಸುತ್ತದೆ. ಜಿಲ್ಲಾ ಮಟ್ಟದಲ್ಲಿ 'ಸ್ಥಳೀಯ ಪರಿಹಾರ ಸಮಿತಿ'ಗಳಿದ್ದು ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ. ಹಾಲಿ ೧೪ ಜಿಲ್ಲೆಗಳಲ್ಲಿ ಸ್ಥಳೀಯ ಪರಿಹಾರ ಸಮಿತಿ ಕಾರ್ಯನಿರ್ವಹಿಸುತ್ತಿವೆ. ಈ ಕೇಂದ್ರಗಳಲ್ಲಿ ೩೧-೩-೨೦೧೧ರ ಅಂತ್ಯದಲ್ಲಿ ೧೦೭೩ ಜನ ನಿರಾಶ್ರಿತರು ಉಳಿದಿದ್ದರು.

ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುವ ಈ ನಿರಾಶ್ರಿತರ ಪರಿಹಾರ ಅಥವಾ ಪುನರ್ವಸತಿ ಕೇಂದ್ರ ೧೯೪೪ರ ಮುಂಚೆಯೇ ಪ್ರಾರಂಭಿಸಲ್ಪಟ್ಟಿತ್ತು. ೧೯೪೪ರಲ್ಲಿ ಬೆಂಗಳೂರು ಉತ್ತರ ತಾಲೂಕಿಗೆ ಸೇರಿದ ಶ್ರೀಗಂಧ ಕಾವಲ್ ಮತ್ತು ಸಜ್ಜೆಪಾಳ್ಯ ಗ್ರಾಮಗಳ ವಿವಿಧ ಸರ್ವೆನಂಬರುಗಳಿಗೆ ಸೇರಿದ ಸುಮಾರು ೩೦೮ ಎಕರೆ ಭೂಮಿಯನ್ನು ಇದಕ್ಕಾಗಿ ಪಡೆದುಕೊಂಡು, ೧೯೪೮ರಲ್ಲಿ ಪುನರ್ವಸತಿಗಾಗಿ ಕಟ್ಟಡ ನಿರ್ಮಿಸಲಾಯಿತು. ೨೦೧೦-೧೧ನೇ ಸಾಲಿನಲ್ಲಿ ವಿವಿಧ ಸ್ಥಳೀಯ ಸಂಸ್ಥೆಗಳಿಂದ ರೂ. ೨೧೩೭.೭೦ ಲಕ್ಷ ಜಮೆಯಾಗಿದ್ದು ಒಟ್ಟು ರೂ. ೯,೫೯,೯೨,೭೭೦ ಗಳು ವೆಚ್ಚವಾಗಿರುತ್ತದೆ.

ಕೇಂದ್ರದಲ್ಲಿರುವ ನಿರಾಶ್ರಿತರಿಗೆ ಕೇಂದ್ರಗಳಲ್ಲಿರುವ ಅವಧಿಯಲ್ಲಿ, ಬಿಡುಗಡೆಯಾದ ನಂತರ ಪುನಃ ಭಿಕ್ಷಾಟನಾ ವೃತ್ತಿಗೆ ಮರಳಬಾರದೆಂಬ ಉದ್ದೇಶದಿಂದ ವಿವಿಧ ವೃತ್ತಿಗಳಾದ ಬಡಗಿ, ಕಮ್ಮಾರಿಕೆ, ಹೊಲಿಗೆ, ಬುಕ್ ಬೈಂಡಿಂಗ್, ತೆಂಗಿನನಾರು ಉದ್ಯಮ, ಕೃಷಿ ಮತ್ತು ತೋಟಗಾರಿಕಾ ತರಬೇತಿಗಳಲ್ಲಿ ಒಟ್ಟು ೩೯೯ ನಿರಾಶ್ರಿತರಿಗೆ ಡಿಸೆಂಬರ್ ೨೦೦೯ರ ಅಂತ್ಯದವರೆಗೆ ತರಬೇತಿಗಳನ್ನು ನೀಡಲಾಗಿದೆ ಆ ಸಾಲಿನಲ್ಲಿ ನಿರಾಶ್ರಿತರಿಗೆ ಹೈನುಗಾರಿಕೆಯಲ್ಲಿ ತರಬೇತಿ ನೀಡಲಾಗುತ್ತಿದ್ದು ಅವರಿಗೆ ಬೇಕಾದ ಹಾಲನ್ನು ಕೇಂದ್ರಲ್ಲಿಯೇ ಪೂರೈಕೆ ಮಾಡಲಾಗುತ್ತಿದೆ. ತರಬೇತಿ ಅವಧಿಯಲ್ಲಿ ಪ್ರತಿಯೊಬ್ಬರಿಗೆ ದಿನವೊಂದಕ್ಕೆ ಐದು ರೂಪಾಯಿಯಂತೆ ದಿನಗೂಲಿಯನ್ನು ನೀಡಲಾಗಿದೆ. ಕೇಂದ್ರದಲ್ಲಿರುವ ವ್ಯವಸಾಯ ಯೋಗ್ಯ ಜಮೀನಿನಲ್ಲಿ ಕೃಷಿ ಮತ್ತು ತೋಟಗಾರಿಕೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ಬೇಕಾಗುವ ತರಕಾರಿಗಳನ್ನು ಈ ಜಮೀನಿನಲ್ಲಿ ಬೆಳೆದು ಉಪಯೋಗಿಸಲಾಗುತ್ತಿದೆ. ಬೆಂಗಳೂರು ನಿರಾಶ್ರಿತರ ಪರಿಹಾರ ಕೇಂದ್ರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ. ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ ನಿರಾಶ್ರಿತರಿಗೆ ಪ್ರತಿ ದಿನ ಎರಡು ಊಟ, ತಿಂಡಿ, ಸಮವಸ್ತ್ರ, ಹಾಸಿಗೆ-ಹೊದಿಕೆ, ಸೋಪು, ಎಣ್ಣೆ, ಹಲ್ಲುಪುಡಿ, ಇತ್ಯಾದಿಗಳನ್ನು ಒದಗಿಸಲಾಗುತ್ತಿದೆ. ಇದರ ಜೊತೆಗೆ ವೈದ್ಯಕೀಯ ಚಿಕಿತ್ಸಾ ಸೌಲಭ್ಯವನ್ನು ನೀಡಲಾಗುತ್ತದೆ.

ಬೆಂಗಳೂರು ನಿರಾಶ್ರಿತರ ಪರಿಹಾರ ಕೇಂದ್ರದಲ್ಲಿ ಪ್ರತ್ಯೇಕವಾಗಿ ಒಂದು ಪ್ರಾಥಮಿಕ ಆರೋಗ್ಯ ಘಟಕವಿದ್ದು, ಒಬ್ಬ ವೈದ್ಯಾಧಿಕಾರಿ ಮತ್ತು ಪೂರಕ ಸಿಬ್ಬಂದಿ ಇಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಇದರ ಜೊತೆಗೆ ಮಾನಸಿಕ ಅಸ್ವಸ್ಥ ನಿರಾಶ್ರಿತರಿಗೆ ಪ್ರತಿ ೧೫ ದಿನಗಳಿಗೊಮ್ಮೆ ನಿಮ್ಹಾನ್ಸ್ ಆಸ್ಪತ್ರೆಯ ವೈದ್ಯಾಧಿಕಾರಿಗಳ ತಂಡವು ಕೇಂದ್ರಕ್ಕೆ ಭೇಟಿ ನೀಡಿ ಮಾನಸಿಕ ಅಸ್ವಸ್ಥತೆಯಿಂದ ನರಳುವ ನಿರಾಶ್ರಿತರಿಗೆ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ರಾಜ್ಯದ ಉಳಿದ ೧೪ ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ ಇರುವ ನಿರಾಶ್ರಿತರಿಗೆ ಸ್ಥಳೀಯ ಆಸ್ಪತ್ರೆಗಳಲ್ಲಿ ವೈದ್ಯಕೀಯ ಚಿಕಿತ್ಸೆ ಕೊಡಿಸಲಾಗುತ್ತಿದೆ. ಸುಮಾರು ೩೦ ಅನಕ್ಷರಸ್ಥರು ಅಕ್ಷರ ಜ್ಞಾನ ಸಂಪಾದಿಸಿದ್ದಾರೆ.

### ಪೌರಾಡಳಿತ ನಿರ್ದೇಶನಾಲಯ

ಪೌರಾಡಳಿತ ನಿರ್ದೇಶನಾಲಯವು ೧೯೮೪ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಹಲವಾರು ಸ್ಥಳೀಯ ಸಂಸ್ಥೆಗಳನ್ನು ಹೊಂದಿದೆ. ಕರ್ನಾಟಕ ಪುರಸಭೆಗಳ ಅಧಿನಿಯಮ ೧೯೬೪ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಪ್ರಸ್ತುತ ಹತ್ತು ಮಹಾನಗರ ಪಾಲಿಕೆಗಳು, ೫೭ ನಗರ ಸಭೆಗಳು,೧೧೨ ಪುರಸಭೆಗಳು, ೯೧ ಪಟ್ಟಣ ಪಂಚಾಯ್ತಿಗಳು, ಐದು ಅಧಿಸೂಚಿತ ಪ್ರದೇಶಗಳು ೧೨೭ ಜನ ಗಣತಿ ಪಟ್ಟಣಗಳಿವೆ. ಸಂವಿಧಾನದ ೭೪ನೇ ತಿದ್ದುಪಡಿಯ ಅನುಸಾರವಾಗಿ ಕರ್ನಾಟಕ ಸರ್ಕಾರವು ಮಹಾನಗರ ಪಾಲಿಕೆಗಳನ್ನು ಹೊರತುಪಡಿಸಿ ನಗರಸಭೆ, ಪುರಸಭೆಗಳು ಮತ್ತು ಪಟ್ಟಣ ಪಂಚಾಯಿತಿ, ಅಧಿಸೂಚಿತ ಪ್ರದೇಶ ಸಮಿತಿಗಳು ಜನಗಣತಿ ಪಟ್ಟಣ ಎಂಬ ಐದು ಹಂತದ ವ್ಯವಸ್ಥೆಯನ್ನು ಕಲ್ಪಿಸಿದೆ.

ಈ ಎಲ್ಲಾ ಸ್ಥಳೀಯ ಸಂಸ್ಥೆಗಳನ್ನು ಆಯಾ ಜಿಲ್ಲಾ ನಗರಾಭಿವೃದ್ಧಿ ಕೋಶಗಳ ಯೋಜನಾ ನಿರ್ದೇಶಕರ ಮೂಲಕ ನಿಯಂತ್ರಿಸಿ, ಕಾರ್ಯವಿಧಾನವನ್ನು ಪರಿಶೀಲಿಸುತ್ತದೆ. ರಾಜ್ಯ ಮತ್ತು ಕೇಂದ್ರದ ಹಣಕಾಸು ಆಯೋಗದಿಂದ ಧನ ಸಹಾಯ ಪಡೆದು, ನೀರು ಸರಬರಾಜು, ವಿದ್ಯುದೀಕರಣ, ಘನ ತ್ಯಾಜ್ಯ ನಿರ್ವಹಣೆ ಮುಂತಾದ ಪ್ರಕಾರ್ಯಗಳನ್ನು ನೆರವೇರಿಸುತ್ತವೆ. ನಗರ/ಪಟ್ಟಣ ಜನಸಂಖ್ಯಾ ಪ್ರಮಾಣಕ್ಕನುಸಾರವಾಗಿ ಸ್ಥಳೀಯ ಸಂಸ್ಥೆಗಳನ್ನು ವರ್ಗೀಕರಿಸಲಾಗಿದೆ.

## ಜಿಲ್ಲಾ ತಾಲೂಕುವಾರು ನಗರ ಸ್ಥಳೀಯ ಸಂಸ್ಥೆಗಳು (೨೦೧೧ರ ಜನಗಣತಿ, ತಾತ್ಕಾಲಿಕ....)

| ಕ್ರ. ಸಂ. | ನಗರ ಸ್ಥಳೀಯ ಸಂಸ್ಥೆಯ ಹೆಸರು | ಮಹಾನಗರ ಪಾಲಿಕೆ | ನಗರಸಭೆ | ಪುರಸಭೆ | ಪಟ್ಟಣ ಪಂಚಾಯಿತಿ | ಅಧಿಸೂಚಿತ ಪ್ರದೇಶ | ಜನಗಣತಿ ಪಟ್ಟಣ |
|---|---|---|---|---|---|---|---|
| ೧ | ಬೆಂಗಳೂರು ನಗರ ಜಿಲ್ಲೆ | – | ಹೆಬ್ಬಗೋಡಿ | ಆನೇಕಲ್, ಬೊಮ್ಮಸಂದ್ರ, ಜಿಗಣಿ, ಚಂದಾಪುರ, ಅತ್ತಿಬೆಲೆ | – | – | ಕೊಡಿಗೇನಹಳ್ಳಿ, ಮಾದನಾಯಕನಹಳ್ಳಿ, ಚಿಕ್ಕಬಿದರಕಲ್ಲು, ಹುಣಸಮಾರನಹಳ್ಳಿ, ಚಿಕ್ಕಬಾಣಾವರ |
| ೨ | ಬೆಂಗಳೂರು ಗ್ರಾಮಾಂತರ ಜಿಲ್ಲೆ | – | ದೊಡ್ಡಬಳ್ಳಾಪುರ, ಹೊಸಕೋಟೆ | ದೇವನಹಳ್ಳಿ, ವಿಜಯಪುರ, ನೆಲಮಂಗಲ | – | – | ಅರಶಿನಕುಂಟೆ, ಬಾಶೆಟ್ಟಿಹಳ್ಳಿ |
| ೩ | ರಾಮನಗರ ಜಿಲ್ಲೆ | – | ರಾಮನಗರ, ಚನ್ನಪಟ್ಟಣ, ಕನಕಪುರ | ಮಾಗಡಿ, ಬಿಡದಿ | – | – | ಕುದೂರು |
| ೪ | ತುಮಕೂರು ಜಿಲ್ಲೆ | ತುಮಕೂರು | ತಿಪಟೂರು, ಶಿರಾ | ಕುಣಿಗಲ್, ಚಿ.ನಾ.ಹಳ್ಳಿ, ಮಧುಗಿರಿ, ಪಾವಗಡ | ಕೊರಟಗೆರೆ, ಗುಬ್ಬಿ, ತುರುವೇಕೆರೆ | – | ಹುಳಿಯಾರು, ಆದಿತ್ಯ ಪಟ್ಟಣ |
| ೫ | ಕೋಲಾರ ಜಿಲ್ಲೆ | – | ಕೋಲಾರ, ಕೆಜಿಎಫ್, ಮುಳಬಾಗಿಲು | ಬಂಗಾರಪೇಟೆ, ಮಾಲೂರು, ಶ್ರೀನಿವಾಸಪುರ | – | – | ಬೇತಮಂಗಲ |
| ೬ | ಚಿಕ್ಕಬಳ್ಳಾಪುರ ಜಿಲ್ಲೆ | – | ಚಿಕ್ಕಬಳ್ಳಾಪುರ, ಚಿಂತಾಮಣಿ, ಶಿಡ್ಲಘಟ್ಟ | ಬಾಗೇಪಲ್ಲಿ, ಗೌರಿಬಿದನೂರು | ಗುಡಿಬಂಡೆ | – | ಅಲ್ಲೀಪುರ, ಜೇಳೂರು |
| ೭ | ಚಿತ್ರದುರ್ಗ ಜಿಲ್ಲೆ | – | ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು | ಹೊಸದುರ್ಗ | ಹೊಳಲ್ಕೆರೆ, ಮೊಳಕಾಲ್ಮೂರು, ನಾಯಕನಹಟ್ಟಿ | – | ಮಠದ ಕುರುಬರಹಟ್ಟಿ, ಚಿಕ್ಕಜಾಜೂರು |
| ೮ | ದಾವಣಗೆರೆ ಜಿಲ್ಲೆ | ದಾವಣಗೆರೆ | ಹರಿಹರ | ಹರಪನಹಳ್ಳಿ, ಚನ್ನಗಿರಿ, ಮಲೇಬೆನ್ನೂರು | ಜಗಳೂರು, ಹೊನ್ನಾಳಿ | – | ಅಮರಾವತಿ ಹರಳಾಪುರ |
| ೯ | ಶಿವಮೊಗ್ಗ ಜಿಲ್ಲೆ | ಶಿವಮೊಗ್ಗ | ಭದ್ರಾವತಿ, ಸಾಗರ | ಶಿಕಾರಿಪುರ | ತೀರ್ಥಹಳ್ಳಿ, ಸೊರಬ, ಶಿರಾಳಕೊಪ್ಪ, ಹೊಸನಗರ, ಜೋಗ್-ಕಾರ್ಗಲ್ | – | – |
| ೧೦ | ಮೈಸೂರು ಜಿಲ್ಲೆ | ಮೈಸೂರು | ಹುಣಸೂರು, ನಂಜನಗೂಡು | ಕೆ.ಆರ್.ನಗರ, ಬನ್ನೂರು, ಟಿ.ನರಸೀಪುರ, ಪಿರಿಯಾಪಟ್ಟಣ | ಸರಗೂರು, ಹೆಚ್.ಡಿ.ಕೋಟೆ | – | ಇಲವಾಲ, ಕೂಗಳ್ಳಿ, ಬೆಳವಾತ, ಹಿಲ್‌ಕಲ್, ಹೂಟಗಳ್ಳಿ, ಬೋಗಾದಿ, ಶ್ರೀರಾಂಪುರ, ಕಡಕೊಳ, ಗರ್ಗೇಶ್ವರಿ, ಬೈರಾಪುರ |
| ೧೧ | ಚಾಮರಾಜ ನಗರ ಜಿಲ್ಲೆ | – | ಚಾಮರಾಜನಗರ, ಕೊಳ್ಳೇಗಾಲ | ಗುಂಡ್ಲುಪೇಟೆ | ಯಳಂದೂರು, ಹನೂರು | – | – |
| ೧೨ | ಮಂಡ್ಯ ಜಿಲ್ಲೆ | – | ಮಂಡ್ಯ | ಮದ್ದೂರು, ಮಳವಳ್ಳಿ, ಶ್ರೀರಂಗಪಟ್ಟಣ, ಕೆ.ಆರ್.ಪೇಟೆ, ಪಾಂಡವಪುರ | ನಾಗಮಂಗಲ | – | ಹೊಂಗಳ್ಳಿ, ಮೆಳ್ಳಹಳ್ಳಿ |
| ೧೩ | ಹಾಸನ ಜಿಲ್ಲೆ | – | ಹಾಸನ, ಅರಸೀಕೆರೆ | ಬೇಲೂರು, ಚನ್ನರಾಯಪಟ್ಟಣ, ಹೊಳೆನರಸೀಪುರ, ಸಕಲೇಶಪುರ | ಅರಕಲಗೂಡು, ಆಲೂರು | – | ಹರಳಹಳ್ಳಿ, ಸತ್ಯಮಂಗಲ, ಶ್ರವಣಬೆಳಗೊಳ |
| ೧೪ | ಕೊಡಗು ಜಿಲ್ಲೆ | – | ಮಡಿಕೇರಿ | – | ಕುಶಾಲನಗರ, ಸೋಮವಾರ ಪೇಟೆ, ವಿರಾಜಪೇಟೆ | – | ಗೋಣಿಕೊಪ್ಪಲ್ |
| ೧೫ | ಚಿಕ್ಕಮಗಳೂರು ಜಿಲ್ಲೆ | – | ಚಿಕ್ಕಮಗಳೂರು | ಕಡೂರು, ಬೀರೂರು, ತರೀಕೆರೆ | ನರಸಿಂಹರಾಜಪುರ, ಕೊಪ್ಪ, ಶೃಂಗೇರಿ, ಮೂಡಿಗೆರೆ | – | – |

| | | | | | | | |
|---|---|---|---|---|---|---|---|
| ೧೬ | ದಕ್ಷಿಣ ಕನ್ನಡ ಜಿಲ್ಲೆ | ಮಂಗಳೂರು | ಉಳ್ಳಾಲ, ಮತ್ತೂರು | ಬಂಟ್ವಾಳ, ಮೂಡುಬಿದರೆ | ಬೆಳ್ತಂಗಡಿ, ಸುಳ್ಯ, ಮುಲ್ಕಿ, ವಿಟ್ಲ, ಕೋಟೆಕಾರು | – | ತಾಳ್ಪಾಡಿ, ಬಜ್ಪೆ, ತೊಕೂರು, ಕೆಂಜಾರ್, ಕೊಳಂಬೆ, ಮುಡಪೆರಾರ್, ಬಡಗೌಳಪಾಡಿ, ಮೂಡುಶೆಡ್ಡೆ, ಮುಳೂರು ಅಡ್ಡೂರು, ಬೊಂಡತೀಲ, ನೀಂಮಾರ್ಗ, ಆಡ್ಯಾರ್, ಅರ್ಕುಳ, ಹರೆಕಾಲ ಕೊಣಾಜೆ, ಬೆಳ್ಮ ಮುಣ್ಣೂರು, ಸೋಮೇಶ್ವರ ಕೊಟೆಕಾರ, ತಲಪಾಡಿ ಮಂಜನಾಡಿ, ಕಾಯಿಯಂಗಳ, ಪಡು, ತುಂಬೆ ಸಾಜಿನಾಡು ಮುಣ್ಣೂರು, ನರಿಕೊಂಬು, ನಾವೂರು, ಕೈರಂಗಳ, ವಿಟ್ಲ, ಕುವೆಟ್ಟು, ಉಪ್ಪಿನಂಗಡಿ |
| ೧೭ | ಉಡುಪಿ ಜಿಲ್ಲೆ | – | ಉಡುಪಿ | ಕಾರ್ಕಳ, ಕುಂದಾಪುರ, ಕಾಪು | ಸಾಲಿಗ್ರಾಮ | – | ಕೋಟೇಶ್ವರ, ವಾರಂಬಳ್ಳಿ, ತೋನ್ಸೆ ಪೂರ್ವ, ಸಾಲಿಗ್ರಾಮ ೫೨ ಹೇರೂರು, ತೆಂಕನಿಡಿಯೂರ್, ಬಡಗ ಬೆಟ್ಟು, ಅಳೆವೂರು, ಉದ್ಯಾವರ, ಮಣಿಪುರ, ಕೊರಂಗ್ರ ಪಾಡಿ, ಯಾನಗುಡ್ಡೆ, ಮೂಡುಬೆಟ್ಟು ಮಲ್ಲಾರ, ಬಾಡ, ನಡಸಾಲ್, ಸಾಣೂರು |
| ೧೮ | ಬೆಳಗಾವಿ ಜಿಲ್ಲೆ | ಬೆಳಗಾವಿ | ನಿಪ್ಪಾಣಿ, ಗೋಕಾಕ | ಸವದತ್ತಿ, ಸಂಕೇಶ್ವರ, ಚಿಕ್ಕೋಡಿ, ಬೈಲಹೊಂಗಲ, ರಾಮದುರ್ಗ, ಮೂಡಲಗಿ, ಅಥಣಿ, ಹುಕ್ಕೇರಿ, ಸದಲಗಾ, ಕುಡಚಿ, ಮುಗಳಖೊಡ, ಮುನವಳ್ಳಿ, ಉಗಾರಖುರ್ದ, ಕೊಣ್ಣೂರು, ಹಾರೋಗೇರಿ | ಖಾನಾಪೂರ, ರಾಯಬಾಗ, ಕಂಕನವಾಡಿ, ಎಂ.ಕೆ. ಹುಬ್ಬಳ್ಳಿ, ನಾಗನೂರ, ಚಿಂಚಲಿ, ಮಲ್ಲಾಪುರ, ಯಕ್ಸಾಂಬ, ಚೆನ್ನಮ್ಮ ಕಿತ್ತೂರ, ಕಲ್ಲೋಳ, ಐನಾಪುರ, ಶೇಡಬಾಳ, ಕಬ್ಬೂರ, ಬೋರಗಾಂವ, ಅರಂಭಾವಿ | ಗೋಕಾಕ್ ಫಾಲ್ಸ್, (ಬೆಳಗಾವಿ ಕಂಟೋನ್ಮೆಂಟ್) | ಕಂಗ್ರಾಳ, ಸೂಳೆ ಭಾವಿ, ಸಾಂಬ್ರಾ, ಕಾಕತಿ, ಹಿಂಡಲಗಿ, ಮಚ್ಚಾ, ಬೆನಕನ ಹಳ್ಳಿ, ಪೀರನ್ ವಾಡಿ, ಮಚ್ಚೆ, ಯಲ್ಲೂರು, ಮೌಜೆ ನಂದಗಡ್, ಲೋಂಡ |
| ೧೯ | ಉತ್ತರಕನ್ನಡ ಜಿಲ್ಲೆ | – | ಕಾರವಾರ, ಶಿರಸಿ, ದಾಂಡೇಲಿ | ಭಟ್ಕಳ, ಕುಮಟಾ, ಅಂಕೋಲಾ, ಹಳಿಯಾಳ | ಹೊನ್ನಾವರ, ಸಿದ್ದಾಪುರ, ಮುಂಡಗೋಡ, ಯಲ್ಲಾಪುರ, ಜೊಯಿಡಾ | | ಕಾಡವಾಡ, ಅಂಬಿಕಾನಗರ, ತತ್ತಿಲ, ಬೊಬ್ರುವಾಡ ಅವರ್ಸ, ವೆಂಕಟಾಪುರ, ಜಾಲಿ |
| ೨೦ | ವಿಜಯಾಪುರ ಜಿಲ್ಲೆ | ವಿಜಯಾಪುರ | – | ಬಸವನ ಬಾಗೇವಾಡಿ, ಮುದ್ದೇಬಿಹಾಳ, ತಾಳಿಕೋಟೆ, ಸಿಂದಗಿ, ಇಂಡಿ | ಆಲಮೇಲ, ಮನಗೂಳಿ, ಕೊಲ್ಹಾರ, ನಾಲತವಾಡ, ನಿಡಗುಂದಿ, ದೇವರಹಿಪ್ಪರಗಿ, ಚಡಚಣ | – | – |
| ೨೧ | ಬಾಗಲಕೋಟೆ ಜಿಲ್ಲೆ | – | ಬಾಗಲಕೋಟೆ, ರಬಕವಿ-ಬನಹಟ್ಟಿ, ಜಮಖಂಡಿ, ಇಳಕಲ್ ಮುಧೋಳ | ಮಹಾಲಿಂಗಪೂರ, ಗುಳೇದಗುಡ್ಡ, ಬಾದಾಮಿ, ತೇರದಾಳ, ಹುನಗುಂದ | ಕೆರೂರ, ಬೀಳಗಿ, ಬೆಳಗಲಿ, ಕಮತಗಿ | – | ಕಮತಗಿ, ಅಮಿನ್ ಗಡ್ ಗೂಡೂರ್ |
| ೨೨ | ಧಾರವಾಡ ಜಿಲ್ಲೆ | ಹುಬ್ಬಳ್ಳಿ-ಧಾರವಾಡ | – | ಅಣ್ಣಿಗೇರಿ, ನವಲಗುಂದ | ಅಳ್ನಾವರ, ಕಲಘಟಗಿ, ಕುಂದಗೋಳ | – | – |
| ೨೩ | ಗದಗ ಜಿಲ್ಲೆ | – | ಗದಗ ಬೆಟಗೇರಿ | ಗಜೇಂದ್ರಗಡ, ಲಕ್ಷ್ಮೇಶ್ವರ, ಮುಂಡರಗಿ, ನರಗುಂದ, ರೋಣ | ಮುಳಗುಂದ, ನರೇಗಲ್ಲ, ಶಿರಹಟ್ಟಿ | – | – |

| | | | | | | | |
|---|---|---|---|---|---|---|---|
| ೨೪ | ಹಾವೇರಿ ಜಿಲ್ಲೆ | – | ಹಾವೇರಿ, ರಾಣೇಬೆನ್ನೂರ | ಬ್ಯಾಡಗಿ, ಹಾನಗಲ್ಲ, ಸವಣೂರು, ಶಿಗ್ಗಾಂವ, ಬಂಕಾಪುರ | ಹಿರೇಕೆರೂರು, ಗುತ್ತಲ | – | ಕವಲೆತ್ತು, ಕೊಡಿಯಾಲ |
| ೨೫ | ಕಲಬುರಗಿ ಜಿಲ್ಲೆ | ಕಲಬುರಗಿ | ಶಹಾಬಾದ | ಆಳಂದ, ಚಿತ್ತಾಪುರ, ಸೇಡಂ, ವಾಡಿ, ಅಫಜಲಪೂರ, ಚಿಂಚೋಳಿ, ಜೇವರ್ಗಿ | ಶಹಾಬಾದ್ | ಶಹಬಾದ್ ಎಸಿಸಿ | ಕುರುಗುಂಟ |
| ೨೬ | ಯಾದಗಿರಿ ಜಿಲ್ಲೆ | – | ಯಾದಗಿರಿ, ಶಹಪುರ, ಸುರಪುರ | ಗುರುಮಿಟ್ಕಲ್, ಕಕ್ಕೇರಾ, ಕೆಂಬಾವಿ | ಭೀಮರಾಯನಗುಡಿ | ಭೀಮರಾಯನ ಗುಡಿ | ಗೋಗಿಪೇಟ್, ಸೈದಾಪುರ |
| ೨೭ | ರಾಯಚೂರು ಜಿಲ್ಲೆ | – | ರಾಯಚೂರು, ಸಿಂಧನೂರು | ಮಾನವಿ, ದೇವದುರ್ಗ, ಲಿಂಗಸೂಗೂರು, ಮುದಗಲ್ಲ, ಮಸ್ಕಿ | ಕವಿತಾಳ, ತುರುವಿಹಾಳ, ಬಳಗನೂರು, ಸಿರವಾರ, ಹಟ್ಟಿ ಎನ್.ಎ.ಸಿ | ಹಟ್ಟಿ ಚಿನ್ನದ ಗಣಿ | ಶಕ್ತಿ ನಗರ್, ಹಟ್ಟಿ |
| ೨೮ | ಕೊಪ್ಪಳ ಜಿಲ್ಲೆ | – | ಕೊಪ್ಪಳ, ಗಂಗಾವತಿ | ಕುಷ್ಟಗಿ, ಕಾರಟಗಿ | ಯಲಬುರ್ಗಾ, ಕನಕಗಿರಿ, ಕುಕನೂರ, ತಾವರಗೇರ, ಭಾಗ್ಯನಗರ | – | ಮುನಿರಾಬಾದ್ ಪ್ರಾಜೆಕ್ಟ್ ಏರಿಯಾ |
| ೨೯ | ಬೀದರ್ ಜಿಲ್ಲೆ | – | ಬೀದರ, ಬಸವಕಲ್ಯಾಣ | ಭಾಲ್ಕಿ, ಹುಮನಾಬಾದ, ಚಿಟಗುಪ್ಪಾ | ಔರಾದ | – | ಕಮಲ್ ನಗರ್ |
| ೩೦ | ಬಳ್ಳಾರಿ ಜಿಲ್ಲೆ | ಬಳ್ಳಾರಿ | ಹೊಸಪೇಟೆ, ಸಿರಗುಪ್ಪ | ಹೂವಿನಹಡಗಲಿ, ಕಂಪ್ಲಿ, ಸಂಡೂರು, ಕುರೇಕುಪ್ಪ, ಕುರುಗೋಡು, ಹಗರಿಬೊಮ್ಮನಹಳ್ಳಿ | ಕುಡುತಿನಿ, ಮರಿಯಮ್ಮನಹಳ್ಳಿ, ಕಮಲಾಪುರ, ಕೂಡ್ಲಿಗಿ, ಕೊಟ್ಟೂರು, ತಕ್ಕಲಕೋಟೆ | – | ವಡ್ಡು, ಕುರೆಕುಪ್ಪ, ದೋಣಿಮಲೈ ಟೌನ್‌ಶಿಪ್ |

## ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ

೧೯೫೯ರಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿನ ಒಂದು ಶಾಖೆಯಾಗಿ ಪ್ರಾರಂಭಗೊಂಡ ಇದು ೧೯೬೧ರಲ್ಲಿ ಪ್ರತ್ಯೇಕ ಇಲಾಖೆಯಾಯಿತು. ೪ನೇ ಏಪ್ರಿಲ್ ೧೯೬೪ರಲ್ಲಿ ಪ್ರತ್ಯೇಕ ಇಲಾಖೆ ಸ್ಥಾಪನೆಗೊಂಡು ಮೊದಲ ನಗರ ಯೋಜನಾ ನಿರ್ದೇಶಕರಾಗಿ ಡಾ.ಕೆ.ಎಸ್.ರಾಮೇಗೌಡ ಅವರು ನೇಮಕಗೊಂಡರು. ೧೩-೦೭-೨೦೦೯ರಿಂದ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಎಂಬುದಾಗಿ ಮರು ನಾಮಕರಣ ಗೊಂಡಿತು. ಪ್ರಾರಂಭದಲ್ಲಿ ಕೇವಲ ನಗರ ಪ್ರದೇಶಗಳಿಗೆ ಸೀಮಿತವಾಗಿದ್ದ ಯೋಜನೆ ಕ್ರಮೇಣ ಗ್ರಾಮಾಂತರ ವ್ಯಾಪ್ತಿ ಹೊಂದಿತು. ೨೦೦೯ರಲ್ಲಿ 'ಸುವರ್ಣ ಮಹೋತ್ಸವ' ಸಂಭ್ರಮವನ್ನು ಆಚರಿಸಿತು.

ಕರ್ನಾಟಕ ರಾಜ್ಯ ನಗರ ಯೋಜನಾ ತತ್ವಗಳನ್ನು ಜಾರಿಗೆ ತಂದ ರಾಜ್ಯಗಳ ಪೈಕಿ ರಾಷ್ಟ್ರದಲ್ಲಿ ಕರ್ನಾಟಕ ಎರಡನೇ ಸ್ಥಾನ ಗಳಿಸಿದೆ. ೧೮೯೮ರಲ್ಲಿ ಮಹಾರಾಷ್ಟ್ರ ಪ್ರಾಂತ್ಯದಲ್ಲಿ 'ಬಾಂಬೆ ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ' ಸ್ಥಾಪಿಸಲ್ಪಟ್ಟಿದ್ದು ಭಾರತದಲ್ಲಿ ಇದು ಪ್ರಥಮ ಪ್ರಯತ್ನ. ೧೯೦೩ರಲ್ಲಿ ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ ಸ್ಥಾಪಿತವಾಯಿತು. ಬೆಂಗಳೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ ಕಾಯ್ದೆ ೧೯೪೫ರಲ್ಲಿ ಅಸ್ತಿತ್ವದಲ್ಲಿದ್ದು, ೧೯೭೬ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ ಬರುವವರೆಗೂ ಜಾರಿಯಲ್ಲಿತ್ತು.

ರಾಜ್ಯದಲ್ಲಿ ಒಟ್ಟು ೨೩೭ ನಗರ/ಪಟ್ಟಣಗಳ ಪೈಕಿ ೧೦೯ಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ನು ವಿಸ್ತರಿಸಲಾಗಿದೆ. ಇವುಗಳ ಪೈಕಿ ಬೆಂಗಳೂರು ನಗರ ಹೊರತುಪಡಿಸಿ ೨೮ ನಗರಾಭಿವೃದ್ಧಿ ಪ್ರಾಧಿಕಾರಗಳು ೩೪ ಯೋಜನಾ ಪ್ರಾಧಿಕಾರಗಳು ೪೬ ಪುರಸಭಾ ಯೋಜನಾ ಪ್ರಾಧಿಕಾರಗಳು ಕಾರ್ಯನಿರತವಾಗಿವೆ. ೧೯೯೨ರ ೭೪ನೇ ಸಂವಿಧಾನ ತಿದ್ದುಪಡಿ ಕಾಯ್ದೆಯಂತೆ ರಾಜ್ಯದ ಇತರ ಎಲ್ಲಾ ಸ್ಥಳೀಯ ಸಂಸ್ಥೆಗಳಿಗೂ ಸಹ ಯೋಜನೆಯನ್ನು ವಿಸ್ತರಿಸಲು ಯೋಜಿಸಲಾಗುತ್ತಿದೆ. 'ನಗರಾಭಿವೃದ್ಧಿ ನೀತಿ' ಯನ್ನು ತಯಾರಿಸಲು ಉದ್ದೇಶಿಸಿದ್ದು ಡಾ.ಎ.ರವೀಂದ್ರ ಅವರ ನೇತೃತ್ವದ ಸಮಿತಿಯೊಂದನ್ನು ರಚಿಸಲಾಗಿದ್ದು, ವರದಿಯನ್ನಾಧರಿಸಿ ಅಭಿವೃದ್ಧಿ ಪಥದೆಡೆ ಸಾಗಲು ಸಿದ್ಧತೆ ನಡೆಸಿದೆ.

ಮುಂಬಯಿ ನಗರ ಯೋಜನಾ ಕಾಯ್ದೆ ೧೯೧೫ ಬೆಳಗಾವಿ, ವಿಜಯಪುರ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಜಾರಿಯಲ್ಲಿತ್ತು. ಹಾಗೇ ಮದ್ರಾಸ್ ನಗರ ಯೋಜನಾ ಕಾಯ್ದೆ ೧೯೨೦ ದಕ್ಷಿಣ ಕನ್ನಡ ಜಿಲ್ಲೆ, ಬಳ್ಳಾರಿ ಜಿಲ್ಲೆ ಹಾಗೂ ಕೊಳ್ಳೆಗಾಲ (ಈಗಿನ ಚಾಮರಾಜನಗರ ಜಿಲ್ಲೆ) ತಾಲೂಕುಗಳಲ್ಲಿ ಜಾರಿಯಲ್ಲಿತ್ತು. ಹೈದರಾಬಾದ್ ಮುನಿಸಿಪಾಲಿಟಿ ಕಾಯ್ದೆ ೧೯೫೬ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಅನ್ವಯವಾಗುತ್ತಿತ್ತು. ಏಕೀಕರಣದ ನಂತರ ಸಮಗ್ರ ರಾಜ್ಯ ವ್ಯಾಪ್ತಿಗೆ ಅನ್ವಯವಾಗುವಂತೆ ಜನವರಿ ೧೫, ೧೯೬೫ ರಲ್ಲಿ ಮೈಸೂರು ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಅಸ್ತಿತ್ವಕ್ಕೆ ಬಂತು. ನಂತರದಲ್ಲಿ ಒಂದನೇ ದರ್ಜೆ ನಗರಗಳಿಗೆ ಅನ್ವಯವಾಗುವಂತೆ ಕರ್ನಾಟಕ ನಗರಾಭಿವೃದ್ಧಿ ಮಂಡಳಿ ಕಾಯ್ದೆ ೧೯೭೬, ಜಾರಿಗೆ ಬಂತು.

ನಗರ/ಪಟ್ಟಣ ಮತ್ತು ಅಭಿವೃದ್ಧಿ ಪಥದಲ್ಲಿರುವ ಗ್ರಾಮಗಳ ಭೌತಿಕ, ಸಾಮಾಜಿಕ, ಆರ್ಥಿಕ ಸಮೀಕ್ಷೆ ನಡೆಸಿ ಮಹಾ ಯೋಜನೆ ತಯಾರಿಸಿ, ಅಧಿನಿಯಮದಡಿ ಸರ್ಕಾರಕ್ಕೆ ಯೋಜನೆಗಳನ್ನು ಸಲ್ಲಿಸಿ ಅಂಗೀಕಾರ ಪಡೆದು ಕಾರ್ಯೋನ್ಮುಖವಾಗುವುದು, ಬಡಾವಣೆ ವಿಸ್ತರಣೆ, ಅಭಿವೃದ್ಧಿ ಸುಧಾರಣೆ ಯೋಜನೆ, ಪುನರ್ವಸತಿ ಯೋಜನೆ, ಆಶ್ರಯ ಯೋಜನೆ, ಇತ್ಯಾದಿ. ಸರ್ಕಾರದ ಕರ್ನಾಟಕ ಗೃಹ ಮಂಡಳಿ, ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕೊಳಚೆ ನಿರ್ಮೂಲನಾ ಮಂಡಳಿ, ಮುಂತಾದ ಸಂಸ್ಥೆಗಳಿಗೆ ಯೋಜನಾ ವಿಷಯದಲ್ಲಿ ನೆರವು ನೀಡುವುದು. ಸರ್ಕಾರಿ ಇಲಾಖೆಗಳು, ಅರೆಸರ್ಕಾರಿ ಸಂಸ್ಥೆಗಳು, ಸ್ಥಳೀಯ ಸಂಸ್ಥೆ, ಖಾಸಗಿ ಸಂಸ್ಥೆಗಳ ಕೋರಿಕೆ ಮೇರೆಗೆ ವಿನ್ಯಾಸ ರೂಪಿಸಿ ತಾಂತ್ರಿಕ ಅನುಮೋದನೆ ನೀಡುವುದು, ವ್ಯವಸಾಯ ಭೂಮಿಯನ್ನು ವ್ಯವಸಾಯೋತ್ತರ ಉದ್ದೇಶಗಳಿಗಾಗಿ ಪರಿವರ್ತಿಸಲು ತಾಂತ್ರಿಕ ಅಭಿಪ್ರಾಯ ನೀಡುವುದು. ಮುಂತಾದವು ಈ ಇಲಾಖೆಯ ಮುಖ್ಯ ಪ್ರಕಾರ್ಯಗಳಾಗಿವೆ.

### ನಗರಾಭಿವೃದ್ಧಿ ಪ್ರಾಧಿಕಾರಗಳು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆಯಡಿಯಲ್ಲಿ ರಚನೆಯಾಗಿದ್ದು, ದಿನಾಂಕ ೧೬-೦೧-೧೯೭೬ರಂದು ಅಸ್ತಿತ್ವಕ್ಕೆ ಬಂದಿದೆ. ರಾಜ್ಯದ ಉಳಿದ ನಗರಾಭಿವೃದ್ಧಿ ಪ್ರಾಧಿಕಾರಗಳು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ ೧೯೮೭ ರಡಿ ರಚನೆಯಾಗಿದ್ದು, ವಿವರಗಳನ್ನು ಕೋಷ್ಟಕ ೯.೪ ರಲ್ಲಿ ನೀಡಿದೆ.

**ಕೋಷ್ಟಕ ೯.೪: ರಾಜ್ಯದಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರಗಳು/ಯೋಜನಾ ಪ್ರಾಧಿಕಾರಗಳು/ ಪುರಸಭಾ ಯೋಜನಾ ಪ್ರಾಧಿಕಾರಗಳ ವಿವರ**

| ಕ್ರ. ಸ | ನಗರಾಭಿವೃದ್ಧಿ ಪ್ರಾಧಿಕಾರದ ಹೆಸರು | ಅಸ್ತಿತ್ವಕ್ಕೆ ಬಂದ ದಿನಾಂಕ | ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣ (ಚ.ಕಿ.ಮೀ.) |
|---|---|---|---|
| ೧ | ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ | ೨೨-೧೨-೧೯೮೭ | ೧೮೨.೦೦ |
| ೨ | ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ | ೧೫-೦೪-೧೯೮೮ | ೬೩೩.೫೯ |
| ೩ | ಬೀದರ್ ನಗರಾಭಿವೃದ್ಧಿ ಪ್ರಾಧಿಕಾರ | ೦೨-೦೬-೧೯೮೮ | ೯೦.೫೯ |
| ೪ | ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರ | ೦೨-೦೬-೧೯೮೮ | ೪೨೦.೯೨ |
| ೫ | ಚಾಮರಾಜನಗರ ನಗರಾಭಿವೃದ್ಧಿ ಪ್ರಾಧಿಕಾರ | ೨೧-೦೯-೧೯೯೮ | ೧೨೦.೯೯ |
| ೬ | ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ | ೦೨-೦೬-೧೯೮೮ | ೬೪.೮೪ |
| ೭ | ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರ | ೧೫-೦೪-೧೯೮೮ | ೧೩೧.೨೩ |
| ೮ | ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ | ೧೫-೦೪-೧೯೮೮ | ೨೫೦.೦೭ |
| ೯ | ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರ | ೨೪-೦೪-೧೯೯೮ | ೨೩೩.೭೧ |
| ೧೦ | ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರ | ೧೬-೦೫-೧೯೮೮ | ೨೫೩.೦೦ |
| ೧೧ | ಹಾಸನ ನಗರಾಭಿವೃದ್ಧಿ ಪ್ರಾಧಿಕಾರ | ೦೨-೦೬-೧೯೮೮ | ೯೨.೨೭ |
| ೧೨ | ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರ | ೨೪-೦೪-೧೯೯೮ | ೧೦೪.೦೪ |
| ೧೩ | ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ | ೨೧-೦೫-೧೯೯೬ | ೨೩೦.೩೪ |
| ೧೪ | ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ | ೧೬-೦೫-೧೯೮೮ | ೪೧೩.೦೦ |
| ೧೫ | ಕೆ.ಜಿ.ಎಫ್. ನಗರಾಭಿವೃದ್ಧಿ ಪ್ರಾಧಿಕಾರ | ೦೨-೦೬-೧೯೮೮ | ೨೧೬.೦೦ |
| ೧೬ | ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರ | ೧೬-೦೫-೧೯೮೮ | ೯೬.೫೬ |
| ೧೭ | ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರ | ೧೭-೦೬-೧೯೮೮ | ೬೯.೯೫ |
| ೧೮ | ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರ | ೧೫-೦೪-೨೦೦೨ | ೯೩.೪೭ |
| ೧೯ | ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ | ೦೨-೦೬-೧೯೮೮ | ೯೯.೮೬ |

| | | | |
|---|---|---|---|
| ೨೦ | ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ | ೧೬-೦೫-೧೯೮೮ | ೩೦೬.೦೦ |
| ೨೧ | ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ | ೧೬-೦೫-೧೯೮೮ | ೪೯೫.೨೨ |
| ೨೨ | ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರ | ೦೨-೦೭-೧೯೮೮ | ೨೪೬.೬೩ |
| ೨೩ | ರಾಮನಗರ-ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರ | ೩೦-೧೧-೧೯೯೫ | ೬೩.೦೬ |
| ೨೪ | ರಾಮಸಮುದ್ರ-ಚಾಮರಾಜನಗರ ನಗರಾಭಿವೃದ್ಧಿ ಪ್ರಾಧಿಕಾರ | ೨೪-೦೪-೧೯೯೮ | ೧೨೦.೯೯ |
| ೨೫ | ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರ | ೦೨-೦೬-೧೯೯೮ | ೨೫೬.೦೦ |
| ೨೬ | ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ | ೦೨-೦೬-೧೯೯೮ | ೩೧೦.೦೦ |
| ೨೭ | ಉಡುಪಿ-ಮಲ್ಪೆ ನಗರಾಭಿವೃದ್ಧಿ ಪ್ರಾಧಿಕಾರ | ೨೪-೦೪-೧೯೮೮ | ೧೨೭.೩೫ |
| ೨೮ | ವಿಜಯನಗರ ಪ್ರದೇಶ ನಗರಾಭಿವೃದ್ಧಿ ಪ್ರಾಧಿಕಾರ | ೧೫-೧೨-೨೦೦೮ | ೭೭.೩೧ |
| ೨೯ | ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ | ೦೯-೦೨-೨೦೧೫ | ೨೧೮.೫೦ |

## ನಗರ ಯೋಜನಾ ಪ್ರಾಧಿಕಾರಗಳು

| ಕ್ರ. ಸ. | ನಗರ ಯೋಜನಾ ಪ್ರಾಧಿಕಾರದ ಹೆಸರು | ಜಿಲ್ಲೆ | ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣ (ಚ.ಕಿ.ಮೀ.) |
|---|---|---|---|
| ೧ | ಆನೇಕಲ್ ಯೋಜನಾ ಪ್ರಾಧಿಕಾರ | ಬೆಂಗಳೂರು ಗ್ರಾಮಾಂತರ | ೪೦೨೩ |
| ೨ | ಬಾದಾಮಿ ಯೋಜನಾ ಪ್ರಾಧಿಕಾರ | ಬಾಗಲಕೋಟೆ | ೧೯.೫೧ |
| ೩ | ಬಾಗಲಕೋಟೆ ಯೋಜನಾ ಪ್ರಾಧಿಕಾರ | ಬಾಗಲಕೋಟೆ | ೧೨೯.೪೭ |
| ೪ | ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಸ್ಥಳೀಯ ಯೋಜನಾ ಪ್ರಾಧಿಕಾರ | ಬೆಂಗಳೂರು, ರಾಮನಗರ, ಮಂಡ್ಯ ಮತ್ತು ಮೈಸೂರು | ೭೦೧.೦೦ |
| ೫ | ಬಸವಕಲ್ಯಾಣ ಯೋಜನಾ ಪ್ರಾಧಿಕಾರ | ಬೀದರ್ | ೨೩.೨೮ |
| ೬ | ಬೇಲೂರು ಯೋಜನಾ ಪ್ರಾಧಿಕಾರ | ಹಾಸನ | ೫೭೦ |
| ೭ | ಚನ್ನರಾಯಪಟ್ಟಣ ಯೋಜನಾ ಪ್ರಾಧಿಕಾರ | ಹಾಸನ | ೯.೮೦ |
| ೮ | ಚಿಂತಾಮಣಿ ಯೋಜನಾ ಪ್ರಾಧಿಕಾರ | ಚಿಕ್ಕಬಳ್ಳಾಪುರ | ೧೬.೯೮ |
| ೯ | ದಾಂಡೇಲಿ ಯೋಜನಾ ಪ್ರಾಧಿಕಾರ | ಉತ್ತರ-ಕನ್ನಡ | ೩೨೪.೦೦ |
| ೧೦ | ಗಂಗಾವತಿ ಯೋಜನಾ ಪ್ರಾಧಿಕಾರ | ಕೊಪ್ಪಳ | ೨೬೭೧ |
| ೧೧ | ಗೋಕಾಕ್ ಯೋಜನಾ ಪ್ರಾಧಿಕಾರ | ಬೆಳಗಾವಿ | ೫೬.೭೬ |
| ೧೨ | ಹಂಪಿ ವರ್ಲ್ಡ್ ಹೆರಿಟೇಜ್ ಏರಿಯಾ ಮ್ಯಾನೇಜ್‌ಮೆಂಟ್ ಪ್ರಾಧಿಕಾರ | ಬಳ್ಳಾರಿ | ೨೩೬.೩೬ |
| ೧೩ | ಹೊಸಕೋಟೆ ಯೋಜನಾ ಪ್ರಾಧಿಕಾರ | ಬೆಂಗಳೂರು ಗ್ರಾಮಾಂತರ | ೫೩೫.೦೦ |
| ೧೪ | ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ | ಬೆಂಗಳೂರು ಗ್ರಾಮಾಂತರ | ೭೯೨.೦೦ |
| ೧೫ | ಜಮಖಂಡಿ ಯೋಜನಾ ಪ್ರಾಧಿಕಾರ | ಬಾಗಲಕೋಟೆ | ೨೨.೨೦ |
| ೧೬ | ಕನಕಪುರ ಯೋಜನಾ ಪ್ರಾಧಿಕಾರ | ಬೆಂಗಳೂರು ಗ್ರಾಮಾಂತರ | ೪೧೨೭೮ |

| | | | |
|---|---|---|---|
| ೧೭ | ಕೃಷ್ಣರಾಜನಗರ ಯೋಜನಾ ಪ್ರಾಧಿಕಾರ | ಮೈಸೂರು | ೧೪.೦೮ |
| ೧೮ | ಕುಶಾಲನಗರ ಯೋಜನಾ ಪ್ರಾಧಿಕಾರ | ಕೊಡಗು | ೧೧.೦೫ |
| ೧೯ | ಮಾಗಡಿ ಯೋಜನಾ ಪ್ರಾಧಿಕಾರ | ಬೆಂಗಳೂರು ಗ್ರಾಮಾಂತರ | ೫೦೧.೫೨ |
| ೨೦ | ಮಾನ್ವಿ ಯೋಜನಾ ಪ್ರಾಧಿಕಾರ | ರಾಯಚೂರು | ೫೦.೮೯ |
| ೨೧ | ಮೂಡಬಿದ್ರೆ ಯೋಜನಾ ಪ್ರಾಧಿಕಾರ | ದಕ್ಷಿಣ ಕನ್ನಡ | ೪೯.೧೪ |
| ೨೨ | ನೆಲಮಂಗಲ ಯೋಜನಾ ಪ್ರಾಧಿಕಾರ | ಬೆಂಗಳೂರು ಗ್ರಾಮಾಂತರ | ೭೩೫.೦೦ |
| ೨೩ | ನಿಪ್ಪಾಣಿ ಯೋಜನಾ ಪ್ರಾಧಿಕಾರ | ಬೆಳಗಾವಿ | ೨೦೭೨ |
| ೨೪ | ಪುತ್ತೂರು ಯೋಜನಾ ಪ್ರಾಧಿಕಾರ | ದಕ್ಷಿಣ ಕನ್ನಡ | ೩೨.೩೭ |
| ೨೫ | ರಬಕವಿ-ಬನಹಟ್ಟಿ ಯೋಜನಾ ಪ್ರಾಧಿಕಾರ | ಬಾಗಲಕೋಟೆ | ೮೪೯೯ |
| ೨೬ | ರಾಣೆಬೆನ್ನೂರು ಯೋಜನಾ ಪ್ರಾಧಿಕಾರ | ಹಾವೇರಿ | ೧೦೬.೩೩ |
| ೨೭ | ಶಹಾಪೂರ ಯೋಜನಾ ಪ್ರಾಧಿಕಾರ | ಗುಲಬರ್ಗಾ | ೯೮.೧೬ |
| ೨೮ | ಸಿಂಧನೂರು ಯೋಜನಾ ಪ್ರಾಧಿಕಾರ | ರಾಯಚೂರು | ೨೫.೫೫ |
| ೨೯ | ಸಿರಸಿ ಯೋಜನಾ ಪ್ರಾಧಿಕಾರ | ಉತ್ತರ ಕನ್ನಡ | ೩೬೯೧ |
| ೩೦ | ವಾಡಿ-ಶಹಾಬಾದ್ ಯೋಜನಾ ಪ್ರಾಧಿಕಾರ | ಗುಲಬರ್ಗಾ | ೨೨೦.೦೦ |
| ೩೧ | ಯಾದಗಿರಿ ಯೋಜನಾ ಪ್ರಾಧಿಕಾರ | ಗುಲಬರ್ಗಾ | ೩೦೮೩ |
| ೩೨ | ಕುಂದಾಪುರ ಯೋಜನಾ ಪ್ರಾಧಿಕಾರ | ಉಡುಪಿ | ೧೭.೪೧ |
| ೩೩ | ಹಳೇಬೀಡು ಯೋಜನಾ ಪ್ರಾಧಿಕಾರ | ಹಾಸನ | ೯.೦೭ |
| ೩೪ | ಮಾಲೂರು ಯೋಜನಾ ಪ್ರಾಧಿಕಾರ | ಕೋಲಾರ | ೨೦೧.೧೧ |
| ೩೫ | ಅರಕಲಗೂಡು ಯೋಜನಾ ಪ್ರಾಧಿಕಾರ | ಹಾಸನ | |
| ೩೬ | ಬಂಟವಾಳ ಯೋಜನಾ ಪ್ರಾಧಿಕಾರ | ದಕ್ಷಿಣ ಕನ್ನಡ | |
| ೩೭ | ಚಿತ್ತಾಪುರ ಯೋಜನಾ ಪ್ರಾಧಿಕಾರ | ಕಲಬುರಗಿ | |
| ೩೮ | ಗೌರಿಬಿದನೂರು ಯೋಜನಾ ಪ್ರಾಧಿಕಾರ | ಚಿಕ್ಕಬಳ್ಳಾಪುರ | |
| ೩೯ | ಇಳಕಲ್ ಯೋಜನಾ ಪ್ರಾಧಿಕಾರ | ಬಾಗಲಕೋಟೆ | |
| ೪೦ | ರಾಮದುರ್ಗ ಯೋಜನಾ ಪ್ರಾಧಿಕಾರ | ಬೆಳಗಾವಿ | |
| ೪೧ | ಸುರಪುರ ಯೋಜನಾ ಪ್ರಾಧಿಕಾರ | ಯಾದಗಿರಿ | |
| ೪೨ | ಶಿಡ್ಲಘಟ್ಟ ಯೋಜನಾ ಪ್ರಾಧಿಕಾರ | ಚಿಕ್ಕಬಳ್ಳಾಪುರ | |
| ೪೩ | ಕುಣಿಗಲ್ ಯೋಜನಾ ಪ್ರಾಧಿಕಾರ | ತುಮಕೂರು | |
| ೪೪ | ಶಿರಾ ಯೋಜನಾ ಪ್ರಾಧಿಕಾರ | ತುಮಕೂರು | |
| ೪೫ | ತಿಪಟೂರು ಯೋಜನಾ ಪ್ರಾಧಿಕಾರ | ತುಮಕೂರು | |

## ನಗರ ಸಭೆ/ಪುರಸಭೆ ಯೋಜನಾ ಪ್ರಾಧಿಕಾರಗಳು

| ಕ್ರ. ಸ | ನಗರ ಸಭೆ/ ಪುರಸಭೆ ಯೋಜನಾ ಪ್ರಾಧಿಕಾರದ ಹೆಸರು | ಜಿಲ್ಲೆ |
|---|---|---|
| ೧ | ಅರಸೀಕೆರೆ | ಹಾಸನ |
| ೨ | ಬೈಲಹೊಂಗಲ | ಬೆಳಗಾವಿ |
| ೩ | ಬಂಟ್ವಾಳ | ದಕ್ಷಿಣ ಕನ್ನಡ |
| ೪ | ಭಾಲ್ಕಿ | ಬೀದರ್ |
| ೫ | ಭಟ್ಕಳ | ಉತ್ತರ ಕನ್ನಡ |
| ೬ | ಬೀರೂರು | ಚಿಕ್ಕಮಗಳೂರು |
| ೭ | ಚಳ್ಳಕೆರೆ | ಚಿತ್ರದುರ್ಗ |
| ೮ | ಔರಾದ್ | ಬೀದರ್ |
| ೯ | ಚಿಟಗುಪ್ಪ | ಬೀದರ್ |
| ೧೦ | ಗುಳೇದಗುಡ್ಡ | ಬಾಗಲಕೋಟೆ |
| ೧೧ | ಹರಪ್ಪನಹಳ್ಳಿ | ದಾವಣಗೆರೆ |
| ೧೨ | ಹಿರಿಯೂರು | ಚಿತ್ರದುರ್ಗ |
| ೧೩ | ಹೊಳೆನರಸೀಪುರ | ಹಾಸನ |
| ೧೪ | ಹುಮ್ನಾಬಾದ್ | ಬೀದರ್ |
| ೧೫ | ಹುಣಸೂರು | ಮೈಸೂರು |
| ೧೬ | ಬೀಳಗಿ | ಬಾಗಲಕೋಟೆ |
| ೧೭ | ಜಗಳೂರು | ದಾವಣಗೆರೆ |
| ೧೮ | ಕಡೂರು | ಚಿಕ್ಕಮಗಳೂರು |
| ೧೯ | ಕಂಪ್ಲಿ | ಬಳ್ಳಾರಿ |
| ೨೦ | ಕೊಳ್ಳೇಗಾಲ | ಚಾಮರಾಜನಗರ |
| ೨೧ | ಕುಮಟ | ಉತ್ತರ ಕನ್ನಡ |
| ೨೨ | ಗುಂಡ್ಲಪೇಟೆ | ಚಾಮರಾಜನಗರ |
| ೨೩ | ಲಕ್ಷ್ಮೇಶ್ವರ | ಗದಗ |
| ೨೪ | ಮಧುಗಿರಿ | ತುಮಕೂರು |
| ೨೫ | ಮಹಾಲಿಂಗಪುರ | ಬಾಗಲಕೋಟೆ |
| ೨೬ | ಮಳವಳ್ಳಿ | ಮಂಡ್ಯ |
| ೨೭ | ಮುದ್ದೇಬಿಹಾಳ | ಬಿಜಾಪುರ |
| ೨೮ | ಮುಧೋಳ | ಬಾಗಲಕೋಟೆ |
| ೨೯ | ಮುಳಬಾಗಿಲು | ಕೋಲಾರ |
| ೩೦ | ನರಗುಂದ | ಗದಗ |
| ೩೧ | ನವಲಗುಂದ | ಧಾರವಾಡ |
| ೩೨ | ಹಳಿಯಾಳ | ಉತ್ತರ ಕನ್ನಡ |
| ೩೩ | ಸಾಗರ | ಶಿವಮೊಗ್ಗ |
| ೩೪ | ಸವದತ್ತಿ | ಬೆಳಗಾವಿ |
| ೩೫ | ಸವಣೂರು | ಹಾವೇರಿ |
| ೩೬ | ಸೇಡಂ | ಕಲಬುರಗಿ |
| ೩೭ | ಹೊನ್ನಾಳಿ | ದಾವಣಗೆರೆ |
| ೩೮ | ಶಿಕಾರಿಪುರ | ಶಿವಮೊಗ್ಗ |
| ೩೯ | ಸಿಂಧಗಿ | ವಿಜಯಪುರ |
| ೪೦ | ಹೊನ್ನಾವರ | ಉತ್ತರ ಕನ್ನಡ |
| ೪೧ | ಶಿರಗುಪ್ಪ | ಬಳ್ಳಾರಿ |
| ೪೨ | ಹೊಸದುರ್ಗ | ಚಿತ್ರದುರ್ಗ |
| ೪೩ | ಶ್ರೀರಂಗಪಟ್ಟಣ | ಮಂಡ್ಯ |
| ೪೪ | ತರೀಕೆರೆ | ಚಿಕ್ಕಮಗಳೂರು |
| ೪೫ | ಹುನಗುಂದ | ಬಾಗಲಕೋಟೆ |
| ೪೬ | ವಿರಾಜಪೇಟೆ | ಕೊಡಗು |
| ೪೭ | ಆಳಂದಾ | ಕಲಬುರಗಿ |
| ೪೮ | ಬೆಳ್ತಂಗಡಿ | ದಕ್ಷಿಣ ಕನ್ನಡ |
| ೪೯ | ಚನ್ನಗಿರಿ | ದಾವಣಗೆರೆ |
| ೫೦ | ಚಿಕ್ಕೋಡಿ | ಬೆಳಗಾವಿ |
| ೫೧ | ಇಂಡಿ | ವಿಜಯಪುರ |
| ೫೨ | ಕೊಪ್ಪ | ಚಿಕ್ಕಮಗಳೂರು |
| ೫೩ | ಕುಷ್ಟಗಿ | ಕೊಪ್ಪಳ |
| ೫೪ | ಪಾವಗಡ | ತುಮಕೂರು |
| ೫೫ | ರೋಣ | ಗದಗ |
| ೫೬ | ಸಕಲೇಶಪುರ | ಹಾಸನ |
| ೫೭ | ಸಿದ್ದಾಪುರ | ಉತ್ತರ ಕನ್ನಡ |
| ೫೮ | ಸುಳ್ಯ | ದಕ್ಷಿಣ ಕನ್ನಡ |
| ೫೯ | ತಾಳಿಕೋಟೆ | ವಿಜಯಪುರ |
| ೬೦ | ತೇರದಾಳ್ | ಬಾಗಲಕೋಟೆ |

## ಕರ್ನಾಟಕ ಗೃಹ ಮಂಡಳಿ

ಇದು ಬೆಂಗಳೂರಿನಲ್ಲಿ ಕೇಂದ್ರ ಕಚೇರಿಯನ್ನು ಹೊಂದಿದೆ. ೧೯೫೬ರಲ್ಲಿ 'ಮೈಸೂರು ಗೃಹ ಮಂಡಳಿ' ಎಂಬುದಾಗಿ ಪ್ರಾರಂಭಗೊಂಡಿತು. ಕರ್ನಾಟಕ ಗೃಹ ಮಂಡಳಿ ಅಧಿನಿಯಮ ೧೯೬೨ ರ ಮೇರೆಗೆ 'ಕರ್ನಾಟಕ ಗೃಹ ಮಂಡಳಿ' ಎಂದು ಮರು ನಾಮಕರಣ ಮಾಡಲಾಯಿತು.

ಸರ್ಕಾರ ಅಧ್ಯಕ್ಷರನ್ನು ನಾಮ ನಿರ್ದೇಶನ ಮಾಡುತ್ತದೆ. ಅಧ್ಯಕ್ಷರು ಸೇರಿದಂತೆ ಎಂಟು ನಾಮನಿರ್ದೇಶಿತ ಸದಸ್ಯರಿರುತ್ತಾರೆ. ವಸತಿ ಆಯುಕ್ತರು ಮುಖ್ಯ ಕಾರ್ಯನಿರ್ವಹಣಾ ಮತ್ತು ಆಡಳಿತಾಧಿಕಾರಿಯಾಗಿರುತ್ತಾರೆ. ಹಲವಾರು ಅಧಿಕಾರಿ, ಸಿಬ್ಬಂದಿ ಸಹಾಯಕರಾಗಿ ಕಾರ್ಯನಿರ್ವಹಿಸುವರು. ಕರ್ನಾಟಕ ಗೃಹ ಮಂಡಳಿಯು ರಾಜ್ಯದ ವಸತಿ ಸಮಸ್ಯೆಗಳ ನಿವಾರಣೆಗೆ ಹಲವಾರು ಗೃಹ ನಿರ್ಮಾಣ ಯೋಜನೆಗಳನ್ನು ಹಮ್ಮಿಕೊಂಡಿದೆ. ಕರ್ನಾಟಕ ಗೃಹಮಂಡಳಿಯು ಎಲ್ಲಾ ತಾಲೂಕು ಕೇಂದ್ರಗಳಲ್ಲಿಯೂ ಮನೆಗಳನ್ನು ಕಟ್ಟಿಸಲು ಪರಿಸರ ಸ್ನೇಹಿ, ಕೈಗೆಟುಕುವ ಬೆಲೆಯಲ್ಲಿ ವಸತಿ ಸೌಲಭ್ಯ ಕಲ್ಪಿಸುವುದು, ಸುಸಜ್ಜಿತ ಬಡಾವಣೆ ಹಾಗೂ ಅದಕ್ಕೆ ಮೂಲ ಸೌಕರ್ಯ ಸೇವೆ ಒದಗಿಸುವುದು, ಜಂಟಿ ಸಹಭಾಗಿತ್ವ, ಠೇವಣಿ, ವಂತಿಗೆ ಕಾಮಗಾರಿಗಳು ಮುಂತಾದ ಕಾರ್ಯಯೋಜನೆಯನ್ನು ರೂಪಿಸಿದೆ. ಸರ್ಕಾರದ ಯೋಜನೆಗಳಾದ ಆಶ್ರಯ, ಭಾಗ್ಯಮಂದಿರ, ಅಂಬೇಡ್ಕರ್, ಗ್ರಾಮೀಣ ವಸತಿ ಯೋಜನೆಗಳಿಗೆ ಹುಡ್ಕೋ ಹಾಗೂ ರಾಷ್ಟ್ರೀಕೃತ

ಬ್ಯಾಂಕ್‌ಗಳಿಂದ ಸಾಲ ಪಡೆದು ಯೋಜನೆಗಳಲ್ಲಿ ತೊಡಗಿಸುತ್ತದೆ. ಬಡಾವಣೆಗಳ ಶೇ ೫೦ ರಷ್ಟು ಭಾಗದಲ್ಲಿ ಗಿಡಮರ ಬೆಳೆಸಲು ಯೋಜಿಸಿದ್ದು, ಹಾಲು ಮಾರಾಟ ಕೇಂದ್ರ ಹಾಗೂ ಅಂಗಡಿಗಳಿಗೂ ವ್ಯವಸ್ಥೆ ಕಲ್ಪಿಸಲಾಗಿದೆ. ಮಂಡಳಿಯು ಎಲ್.ಐ.ಜಿ. (ಕಡಿಮೆ ಆದಾಯ ವರ್ಗ), ಎಂ.ಐ.ಜಿ. (ಮಧ್ಯಮ ಆದಾಯ ವರ್ಗ) ಹಾಗೂ ಎಚ್.ಐ.ಜಿ. (ಅಧಿಕ ಆದಾಯ ವರ್ಗ) ಎಂಬ ಮೂರು ಶ್ರೇಣಿಯ ಮನೆಗಳನ್ನು ನಿರ್ಮಿಸುತ್ತದೆ.

### ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ

ತೀವ್ರವಾದ ನಾಗರೀಕರಣ, ಕೈಗಾರಿಕೀಕರಣ ಬ್ಯಾಂಕು ಉದ್ಯಮ, ಸಾರಿಗೆ–ಸಂಪರ್ಕ, ವ್ಯಾಪಾರ ವಾಣಿಜ್ಯ (ಮಾರುಕಟ್ಟೆ) ಉನ್ನತ ಶಿಕ್ಷಣ, ಉತ್ತಮ ವೈದ್ಯಕೀಯ ಸೌಲಭ್ಯ, ಲೋಕೋಪಯೋಗಿ ಕಾಮಗಾರಿ ಗೃಹನಿರ್ಮಾಣ ಮುಂತಾದವುಗಳು ನಗರಗಳಲ್ಲಿ ಲಭ್ಯವಿರುವುದರಿಂದ ಹಾಗೂ ಗ್ರಾಮೀಣ ಪ್ರದೇಶಗಳಿಂದ ಉದ್ಯೋಗ ಪಡೆಯಲು ನಗರ ಪಟ್ಟಣಗಳಿಗೆ ಜನರ ವಲಸೆ ದಿನೇ ದಿನೇ ಹೆಚ್ಚುತ್ತಿರುವುದರಿಂದ ದೊಡ್ಡ ನಗರ ಹಾಗೂ ಪಟ್ಟಣಗಳಲ್ಲಿ ಜನಸಂಖ್ಯೆ ಕ್ಷಿಪ್ರವಾಗಿ ಹೆಚ್ಚುತ್ತಿದೆ. ನಗರಗಳಿಗೆ ವಲಸೆ ಬಂದವರಲ್ಲಿ ಆರ್ಥಿಕವಾಗಿ ಹಿಂದುಳಿದ ಕಡುಬಡವರು ಮತ್ತು ನಿರುದ್ಯೋಗಿಗಳು ಹೆಚ್ಚಾಗಿರುತ್ತಾರೆ. ಮೂಲಭೂತ ಸೌಕರ್ಯಗಳೇ ಇಲ್ಲದ ಇಂತಹ ನಿರಾಶ್ರಿತರ ವಸತಿಸ್ಥಳಗಳು ಕೊಳಚೆ ಪ್ರದೇಶಗಳಾಗಿದ್ದು, ನಗರಗಳಲ್ಲಿ ತೀವ್ರವಾಗಿ ಹೆಚ್ಚುತ್ತಿವೆ. ಇಂತಹ ಪ್ರದೇಶಗಳಲ್ಲಿನ ಅನಾರೋಗ್ಯಕರ ದುರ್ಗಂಧದ ವಾತಾವರಣದಲ್ಲಿ ಪರಿಸರ ಮಾಲಿನ್ಯಗೊಂಡ ಇಕ್ಕಟ್ಟಾದ ಜನದಟ್ಟಣೆಯಿಂದ ಕೂಡಿದ ಕೊಳೆಗೇರಿಗಳಲ್ಲಿ ಅನೇಕ ಸಾಂಕ್ರಾಮಿಕ ರೋಗಗಳಿಂದ ಬಳಲುತ್ತಾರೆ. ಅದರಿಂದಾಗಿ ಇಂತಹ ರೋಗಗಳು ಇಡೀ ನಗರಕ್ಕೆ ಹಬ್ಬುವ ಪ್ರಸಂಗಗಳು ಕಂಡುಬಂದಿವೆ. ಈ ಬಗ್ಗೆ ಚಿಂತನೆ ಹಾಗೂ ಸಮೀಕ್ಷೆ ನಡೆಸಿದ ಸರ್ಕಾರವು ನಗರಗಳ ನೈರ್ಮಲೀಕರಣ ಕಾಪಾಡುವ ಉದ್ದೇಶದಿಂದ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ೧೯೭೩ರಲ್ಲಿ ಕರ್ನಾಟಕ ಕೊಳಚೆ ಪ್ರದೇಶಗಳ ನಿರ್ಮೂಲನೆ ಮತ್ತು ಅಭಿವೃದ್ಧಿ ಕಾಯ್ದೆಯನ್ನು ಜಾರಿಗೊಳಿಸಿತು. ಇದರನ್ವಯ ೧೯೭೫ರಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ಕೇಂದ್ರ ಕಛೇರಿಯನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಿತು. ಕೊಳಚೆ ನಿವಾಸಿಗಳಿಗೆ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ಬೀದಿದೀಪ, ರಸ್ತೆ, ಸೇತುವೆ, ಚರಂಡಿ ವ್ಯವಸ್ಥೆ, ಶೌಚಾಲಯ, ಉದ್ಯಾನವನ, ಅಂಗನವಾಡಿ, ಬಾಲವಾಡಿ ಹಾಗೂ ಕಿರು ಉದ್ಯಾನವನ ಪಾಠಶಾಲೆ, ಆಸ್ಪತ್ರೆ, ನ್ಯಾಯಬೆಲೆ ಅಂಗಡಿ ಮುಂತಾದವುಗಳನ್ನು ಒದಗಿಸುವುದು ಮಂಡಳಿಯ ಧ್ಯೇಯವಾಗಿದೆ. ಕೇಂದ್ರ ಪುರಸ್ಕೃತ "ವಾಲ್ಮೀಕಿ–ಅಂಬೇಡ್ಕರ್ ಆವಾಸ" ಯೋಜನೆಯಡಿಯಲ್ಲಿ ಮನೆಗಳ ನಿರ್ಮಾಣದ ಜೊತೆಗೆ ನಿರ್ಮಲ ಭಾರತ ಅಭಿಯಾನ ಯೋಜನೆಯಲ್ಲಿ ಸಾಮೂಹಿಕ ಶೌಚಾಲಯ ನಿರ್ಮಾಣವನ್ನು ಕೈಗೊಳ್ಳಲಾಗಿದೆ. ಈ ಯೋಜನೆಯ ಹೊರತು ನಗರ/ಪಟ್ಟಣಗಳಲ್ಲಿ ಶೌಚಾಲಯಗಳ ನಿರ್ಮಾಣ ಕಾರ್ಯವನ್ನು ಸ್ಥಳೀಯ ಜನಪ್ರತಿನಿಧಿಗಳ ಬೇಡಿಕೆಗೆ ಅನುಗುಣವಾಗಿ ನಿರ್ಮಿಸಲಾಗುತ್ತಿದೆ.

**ಚುನಾವಣಾ ಆಯೋಗ: ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, (ಕರ್ನಾಟಕ)**:ಈ ಇಲಾಖೆಯು ೧೯೫೨ರಲ್ಲಿ ಪ್ರಾರಂಭವಾಗಿದ್ದು, ಸ್ವಾತಂತ್ರ್ಯಾನಂತರದ ಮೊದಲ ಸಾರ್ವತ್ರಿಕ ಚುನಾವಣೆ ನಡೆದ ವರ್ಷವೂ ಆಗಿದೆ. ಕರ್ನಾಟಕ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಈ ಇಲಾಖೆ ಸೇರಿದೆ. ಮುಖ್ಯ ಚುನಾವಣಾಧಿಕಾರಿ ಮತ್ತು ಪದನಿಮಿತ್ತ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿ.ಆ.ಸು.ಇ (ಚುನಾವಣೆಗಳು) ಈ ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ.

ಭಾರತದ ಚುನಾವಣಾ ಆಯೋಗದ ನಿರ್ದೇಶನದಂತೆ ಸಾರ್ವತ್ರಿಕ ಚುನಾವಣೆಗೆ ಸಂಬಂಧಪಟ್ಟ ಕೆಲಸಗಳನ್ನು ನಿರ್ವಹಿಸುವುದು. ಪ್ರಜಾಪ್ರಾತಿನಿಧ್ಯ ಕಾಯ್ದೆ ೧೯೫೦ ಹಾಗೂ ೧೯೫೧ರ ಅಧಿನಿಯಮಗಳನ್ನು ಜಾರಿಗೊಳಿಸುತ್ತದೆ.

ವಿಧಾನಸಭಾ ಕ್ಷೇತ್ರ, ವಿಧಾನಪರಿಷತ್ ಕ್ಷೇತ್ರಗಳ ಮತದಾರರ ಪಟ್ಟಿ ತಯಾರಿಕೆ ಮತ್ತು ಪರಿಷ್ಕರಣೆ, ಮುದ್ರಣ, ಮತದಾನದ ಸಂಪೂರ್ಣ ವ್ಯವಸ್ಥೆ ಬಂದೋಬಸ್ತು, ಮತದಾನ ಸಿಬ್ಬಂದಿ, ಮುಕ್ತ ಚುನಾವಣೆ ನಡೆಸುವಿಕೆ ರಾಜಕೀಯ ಪಕ್ಷಗಳಿಗೆ ಮಾದರಿ ನಡಾವಳಿ ಸಂಹಿತೆ, ಚುನಾವಣಾ ಕಾನೂನು ತಿದ್ದುಪಡಿ ವಿಷಯ, ಚುನಾವಣಾಧಿಕಾರಿ ಹಾಗೂ ಸಹಾಯಕ ಚುನವಣಾಧಿಕಾರಿಗಳನ್ನು ನೇಮಿಸುವ ಬಗ್ಗೆ, ಮತದಾರರ ನೋಂದಣಾಧಿಕಾರಿಗಳ/ಸಹಾಯಕ ಮತದಾರರ ನೋಂದಣಾಧಿಕಾರಿ ನೇಮಕ ಬಗ್ಗೆ, ಚುನಾವಣಾ ಸಾಮಗ್ರಿ, ಚುನಾವಣಾ ಚಿಹ್ನೆ ಹಂಚುವಿಕೆ, ಚುನಾವಣಾ ಕ್ಷೇತ್ರಗಳ ಮರುವಿಂಗಡಣೆ ಬಗ್ಗೆ, ಮತಗಳ ಎಣಿಕೆ, ಫಲಿತಾಂಶ ಘೋಷಣೆ, ಚುನಾವಣಾ ತಕರಾರು ಅರ್ಜಿಗಳು, ಅಭ್ಯರ್ಥಿಗಳ ಆದಾಯ ಘೋಷಣೆ, ಪ್ರಮಾಣ ಪತ್ರ ಮತ್ತು ಚುನಾವಣಾ ವೆಚ್ಚಗಳು, ದಾಖಲೆಗಳ ಸುರಕ್ಷೆ ಮತ್ತು ವಿಲೇವಾರಿ. ಮತದಾರರ ಗುರುತಿನ ಚೀಟಿ ವಿತರಣೆ, ಚುನಾವಣಾ ಅಂಕಿಅಂಶ ವರದಿ ನೀಡುವುದು ಮುಂತಾದ ಪ್ರಕಾರ್ಯಗಳನ್ನು ಕಾರ್ಯಗತಗೊಳಿಸುತ್ತಿದೆ.

**ಕರ್ನಾಟಕ ಲೋಕಸೇವಾ ಆಯೋಗ**: ದಿನಾಂಕ:೧೮–೦೫–೧೯೫೧ರಲ್ಲಿ ಪ್ರಾರಂಭವಾದ ಈ ಆಯೋಗದ ಮುಖ್ಯಸ್ಥರು ಕಾರ್ಯದರ್ಶಿಯಾಗಿರುತ್ತಾರೆ. ಮುಖ್ಯ ಕಛೇರಿ ಬೆಂಗಳೂರಿನಲ್ಲಿದ್ದು ಮೈಸೂರು, ಬೆಳಗಾವಿ, ಕಲಬುರಗಿ ಮತ್ತು ಶಿವಮೊಗ್ಗದಲ್ಲಿ ಪ್ರಾಂತೀಯ ಕಚೇರಿ ಹೊಂದಿರುತ್ತದೆ. ಸಹಾಯಕ ಕಾರ್ಯದರ್ಶಿ ಅವುಗಳ ಮುಖ್ಯಸ್ಥರಾಗಿರುತ್ತಾರೆ. ೧೯೨೧ಕ್ಕಿಂತ ಮುಂಚೆ ರಾಜ್ಯದ ನಾಗರೀಕ ಸೇವೆಗಳ ಆಯ್ಕೆಗೆ ಸಂಬಂಧಿಸಿದಂತೆ ಯಾವುದೇ ಪ್ರಾಧಿಕಾರ ಇರಲಿಲ್ಲ. ಸರ್ಕಾರ ನಿಗದಿ ಪಡಿಸಿದ ಮಾದರಿಯಲ್ಲಿ ನೇಮಕಾತಿ ಮಾಡಲಾಗುತ್ತಿತ್ತು. ಆದೇಶ ಸಂಖ್ಯೆ ೧೮೨೭/೮೦/ಇಎಜಿ/೩೦೮ ದಿನಾಂಕ: ೧೬–೦೫–೧೯೨೧ರಲ್ಲಿ 'ಕೇಂದ್ರೀಯ ನೇಮಕಾತಿ ಮಂಡಳಿ' ರಚಿಸಿ ಸರ್ಕಾರ ಆದೇಶ ಹೊರಡಿಸಿತು. ಇದು ೧೯೪೦ ರ ವರೆಗೆ ಸರ್ಕಾರದ ಸಚಿವಾಲಯದ ಆಡಳಿತಕ್ಕೆ ಸೇರಿತ್ತು. ಸರ್ಕಾರವು ಆದೇಶ ಸಂಖ್ಯೆ ೩೭೮೫/ಸಿ.ಬಿ. ೧೦೩–೩೯–೧, ದಿನಾಂಕ ೧೯–೦೧–೧೯೪೦ರಲ್ಲಿ ಲೋಕಸೇವಾ ಆಯುಕ್ತರನ್ನು ನೇಮಿಸಿತ್ತು. ಭಾರತ ಸಂವಿಧಾನದ ಅನ್ವಯ ಕರ್ನಾಟಕ ಲೋಕ ಸೇವಾ ಆಯೋಗವನ್ನು ೧೯೫೧ರಲ್ಲಿ ಸ್ಥಾಪಿಸಲಾಯಿತು. ಆಗ ಒಬ್ಬ ಅಧ್ಯಕ್ಷರು ಹಾಗೂ ಇಬ್ಬರು ಸದಸ್ಯರಿದ್ದರು. ಹಾಸನ ಜಿಲ್ಲೆಯ ಹೆಚ್. ಬಿ. ಗುಂಡಪ್ಪ ಗೌಡ ಎಂಬುವವರು ಮೊದಲ ಅಧ್ಯಕ್ಷರಾದರು. ೩–೫–೧೮೯೯ರಲ್ಲಿ ಜನಿಸಿದ ಇವರು ಪ್ರಜಾಪ್ರತಿನಿಧಿ ಸಭೆಗೆ ಆಯ್ಕೆಯಾದ ಸದಸ್ಯರಾಗಿದ್ದರಲ್ಲದೆ (೧೪ ವರ್ಷಗಳ ಕಾಲ) ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಯಲ್ಲಿ

(Local Self Government) ಸಾರ್ವಜನಿಕ ಆರೋಗ್ಯ ಕ್ಯಾಬಿನೆಟ್ ಸಚಿವರಾಗಿದ್ದರು. ಮೈಸೂರು ಮಹಾರಾಜರಿಂದ "ರಾಜ ಮಂತ್ರ ಪ್ರವೀಣ" ಎಂಬ ಬಿರುದುಗಳಿಸಿದ್ದರು. ೧೯೭೧ರಲ್ಲಿ ನಿಧನರಾದರು. ಆಯೋಗ ಸ್ಥಾಪಿಸಲ್ಪಟ್ಟಾಗ 'ಯುನೈಟೆಡ್ ಇಂಡಿಯಾ ಕಟ್ಟಡ' ದಲ್ಲಿ ಕಾರ್ಯನಿರ್ವಹಿಸುತ್ತಿತ್ತು (೧೯೫೧-೫೭). ೨೧-೦೫-೧೯೫೧ರಂದು ಪ್ಯಾಲೇಸ್ ರಸ್ತೆಯಲ್ಲಿರುವ 'ಬಾಲಬ್ರೂಯಿ' ಕಟ್ಟಡಕ್ಕೂ ೭-೧೧-೫೬ರಂದು ರಾಜ್ಯ ಉಚ್ಚನ್ಯಾಯಾಲಯದ 'ಅಠಾರಾ ಕಚೇರಿ' ಗೂ ಸ್ಥಳಾಂತರಗೊಂಡು ೧೯೬೮ರಿಂದ 'ಪಾರ್ಕ್‌ಹೌಸ್'ಗೆ ಬಂದಿತು. ಅದೇ ಸ್ಥಳ ಇಂದು 'ಉದ್ಯೋಗ ಸೌಧ' ವಾಗಿದೆ. ೧-೩-೨೦೦೨ರಂದು ಆಯೋಗದ ಸುವರ್ಣ ಮಹೋತ್ಸವ ಆಚರಿಸಿ (ಅಂದು ಶಿಲಾವಿನ್ಯಾಸ ಮಾಡಿದ ಉದ್ಯೋಗ ಸೌಧ ೧೯-೧೧-೨೦೦೫ರಂದು ಉದ್ಘಾಟಿಸಲ್ಪಟ್ಟಿತ್ತು). ಉದ್ಯಾನ ಮನೆಯಿಂದ ಉದ್ಯೋಗ ಸೌಧದವರೆಗೆ ಎಂಬ ಸ್ಮರಣ ಸಂಚಿಕೆ ಹೊರತರಲಾಗಿದೆ.

ರಾಜ್ಯ ನಾಗರೀಕ ಸೇವೆಗಳ ಪತ್ರಾಂಕಿತ ಮತ್ತು ಅಪತ್ರಾಂಕಿತ ಅಧಿಕಾರಿಗಳನ್ನು ಆಯ್ಕೆ ಮಾಡುವುದು, ಸರ್ಕಾರಿ ನೌಕರರಿಗೆ ಸೇವಾ ಪರೀಕ್ಷೆಗಳನ್ನು ನಡೆಸುವುದು, ಶಿಸ್ತು ಪ್ರಕರಣಗಳ ಬಗ್ಗೆ ಸಲಹೆ ನೀಡುವುದು. ಬಡ್ತಿ ವಿಷಯಗಳ ಬಗ್ಗೆ ಸಲಹೆ ನೀಡುವುದು, ಯು.ಪಿ.ಎಸ್.ಸಿ ನಡೆಸುವ ವಿವಿಧ ಪರೀಕ್ಷೆಗಳ ಮೇಲ್ವಿಚಾರಣೆ ನಡೆಸುವುದು ಮುಂತಾದ ಪ್ರಕಾರ್ಯಗಳು ಆಯೋಗದ ವ್ಯಾಪ್ತಿಗೆ ಒಳಪಟ್ಟಿವೆ. ರೂ. ೧೨ ಕೋಟಿ ವೆಚ್ಚದಲ್ಲಿ ನಾಲ್ಕು ಅಂತಸ್ತುಳ್ಳ ಉದ್ಯೋಗಸೌಧ ನಿರ್ಮಿಸಲಾಗಿದೆ.

## ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ತರಬೇತಿ ಸಂಸ್ಥೆ, ಮೈಸೂರು

ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯು ೧೯೮೯ರಲ್ಲಿ ಸ್ಥಾಪನೆಗೊಂಡು ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯ ಆಶ್ರಯದಲ್ಲಿ ತನ್ನ ಕಾರ್ಯ ಚಟುವಟಿಕೆಗಳನ್ನು ಪ್ರಾರಂಭಿಸಿ ಹಂತಹಂತವಾಗಿ ವಿಸ್ತಾರಗೊಂಡು ಪ್ರಸ್ತುತ ಬೃಹತ್ ಸಂಸ್ಥೆಯಾಗಿ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿದೆ. ಉಪಗ್ರಹ ಆಧಾರಿತ ತರಬೇತಿ ವ್ಯವಸ್ಥೆಯನ್ನು ಅಳವಡಿಸಿಕೊಂಡು ಪಂಚಾಯತ್‌ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು, ಗ್ರಾಮೀಣಾಭಿವೃದ್ಧಿ ಇಲಾಖೆ, ಬ್ಯಾಂಕ್ ಮುಂತಾದವುಗಳು ಅಧಿಕಾರಿ ಸಿಬ್ಬಂದಿಗಳಿಗೆ, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಇತರೆ ಅಭಿವೃದ್ಧಿ ಸಂಬಂಧಿ ಸಮುದಾಯಗಳಿಗೆ ತರಬೇತಿ ನೀಡುತ್ತಿದೆ.

ಇದರ ಮೂಲ ಧ್ಯೇಯ ಕೆಳಹಂತದಲ್ಲಿನ ಸಬಲೀಕರಣಕ್ಕಾಗಿ ತರಬೇತಿ ನೀಡುವುದಾಗಿದ್ದು, ವಿಕೇಂದ್ರೀಕೃತ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ತೊಡಗಲು ಸಾಧ್ಯವಾಗುವಂತೆ ಉತ್ಕೃಷ್ಟಮಟ್ಟದ ತರಬೇತಿ, ಸಂಶೋಧನೆ, ಸಮಾಲೋಚನಾ ಕ್ರಮಗಳನ್ನು ಅಭಿವೃದ್ಧಿ ಪಡಿಸುವುದಾಗಿದೆ. ಸಂಸ್ಥೆಯ ಆಡಳಿತ ವ್ಯವಸ್ಥೆಯಲ್ಲಿ ಮಾರ್ಗದರ್ಶನ ನಿಡಲು ಸರ್ಕಾರವು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ವ್ಯವಸ್ಥಾಪಕ ಸಮಿತಿಯನ್ನು ರಚಿಸಿದೆ. ಸಂಸ್ಥೆಯು ಮಹಾನಿರ್ದೇಶಕರು, ನಿರ್ದೇಶಕರು, ಉಪನಿರ್ದೇಶಕರು, ಬೋಧಕ ಸಿಬ್ಬಂದಿ, ತಾಂತ್ರಿಕ ಸಿಬ್ಬಂದಿ, ಅಧಿಕಾರಿ ಸಿಬ್ಬಂದಿಗಳನ್ನೊಳಗೊಂಡಿದೆ.

ಪ್ರಾರಂಭದ ದಿನಗಳಲ್ಲಿ 'ಮುಖಾಮುಖಿ' ತರಬೇತಿ ವಿಧಾನ ಹೊಂದಿದ್ದು ೨೦೦೧ರಲ್ಲಿ ಉಪಗ್ರಹ ಆಧಾರಿತ ತರಬೇತಿ ಕೇಂದ್ರ ಸ್ಥಾಪಿಸಿತು. ನಂತರ ಎರಡೂ ರೀತಿಯಲ್ಲಿ ತರಬೇತಿ ನೀಡಲಾಗುತ್ತಿದೆ. ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು, ವಿವಿಧ ಹಂತದ ಅಧಿಕಾರಿ, ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮ ನಡೆಸುವುದು. ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ವಿಷಯಾಧಾರಿತ ಕಾರ್ಯಾಗಾರಗಳು, ವಿಚಾರ ಸಂಕಿರಣಗಳು ವಿದ್ವತ್ ಸಭೆ ನಡೆಸುವುದು, ಸಂಶೋಧನೆಗಳನ್ನು ನಡೆಸುವುದು, ವಿಶ್ವ ಬ್ಯಾಂಕ್ ಮುಂತಾದ ಪ್ರತಿಷ್ಠಿತ ಸಂಸ್ಥೆಗಳ ಸಹಯೋಗದಲ್ಲಿ ಕ್ಷೇತ್ರಮಟ್ಟದ ಅಧ್ಯಯನ ನಡೆಸುವುದು, ಸರ್ಕಾರದ ಹಲವು ಜನಪರ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಹಾಗೂ ಅನುಷ್ಠಾನಗೊಳಿಸುವಲ್ಲಿ ಸಮಾಲೋಚನಾ ಸಭೆಗಳನ್ನು ನಡೆಸಿ ಸಲಹೆಗಳನ್ನು ನೀಡುವುದು. ಮುಖ್ಯ ಪ್ರಕಾರ್ಯಗಳಾಗಿವೆ.

ಭಾರತ ಸರ್ಕಾರದ ಬಾಹ್ಯಕಾಶ ಇಲಾಖೆ ಹಾಗೂ ಇಸ್ರೋ, ತಾಂತ್ರಿಕ ಸಹಾಯದಿಂದ 'ಸ್ಯಾಟ್‌ಕಾಂ' ಸ್ಟುಡಿಯೋ ನಿರ್ಮಾಣಗೊಂಡಿದ್ದು, ಇದರ ಮೂಲಕ ರಾಜ್ಯದ ೧೭೬ ತಾಲೂಕುಗಳ ಪೈಕಿ ಬೆಂಗಳೂರು ಪೂರ್ವ ತಾಲೂಕು ಹೊರತು ಪಡಿಸಿ ಉಳಿದ ಎಲ್ಲಾ ತಾಲೂಕುಗಳ ತಾಲೂಕು ಪಂಚಾಯ್ತಿ ಕೇಂದ್ರಗಳಲ್ಲಿ ಅಳವಡಿಸಲಾಗಿರುವ ಸ್ವೀಕೃತಿ ಕೇಂದ್ರಗಳು ಸೇರಿದಂತೆ ಜಿಲ್ಲಾ ತರಬೇತಿ ಸಂಸ್ಥೆಗಳು, ಶಿಕ್ಷಣ ಇಲಾಖೆಯ ಸ್ವೀಕೃತಿ ಕೇಂದ್ರಗಳು ಸೇರಿ ಒಟ್ಟು ೨೮೫ ಸ್ವೀಕೃತಿಕೇಂದ್ರಗಳ ಮೂಲಕ ಏಕಕಾಲದಲ್ಲಿ ತರಬೇತಿ ನೀಡಲಾಗುತ್ತಿದೆ. ಈ ಸೌಲಭ್ಯ ಅತ್ಯಂತ ಉಪಯುಕ್ತವಾಗಿದ್ದು, ಸರ್ಕಾರದ ಹಲವು ಇಲಾಖೆಗಳು, ಸಂಸ್ಥೆಗಳು ಸಹ ತಮ್ಮ ತಮ್ಮ ಇಲಾಖೆಯ ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ನಿಗದಿತ ಶುಲ್ಕ ಪಾವತಿಸಿ ಈ ಸೌಲಭ್ಯ ಪಡೆದು ಕೊಳ್ಳುತ್ತಿದೆ. ಈ ಸಂಸ್ಥೆಯು ಅನೇಕ ತರಬೇತಿ ಕೈಪಿಡಿಗಳನ್ನು ಸಹ ಪ್ರಕಟಿಸಿರುತ್ತದೆ.

## ಆಡಳಿತ ತರಬೇತಿ ಸಂಸ್ಥೆ, ಮೈಸೂರು.

ಭಾತರ ಸರ್ಕಾರದಿಂದ ೧೯೫೫ರಲ್ಲಿ ಸ್ಥಾಪಿತವಾದ ಇದನ್ನು ಓರಿಯಂಟೇಷನ್ ಅಂಡ್ ಸ್ಟಡಿ ಸೆಂಟರ್ ಎಂದು ಕರೆಯಲಾಗುತ್ತಿತ್ತು. ಜಿಲ್ಲಾ ಮತ್ತು ಕ್ಷೇತ್ರಮಟ್ಟದ ಅಧಿಕಾರಿಗಳಿಗೆ ಹಾಗೂ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿನ ಅಧಿಕಾರೇತರರಿಗೆ ತರಬೇತಿ ನೀಡಲಾಗುತ್ತಿತ್ತು. ೧೯೬೭ರಲ್ಲಿ ಇದನ್ನು ರಾಜ್ಯ ಸರ್ಕಾರಕ್ಕೆ ವಹಿಸಲಾಯಿತು. ೧೯೭೬ರಲ್ಲಿದ್ದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಅಧೀನಕ್ಕೆ ಒಳಪಟ್ಟಿತು. ಅಧಿಕಾರಿ ವರ್ಗದವರಲ್ಲಿ ಉತ್ತಮ ಗುಣಾಢ್ಯತೆ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಸಾಮರ್ಥ್ಯ ನಿರ್ಮಾಣಗೊಳಿಸುವ ದಿಸೆಯಲ್ಲಿ ಆಡಳಿತ ತರಬೇತಿ ಸಂಸ್ಥೆಯು ಕಾರ್ಯೋನ್ಮುಖವಾಗಿದೆ. ರಾಜ್ಯ ಸರ್ಕಾರದ 'ಎ' ಮತ್ತು 'ಬಿ' ದರ್ಜೆಯ ಅಧಿಕಾರಿಗಳನ್ನು ತರಬೇತುಗೊಳಿಸುವುದು, ರಾಜ್ಯದ ನಾಗರೀಕ ಸೇವೆಯಲ್ಲಿ ಬರುವ ಗೆಜೆಟೆಡ್ ಪ್ರೊಬೇಷನರುಗಳಿಗೆ (KAS) 'ಸಾಮಾನ್ಯ ಬುನಾದಿ ಶಿಕ್ಷಣ ತರಬೇತಿ' ನೀಡುವುದು ಮುಖ್ಯ ಉದ್ದೇಶವಾಗಿದೆ.

ಇದರ ಹೊರತಾಗಿಯೂ ಅನೇಕ ರೀತಿಯ ತರಬೇತಿಗಳನ್ನು ನಿಡಲಾಗುತ್ತಿದೆ. ಅವೆಂದರೆ, ರಾಜ್ಯ ಸರ್ಕಾರದ ಗೆಜೆಟೆಡ್ ಅಧಿಕಾರಿಗಳಿಗೆ ವೃತ್ತಿತತ್ಪರತೆ ತರಬೇತಿ, ಶಿಕ್ಷಣ, ಬಡ್ತಿ ಹೊಂದಿದ

ಅಧಿಕಾರಿಗಳಿಗೆ ಪುನರ್ಮನನ ಮತ್ತು ಓರಿಯೆಂಟೇಷನ್ ತರಬೇತಿ, ವಿಶೇಷ ವಿಷಯವಾರು ತರಬೇತಿ, ವಿಚಾರಗೋಷ್ಠಿ, ಕಾರ್ಯಾಗಾರ ಮತ್ತು ವಿಚಾರ ಸಂಕಿರಣ ಏರ್ಪಡಿಸುವುದು. ಭಾರತ ಸರ್ಕಾರವು ಪ್ರಸ್ತಾಪಿಸುವ ವಿವಿಧ ತರಬೇತಿಗಳು, ಅಖಿಲ ಭಾರತ ಸೇವೆಯಲ್ಲಿರುವ ಕರ್ನಾಟಕ ಕೇಡರ್ ಸೇವೆಯಲ್ಲಿರುವ ಐ.ಎ.ಎಸ್. ಅಧಿಕಾರಿಗಳಿಗೆ ಓರಿಯಂಟೇಷನ್ ತರಬೇತಿ, ತರಬೇತುದಾರರಿಗೆ ತರಬೇತಿ ನೀಡುವುದು. ಕಂಪ್ಯೂಟರ್ ತರಬೇತಿ, ಇ-ಗೌರ್ನೆನ್ಸ್ ಮತ್ತು ಇ-ಕಲಿಕೆ ಕೌಶಲ್ಯಾಭಿವೃದ್ಧಿ, ಮುಂತಾದ ತರಬೇತಿ, ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಿಗೆ ಅವಶ್ಯವೆನಿಸುವ ತರಬೇತಿ ವಿಷಯಗಳನ್ನು ಗುರುತಿಸುವುದು ಹಾಗೂ ಕಾರ್ಯಾಗಾರ, ತರಬೇತಿ ನಡೆಸಲು ಅಗತ್ಯ ಸಲಹೆಗಳನ್ನು ಪಡೆಯುವುದು, ನೀಡುವುದು ಮತ್ತು ಸಂಘಟಿಸುವುದು. ಪೂರಕ ಚಟುವಟಿಕೆ, ಸಂಶೋಧನೆ ಮುಂತಾದವುಗಳನ್ನು ನಡೆಸುವುದು ಮುಂತಾದವು ಮುಖ್ಯ ಚಟುವಟಿಕೆಗಳಾಗಿವೆ.

ಆಡಳಿತ ತರಬೇತಿ ಸಂಸ್ಥೆಯು ೪೧ ರೀತಿಯ ವಿಷಯಗಳ ಮೇಲೆ ತರಬೇತಿ ಮಾದರಿಗಳನ್ನು ಅಭಿವೃದ್ಧಿ ಪಡಿಸಿದೆ. ಡಿ.ಎಫ್.ಐ.ಡಿ ಯೋಜನೆಯ ಭಾಗವಾಗಿ ಭಾರತ ಸರ್ಕಾರ ವಹಿಸಿದ ಇಲಾಖಾ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು, ೨೩ ಜಿಲ್ಲಾ ತರಬೇತಿ ಸಂಸ್ಥೆಗಳ ಮೂಲಕ ಜಿಲ್ಲೆಗಳಲ್ಲಿ 'ಸಿ' ಮತ್ತು 'ಡಿ' ದರ್ಜೆ ಸಿಬ್ಬಂದಿಗೆ ತರಬೇತಿ ನೀಡಲಾಗುತ್ತಿದೆ. ಹಾಗೂ ಮೂಲಭೂತ ಸೌಲಭ್ಯಗಳನ್ನು ಆಧುನೀಕರಿಸಿದೆ. ವಿವಿಧ ಸಂಘಸಂಸ್ಥೆ, ಇಲಾಖೆಗಳಿಗೆ ಅವರ ಅಗತ್ಯವನ್ನನುಸರಿಸಿ Payment basis ಮೇಲೆ ತರಬೇತಿ ನೀಡುವುದು. ತರಬೇತಿ ಸಂಸ್ಥೆಯFacultyಗಳನ್ನು ಭಾರತ ಮತ್ತು ವಿದೇಶಗಳಲ್ಲಿನ ವಿವಿಧ ತರಬೇತಿ ಸಂಸ್ಥೆಗಳಿಗೆ ನಿಯೋಜಿಸಿ ಅವರ ಕೌಶಲ್ಯವನ್ನು ಮತ್ತು ಜ್ಞಾನವನ್ನು ವೃದ್ಧಿಸಿಕೊಳ್ಳಲು ಅವಕಾಶ ಕಲ್ಪಿಸುವುದು. Action Research Papers ಎಂಬ ಎರಡು ಸಂಪುಟಗಳನ್ನು ಪ್ರಕಟಿಸಿದೆ. 'ಪರಿವರ್ತನೆಗಾಗಿ ಪ್ರಶಿಕ್ಷಣ' ಎಂಬ ದ್ವೈಮಾಸಿಕ ಪತ್ರಿಕೆಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಹೊರತರುತ್ತಿದೆ. ತರಬೇತಿ ಕೈಪಿಡಿ, ಕಾಮಗಾರಿ ಕೈಪಿಡಿ, ಸೇವಾನಿಯಮ, ಮಾಹಿತಿ ಹಕ್ಕು ಅಧಿನಿಯಮ, ಮಾರ್ಗದರ್ಶಿ ಕೈಪಿಡಿ, ತರಬೇತುದಾರರ ಕೈಪಿಡಿ ಮುಂತಾದ ಶೀರ್ಷಿಕೆಗಳ ಸುಮಾರು ೩೦-೪೦ ಪುಸ್ತಕಗಳನ್ನು ಪ್ರಕಟಿಸಿದೆ. ೨೦೧೦-೧೧ನೇ ಸಾಲಿನಲ್ಲಿ ಆಡಳಿತ ತರಬೇತಿ ಸಂಸ್ಥೆಯಿಂದ ೨೭೪ ತರಬೇತಿ ಕಾರ್ಯಕ್ರಮ ಆಯೋಜಿಸಿದ್ದು ೧,೯೨೮ ಮಹಿಳೆಯರು, ೮,೩೪೧ ಪುರುಷರು ಸೇರಿದಂತೆ ಒಟ್ಟು ೧೦,೨೬೯ ಜನರಿಗೆ ತರಬೇತಿ ನೀಡಲಾಗಿದೆ. ವಿಕೋಪ ನಿರ್ವಹಣೆ ಕೇಂದ್ರದಿಂದ ೩೧೧ ತರಬೇತಿ ಕಾರ್ಯಕ್ರಮ ನಡೆಸಿದ್ದು, ೯,೩೬೬ ಪುರುಷರು, ೨,೦೮೩ ಮಹಿಳೆಯರು ಸೇರಿದಂತೆ ಒಟ್ಟು ೧೧,೪೪೯ ಜನರಿಗೆ ತರಬೇತಿ ನೀಡಲಾಗಿದೆ.

### ಜಿಲ್ಲಾ ತರಬೇತಿ ಸಂಸ್ಥೆ

ಪ್ರತಿ ಜಿಲ್ಲೆಯಲ್ಲಿಯೂ ಅಂದರೆ, ಹಾಲಿ ೨೩ ಜಿಲ್ಲೆಯಲ್ಲಿ ಜಿಲ್ಲಾ ತರಬೇತಿ ಸಂಸ್ಥೆ ಚಾಲ್ತಿಯಲ್ಲಿದ್ದು ಆಡಳಿತ ತರಬೇತಿ ಸಂಸ್ಥೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ. ಜಿಲ್ಲಾ ತರಬೇತಿ ಸಂಸ್ಥೆಯು ಆಯಾ ಜಿಲ್ಲೆಗಳಲ್ಲಿನ ವಿವಿಧ ಇಲಾಖೆಗಳಲ್ಲಿರುವ 'ಸಿ' ಮತ್ತು 'ಡಿ' ದರ್ಜೆ ನೌಕರರಿಗೆ 'ಸಾಮಾನ್ಯ ಬುನಾದಿ ತರಬೇತಿ' ನೀಡುತ್ತದೆ. ಹಾಗೂ ಕಛೇರಿ ಆಡಳಿತಕ್ಕೆ ಸಂಬಂಧಿಸಿದಂತೆ ಅಗತ್ಯವೆನಿಸಿದ ವಿಷಯಗಳ ಬಗ್ಗೆಯೂ ಕೂಡ ತರಬೇತಿ ನೀಡಲಾಗುತ್ತದೆ. ವಿಶ್ರಾಂತಿ ವೇತನ, ಟಿ.ಎ.ಬಿಲ್ ವೇತನ ನಿಗದಿ, ಬಜೆಟ್ ತಯಾರಿಕೆ ಸಾಮಾನ್ಯ ಕಾನೂನಿನ ತಿಳುವಳಿಕೆ, ಮಾಹಿತಿ ಹಕ್ಕು, ಲಿಂಗಸೂಕ್ಷ್ಮತೆ (Gender Sensitisation) ಕಂಪ್ಯೂಟರ್ ತರಬೇತಿ ಮುಂತಾದ ವಿಷಯಗಳ ಬಗ್ಗೆ ಅಲ್ಪಕಾಲದ ಓರಿಯಂಟೇಷನ್ ತರಬೇತಿ ನೀಡುತ್ತಿದೆ. ೨೦೧೦-೧೧ನೇ ಸಾಲಿನಲ್ಲಿ ಜಿಲ್ಲೆಗಳಲ್ಲಿನ ಜಿಲ್ಲಾ ತರಬೇತಿ ಸಂಸ್ಥೆಗಳಿಂದ ಒಟ್ಟು ೧,೨೯೬ ತರಬೇತಿ ಕಾರ್ಯಕ್ರಮ ಆಯೋಜಿಸಿದ್ದು ಒಟ್ಟು ೪೦,೦೨೪ ಜನರಿಗೆ ತರಬೇತಿ ನೀಡಲಾಗಿದೆ.

### ಕರ್ನಾಟಕ ಸರ್ಕಾರ ಸಚಿವಾಲಯ ತರಬೇತಿ ಸಂಸ್ಥೆ

ಕರ್ನಾಟಕ ಸರ್ಕಾರ ಸಚಿವಾಲಯ ತರಬೇತಿ ಸಂಸ್ಥೆಯು ೧೯೭೮ರಲ್ಲಿ ಪ್ರಾರಂಭವಾಗಿದ್ದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಸಚಿವಾಲಯಕ್ಕೆ ಸೇರಿದೆ. ನಿರ್ದೇಶಕರು ಸಂಸ್ಥೆಯ ಮುಖ್ಯಸ್ಥರಾಗಿರುತ್ತಾರೆ. ಇದು ಕರ್ನಾಟಕ ಸರ್ಕಾರದ ಸಚಿವಾಲಯ, ವಿಧಾನ ಪರಿಷತ್, ವಿಧಾನಸಭೆ, ಹಾಗೂ ಕರ್ನಾಟಕ ಲೋಕಸೇವಾ ಆಯೋಗದ ಅಧಿಕಾರಿ/ಸಿಬ್ಬಂದಿಯವರಿಗೆ ತರಬೇತಿ ನೀಡುತ್ತದೆ. ಹೊಸದಾಗಿ ನೇಮಕಗೊಂಡ ಕಿರಿಯ ಸಹಾಯಕರು, ಸಹಾಯಕರು ಮತ್ತು ಶಾಖಾಧಿಕಾರಿಗಳಿಗೆ ದೀರ್ಘಾವಧಿ ತರಬೇತಿ ನೀಡುವುದು, ಸೇವೆಯಲ್ಲಿರುವ ವಿವಿಧ ಹಂತದ ಅಧಿಕಾರಿ/ನೌಕರರುಗಳಿಗೆ ಅಲ್ಪಾವಧಿ ತರಬೇತಿ, ಓರಿಯೆಂಟೇಷನ್, ಪುನರ್‌ಮನನ ತರಬೇತಿ ನೀಡುವುದು.

ಅವಶ್ಯ ಬಿದ್ದಲ್ಲಿ ಕಾರ್ಯಗಾರ, ವಿಚಾರ ಸಂಕಿರಣ ಏರ್ಪಡಿಸುವುದು ಮುಂತಾದ ಪ್ರಕಾರ್ಯಗಳನ್ನು ನೆರವೇರಿಸುತ್ತಿದೆ. ಕಚೇರಿ ಕಾರ್ಯವಿಧಾನ, ಸೇವಾ ವಿಷಯಗಳು, ನ್ಯಾಯಾಲಯ ವಿಷಯಗಳು, ಹಣಕಾಸು ನಿರ್ವಹಣೆ ಮತ್ತು ಆಯವ್ಯಯ, ವಿಧಾನಮಂಡಲದ ವಿಷಯಗಳು, ವರ್ತನಾವೈಖರಿ ವಿಜ್ಞಾನ, ಯೋಜನಾ ವಿಷಯಗಳು, ಶಿಸ್ತು ವಿಷಯಗಳು, ಮಾಹಿತಿ ಹಕ್ಕು, ಪಾರದರ್ಶಕತೆ ಮುಂತಾದ ಅನೇಕ ವಿಷಯಗಳ ಕುರಿತಂತೆ ತರಬೇತಿ ನೀಡಲಾಗುವುದು. ತರಬೇತಿ ಸಂದರ್ಭದಲ್ಲಿ ಪ್ರಶಿಕ್ಷಣಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕಾಗಿ ಮಾನವ ಮೌಲ್ಯಗಳು, ಕೆಲಸದ ಮೌಲ್ಯ ಲಿಂಗ ಸಂವೇದನೆ, ಯೋಗ, ಧ್ಯಾನ, ಆರೋಗ್ಯ ರಕ್ಷಣೆ, ನಾಗರೀಕ ರಕ್ಷಣೆ, ಪರಿಸರ ಸಂರಕ್ಷಣೆ, ಪ್ರಥಮ ಚಿಕಿತ್ಸೆ ಮುಂತಾದ ವಿಷಯಗಳನ್ನು ಸಹ ಅಳವಡಿಸಿಕೊಳ್ಳಲಾಗುತ್ತಿದೆ. ಕ್ಷೇತ್ರ ಸಂದರ್ಶನದಲ್ಲಿ ಜಿಲ್ಲಾ ತಾಲೂಕು ಹಂತದ ಕಚೇರಿಗಳನ್ನು ಸಂದರ್ಶಿಸುತ್ತಿದ್ದು ಇದರಿಂದ ಅವರ ಕಾರ್ಯವೈಖರಿಯನ್ನು ತಿಳಿಯುವುದರ ಜೊತೆಗೆ ಸರ್ಕಾರದ ಯೋಜನೆಗಳ ಕಾರ್ಯಾನುಷ್ಠಾನದ ಬಗ್ಗೆ ನೇರ ಅನುಭವ ಹೊಂದಲು ಸಾಧ್ಯವಾಗುತ್ತದೆ. ೨೦೦೫ಕ್ಕೆ ೨೫ ವರ್ಷವಾದ ಹಿನ್ನೆಲೆಯಲ್ಲಿ ದಿನಾಂಕ: ೧೦-೦೨-೨೦೦೫ ರಂದು ಬೆಳ್ಳಿ ಹಬ್ಬ ಆಚರಿಸಿ 'ಸೇವಾಭಾವ' ಎಂಬ ಸ್ಮರಣ ಸಂಚಿಕೆಯನ್ನು ಹೊರತರಲಾಗಿದೆ.

### ಜನಸ್ಪಂದನ ಕೋಶ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ 'ಜನಸ್ಪಂದನ ಕೋಶ'ವನ್ನು ೧೯೮೩ರಲ್ಲಿ ಆರಂಭಿಸಲಾಯಿತು. ಇದೊಂದು ಸಾರ್ವಜನಿಕ ದೂರು ಸಂಸ್ಥೆಯಾಗಿದ್ದು ಇಲಾಖೆ ಪ್ರಾರಂಭಗೊಂಡಾಗ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು

ಇಲಾಖೆಯ ಮುಖ್ಯಸ್ಥರಾಗಿದ್ದರು. ೨೦೦೪ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳನ್ನು ಮುಖ್ಯಸ್ಥರನ್ನಾಗಿ ಮಾಡಲಾಯಿತು. ಕರ್ನಾಟಕ ಮಾಹಿತಿ ಆಯೋಗವು ಈ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿದೆ.

ಗ್ರಾಮಾಂತರ ನಾಗರೀಕರ ಕುಂದುಕೊರತೆಗಳನ್ನು ಪರಿಹರಿಸಲು ಜಿಲ್ಲಾಮಟ್ಟದ ಅಧಿಕಾರಿಗಳು, ಮುಖ್ಯವಾಗಿ ಜಿಲ್ಲಾಧಿಕಾರಿಗಳು, ಜಿಲ್ಲಾಪಂಚಾಯತ್ ಮುಖ್ಯಕಾರ್ಯ ನಿರ್ವಾಹಕ ಅಧಿಕಾರಿಗಳು ಮತ್ತು ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು ಪ್ರತಿ ತಿಂಗಳು ಕನಿಷ್ಠ ಎರಡು ಹೋಬಳಿಗಳಲ್ಲಾದರೂ 'ಜನಸಂಪರ್ಕ ಸಭೆ' ಏರ್ಪಡಿಸಿ ಸಾರ್ವಜನಿಕರ ಕುಂದುಕೊರತೆ ಪರಿಹರಿಸಬೇಕು. ಸಭೆಯಲ್ಲಿ ಸ್ವೀಕರಿಸಿದ ಅರ್ಜಿಗಳ ಬಗ್ಗೆ ಸಭೆಯಲ್ಲಿಯೇ ಪರಿಹಾರ ಸೂಚಿಸಬೇಕು. ಅಗತ್ಯಬಿದ್ದಲ್ಲಿ ಮಾತ್ರ ೧೫-೩೦ ದಿನದಲ್ಲಿ ಪರಿಹರಿಸಬೇಕು. ಭಾರತ ಸರ್ಕಾರದ ಸರ್ವೋಚ್ಛ ನ್ಯಾಯಾಲಯದ ರಿಟ್ ಅರ್ಜಿ ನಂ.೧೯೬/೨೦೦೧ ದಿನಾಂಕ ೬-೦೫-೨೦೦೫ರಲ್ಲಿನ ನಿರ್ದೇಶನದಂತೆ 'ಆಹಾರ ಭದ್ರತಾ ಯೋಜನೆಯನ್ನು' ಸಮರ್ಪಕವಾಗಿ ಜಾರಿಗೊಳಿಸಲು ಸಮಿತಿ ರಚಿಸಲಾಗಿದ್ದು ಈ ಸಮಿತಿಯು ಪ್ರತಿ ತಿಂಗಳ ಮೊದಲ ಮತ್ತು ಮೂರನೇ ಶನಿವಾರ ಸಭೆ ನಡೆಸಿ ಸ್ವೀಕರಿಸಿದ ಅರ್ಜಿಗಳ ಮೇಲೆ ತೀರ್ಮಾನ ಕೈಗೊಳ್ಳುತ್ತದೆ. ಇದರಿಂದಾಗಿ ಗ್ರಾಮೀಣ ಪ್ರದೇಶದ ಜನರು ತಮ್ಮ ಕುಂದುಕೊರತೆ ನಿವಾರಣೆಗಾಗಿ ತಾಲೂಕು ಕೇಂದ್ರ, ಜಿಲ್ಲಾಕೇಂದ್ರ, ರಾಜ್ಯದ ರಾಜಧಾನಿಗೆ ಓಡಾಡುವುದು ತಪ್ಪಿದೆ. ಹಾಗೂ ದೂರು ಅರ್ಜಿಗಳೂ ಗಣನೀಯವಾಗಿ ಕಡಿಮೆಯಾಗಿದೆ. ಹೋಬಳಿ ಮಟ್ಟದ ಜನಸ್ಪಂದನ ಸಭೆಗಳು ಸಾರ್ವಜನಿಕ ಕುಂದುಕೊರತೆಗಳನ್ನು ಜನರ ಮನೆ ಬಾಗಿಲಿನಲ್ಲಿಯೇ ನಿವಾರಿಸುವಲ್ಲಿ ಇದೊಂದು ಮಹತ್ತರ ಜನಪರ ಕಾರ್ಯಕ್ರಮವೆಂದು ಹೆಸರು ಪಡೆದಿದೆ. ರಾಜ್ಯವ್ಯಾಪಿ ಜಾರಿಯಲ್ಲಿರುವ ಇದನ್ನು ಕಂದಾಯ ಇಲಾಖೆ ಮೂಲಕ ವ್ಯವಸ್ಥಿತಗೊಳಿಸಲಾಗುತ್ತಿದೆ. ಇದೇ ಇಲಾಖೆಯಡಿ ಮಾಹಿತಿ ಹಕ್ಕು ಅಧಿನಿಯಮ ೨೦೦೫ನ್ನು ೨೧-೦೬-೨೦೦೫ರಿಂದ ಜಾರಿಗೊಳಿಸುತ್ತಿದ್ದು ಕರ್ನಾಟಕ ಮಾಹಿತಿ ಆಯೋಗವನ್ನು ರಚಿಸಿದೆ.

**ಕರ್ನಾಟಕ ಮಾಹಿತಿ ಹಕ್ಕು ಆಯೋಗ**:-ವಿಶ್ವಸಂಸ್ಥೆಯು ೧೯೪೮ರ ಮಾರ್ಚ್‌ನಲ್ಲಿ ಜಿನೀವಾದಲ್ಲಿ ಮಾಹಿತಿ ಸ್ವಾತಂತ್ರ್ಯದ ವಿಷಯ ಕುರಿತು ಸಮ್ಮೇಳನವನ್ನು ಆಯೋಜಿಸಿದ್ದಾಗ ಈ ಹಕ್ಕಿನ ಪ್ರಶ್ನೆ ಉದ್ಭವಿಸಿತು. ೫೪ ರಾಷ್ಟ್ರಗಳು ಅದರಲ್ಲಿ ಭಾಗವಹಿಸಿದ್ದವು. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಮಾಹಿತಿ ಸ್ವಾತಂತ್ರ್ಯವನ್ನು ಮೂಲಭೂತ ಮಾನವ ಹಕ್ಕು ಎಂದು ಘೋಷಿಸಲು ಕಾರಣವಾಯಿತಲ್ಲದೇ ಅದನ್ನು ೧೦-೧೨-೧೯೪೮ರಂದು ಘೋಷಿಸಿತು. ೧೯೬೦ರಲ್ಲಿ ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಪರಿಷತ್ತು ಈ ಘೋಷಣೆಯನ್ನು ಅಳವಡಿಸಿಕೊಂಡಿತು. ತನ್ನ ನಾಗರೀಕರಿಗೆ ಈ ಬಗ್ಗೆ ಉಪಬಂಧ ರಚಿಸಿದ ವಿಶ್ವದ ಪ್ರಥಮ ರಾಷ್ಟ್ರ ಸ್ವೀಡನ್. ನಂತರ ಅನೇಕ ರಾಷ್ಟ್ರಗಳು ಅಳವಡಿಸಿಕೊಂಡು ಕಾನೂನುಗಳನ್ನು ರಚಿಸಿದವು.

ಈ ಮಾಹಿತಿ ಹಕ್ಕಿನ ಉದ್ದೇಶಗಳ ಪೈಕಿ ಅದಕ್ಷ ಆಡಳಿತ ಮತ್ತು ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವುದೂ ಒಂದಾಗಿದೆ. ಉತ್ತಮ ಆಡಳಿತ, ಪಾರದರ್ಶಕ ಪದ್ಧತಿಗಳು ಅತ್ಯವಶ್ಯಕವಾದ ಹಿನ್ನೆಲೆಯಲ್ಲಿ ಮಾಹಿತಿ ಹಕ್ಕು ಪ್ರಾಮುಖ್ಯತೆಯುಳ್ಳದ್ದಾಗಿದೆ ಎನ್ನಲಾಗಿದೆ. ಭಾರತದಲ್ಲಿ ಮಾಹಿತಿ ಹಕ್ಕು ಅಧಿನಿಯಮ ೨೦೦೫, ಜೂನ್ ೧೫, ೨೦೦೫ರಂದು ರಾಷ್ಟ್ರಪತಿಯವರ ಅನುಮೋದನೆ ಪಡೆಯಿತು. ಈ ಅಧಿನಿಯಮದ ೧೫ನೇ ಪ್ರಕರಣದಂತೆ ರಾಜ್ಯ ಮಾಹಿತಿ ಆಯೋಗಗಳ ರಚನೆಯಾಗಿರುತ್ತದೆ. ಅದರಂತೆ ಕರ್ನಾಟಕ ಮಾಹಿತಿ ಆಯೋಗವು ರಚಿತವಾಗಿದ್ದು ಮೊದಲ ಮುಖ್ಯ ಮಾಹಿತಿ ಆಯುಕ್ತರಾಗಿ ಶ್ರೀ.ಕೆ.ಕೆ ಮಿಶ್ರಾ ಅವರು ರಾಜ್ಯದ ಮೊದಲ ಮುಖ್ಯ ಮಾಹಿತಿ ಆಯುಕ್ತರಾಗಿದ್ದರು. ಒಬ್ಬರು ರಾಜ್ಯ ಮುಖ್ಯ ಮಾಹಿತಿ ಆಯುಕ್ತರು  ಆರು ರಾಜ್ಯ ಮಾಹಿತಿ ಆಯುಕ್ತರುಗಳು, ಕಾರ್ಯದರ್ಶಿ, ಅಧೀನಕಾರ್ಯದರ್ಶಿ ಹಾಗೂ ಇತರೆ ಅಧೀನ ಸಿಬ್ಬಂದಿ ಕಾರ್ಯನಿರ್ವಹಿಸುವರು.

ಸಾರ್ವಜನಿಕ ಮಾಹಿತಿ ಅಧಿಕಾರಿಯು ಅರ್ಜಿದಾರರಿಗೆ ಮಾಹಿತಿ ಪಡೆಯುವ ಅವಕಾಶವನ್ನು ನಿರಾಕರಿಸಿದರೆ ಆ ಅರ್ಜಿದಾರನು ಅಧಿನಿಯಮದ ೧೯(೧) ನೇ ಪ್ರಕರಣದ ಮೇರೆಗೆ ಮೊದಲ ಅಪೀಲು ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸುವುದಕ್ಕೆ ಬದಲಾಗಿ ೧೮(೧) (ಬಿ) ರೀತ್ಯಾ ದೂರಿನ ರೂಪದಲ್ಲಿ ನೇರವಾಗಿ ಆಯೋಗಕ್ಕೆ ದೂರು ಸಲ್ಲಿಸಬಹುದೆಂದು ಕರ್ನಾಟಕ ಮಾಹಿತಿ ಆಯೋಗ ನಿರ್ಣಯಿಸಿದೆ. ವಿಳಂಬದಿಂದಾಗಿ ಅನಾವಶ್ಯಕ ತೊಂದರೆಗೆ ಒಳಗಾಗುವುದನ್ನು ತಪ್ಪಿಸಲು ಈ ಅವಕಾಶ ಕಲ್ಪಿಸಿದೆ.ಈ ಬಗ್ಗೆ ಸಾಕಷ್ಟು ಕೈಪಿಡಿ, ಕಾಯ್ದೆ ಪ್ರಕಟಣೆಗಳು ಲಭ್ಯ.

## ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಕನ್ನಡ, ಸಂಸ್ಕೃತಿ ನಿರ್ದೇಶನಾಲಯ**:  ಈ ಇಲಾಖೆಯಡಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಸೇರಿದಂತೆ, ನಾಡಿನ ಕನ್ನಡ ಅಭಿವೃದ್ಧಿ ಸಂಸ್ಕೃತಿ ಪ್ರಚಾರ, ಕಲೆ, ಪ್ರಾಚ್ಯ ಪರಂಪರೆ, ಪತ್ರಾಗಾರ, ಗಡಿ ಪ್ರದೇಶಾಭಿವೃದ್ಧಿ ಮುಂತಾದ ಅನೇಕ ಅಂಶಗಳನ್ನು ಉಳಿಸಿ ಬೆಳೆಸುವ, ಸಂರಕ್ಷಿಸುವ ಅನೇಕ ಇಲಾಖೆಗಳಿವೆ. ನಿರ್ದೇಶನಾಲಯವು ಪ್ರತಿಷ್ಠಿತ ಇಲಾಖೆಯಾಗಿದ್ದು, ನಿರ್ದೇಶಕರು ಇದರ ಮುಖ್ಯಸ್ಥರಾಗಿರುತ್ತಾರೆ. ಜಿಲ್ಲಾ  ಮಟ್ಟದಲ್ಲಿ ಸಹಾಯಕ ನಿರ್ದೇಶಕರಿರುತ್ತಾರೆ. ನಿರ್ದೇಶನಾಲಯದ ಮತ್ತು ಇಲಾಖೆಯ ವಿವಿಧ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ವಿವಿಧ ಅಕಾಡೆಮಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕನ್ನಡ ಪುಸ್ತಕ ಪ್ರಾಧಿಕಾರಗಳು ಇಲಾಖೆಗೆ ಸಹಕರಿಸುತ್ತವೆ. ಕನ್ನಡ ಅಭಿವೃದ್ಧಿ ಯೋಜನೆಯಡಿ, ಆಡಳಿತ ಕನ್ನಡ ಕಾರ್ಯ ಶಿಬಿರ, ಕಮ್ಮಟ, ಕನ್ನಡೇತರರಿಗೆ ಕನ್ನಡ ಕಲಿಸುವಿಕೆ, ಇವುಗಳಿಗಾಗಿ ಪೂರಕ ಸಾಹಿತ್ಯ ಮುದ್ರಣ, ಗಡಿ ಭಾಗಗಳಲ್ಲಿ ಕನ್ನಡ ಜಾಗೃತಿ ಮೂಡಿಸುವಿಕೆ, ಗಡಿನಾಡ ಉತ್ಸವ, ಕಲಾಪ್ರತಿಭೋತ್ಸವ, ಜಾನಪದ ಜಾತ್ರೆ, ಪಾರಂಪರಿಕ ಉತ್ಸವಗಳು, ಪುಸ್ತಕ ಪ್ರಕಟಣೆ, ವೃತ್ತಿ ನಾಟಕ ಸಂಸ್ಥೆ ಹಾಗೂ ಸಾಂಸ್ಕೃತಿಕ ಸಂಘಟನೆಗಳಿಗೆ ಧನಸಹಾಯ, ಕಲಾಮಂದಿರ ನಿರ್ಮಾಣ, ಕವಿಗಳ ಸ್ಮಾರಕ ಪ್ರತಿಷ್ಠಾನ, ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿ/ವರ್ಗ/ಗಿರಿಜನರ ಕಲಾ ಸಾಹಿತ್ಯ ಪ್ರತಿಭೆಗೆ, ಸಂಸ್ಥೆಗಳಿಗೆ ಧನ ಸಹಾಯ ನೀಡುವುದು ಮೊದಲಾದ ಕಾರ್ಯಕ್ರಮಗಳು ಈ ಇಲಾಖೆಯ ಪ್ರಮುಖ ಪ್ರಕಾರ್ಯಗಳಾಗಿವೆ.

**ಪ್ರಾಚ್ಯ ವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು:** ೧೮೮೫ರಲ್ಲಿ ಅಸ್ತಿತ್ವಕ್ಕೆ ಬಂದ ಇದು ಮೈಸೂರಿನಲ್ಲಿದೆ. ಕಲೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ, ಅನ್ವೇಷಣೆ ಉತ್ಖನನ, ಪ್ರಾಚೀನ ಸ್ಮಾರಕಗಳ ಸಂರಕ್ಷಣೆ, ಶಾಸನಗಳ ಸರ್ವೇಕ್ಷಣೆ, ನೋಂದಣಿ, ಪ್ರಾಚೀನ ನಾಣ್ಯಗಳ ಅಧ್ಯಯನ, ಸಂಶೋಧನಾ ಗ್ರಂಥಗಳ ಪ್ರಕಟಣೆ, ಸಂಗ್ರಹಾಲಯದ ನಿರ್ವಹಣೆ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಮುಖ್ಯ ಪ್ರಕಾರ್ಯಗಳಾಗಿದ್ದು, ವಿಚಾರ ಸಂಕಿರಣಗಳು ವಸ್ತು ಪ್ರದರ್ಶನ ಸಂಶೋಧನಾ ಪ್ರಕಟಣೆಗಳು, ಛಾಯಾಚಿತ್ರ ಪ್ರದರ್ಶನ ಮುಂತಾದವುಗಳ ಮೂಲಕ ಜನರಲ್ಲಿ ಸಾಂಸ್ಕೃತಿಕ ಅರಿವು ಮೂಡಿಸಲಾಗುತ್ತಿದೆ.

**ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ:** ಇಲಾಖೆ ಕಚೇರಿ ಬೆಂಗಳೂರಿನಲ್ಲಿದೆ. ಪರಂಪರೆ ಕಟ್ಟಡಗಳ ಸಂರಕ್ಷಣೆ, ಪರಂಪರೆಗಳ ಬಗ್ಗೆ ಪ್ರಚಾರ ಮಾಡಲು ಪಾರಂಪರಿಕ ಕಾಲ್ನಡಿಗೆ, ಪರಂಪರೆ ಕೂಟ ರಚಿಸುವುದು, ಕಲಾಪ್ರದರ್ಶನ, ಕಲಾಶಿಬಿರ ನಡೆಸುವುದು ಪಾರಂಪರಿಕ ಪ್ರದೇಶಗಳನ್ನು ಕುರಿತು ಕಿರು ಹೊತ್ತಿಗೆಗಳ ಪ್ರಕಟಣೆ, ವಿಚಾರ ಸಂಕಿರಣ, ಕಾರ್ಯಾಗಾರ, ಶಿಲಾಫಲಕ ಅಳವಡಿಸುವುದು, ಮುಂತಾದವು ಈ ಇಲಾಖೆಯ ಪ್ರಮುಖ ಕಾರ್ಯಗಳಾಗಿವೆ. ಈ ಇಲಾಖೆಯು ಅಂತರರಾಷ್ಟ್ರೀಯ ಖ್ಯಾತಿಯುಳ್ಳ ಯನೆಸ್ಕೋ ಸಂಸ್ಥೆಯ IHCN ( Indian Heritage Cities Network) ಸದಸ್ಯತ್ವ ಹೊಂದಿದೆ.

**ಕರ್ನಾಟಕ ರಾಜ್ಯ ಪತ್ರಾಗಾರ ನಿರ್ದೇಶನಾಲಯ:** ಇದು ಬೆಂಗಳೂರಿನಲ್ಲಿರುವ ವಿಧಾನ ಸೌಧ ಮತ್ತು ವಿಕಾಸಸೌಧದಲ್ಲಿ ಕಾರ್ಯನಿರ್ವಹಿಸುತ್ತಿದೆ. ಐತಿಹಾಸಿಕ ಮಹತ್ವವುಳ್ಳ ಶಾಶ್ವತ ಮೌಲ್ಯಗಳುಳ್ಳ ದಾಖಲೆ ಪತ್ರ ಕಡತ, ಪುಸ್ತಕಗಳ ಸಂಗ್ರಹಣೆ ಮತ್ತು ಸಂರಕ್ಷಣೆ ಮಾಡುತ್ತಿದ್ದು, ಸಂಶೋಧಕರು, ವಿದ್ವಾಂಸರು, ವಿದ್ಯಾರ್ಥಿಗಳು, ಕಚೇರಿಗಳು, ಮುಂತಾದವರಿಗೆ ಅಗತ್ಯವೆನಿಸಿದ, ಲಭ್ಯವಿರುವ ದಾಖಲೆಗಳನ್ನು ಕೋರಿಕೆ ಮೇರೆಗೆ ಪಡೆಯಬಹುದಾಗಿದೆ.

ಮಾಹಿತಿಯನ್ನು ಅಂತರ್ಜಾಲಕ್ಕೆ ಅಳವಡಿಸಿದ್ದು ವೆಬ್‌ಸೈಟ್ ಮೂಲಕವೂ ಮಾಹಿತಿ ಪಡೆದು ಕೊಳ್ಳಬಹುದಾಗಿದೆ. ಐತಿಹಾಸಿಕ ಮಹತ್ವವುಳ್ಳ ದಾಖಲೆಗಳನ್ನು ಸೂಕ್ಷ್ಮ ಚಿತ್ರೀಕರಣ ಘಟಕವು ಮೈಕ್ರೋಫಿಲಂ ಸುರುಳಿಗಳಲ್ಲಿ ಸಂರಕ್ಷಿಸಿದೆ. ಧ್ವನಿ ಇತಿಹಾಸ ಕಾರ್ಯಕ್ರಮದಡಿ ಗಣ್ಯರ ಹಾಗೂ ಪ್ರಮುಖ ವ್ಯಕ್ತಿಗಳ ಧ್ವನಿಯನ್ನು ಮುದ್ರಿಸಿಕೊಂಡು ಶಾಶ್ವತವಾಗಿ ಸಂರಕ್ಷಿಸುವ ಕೆಲಸ ಮಾಡುತ್ತಿದ್ದು ೧೯೯೩ರಿಂದ ಈವರೆಗೆ ೧೦೫ಕ್ಕೂ ಹೆಚ್ಚು ಗಣ್ಯವ್ಯಕ್ತಿಗಳ ಧ್ವನಿ ಮುದ್ರಣ ಮಾಡಿದೆ. ದಾಖಲೆಗಳ ಪ್ರಕಟಣೆ, ದಾಖಲೆಗಳ ಸಂರಕ್ಷಣೆ ಹಾಗೂ ಗಣಕೀಕರಣ (ಸ್ಕ್ಯಾನಿಂಗ್, ಡಿಜಿಟಲೈಸೇಶನ್, ಕ್ಯಾಟಲಾಗಿಂಗ್) ಗ್ರಂಥಾಲಯ ಇಲಾಖೆಯ ನಿರ್ವಹಣಾ ಕಾರ್ಯದಲ್ಲಿ ಸೇರಿವೆ. ಸಚಿವಾಲಯದ ಇಲಾಖೆಗಳ ಕಡತಗಳನ್ನು ವರ್ಗೀಕರಿಸಿ ಸಂರಕ್ಷಿಸಿಡಲಾಗುತ್ತಿದೆ. ಮೈಸೂರು ಮತ್ತು ಧಾರವಾಡಗಳಲ್ಲಿ ವಿಭಾಗೀಯ ಮತ್ತು ಪ್ರಾದೇಶಿಕ ಪತ್ರಾಗಾರ ಕಚೇರಿಗಳಿವೆ.

**ಕನ್ನಡ ಅಭಿವೃದ್ಧಿ ಪ್ರಾಧಿಕಾರ:** ಇದು ಸರ್ಕಾರಿ ಆದೇಶ ಸಂ.ಲಾ೫೮ ಎಲ್‌ಜಿಎನ್ ೯೩, ಬೆಂಗಳೂರು. ದಿನಾಂಕ: ೧-೧೦-೧೯೯೪ರಂತೆ ಆರಂಭವಾಗಿರುತ್ತದೆ. ಪ್ರಾಧಿಕಾರವು ಅಧ್ಯಕ್ಷರು ಹಾಗೂ ಇತರೆ ಏಳು ಅಧಿಕಾರೇತರ ಹಾಗೂ ಏಳು ಪದನಿಮಿತ್ತ ಸದಸ್ಯರನ್ನು ಹೊಂದಿದೆ. ಕಾರ್ಯದರ್ಶಿಗಳು ಇಲಾಖೆಯ ಮುಖ್ಯಸ್ಥರೂ, ಹಾಗೂ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ೧೯೯೪ ಇದು೧-೧೧-೧೯೯೫ರಿಂದಜಾರಿಗೆಬಂದಿದ್ದು ರಾಜ್ಯ ಸರ್ಕಾರ ಆಡಳಿತ ಭಾಷಾನೀತಿಯ ಅನುಷ್ಠಾನಕ್ಕಾಗಿ ಮತ್ತು ಸರೋಜಿನಿ ಮಹಿಷಿ ವರದಿಯ ಅಂಗೀಕೃತ ಶಿಫಾರಸ್ಸುಗಳನ್ನು ಜಾರಿಗೆ ತರಲು ಸರ್ಕಾರಕ್ಕೆ ಸಲಹೆ ನೀಡಲು ರಾಜ್ಯ ಸರ್ಕಾರದ ಎಲ್ಲಾ ಆಡಳಿತದ ಹಂತದಲ್ಲಿಯೂ ಕನ್ನಡವನ್ನು ಬಳಸಲು, ಕನ್ನಡ ಮಾಧ್ಯಮ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು, ಹೊರರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಎಂ.ಎ, ಸಂಶೋಧನೆ ಮಾಡುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವುದು, ಕನ್ನಡ ಜಾಗೃತಿ ಮೂಡಿಸುವುದು, ವಿದ್ಯಾರ್ಥಿಗಳು, ಕನ್ನಡ ಕಾರ್ಮಿಕರುಗಳಿಗೆ ಕನ್ನಡ, ಕಲಿಕಾ ಕೇಂದ್ರ, ಸಂಸ್ಕೃತಿ ಶಿಬಿರ, ಕನ್ನಡ ಉತ್ಸವ, ಭಾಷಾ ಭಾವೈಕ್ಯ ಸಮಾವೇಶ, ಗಡಿನಾಡ ಉತ್ಸವ-ಅಭಿವೃದ್ಧಿ, ಕನ್ನಡ ಹಳೆ-ಹೊಸಗನ್ನಡ ಕಾವ್ಯ ರಸಗ್ರಹಣ ಶಿಬಿರ, ಕಮ್ಮಟ, ಹೊರನಾಡ ಕನ್ನಡಿಗರ ಸಮಾವೇಶ, ಜಾಗೃತಿ ಜಾಥ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ.

**ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾಪ್ರಾಧಿಕಾರ, ಹೊಸಪೇಟೆ:** ಸರ್ಕಾರದ ಆದೇಶ ನಂ.ಸಂ.ಕ.ಇ೯೭/ಕೆಎಂಯು. ಭಾಗ(೨) ದಿನಾಂಕ ೨೧-೦೩-೨೦೦೨ರಂತೆ ಇದು ಅಸ್ತಿತ್ವಕ್ಕೆ ಬಂದಿದೆ. ಹೊಸಪೇಟೆ ತಾಲೂಕಿನ ಮೂರು ಗ್ರಾಮ ಪಂಚಾಯಿತಿ, ಒಂದು ಪಟ್ಟಣ ಪಂಚಾಯತಿಗೆ ಸೇರಿದ ೧೪ ಗ್ರಾಮಗಳು, ಗಂಗಾವತಿ ತಾಲೂಕಿನ ನಾಲ್ಕು ಗ್ರಾಮ ಪಂಚಾಯತಿಗೆ ಸೇರಿದ ೧೫ ಗ್ರಾಮಗಳು ಇದರ ವ್ಯಾಪ್ತಿಯಲ್ಲಿ (ಸ್ಥಳೀಯ ಯೋಜನಾ ಪ್ರದೇಶ) ಬರುತ್ತವೆ. ಬಳ್ಳಾರಿ ಜಿಲ್ಲೆಯ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದಲ್ಲಿ ಒಂದು ಸಲಹಾ ಸಮಿತಿ ಮತ್ತು ಪ್ರಾಧಿಕಾರ ಸಮಿತಿ ರಚಿಸಲಾಗಿದೆ. ಈ ಪರಂಪರೆಯ ರಕ್ಷಣಾ ಕಾರ್ಯದ ಅಂಗವಾಗಿ, ಹಂಪಿಯ ಪ್ರದೇಶದಲ್ಲಿ ಗಣಿಗಾರಿಕೆಯನ್ನು ನಿಷೇಧಿಸಲಾಗಿದೆ. ೧೭೦೦ ಸ್ಮಾರಕಗಳ ಮೋಜಣಿ ಹಾಗೂ ದಾಖಲೀಕರಣ ಮಾಡಲಾಗಿದೆ. ಇಸ್ರೋ ಮೂಲಕ ಮೂಲ ನಕ್ಷೆ ತಯಾರಿಸಲಾಗುತ್ತಿದೆ. ಕಮಲಾಪುರದಲ್ಲಿ ತಾಂತ್ರಿಕ ಘಟಕವನ್ನು ಪ್ರಾರಂಭಿಸಲಾಗಿದೆ. ಆನೆಗುಂದಿಯಲ್ಲಿ ಶಾಖಾಕಚೇರಿ ತೆರೆಯಲಾಗಿದೆ. ಎಲ್ಲಾ ವಿವರಗಳನ್ನು ನೀಡುವ ವೆಬ್‌ಸೈಟನ್ನು ಪ್ರಾರಂಭಿಸಲಾಗಿದೆ. ಅನೇಕ ಕಾಮಗಾರಿಗಳನ್ನು ನಡೆಸುತ್ತಿದೆ.

**ಚಾಮರಾಜೇಂದ್ರ ದೃಶ್ಯ ಕಲಾ ಅಕಾಡೆಮಿ, ಮೈಸೂರು:** ಅಂಗಿಂ (Chamarajendra Academy of Visual Arts) ಎಂದೇ ಕರೆಯುವ ಈ ಅಕಾಡೆಮಿ ೧೯೮೨ ರಲ್ಲಿ ಮೈಸೂರಿನಲ್ಲಿ ಸ್ಥಾಪಿತವಾಯಿತು. ಇದರ ಮುಖ್ಯಸ್ಥರನ್ನು 'ಡೀನ್' ಎಂದು ಕರೆಯುತ್ತಾರೆ. ಇದು ರಾಜ್ಯ ಮಟ್ಟದ ಅಕಾಡೆಮಿಯಾಗಿದೆ. ಇದೊಂದು (ಕಾವಾ)ಸರ್ಕಾರದ ಕಲಾ ಶಿಕ್ಷಣ ಸಂಸ್ಥೆಯಾಗಿದ್ದು, ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡು, ಐದು ವರ್ಷದ ಪದವಿ ಶಿಕ್ಷಣ ಮತ್ತು ಸ್ನಾತಕೋತ್ತರ ಪದವಿಯನ್ನು ನೀಡಲಾಗುತ್ತಿದೆ. ಶಿಕ್ಷಣದಲ್ಲಿ ಚಿತ್ರಕಲೆ, ಅಚ್ಚುಕಲೆ, ಶಿಲ್ಪಕಲೆ, ಅನ್ವಯಕಲೆ, ಛಾಯಾ ಚಿತ್ರ, ಛಾಯಾಚಿತ್ರ ಪ್ರತಿಕೋದ್ಯಮ, ಕಲಾಇತಿಹಾಸ ಮುಂತಾದವನ್ನು ಅಳವಡಿಸಿದೆ. ಕಲಾಮೇಳ, ಕಾರ್ಯಗಾರ, ಚಿತ್ರಕಲಾಶಿಬಿರ, ಮುಂತಾದ ಕಾರ್ಯಕ್ರಮ ಯೋಜಿಸುತ್ತಿದೆ.

**ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ:** ಈ ಪ್ರಾಧಿಕಾರವು ೨೦೦೯ರಲ್ಲಿ ರಚನೆಯಾಯಿತು. ಕರ್ನಾಟಕದ ಗಡಿ ಪ್ರದೇಶಗಳಲ್ಲಿರುವ ಗ್ರಾಮಗಳು, ಆಯ್ದ ಸ್ಥಳಗಳಲ್ಲಿ ಸಾಂಸ್ಕೃತಿಕ ಭವನ, ಗ್ರಂಥಾಲಯ, ಶಿಕ್ಷಕರ ವಸತಿ ಗೃಹ, ದೇಶೀಯ ಕ್ರೀಡಾ ಭವನ ನಿರ್ಮಾಣ ಮಾಡುವುದು, ಇನ್ನಿತರೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವುದು.

ಗಡಿನಾಡ ಶ್ರೇಯೋಭೀವೃದ್ಧಿಗಾಗಿ ಶ್ರಮಿಸುವ ಸಂಘ ಸಂಸ್ಥೆಗಳಿಗೆ ಅನುದಾನ ನೀಡುವುದು, ಗಡಿನಾಡ ಉತ್ಸವ ನಡೆಸುವುದು, ಮುಂತಾದ ಪ್ರಕಾರ್ಯಗಳನ್ನು ನಡೆಸುತ್ತಿದೆ.

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸರ್ಕಾರ ಮತ್ತು ಜನರ ನಡುವಿನ ಕೊಂಡಿಯಾಗಿ ಕಾರ್ಯನಿರ್ವಹಿಸುವ "ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ"ಯು ಸರ್ಕಾರದ ಜನಪರ ಯೋಜನೆಗಳನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ದೂರದರ್ಶನ, ಆಕಾಶವಾಣಿ, ವಿದ್ಯುನ್ಮಾನ ಮಾಧ್ಯಮ, ಮುದ್ರಣ ಮಾಧ್ಯಮ ಮತ್ತು ಸಾಂಪ್ರದಾಯಿಕ ಮಾಧ್ಯಮಗಳಾದ ಬೀದಿ ನಾಟಕ, ಸಂಗೀತ-ನಾಟಕ ಸೇರಿದಂತೆ ನವ್ಯ ಮಾಧ್ಯಮವಾದ ಇಂಟರ್‌ನೆಟ್. ಫೇಸ್‌ಬುಕ್, ಟ್ವೀಟರ್ ಮೂಲಕವೂ ಪ್ರಚಾರ ನೀಡುತ್ತದೆ. ೧೯೪೯ ರಲ್ಲಿ "ಪ್ರಚಾರ ಇಲಾಖೆ" ಎಂದು ಕಾರ್ಯಾರಂಭ ಮಾಡಿದ ಇಲಾಖೆಯ ಆರೂವರೆ ದಶಕಗಳ ಸುಧೀರ್ಘ ಸೇವಾ ಪಯಣದೊಂದಿಗೆ ಮುನ್ನಡೆದಿದೆ. ಅನಂತರ ವಾರ್ತಾ ಮತ್ತು ಪ್ರಚಾರ ಇಲಾಖೆ ಎಂದು, ವಾರ್ತಾ ಇಲಾಖೆ ಎಂದು ನಾಮಕರಣಗೊಂಡು ಈಗ "ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ" ಎಂಬ ಹೆಸರಿನೊಂದಿಗೆ ಕಾರ್ಯನಿರ್ವಹಿಸುತ್ತಿದೆ. ನಿರ್ದೇಶಕರು, ಇಲಾಖೆಯ ಮುಖ್ಯಸ್ಥರು. ಅವರ ಅಧೀನದಲ್ಲಿ ರಾಜ್ಯಾದ್ಯಂತ ೫೦ ಕ್ಕೂ ಹೆಚ್ಚು ಜನ ಅಧಿಕಾರಿಗಳು ಮತ್ತು ೩೦೦ ಕ್ಕೂ ಅಧಿಕ ಸಿಬ್ಬಂದಿಯವರು ಕಾರ್ಯ ನಿರ್ವಹಿಸುತ್ತಿದ್ದಾರೆ. ರಾಜ್ಯದ ೩೦ ಜಿಲ್ಲಾ ಕೇಂದ್ರಗಳಲ್ಲಿ ಇಲಾಖೆಯ ಜಿಲ್ಲಾ ಕಛೇರಿಗಳನ್ನು ಹಾಗೂ ನವದೆಹಲಿಯಲ್ಲಿ ಮತ್ತು ಹುಬ್ಬಳ್ಳಿಯಲ್ಲಿ ವಾರ್ತಾ ಕೇಂದ್ರಗಳನ್ನು ಹೊಂದಿದೆ.

**ಕಾರ್ಯಚಟುವಟಿಕೆಗಳ ಪಕ್ಷಿನೋಟ** : ಇಲಾಖೆಯು ಸರ್ಕಾರದ ವಿವಿಧ ಯೋಜನೆ, ಕಾರ್ಯಕ್ರಮ ಮತ್ತು ಸಾಧನೆಗಳ ಮಾಹಿತಿಯನ್ನು ಸಾರ್ವಜನಿಕರಿಗೆ ತಲುಪಿಸುವ ದಿಸೆಯಲ್ಲಿ ಪ್ರಧಾನವಾಗಿ ಕೆಳಕಂಡ ಸಮೂಹ ಮಾಧ್ಯಮಗಳನ್ನು ಬಳಸಿಕೊಳ್ಳುತ್ತಿವೆ. ಪತ್ರಿಕಾ ಮಾಧ್ಯಮ, ದೂರದರ್ಶನ ಮತ್ತು ಆಕಾಶವಾಣಿ, ಸಾಕ್ಷ್ಯಚಿತ್ರಗಳು/ಕಿರುಚಿತ್ರಗಳು, ಹೆದ್ದಾರಿ ಫಲಕಗಳು, ಚಲನಚಿತ್ರಗಳು, ವಸ್ತುಪ್ರದರ್ಶನ, ಸ್ತಬ್ಧಚಿತ್ರಗಳು, ಸಂಗೀತ ಮತ್ತು ನಾಟಕ ಸಾಮಾಜಿಕ ಜಾಲತಾಣ, ಡಿಜಿಟಲ್ ಮಾಧ್ಯಮ, ಮುದ್ರಣ ಮಾಧ್ಯಮದ ಕಿರುಹೊತ್ತಿಗೆ, ಕರಪತ್ರ, ಮಡಿಕೆ ಪತ್ರ, ನಿಯತಕಾಲಿಕೆಗಳು.

**ಕೇಂದ್ರ ಕಛೇರಿ:** ಬೆಂಗಳೂರಿನ ವಾರ್ತಾ ಸೌಧದಲ್ಲಿ ಇಲಾಖೆಯು ಕೇಂದ್ರ ಕಛೇರಿಯನ್ನು ಹೊಂದಿದೆ. ಕೇಂದ್ರ ಕಛೇರಿಯಲ್ಲಿ ಇಲಾಖೆಯ ಕಾರ್ಯಚಟುವಟಿಕೆಗಳಿಗೆ ಪೂರಕವಾಗಿ ೧) ಆಡಳಿತ ಶಾಖೆ, ೨) ಛಾಯಾ ಮತ್ತು ಚಲನಚಿತ್ರ ಶಾಖೆ, ೩) ವಾಣಿಜ್ಯ ಪ್ರಚಾರ ಶಾಖೆ, ೪) ಪ್ರಕಟಣಾ ಶಾಖೆ, ೫) ಸುದ್ದಿ ಮತ್ತು ಪತ್ರಿಕಾ ಶಾಖೆ, ೬) ಕ್ಷೇತ್ರ ಪ್ರಚಾರ ಶಾಖೆ ಮತ್ತು ೭) ಲೆಕ್ಕಪತ್ರ ಶಾಖೆಗಳು ಕಾರ್ಯನಿರ್ವಹಿಸುತ್ತಿವೆ. ಕೇಂದ್ರ ಕಛೇರಿಯು ಅಧೀನ ಕಛೇರಿಗಳಿಗೆ ಅಗತ್ಯವಾದ ಪ್ರಚಾರ ಸಾಮಗ್ರಿಗಳ ನಿರ್ಮಾಣ, ಪೂರೈಕೆ ಮತ್ತು ಅಗತ್ಯ ಅನುದಾನ ಒದಗಿಸುವ ಹೊಣೆ ಹೊಂದಿದೆ.

**ಆಡಳಿತ ಶಾಖೆ:** ಕೇಂದ್ರ ಕಚೇರಿಯು ಅಧೀನ ಕಚೇರಿಗಳ ಆಡಳಿತ ನಿರ್ವಹಣೆಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಸೂಕ್ತ ಮಾರ್ಗದರ್ಶನ ನೀಡುವ ಹೊಣೆ ಹೊಂದಿದೆ. ಕೇಂದ್ರ ಕಚೇರಿಯಲ್ಲಿ ಮೂರು ಜಂಟಿ ನಿರ್ದೇಶಕರು ಹಾಗೂ ಮೂರು ಉಪ ನಿರ್ದೇಶಕರುಗಳು ಆಡಳಿತ ನಿರ್ವಹಣೆ ಹಾಗೂ ಯೋಜನಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ನಿರ್ದೇಶಕರಿಗೆ ನೆರವಾಗುತ್ತಿದ್ದಾರೆ. ನೌಕರರ ಸೇವಾ ನಿಯಮಗಳು, ಕಾಯ್ದೆಗಳ ಜೊತೆಗೆ ಮಾನ್ಯತಾ ಪತ್ರ, ಮಾಸಾಶನ, ಗುಣಾತ್ಮಕ ಚಲನಚಿತ್ರಗಳಿಗೆ ಸಹಾಯಧನ ನೀಡುವ ಉದ್ದೇಶಕ್ಕಾಗಿ ಈ ಕೆಳಕಂಡ ಕಾಯ್ದೆಗಳನ್ನು ಹೊಂದಿದೆ. ೧) ಕರ್ನಾಟಕ ಮಾಧ್ಯಮ ಮಾನ್ಯತಾ ನಿಯಮಗಳು–೨೦೦೯. ೨) ಕರ್ನಾಟಕ ಹಿರಿಯ ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿ ದತ್ತಿ ನಿಯಮಗಳು–೨೦೦೯, ೩) ಕರ್ನಾಟಕ ಕಾರ್ಯನಿರತ ಪತ್ರಕರ್ತರ ಕ್ಷೇಮ ನಿಧಿ ದತ್ತಿ ನಿಯಮಗಳು–೨೦೦೯, ೪) ಕರ್ನಾಟಕ ಚಲನಚಿತ್ರ ಅಕಾಡೆಮಿ ನಿಯಮಗಳು–೨೦೦೯, ೫) ಕನ್ನಡ ಚಲನಚಿತ್ರ ನೀತಿ–೨೦೧೧, ಮತ್ತು ೬) ಜಾಹಿರಾತು ನೀತಿ–೨೦೧೩.

**ಚಲನಚಿತ್ರ ಶಾಖೆ:** ಕನ್ನಡ ಚಲನಚಿತ್ರ ರಂಗವನ್ನು ಪ್ರೋತ್ಸಾಹಿಸಿ ಬೆಳೆಸುವ ಸದಾಶಯದಿಂದ ರಾಜ್ಯದಲ್ಲಿಯೇ ನಿರ್ಮಿಸಿದ ಕನ್ನಡ ಮತ್ತು ಪ್ರಾದೇಶಿಕ ಭಾಷಾ ಚಿತ್ರಗಳಿಗೆ ಶೇ.೧೦೦ ರಷ್ಟು ಮನರಂಜನಾ ತೆರಿಗೆ ವಿನಾಯಿತಿ, ಗುಣಾತ್ಮಕ ಚಲನಚಿತ್ರಗಳಿಗೆ ಸಹಾಯಧನ, ಅತ್ಯುತ್ತಮ ಚಲನಚಿತ್ರಗಳಿಗೆ, ಕಲಾವಿದರಿಗೆ, ತಂತ್ರಜ್ಞರಿಗೆ ನಿರ್ದೇಶಕರು ಹಾಗೂ ನಿರ್ಮಾಪಕರಿಗೆ ಪ್ರಶಸ್ತಿ ಪುರಸ್ಕಾರ, ಚಲನಚಿತ್ರಗಳ ಚಿತ್ರೀಕರಣದ ಸುಗಮ ರಹದಾರಿಗಾಗಿ ಏಕಗವಾಕ್ಷಿ ಪದ್ಧತಿ ಮುಂತಾದ ಪ್ರಗತಿಪರ ಕಾರ್ಯಚಟುವಟಿಕೆಗಳನ್ನು ಈ ಶಾಖೆಯು ನಿರ್ವಹಿಸುತ್ತಿದೆ. ೧) ಕರ್ನಾಟಕ ಚಲನಚಿತ್ರ ರಂಗದ ಮೌಲಿಕ ಬೆಳವಣಿಗೆ ಹಾಗೂ ಅಭಿವೃದ್ಧಿಗಾಗಿ ಸ್ಥಾಪಿಸಲಾಗಿರುವ "ಕರ್ನಾಟಕ ಚಲನಚಿತ್ರ ಅಕಾಡೆಮಿ"ಯ ಕಾರ್ಯಚಟುವಟಿಕೆಗೆ ೨೦೧೫–೧೬ನೇ ಸಾಲಿನಲ್ಲಿ ರೂ.೧೩೩ ಲಕ್ಷ ಸಹಾಯಾನುದಾನ ಬಿಡುಗಡೆ ಮಾಡಲಾಗಿದೆ. ೨) ಕನ್ನಡ ಚಲನಚಿತ್ರೋದ್ಯಮಕ್ಕೆ ಅಮೋಘ ಕೊಡುಗೆ ನೀಡಿದ ವರನಟ ಡಾ: ರಾಜ್‌ಕುಮಾರ್ ಅವರ ೮೭ನೇ ಜನ್ಮ ದಿನಾಚರಣೆಯನ್ನು ಏಪ್ರಿಲ್ ೨೪.೨೦೧೫ರಂದು ಬೆಂಗಳೂರಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಆಚರಿಸಲಾಯಿತು ಹಾಗೂ ಡಾ: ವಿಷ್ಣುವರ್ಧನ್ ಅವರ ಜನ್ಮ ದಿನಾಚರಣೆಗೆ ಇಲಾಖಾ ವತಿಯಿಂದ ಅನುದಾನವನ್ನು ಬಿಡುಗಡೆ ಮಾಡಿ. ಮೆ ವಿಭಾ ಚಾರಿಟಬಲ್ ಟ್ರಸ್ಟ್, ಬೆಂಗಳೂರು, ಸಂಸ್ಥೆಯ ಸಹಕಾರದೊಂದಿಗೆ ಆಚರಿಸಲಾಯಿತು. ೩) "ಚಿತ್ರೋತ್ಸವ ಸಪ್ತಾಹ" ಕಾರ್ಯಕ್ರಮದಲ್ಲಿ ರಾಷ್ಟ್ರ ಹಾಗೂ ರಾಜ್ಯ ಮಟ್ಟದ ಪ್ರಶಸ್ತಿ ವಿಜೇತ ೧೦ ಕನ್ನಡ ಚಲನಚಿತ್ರಗಳನ್ನು ಆಯ್ದ ೧೦ ಜಿಲ್ಲೆಗಳಲ್ಲಿ ಪ್ರದರ್ಶಿಸಲಾಯಿತು. ೪) ಕನ್ನಡ ಚಲನಚಿತ್ರ ಸಂಗೀತ ನಡೆದು ಬಂದ ದಾರಿ, ಹಿರಿಯ ಸಂಗೀತ ನಿರ್ದೇಶಕರು, ಚಿತ್ರ ಸಾಹಿತಿಗಳು ರಚಿಸಿರುವ ಅತ್ಯುತ್ತಮ ಚಲನಚಿತ್ರ ಗೀತೆಗಳನ್ನು ಹಿನ್ನೆಲೆ ಗಾಯಕರಿಂದ ಪ್ರಸ್ತುತಪಡಿಸುವ

"ಗಾನಯಾನ" ವಿನೂತನ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ೫) ಕನ್ನಡ ಮತ್ತು ಪ್ರಾದೇಶಿಕ ಭಾಷೆಯ ೬೨ ಚಲನಚಿತ್ರಗಳಿಗೆ (೨೦೧೨ನೇ ಸಾಲಿನ) ಸಹಾಯಧನ ನೀಡಲಾಗಿದೆ. ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರಶಸ್ತಿ ಪಡೆದ ಹಾಗೂ ಪ್ರದರ್ಶನಗೊಂಡ ಚಲನ ಚಿತ್ರಗಳಿಗೆ ವಿಶೇಷ ಸಹಾಯಧನ ನೀಡಲಾಗಿದೆ.

**ಛಾಯಾಚಿತ್ರ ಶಾಖೆ**:ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮ, ಯೋಜನೆಗಳನ್ನು ಕುರಿತ ಸಾಕ್ಷ್ಯಚಿತ್ರಗಳು, ಕಿರುಚಿತ್ರಗಳು, ಜಾಹೀರಾತು ಸ್ಪಾಟ್‌ಗಳನ್ನು ನಿರ್ಮಿಸಿ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯಾಪಕ ಪ್ರಚಾರ ಕಾರ್ಯವನ್ನು ಕೈಗೊಳ್ಳುವುದು. ಕನ್ನಡ ನಾಡು-ನಾಡಿಗೆ ಸೇವೆ ಸಲ್ಲಿಸಿದ ಗಣ್ಯರನ್ನು ಕುರಿತು ವ್ಯಕ್ತಿಚಿತ್ರಗಳನ್ನು ನಿರ್ಮಿಸಿ ದೂರದರ್ಶನ ಹಾಗೂ ಖಾಸಗಿ ವಾಹಿನಿಗಳಲ್ಲಿ ಪ್ರಸಾರ ಮಾಡುವುದು ಈ ಶಾಖೆಯ ಅತೀ ಮುಖ್ಯ ಕಾರ್ಯವಾಗಿದೆ.

**ಚಲನಚಿತ್ರ ಕಲಾವಿದರ ಕಲ್ಯಾಣ ನಿಧಿ**: ಕರ್ನಾಟಕ ಚಲನಚಿತ್ರೋದ್ಯಮದ ಸಂಕಷ್ಟದಲ್ಲಿರುವ ಕಾರ್ಮಿಕರಿಗೆ, ತಂತ್ರಜ್ಞರಿಗೆ ಹಾಗೂ ಕಲಾವಿದರುಗಳಿಗೆ ಆರ್ಥಿಕ ನೆರವು ನೀಡಲು ಧಾರ್ಮಿಕ ದತ್ತಿನಿಧಿಯನ್ನು ಸ್ಥಾಪಿಸಲಾಗಿದೆ. ಈ ಯೋಜನೆಯನ್ನು ಕರ್ನಾಟಕ ಚಲನಚಿತ್ತ ಅಕಾಡೆಮಿ ಮೂಲಕ ಅನುಷ್ಠಾನಗೊಳಿಸಲಾಗುತ್ತಿದ್ದು. ಅಕಾಲಿಕ ಮರಣ, ಕ್ಯಾನ್ಸರ್, ಹೃದಯ ಸಂಬಂಧಿ ಕಾಯಿಲೆಗಳು, ಮೂತ್ರಪಿಂಡ ರೋಗಗಳು ಮತ್ತು ಅಪಘಾತ ಸಂಭವಿಸಿದ ಸಂದರ್ಭಗಳಲ್ಲಿ ಸಮಿತಿಯು ನಿರ್ಧರಿಸುವಷ್ಟು ಮೊತ್ತಕ್ಕೆ ಆರ್ಥಿಕ ನೆರವು ನೀಡುವುದು ಈ ಯೋಜನೆ ಉದ್ದೇಶವಾಗಿದ್ದು. ೧೦೦ ಲಕ್ಷ ರೂ.ಗಳ ನಿಶ್ಚಿತ ಠೇವಣಿಯನ್ನು ಇಡಲಾಗಿದೆ.

**ವಾರ್ತಾ ಕೇಂದ್ರಗಳು**: ನವದೆಹಲಿಯಲ್ಲಿ ಮತ್ತು ಹುಬ್ಬಳ್ಳಿಯಲ್ಲಿ ಇಲಾಖೆಯ ವಾರ್ತಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಸರ್ಕಾರ ಹಮ್ಮಿಕೊಳ್ಳುವ ಯೋಜನೆಗಳು ಹಾಗೂ ಸರ್ಕಾರದ ನೀತಿ ನಿಯಮಗಳ ಮಾಹಿತಿಯನ್ನು ಸಾರ್ವಜನಿಕರಿಗೆ ಒದಗಿಸುತ್ತದೆ. ರಾಜ್ಯದಿಂದ ದೆಹಲಿಗೆ ಭೇಟಿ ನೀಡುವ ಮಾನ್ಯ ಮುಖ್ಯಮಂತ್ರಿಗಳು, ಸಚಿವರು ಹಾಗೂ ಸರ್ಕಾರದ ಉನ್ನತ ಅಧಿಕಾರಿಗಳ ಸಭೆ ಸಮಾರಂಭಗಳ ಪತ್ರಿಕಾ ಪ್ರಕಟಣೆಗಳನ್ನು ಬಿಡುಗಡೆ ಮಾಡುವುದು. ಪ್ರತಿಕಾ ಗೋಷ್ಠಿ ಮತ್ತು ವಿಚಾರ ಸಂಕಿರಣಗಳನ್ನು ಏರ್ಪಡಿಸುವ ಕಾರ್ಯಗಳನ್ನು ನವದೆಹಲಿ ವಾರ್ತಾ ಕೇಂದ್ರವು ನಿರ್ವಹಿಸುತ್ತದೆ. ನವದೆಹಲಿಯ ಪ್ರಗತಿ ಮೈದಾನದಲ್ಲಿ ಇಲಾಖೆ ವತಿಯಿಂದ ವಸ್ತುಪ್ರದರ್ಶನ ಮಳಿಗೆ ತೆರೆದು ಕರ್ನಾಟಕ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳು, ಸಂಸ್ಕೃತಿ ಮತ್ತು ಕಲೆಗಳ ಬಗ್ಗೆ ಪರಿಚಯಿಸಲಾಗುತ್ತಿದೆ.

**ಸುದ್ದಿ ಮತ್ತು ಪತ್ರಿಕಾ ಶಾಖೆ**: ಈ ವಿಭಾಗವು ಸುದ್ದಿ ಮತ್ತು ಮಾಹಿತಿಯನ್ನು ಸಮೂಹ ಮಧ್ಯಮದ ಮುಖಾಂತರ ರಾಜ್ಯಾದ್ಯಂತ ಬಿಡುಗಡೆ ಮಾಡುವ ಜವಾಬ್ದಾರಿ ಹೊಂದಿದ್ದು, ಜೊತೆಗೆ ಈ ಕೆಳಕಂಡ ಕರ್ತವ್ಯ ನಿರ್ವಹಿಸುತ್ತಿದೆ. ೧) ಮಾಧ್ಯಮ ಸಮನ್ವಯ. ೨) ಮಾಧ್ಯಮದವರಿಗೆ ಮಾನ್ಯತಾ ಪತ್ರ ಮತ್ತು ಸ್ಮಾರ್ಟ್‌ಕಾರ್ಡ್ ನೀಡಿಕೆ. ೩) ಮಾಧ್ಯಮ ಪ್ರತಿನಿಧಿಗಳ ಕ್ಷೇಮಾಭಿವೃದ್ಧಿ ಚಟುವಟಿಕೆಗಳು. ೪) ಮಾಧ್ಯಮ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆ ಮಾಡಿದ ಸಾಧಕರನ್ನು ಗುರುತಿಸಿ ಪ್ರಶಸ್ತಿ ನೀಡಿಕೆ. **ಸುದ್ದಿ ಬಿಡುಗಡೆ**: ಸರ್ಕಾರದ ಪ್ರಮುಖ ಸುದ್ದಿ, ಕಾರ್ಯಚಟುವಟಿಕೆ ಮತ್ತು ಅಭಿವೃದ್ಧಿಯ ಮಾಹಿತಿಯನ್ನು, ರಾಜ್ಯ ಸರ್ಕಾರ/ ಅರೆಸರ್ಕಾರಿ, ಮಂಡಳಿ ಹಾಗೂ ಇತರೆ ಇಲಾಖೆಗಳ ಪ್ರಮುಖ ಸುದ್ದಿಗಳನ್ನು ಪತ್ರಿಕಾ ಪ್ರಕಟಣೆಗಳ ಮೂಲಕ ಮಾಧ್ಯಮಗಳಿಗೆ ಬಿಡುಗಡೆ ಮಾಡುತ್ತದೆ. ಅಲ್ಲದೇ, ಸರ್ಕಾರದ ಸಭೆ ಸಮಾರಂಭಗಳಿಗೆ ಮಾಧ್ಯಮದವರಿಗೆ ಆಮಂತ್ರಣವನ್ನೂ ಇ-ಮೇಲ್ ಮೂಲಕ ಪ್ರತಿನಿತ್ಯ ಕಳುಹಿಸಿಕೊಡಲಾಗುತ್ತದೆ. ರಾಜ್ಯದ ಎಲ್ಲಾ ಜಿಲ್ಲಾ ಕಚೇರಿಗಳಿಂದ ಬಿಡುಗಡೆಯಾಗುವ ಸುದ್ದಿಗಳನ್ನು ಕ್ರೋಢೀಕರಿಸಿ, ರಾಜ್ಯಮಟ್ಟದಲ್ಲಿ ಪ್ರತಿದಿನ ಪತ್ರಿಕಾ ಪ್ರಕಟಣೆಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಈ ಎಲ್ಲಾ ಸುದ್ದಿಗಳನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತಿದೆ.

**ಮಾಧ್ಯಮ ಮಾನ್ಯತಾ ಪತ್ರ**: ರಾಜ್ಯದ ಅಭಿವೃದ್ಧಿ ಕಾರ್ಯಕ್ರಮಗಳು, ಗಣ್ಯಾತಿಗಣ್ಯರ ಭೇಟಿ, ಸಂದರ್ಭದಲ್ಲಿ, ಸರ್ಕಾರದ ಸಭೆ ಸಮಾರಂಭಗಳಿಗೆ ಭಾಗವಹಿಸಲು ಪತ್ರಕರ್ತರು, ವರದಿಗಾರರು, ಛಾಯಾಗ್ರಾಹಕರಿಗೆ ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮದವರಿಗೆ ಭದ್ರತಾ ಪ್ರದೇಶಗಳ ಪ್ರವೇಶಕ್ಕೆ ಅನುವಾಗುವಂತೆ ಮಾಧ್ಯಮ ಮಾನ್ಯತಾ ಕಾರ್ಡ್‌ಗಳನ್ನು ನೀಡಲಾಗುತ್ತಿದೆ. ೨೦೧೫-೧೬ನೇ ಸಾಲಿನಲ್ಲಿ ಮಾರ್ಚ್ ಅಂತ್ಯದವರೆಗೆ ೧೩೫೪ ಮಾನ್ಯತಾ ಕಾರ್ಡ್‌ಗಳನ್ನು ನೀಡಲಾಗಿದೆ. **ಸ್ಮಾರ್ಟ್ ಕಾರ್ಡ್**: ಮಾನ್ಯತಾ ಕಾರ್ಡ್‌ಗಳನ್ನು ಪಡೆದ ಪತ್ರಕರ್ತರಿಗೆ ರಾಜ್ಯಾದ್ಯಂತ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಲು "ಸ್ಮಾರ್ಟ್ ಕಾರ್ಡ್" ಒದಗಿಸಲಾಗಿದೆ

**ಕಾರ್ಯನಿರತ ಪತ್ರಕರ್ತರ ಕ್ಷೇಮಾಭಿವೃದ್ಧಿ ದತ್ತಿ ನಿಧಿ**: ಕಾರ್ಯನಿರತ ಪತ್ರಕರ್ತರಿಗೆ ಗಂಭೀರ ಸ್ವರೂಪದ ಕಾಯಿಲೆ ಅಥವಾ ಅಪಘಾತ ಸಂಭವಿಸಿದ ಸಂದರ್ಭದಲ್ಲಿ ಆರ್ಥಿಕ ನೆರವು ನೀಡುವ ಸಲುವಾಗಿ ೧೫೦ ಲಕ್ಷ ರೂ.ಗಳ ದತ್ತಿನಿಧಿ ಸ್ಥಾಪಿಸಲಾಗಿದೆ. ಈ ನಿಧಿಯಿಂದ ಬರುವ ಬಡ್ಡಿಯಿಂದ ಆರ್ಥಿಕ ನೆರವು ನೀಡಲಾಗುತ್ತಿದೆ.

**ಹಿರಿಯ ಪತ್ರಕರ್ತರ ಕ್ಷೇಮನಿಧಿ ದತ್ತಿ**: ೨೫ ವರ್ಷಗಳಿಗೂ ಮೀರಿ ಸೇವೆ ಸಲ್ಲಿಸಿರುವ ೫೫ ವರ್ಷಗಳಿಗೂ ಮೇಲ್ಪಟ್ಟ ಹಿರಿಯ ಪತ್ರಕರ್ತರಿಗೆ ಗಂಭೀರ ಕಾಯಿಲೆ ಮತ್ತು ಅಪಘಾತ ಸಂಭವಿಸಿದ ಸಂದರ್ಭಗಳಲ್ಲಿ ನೆರವು ನೀಡಲು ೧೦೦ ಲಕ್ಷ ರೂ.ಗಳ ಹಿರಿಯ ಪತ್ರಕರ್ತರ ಕ್ಷೇಮನಿಧಿ ದತ್ತಿ ಸ್ಥಾಪಿಸಲಾಗಿದೆ. ಈ ನಿಧಿಯಿಂದ ಬರುವ ಬಡ್ಡಿಯಿಂದ ಆರ್ಥಿಕ ನೆರವು ನೀಡಲಾಗುತ್ತಿದೆ.

**ಪತ್ರಕರ್ತರ ಮಾಸಾಶನ**: ಪತ್ರಿಕಾ ರಂಗದಲ್ಲಿ ಸಂಪಾದಕರು, ಉಪ ಸಂಪಾದಕರು, ವರದಿಗಾರರು, ಛಾಯಾಗ್ರಾಹಕ ಹಾಗೂ ಬಾತ್ಮೀದಾರರಾಗಿ ಕನಿಷ್ಠ ೨೦ ವರ್ಷಗಳ ಕಾಲ ಪೂರ್ಣಾವಧಿ/ ಅಲ್ಪಾವಧಿ ನೌಕರರಾಗಿ ಸೇವೆ ಸಲ್ಲಿಸಿ, ಸೇವೆಯಿಂದ ನಿವೃತ್ತಿ ಹೊಂದಿ, ಆರ್ಥಿಕ ಸಂಕಷ್ಟದಲ್ಲಿರುವ ಪತ್ರಕರ್ತರಿಗೆ ೬,೦೦೦ ರೂ.ಗಳ ಮಾಸಾಶನ ಹಾಗೂ ೧,೦೦೦ ರೂ.ಗಳ ಕುಟುಂಬ ಮಾಸಾಶನವನ್ನು ನೀಡಲಾಗುತ್ತಿದೆ. ೨೦೧೫-೧೬ನೇ ಸಾಲಿನಲ್ಲಿ ಒಟ್ಟು ೭೧ ಅರ್ಜಿಗಳನ್ನು ಪರಿಶೀಲಿಸಿ, ೩೭ ಅರ್ಹಪತ್ರಕರ್ತರು ಹಾಗೂ ನಾಲ್ಕು ಜನ ಮೃತ ಪತ್ರಕರ್ತರ ಕುಟುಂಬದವರಿಗೆ ಮಾಸಾಶನ ನೀಡಲಾಗಿದೆ.

**ಟೀಯೆಸ್ಸಾರ್ ಸ್ಮಾರಕ ಪತ್ರಿಕೋದ್ಯಮ ಪ್ರಶಸ್ತಿ ಹಾಗೂ ಮೊಹರೆ ಹಣಮಂತರಾಯ ಪ್ರಶಸ್ತಿ:** ಪತ್ರಿಕೋದ್ಯಮ ಕ್ಷೇತ್ರದಲ್ಲಿ ಅತ್ಯುತ್ತಮ ಕೊಡುಗೆ ಹಾಗೂ ಗಮನಾರ್ಹ ಸಾಧನೆ ಮಾಡಿದ ಪತ್ರಕರ್ತರನ್ನು ಗುರುತಿಸಿ ಗೌರವ ನೀಡುವ ಸಲುವಾಗಿ ೧೯೯೩ರಲ್ಲಿ ಟಿ.ಎಸ್. ರಾಮಚಂದ್ರರಾವ್ ರವರ ಹೆಸರಿನಲ್ಲಿ "ಟೀಯೆಸ್ಸಾರ್ ಸ್ಮಾರಕ ಪತ್ರಿಕೋದ್ಯಮ ಪ್ರಶಸ್ತಿ" ಯನ್ನು ಸ್ಥಾಪನೆ ಮಾಡಿ, ೧೯೯೩ರಿಂದ ಅರ್ಹ ಪತ್ರಕರ್ತರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಕನ್ನಡ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಕನ್ನಡ ದಿನಪತ್ರಿಕೆ ಮತ್ತು ಪತ್ರಿಕಾ ಸಮೂಹವನ್ನು ಹುಟ್ಟು ಹಾಕಿ ಪತ್ರಿಕೆಯನ್ನು ಯಶಸ್ವಿಯಾಗಿ ನಡೆಸಿದ ಹಾಗೂ ಪ್ರವೃತ್ತಿಯಲ್ಲಿ ಪತ್ರಕರ್ತರಾಗಿ ಪತ್ರಿಕಾಲಯದ ಮಾಲೀಕರು, ಆಡಳಿತಗಾರರಾಗಿರುವವರಿಗೆ, ಕನ್ನಡ ಪತ್ರಿಕಾ ರಂಗದ ಭೀಷ್ಮರೆಂದೇ ಹೆಸರಾದ ದಿವಂಗತ "ಮೊಹರೆ ಹಣಮಂತರಾಯ ಪತ್ರಿಕೋದ್ಯಮ ಪ್ರಶಸ್ತಿ" ಯನ್ನು ಸ್ಥಾಪನೆ ಮಾಡಿ, ೨೦೦೯ ರಿಂದ ಅರ್ಹ ಪತ್ರಕರ್ತರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಆಯ್ಕೆಯಾದವರಿಗೆ ನೀಡುವ ಪ್ರಶಸ್ತಿಯು ನಗದು ಮೊತ್ತ ಒಂದು ಲಕ್ಷ ರೂ.ಗಳು, ಪ್ರಶಸ್ತಿ ಫಲಕ ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ.

**ಅಭಿವೃದ್ಧಿ ಪತ್ರಿಕೋದ್ಯಮ ಮತ್ತು ಪರಿಸರ ಪತ್ರಿಕೋದ್ಯಮ ಪ್ರಶಸ್ತಿ:** ೨೦೦೧ ರಿಂದ ಅಭಿವೃದ್ಧಿ ಪತ್ರಿಕೋದ್ಯಮ ಮತ್ತು ಪರಿಸರ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿರುವ ಪತ್ರಕರ್ತರಿಗೆ ದಿನದರ್ಶಿ ವರ್ಷದಲ್ಲಿ ಇಲಾಖೆಯ ಮಾನ್ಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಅನುಭವಿ ಪತ್ರಕರ್ತರನ್ನು ಒಳಗೊಂಡ ಸಮಿತಿ ರಚಿಸಿ, ಅರ್ಹ ಪತ್ರಕರ್ತರನ್ನು ಆಯ್ಕೆ ಮಾಡಲಾಗುತ್ತದೆ. ಆಯ್ಕೆಯಾದವರಿಗೆ ನೀಡುವ ಪ್ರಶಸ್ತಿಯು ನಗದು ಮೊತ್ತ ೫೦,೦೦೦ ರೂ.ಗಳು, ಪ್ರಶಸ್ತಿ ಫಲಕ ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ.

**ಕ್ಷೇತ್ರ ಪ್ರಚಾರ ಶಾಖೆ: ಛಾಯಾಚಿತ್ರ ಪ್ರದರ್ಶನ:** ಭಾರತದ ಪ್ರಥಮ ಪ್ರಧಾನಿ ಪಂಡಿತ್ ಜವಾಹರ ಲಾಲ್ ನೆಹರು ಅವರ ೧೨೫ನೇ ಜನ್ಮ ದಿನಾಚರಣೆಯ ಅಂಗವಾಗಿ ನೆಹರು ರವರ ಬಾಲ್ಯ, ಶಿಕ್ಷಣ, ಸಾಧನೆ ಮತ್ತು ಆಡಳಿತ ನಡೆಸಿದ ಬಗೆಗಿನ "ಅಪೂರ್ವ ಛಾಯಾಚಿತ್ರ" ಪ್ರದರ್ಶನವನ್ನು ವಿಧಾನಸೌಧದ ಬ್ಯಾಂಕ್ವೇಟ್ ಹಾಲ್‌ನಲ್ಲಿ ಏರ್ಪಡಿಸಲಾಗಿತ್ತು ಮತ್ತು ರಾಜ್ಯದ ೨೮ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿ ಜಿಲ್ಲೆಯಲ್ಲಿ ಎರಡು ದಿನಗಳಂತೆ "ಛಾಯಾಚಿತ್ರ" ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. **ಜನಮನ**:- ಜನ ಸಾಮಾನ್ಯರ ಕಲ್ಯಾಣಕ್ಕೆ ಸರ್ಕಾರ ರೂಪಿಸಿರುವ ಅಭಿವೃದ್ಧಿ ಯೋಜನೆಗಳಾದ "ಅನ್ನಭಾಗ್ಯ", ಕ್ಷೀರಭಾಗ್ಯ", "ವಸತಿ ಭಾಗ್ಯ", "ಮನಸ್ವಿನಿ", "ಋಣಮುಕ್ತ" ಮತ್ತು "ಮೈತ್ರಿ" ಯೋಜನೆಗಳ ಪ್ರಯೋಜನ ಪಡೆದ ಫಲಾನುಭವಿಗಳೊಂದಿಗೆ ಮಾನ್ಯ ಮುಖ್ಯಮಂತ್ರಿಗಳು "ಸಂವಾದ" ನಡೆಸಿದ "ಜನಮನ" ಕಾರ್ಯಕ್ರಮವನ್ನು ಮೈಸೂರಿನಲ್ಲಿ ಏರ್ಪಡಿಸಲಾಗಿತ್ತು. ಇದೇ ಮಾದರಿಯಲ್ಲಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ, ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಫಲಾನುಭವಿಗಳ "ಸಂವಾದ" ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಆಯ್ದ ಕಾರ್ಯಕ್ರಮ" ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು.

**ಸಂಚಾರಿ ವಸ್ತು ಪ್ರದರ್ಶನ:** ಇಲಾಖೆಯ ಜಿಲ್ಲಾ ಕಚೇರಿಗಳಲ್ಲಿರುವ ಸಂಚಾರಿ ವಸ್ತುಪ್ರದರ್ಶನ ವಾಹನಗಳನ್ನು ನವೀಕರಣಗೊಳಿಸಿ, ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಮಾಹಿತಿಯನ್ನೊಳಗೊಂಡ ಸ್ಟಿಕ್ಕರ್ ಹಾಗೂ ನೂತನ ಪ್ರಚಾರ ಫಲಕಗಳನ್ನು ಅಳವಡಿಸುವುದರ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಪ್ರಚಾರ ಕಾರ್ಯ ಕೈಗೊಳ್ಳಲು ವಾಹನಗಳನ್ನು ಸಜ್ಜುಗೊಳಿಸಲಾಯಿತು. ಅಲ್ಲದೇ, ಸರ್ಕಾರದ ಯೋಜನೆಗಳು, ಸಾಧಿಸಿರುವ ಪ್ರಗತಿ ಕುರಿತಂತೆ ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಪ್ರಚಾರ ಕಾರ್ಯ ಕೈಗೊಳ್ಳಲಾಯಿತು. **ಮೈಸೂರು ದಸರಾ ಸ್ತಬ್ಧಚಿತ್ರ**- ೨೦೧೫ರ ವಿಜಯದಶಮಿ ಮೆರವಣಿಗೆಯಲ್ಲಿ "ಗಾಂಧೀಜಿ ಕನಸು ಕರ್ನಾಟಕದಲ್ಲಿ ನನಸು" ವಿಷಯಾಧಾರಿತ ಸ್ತಬ್ಧಚಿತ್ರದೊಂದಿಗೆ ಭಾಗವಹಿಸಿದ್ದು, ಈ ಸ್ತಬ್ಧಚಿತ್ರ ಜನಮನ್ನಣೆ ಗಳಿಸಿದ್ದೇ ಅಲ್ಲದೆ ದ್ವಿತೀಯ ಬಹುಮಾನ ಪಡೆದಿರುತ್ತದೆ. **ಮೈಸೂರು ದಸರಾ ವಸ್ತುಪ್ರದರ್ಶನ**:- ೨೦೧೫ರಲ್ಲಿ ರಾಜ್ಯದ ಮಾಜಿ ಮುಖ್ಯಮಂತ್ರಿ ದಿ: ಡಿ.ದೇವರಾಜ ಅರಸು ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ಡಿ.ದೇವರಾಜ ಅರಸು ಅವರ ಸಾಧನೆ, ಅವರು ರೂಪಿಸಿದ ಕಾರ್ಯಕ್ರಮಗಳು ಮತ್ತು ಜಯಚಾಮರಾಜೇಂದ್ರ ಒಡೆಯರ್ ರವರ ಕುರಿತಂತೆ ಹಾಗೂ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತಂತೆ ವಸ್ತುಪ್ರದರ್ಶನ ಏರ್ಪಡಿಸಲಾಯಿತು.

**ಬದುಕು-ಬೇಸಾಯ-ರೈತ ಬಂಧುಗಳಿಗೆ ಸಾಂತ್ವನ** : ರೈತರ ಆತ್ಮಹತ್ಯೆಯಂತಹ ಪ್ರಕರಣಗಳು ಹೆಚ್ಚಾಗಿ ವರದಿಯಾದ ಹಿನ್ನಲೆಯಲ್ಲಿ ಆಗಸ್ಟ್ ೦೧-ರಿಂದ ೨೦ರವರೆಗೆ ರೈತರಲ್ಲಿ ಆತ್ಮಸ್ಥೈರ್ಯ ತುಂಬುವ ನಿಟ್ಟಿನಲ್ಲಿ "ಬದುಕು -ಬೇಸಾಯ-ರೈತ ಬಂಧುಗಳಿಗೆ ಸಾಂತ್ವನ" ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ೩೦ ಜಿಲ್ಲಾ ಕಚೇರಿಗಳ ಮೂಲಕ ಹಮ್ಮಿಕೊಂಡು, ರೈತರಲ್ಲಿ ಧೈರ್ಯ-ಸ್ಥೈರ್ಯ ತುಂಬುವ ಕಾರ್ಯ ಕೈಗೊಳ್ಳಲಾಯಿತು. **ಕೃಷಿಮೇಳ, ತೋಟಗಾರಿಕಾ ಮೇಳ**: ಧಾರವಾಡ ಹಾಗೂ ಬೆಂಗಳೂರಿನಲ್ಲಿ ನಡೆದ "ಕೃಷಿಮೇಳ" ಹಾಗೂ ಬಾಗಲಕೋಟೆಯಲ್ಲಿ ನಡೆದ "ತೋಟಗಾರಿಕಾ ಮೇಳ"ದಲ್ಲಿ ಸರ್ಕಾರ ರೈತರ ಕಲ್ಯಾಣಕ್ಕಾಗಿ ಜಾರಿಗೊಳಿಸಿರುವ ಯೋಜನೆಗಳ ಮಾಹಿತಿ ಆಧಾರಿತ ಕೃಷಿಮೇಳದ ವಸ್ತುಪ್ರದರ್ಶನ ಮಳಿಗೆ ಹಾಗೂ ಬಾಗಲಕೋಟೆ ತೋಟಗಾರಿಕಾ ಮೇಳದ ವಸ್ತು ಪ್ರದರ್ಶನ ಮಳಿಗೆಗೆ ಬಹುಮಾನ ಸಂದಿದೆ. **ಕಲಾಜಾಥಾ**: ಸರ್ಕಾರ ಜನತೆಯ ಶ್ರೇಯೋಭಿವೃದ್ಧಿಗಾಗಿ ರೂಪಿಸುವ ಹತ್ತು ಹಲವು ಅಭಿವೃದ್ಧಿ ಕಾರ್ಯಕ್ರಮಗಳು/ ಸಾಧಿಸಿರುವ ಪ್ರಗತಿಯ ಕುರಿತು ದೃಶ್ಯ-ಶ್ರವ್ಯ ಮಾಧ್ಯಮದ ಮೂಲಕ ಬೀದಿ ನಾಟಕ, ಸಂಗೀತ ಕಾರ್ಯಕ್ರಮ, ಸಾಕ್ಷ್ಯಚಿತ್ರ ಪ್ರದರ್ಶನಗಳನ್ನೊಳಗೊಂಡ "ಕಲಾಜಾಥಾ" ವಿಶೇಷ ಪ್ರಚಾರ ಕಾರ್ಯಕ್ರಮವನ್ನು ರಾಜ್ಯದ ಹಾಸನ, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಹಾಗೂ ರಾಮನಗರ ಜಿಲ್ಲೆಗಳ ಆಯ್ದ ೭೫೪ ಗ್ರಾಮಗಳಲ್ಲಿ, ಮುಂದುವರಿದು ಬಳ್ಳಾರಿ, ರಾಯಚೂರು, ವಿಜಯಪುರ, ಬಾಗಲಕೋಟೆ, ಕೋಲಾರ ಹಾಗೂ ಗದಗ ಜಿಲ್ಲೆಗಳ ಆಯ್ದ ೧,೦೧೪ ಗ್ರಾಮಗಳಲ್ಲಿ ಹಮ್ಮಿಕೊಂಡು ಯಶಸ್ವಿಯಾಗಿ ಏರ್ಪಡಿಸಲಾಯಿತು.

**ನವದೆಹಲಿ ಗಣರಾಜ್ಯೋತ್ಸವ ಸ್ತಬ್ಧಚಿತ್ರ** : ೨೦೧೬ರ ಜನವರಿ ೨೬ ರಂದು ನವದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವ ಪೆರೇಡ್‌ನಲ್ಲಿ "ಕೊಡಗು-ಕಾಫಿಲ್ಯಾಂಡ್ ಆಫ್ ಕರ್ನಾಟಕ" ಸ್ತಬ್ಧಚಿತ್ತದೊಂದಿಗೆ ಭಾಗವಹಿಸಲಾಯಿತು. ಇಲಾಖೆ ನಿರ್ಮಿಸಿದ್ದ ಸ್ತಬ್ಧಚಿತ್ರವಯ ಪೆರೇಡ್‌ನಲ್ಲಿ ಜನರ ಗಮನ ಸೆಳೆಯಿತಲ್ಲದೆ, ನಾಡಿನ ಕಾಫಿ ಉದ್ದಿಮೆಯನ್ನು ರಾಷ್ಟ್ರಮಟ್ಟದಲ್ಲಿ ಪ್ರತಿಬಿಂಬಿಸಿತು. **ಪ್ರಗತಿ ಮಾಹಿತಿ**

**(ಎಲ್‌ಇಡಿ)**: ಡಾ: ನಂಜುಂಡಪ್ಪ ಅವರ ವರದಿಯನ್ವಯ ರಾಜ್ಯದ ಹಿಂದುಳಿದ ಹಾಗೂ ಅತ್ಯಂತ ಹಿಂದುಳಿದ ೧,೩೦೦ ಗ್ರಾಮಗಳಲ್ಲಿ ಬೃಹತ್ ಎಲ್.ಇ.ಡಿ. ಪರದೆ ಹೊಂದಿದ ಸಂಚಾರಿ ವಾಲ್ ವಾಹನಗಳ ಮೂಲಕ ವಿನೂತನ ಮಾದರಿಯ "ಪ್ರಗತಿ ಮಾಹಿತಿ" ಪ್ರಚಾರ ಕಾರ್ಯವನ್ನು ಏರ್ಪಡಿಸಲಾಯಿತು. **ಲೇಸರ್ ಪ್ರದರ್ಶನ**: ಸರ್ಕಾರದ ಯೋಜನೆಗಳು ಹಾಗೂ ಸಾಧಿಸಿರುವ ಪ್ರಗತಿ ಕುರಿತಂತೆ ರಾಜ್ಯದಲ್ಲಿ ನಡೆಯುವ ಪ್ರಮುಖ ಜಾತ್ರೆ, ಉತ್ಸವ, ಕಲಾಜಾಥಾ, ಪ್ರಗತಿ ಮಾಹಿತಿ, ವಿಶೇಷ ಪ್ರಚಾರ ಕಾರ್ಯಕ್ರಮಗಳಲ್ಲಿ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳ ವಿಷಯಾಧಾರಿತ "ಲೇಸರ್ ಪ್ರದರ್ಶನ" ವನ್ನು ಏರ್ಪಡಿಸಲಾಗಿದೆ. ನವೆಂಬರ್ ಮಾಹೆಯಲ್ಲಿ "ಬಾರಿಸು ಕನ್ನಡ ಡಿಂಡಿಮವ" ಕುರಿತ ಲೇಸರ್ ಪ್ರದರ್ಶನವನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ (ಪ್ರತಿ ಜಿಲ್ಲೆಯ ನಾಲ್ಕು ಸ್ಥಳಗಳಲ್ಲಿ) ಏರ್ಪಡಿಸಲಾಯಿತು.

**ಅಪೂರ್ವ ಛಾಯಾಚಿತ್ರ ಪ್ರದರ್ಶನ**: ರಾಜ್ಯದ ಮಾಜಿ ಮುಖ್ಯಮಂತ್ರಿ ದಿ:ಡಿ.ದೇವರಾಜ ಅರಸು ಅವರ ಜನ್ಮಶತಮಾನೋತ್ಸವದ ಅಂಗವಾಗಿ ಡಿ.ದೇವರಾಜ ಅರಸು ಅವರ ಕುರಿತ "ಅಪೂರ್ವ ಛಾಯಾಚಿತ್ರ ಪ್ರದರ್ಶನ"ವನ್ನು ಹುಣಸೂರು ಹಾಗೂ ಬೆಂಗಳೂರಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಹಾಗೂ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಏರ್ಪಡಿಸಲಾಯಿತು. **ಜಾತ್ರೆಗಳಲ್ಲಿ ವಸ್ತು ಪ್ರದರ್ಶನ**:- ರಾಜ್ಯದಲ್ಲಿ ನಡೆದ ವಿವಿಧ ಎಂಟು ಜಾತ್ರೆಗಳಲ್ಲಿ ಸರ್ಕಾರದ ಅಭಿವೃದ್ಧಿ ಯೋಜನೆಗಳ ಮಾಹಿತಿ ಆಧರಿಸಿದಂತೆ, ವಸ್ತುಪ್ರದರ್ಶನ ಮಳಿಗೆ ತೆರೆದು (ಪ್ರತಿ ಜಾತ್ರೆಯಲ್ಲಿ ಮೂರು ದಿನಗಳು) ಸರ್ಕಾರದ ಕಾರ್ಯಕ್ರಮಗಳಿಗೆ ವ್ಯಾಪಕ ಪ್ರಚಾರ ನೀಡಲಾಯಿತು. **ಗ್ರಾಮ ವಾಹಿನಿ-ಗ್ರಾಮ ಸಂಪರ್ಕ**:- ಇಲಾಖೆಯ ಜಿಲ್ಲಾ ಕಚೇರಿಗಳಲ್ಲಿರುವ ಸಂಚಾರಿ ವಸ್ತುಪ್ರದರ್ಶನ ವಾಹನಗಳ ಮೂಲಕ "ಗ್ರಾಮ ಸಂಪರ್ಕ ಹಾಗೂ ಗ್ರಾಮ ವಾಹಿನಿ" ಕಾರ್ಯಕ್ರಮಗಳನ್ನು ೨೦೧೫ರ ಜೂನ್ ಮಾಹೆಯಿಂದ ಆರಂಭಿಸಿ, ಫೆಬ್ರವರಿ ೨೦೧೬ರ ಮಾಹೆಯವರೆಗೆ ಹಮ್ಮಿಕೊಳ್ಳಲಾಯಿತು.

**ವಿಶೇಷ ಘಟಕ ಯೋಜನೆ: (ಎ) ಪರಿಶಿಷ್ಟ ಜಾತಿಯವರಿಗೆ ವಿಶೇಷ ಘಟಕ ಯೋಜನೆ**: ಪದವೀಧರ ಅಭ್ಯರ್ಥಿಗಳಿಗೆ ತರಬೇತಿ:- ಕೇಂದ್ರ ಕಚೇರಿಯ ಸುದ್ದಿ ಮತ್ತು ಪತ್ರಿಕಾ ಶಾಖೆಯಿಂದ ೨೦೧೫-೧೬ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿಗೆ ಸೇರಿದ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ ಸಮೂಹ ಮಾಧ್ಯಮ ಪದವಿಧರರು ಮತ್ತು ಸ್ನಾತ್ನಕೋತ್ತರ ಪದವೀಧರರಿಗೆ, ವೃತ್ತಿ ಕೌಶಲ್ಯತೆ ರೂಢಿಸಿಕೊಳ್ಳಲು, ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ ತರಬೇತಿ ನೀಡಿ, ಲ್ಯಾಪ್‌ಟಾಪ್/ಡಿಜಿಟಲ್ ಕ್ಯಾಮರಾಗಳನ್ನು ವಿತರಿಸಿದೆ. ಇದರಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ೪೦ ಅಭ್ಯರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದ ೪೦ ಅಭ್ಯರ್ಥಿಗಳಿಗೆ ಡಿಜಿಟಲ್ ಕ್ಯಾಮರಾಗಳನ್ನು ವಿತರಿಸಲಾಯಿತು. ಛಾಯಾ ಮತ್ತು ಚಲನಚಿತ್ರ ಶಾಖೆಯಿಂದ ಪತ್ರಿಕೋದ್ಯಮದಲ್ಲಿ ಪದವಿ ಪಡೆದ ಪರಿಶಿಷ್ಟ ಜಾತಿಗೆ ಸೇರಿದ ೩೫ ಅಭ್ಯರ್ಥಿಗಳಿಗೆ ವಿಡಿಯೋ ಚಿತ್ರೀಕರಣ ಮತ್ತು ಸಂಕಲನ ಕುರಿತು ೩೦ ದಿನಗಳ ಕಾರ್ಯಾಗಾರವನ್ನು ಏರ್ಪಡಿಸಿ, ವಿಡಿಯೋ ಕ್ಯಾಮರವನ್ನು ವಿತರಿಸಲಾಗಿದೆ. ಪರಿಶಿಷ್ಟ ಜಾತಿಯ ಪ್ರತಿಭಾನ್ವಿತ ನಿರ್ದೇಶಕರಿಂದ, ರಾಜ್ಯದ ಪರಿಶಿಷ್ಟ ಜಾತಿಯ ಗಣ್ಯ ಹಾಗೂ ಸಾಧಕರ ಕುರಿತು ೨೮ ಸಾಕ್ಷ್ಯಚಿತ್ರಗಳನ್ನು ನಿರ್ಮಿಸಲಾಗಿದೆ. ವೀಡಿಯೋ ಚಿತ್ರೀಕರಣ ಮತ್ತು ಸಂಕಲನದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಪತ್ರಿಕೋದ್ಯಮ ಪದವೀಧರ ಅಭ್ಯರ್ಥಿಗಳಿಗೆ, ಮೈಸೂರು, ವಿಶ್ವವಿದ್ಯಾನಿಲಯದ ಇ.ಎಂ.ಆರ್.ಸಿ. ಕೇಂದ್ರದಲ್ಲಿ ತರಬೇತಿಗೆ ನಿಯೋಜಿಸಿದೆ.

**ಗಿರಿಜನ ಪ್ರದೇಶ ಉಪ ಯೋಜನೆ: ಪದವೀಧರ ಅಭ್ಯರ್ಥಿಗಳಿಗೆ ತರಬೇತಿ**:- ಕೇಂದ್ರ ಕಚೇರಿಯು ಸುದ್ದಿ ಮತ್ತು ಪತ್ರಿಕಾ ಶಾಖೆಯಿಂದ ೨೦೧೫-೧೬ನೇ ಸಾಲಿನಲ್ಲಿ ಗಿರಿಜನ ಪ್ರದೇಶ ಉಪಯೋಜನೆಯಡಿ ಗಿರಿಜನ ಸಮುದಾಯಕ್ಕೆ ವೃತ್ತಿ ಕೌಶಲ್ಯತೆ ರೂಢಿಸಿಕೊಳ್ಳಲು ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ ತರಬೇತಿ ನೀಡಿ ೧೫ ಅಭ್ಯರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ವಿತರಿಸಿದೆ. ಛಾಯಾ ಮತ್ತು ಚಲನಚಿತ್ರ ಶಾಖೆಯಿಂದ ಪತ್ರಿಕೋದ್ಯಮದಲ್ಲಿ ಪದವಿ ಪಡೆದ. ಪರಿಶಿಷ್ಟ ಪಂಗಡಕ್ಕೆ ಸೇರಿದ ಇಬ್ಬರು ಅಭ್ಯರ್ಥಿಗಳಿಗೆ ವಿಡಿಯೋ ಚಿತ್ರೀಕರಣ ಮತ್ತು ಸಂಕಲನ ಕುರಿತು ೩೦ ದಿನಗಳ ಕಾರ್ಯಾಗಾರವನ್ನು ಏರ್ಪಡಿಸಿ, ವಿಡಿಯೋ ಕ್ಯಾಮರಾವನ್ನು ವಿತರಿಸಲಾಗಿದೆ. ಬುಡಕಟ್ಟು ಹಾಗೂ ಗಿರಿಜನ ಸಮುದಾಯಕ್ಕೆ ಸೇರಿದ ಪದವೀಧರ ಅಭ್ಯರ್ಥಿಗಳಿಗೆ ಮೈಸೂರು ವಿಶ್ವವಿದ್ಯಾನಿಲಯದ ಇಎಂಆರ್‌ಸಿ ಕೇಂದ್ರದಲ್ಲಿ ತರಬೇತಿಗೆ ನಿಯೋಜಿಸಿದೆ.

**ವಾಣಿಜ್ಯ ಪ್ರಚಾರ ಶಾಖೆ**: ಸರ್ಕಾರದ ಜನಪರ ಯೋಜನೆಗಳು ಸಾರ್ವಜನಿಕರಿಗೆ, ಅದರಲ್ಲೂ ಉದ್ದೇಶಿತ ಜನಸಮುದಾಯಕ್ಕೆ ತಲುಪಿಸಿ. ಆ ಯೋಜನೆಗಳು ಯಶಸ್ವಿಗೊಳ್ಳುವಲ್ಲಿ ಜಾಹೀರಾತುಗಳು ಪ್ರಧಾನ ಪಾತ್ರ ವಹಿಸುತ್ತದೆ. ಪತ್ರಿಕಾ ಮಾಧ್ಯಮ ಮತ್ತು ವಿದ್ಯುನ್ಮಾನ ಮಾಧ್ಯಮಗಳು ಜಾಹೀರಾತುಗಳ ಪ್ರಮುಖ ವಾಹಕಗಳು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಸರ್ಕಾರ ಮತ್ತು ಮಾಧ್ಯಮಗಳ ನಡುವಿನ ಸಂಪರ್ಕ ಸೇತುವಾಗಿ, ಈ ಮಾಧ್ಯಮಗಳಲ್ಲಿ ಜಾಹೀರಾತು ಪ್ರಕಟಿಸುವ ಮುಖಾಂತರ ಜನಜಾಗೃತಿ ಮೂಡಿಸುವ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಈ ದಿಶೆಯಲ್ಲಿ ಇಲಾಖೆಯ ವಾಣಿಜ್ಯ ಪ್ರಚಾರ ಶಾಖೆಯು ಪತ್ರಿಕೆಗಳು, ರೇಡಿಯೋ, ದೂರದರ್ಶನ ಮತ್ತು ಉಪಗ್ರಹ ಸಂಪರ್ಕ ಸಾಧನಗಳ, ಅಂಗೀಕೃತ ಮಾಧ್ಯಮ ಪಟ್ಟಿಗಳನ್ನು ಹೊಂದಿದೆ. ಪ್ರಸ್ತುತ ಅಂಗೀಕೃತ ಪತ್ರಿಕಾ ಮಾಧ್ಯಮ ಪಟ್ಟಿಯಲ್ಲಿ, ರಾಜ್ಯ ಮಟ್ಟದ ೮ ಕನ್ನಡ ದಿನ ಪತ್ರಿಕೆಗಳು, ೫ ಆಂಗ್ಲ ದಿನಪತ್ರಿಕೆಗಳು, ಪ್ರಾದೇಶಿಕ ಮಟ್ಟದ ೩೫ ದಿನಪತ್ರಿಕೆಗಳು ಹಾಗೂ ೩೧೬ ಜಿಲ್ಲಾ ಮಟ್ಟದ ದಿನ ಪತ್ರಿಕೆಗಳಿವೆ. ಇದರೊಂದಿಗೆ ೧೬೫ ನಿಯತಕಾಲಿಕೆಗಳೂ ಈ ಮಾಧ್ಯಮ ಪಟ್ಟಿಯಲ್ಲಿವೆ. ಅಂಗೀಕೃತ ವಿದ್ಯುನ್ಮಾನ ಮಾಧ್ಯಮ ಪಟ್ಟಿಯಲ್ಲಿ ಏಳು ರೇಡಿಯೋ ವಾಹಿನಿಗಳು, ೧೮ ದೂರದರ್ಶನ ವಾಹಿನಿಗಳು ಮತ್ತು ಒಂದು ಉಪಗ್ರಹ ಸಂಪರ್ಕ ಸಾಧನ ಸಂಸ್ಥೆಗಳು ಸೇರಿವೆ.

**ಪ್ರಕಟಣಾ ಶಾಖೆ**: ಸರ್ಕಾರದ ಅಭಿವೃದ್ಧಿ ಯೋಜನೆಗಳು ಹಾಗೂ ಸಾಧನೆಗಳ ಕುರಿತು ಜನಸಾಮಾನ್ಯರಿಗೆ ಅರಿವು ಮೂಡಿಸಲು ಕೆಳಗೆ ನಮೂದಿಸಿರುವ ಕಿರುಹೊತ್ತಿಗೆ ಹಾಗೂ ಮಡಿಕೆ ಪತ್ರಗಳನ್ನು ಮುದ್ರಿಸಿ, ಜಿಲ್ಲಾ ಕಛೇರಿಗಳಿಗೆ ಹಾಗೂ ಗಣ್ಯರಿಗೆ ವಿತರಿಸಿದೆ. ಸರ್ಕಾರದ ಎರಡು ವರ್ಷ ಸಾಧನೆ ಕುರಿತು ಮಡಿಕೆ ಪತ್ರ ಹಾಗೂ ಕಿರು ಹೊತ್ತಿಗೆ ಮುದ್ರಿಸಿ ಸಾರ್ವಜನಿಕರಿಗೆ ವಿತರಿಸಿದೆ. ಗಾಂಧಿ ಜಯಂತಿ ಅಂಗವಾಗಿ ಗಾಂಧೀಜಿಯವರ ಆಶಯದಂತೆ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಸಮರ್ಥವಾಗಿ

ರಾಜ್ಯ ಸರ್ಕಾರ ಜಾರಿಗೆ ತಂದಿದ್ದು, ಈ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಗಾಂಧೀಜಿ ಕನಸು–ಕರ್ನಾಟಕದಲ್ಲಿ ನನಸು, ಗ್ರಾಮೋದಯ ಗ್ರಾಮಸ್ವರಾಜ್ಯದ ಹಾದಿಯಲ್ಲಿ ಕಿರುಹೊತ್ತಿಗೆಗಳು, ಗ್ರಾಮಗಳ ಅಭಿವೃದ್ಧಿಗೆ ೨೧ ಅಂಶಗಳು ಮಡಿಕೆ ಪತ್ರವನ್ನು ಹೊರತಂದು ಗ್ರಾಮೀಣ ಜನತೆಗೆ ತಲುಪಿಸಿದೆ.

ಪ್ರಸ್ತುತ ಸರ್ಕಾರ ಜಾರಿಗೆ ತಂದ ಹಲವು ವಿನೂತನ ಕಾರ್ಯಕ್ರಮಗಳಾದ ಋಣಮುಕ್ತ, ವಿದ್ಯಾಸಿರಿ, ಕ್ಷೀರಭಾಗ್ಯ, ಕ್ಷೀರಧಾರ, ಮನಸ್ವಿನಿ, ಮೈತ್ರಿ, ಕೃಷಿಭಾಗ್ಯ ಹಾಗೂ "ಜನಮನ", ರೈತರಿಗೆ ಸಾಂತ್ವನ ನೀಡಲು "ಬದುಕು ಬೇಸಾಯ", ಕುರಿತು ಮಡಿಕೆ ಪತ್ರಗಳನ್ನು ಅಲ್ಲದೇ ಪ್ರಮುಖರ ಜಯಂತಿಗಳ ಆಚರಣೆಯಂದು ವಿತರಿಸಲಯ ಮೈಸೂರು ಹುಲಿ ಟಿಪ್ಪುಸುಲ್ತಾನ್, ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು, ಸಂತ ಕವಿ ಕನಕದಾಸರು, ಸ್ವಾಮಿ ವಿವೇಕಾನಂದರ ಕುರಿತ ಮಡಿಕೆ ಪತ್ರಗಳನ್ನು ಹೊರತಂದು ಜಿಲ್ಲಾ ಕಛೇರಿಗಳ ಮೂಲಕ ವಿತರಿಸಿದೆ. ರಾಜ್ಯಾದ್ಯಂತ ಇಲಾಖೆಯ ಒಡೆತನದಲ್ಲಿರುವ ೨೫೭೫ ಸಾಮಾನ್ಯ ಹಾಗೂ ೬೪ ಹೈಮಾಸ್ಟ್ ಫಲಕಗಳಿಗೆ ಗ್ರಾಮೀಣಾಭಿವೃದ್ಧಿ ವಿಷಯಗಳಾದ ಶುದ್ಧ ಕುಡಿಯುವ ನೀರು, ಪಂಚಾಯಿತಿ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಸಮಾನ ಅವಕಾಶ. ಕಾಂಕ್ರೀಟ್ ರಸ್ತೆಗಳು– ಹಳ್ಳಿಗಳ ಜೀವನಾಡಿ, ಮನೆಗೊಂದು ಶೌಚಾಲಯ–ಕುಟುಂಬದ ಗೌರವ ವಿಷಯಗಳ ಕುರಿತು ವಿನೈಲ್ ಅಳವಡಿಸಲಾಗಿದೆ.

ಸ್ವಾಮಿ ವಿವೇಕಾನಂದರ ೧೫೩ನೇ ಜಯಂತ್ಯೋತ್ಸವ ಕುರಿತು ಹಾಗೂ ರಾಜ್ಯ ಮತ್ತು ಜಿಲ್ಲಾ ಮಟ್ಟದ ಪೋಲೀಸ್ ದೂರು ಪ್ರಾಧಿಕಾರಗಳ ಕುರಿತು ರಾಜ್ಯಾದ್ಯಂತ ಇರುವ ಫಲಕಗಳಲ್ಲಿ ವಿನೈಲ್ ಅಳವಡಿಸುವ ಮೂಲಕ ಸಾರ್ವಜನಿಕರಲ್ಲಿ ತಿಳುವಳಿಕೆ ಮೂಡಿಸಿದೆ. ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ಇಲಾಖೆಯ ಹೈಮಾಸ್ಟ್ ಹಾಗೂ ಸಾಮಾನ್ಯ ಪ್ರಚಾರ ಫಲಕಗಳಲ್ಲಿ ಪ್ರಸಕ್ತ ಸಾಲಿನಲ್ಲಿ, ಪ್ರತ್ಯೇಕವಾಗಿ ಬೆಂಗಳೂರು ಅಭಿವೃದ್ಧಿ ಕುರಿತ ವಿಷಯಗಳಾದ ಉತ್ತಮ ಗುಣಮಟ್ಟದ ರಸ್ತೆ ಹಾಗೂ ಪಾದಚಾರಿ ಮಾರ್ಗಗಳು, ಬೆಂಗಳೂರು ಕೆರೆಗಳ ಪುನರುಜ್ಜೀವನಕ್ಕೆ ಮೊದಲ ಆದ್ಯತೆ, ವಿಶ್ವದ ಪ್ರಮುಖ ೨೦ ತಂತ್ರಜ್ಞಾನ ನಗರಗಳ ಪಟ್ಟಿಯಲ್ಲಿ ಬೆಂಗಳೂರಿಗೆ ೧೨ನೇ ಸ್ಥಾನ ಕುರಿತು ವಿನೈಲ್/ಫ್ಲೆಕ್ಸ್ ಅಳವಡಿಸಲಾಗಿರುತ್ತದೆ.

ಅಲ್ಲದೆ ಸಾಂದರ್ಭಿಕವಾಗಿ ಕನ್ನಡ ರಾಜ್ಯೋತ್ಸವ, ದೇವರಾಜ ಅರಸು ಜನಶತಮಾನೋತ್ಸವ, ವನ್ಯಜೀವಿ ಛಾಯಾಚಿತ್ರ ಪ್ರದರ್ಶನ, ಬಿ.ಬಿ.ಎಂ.ಪಿ.ಚುನಾವಣೆ ಮತದಾರರ ಜಾಗೃತಿ, ಸ್ವಾತಂತ್ರ್ಯೋತ್ಸವ, ಗಾಂಧಿ ಜಯಂತಿ, ಸರಸ್ವತಿ ಸಮ್ಮಾನ್ ಪುರಸ್ಕೃತ ಡಾ: ವೀರಪ್ಪ ಮೊಯ್ಲಿಯವರಿಗೆ ಅಭಿನಂದನಾ ಸಮಾರಂಭ, ಗಾಂಧೀ ಸೇವಾ ಪ್ರಶಸ್ತಿ ಪ್ರಧಾನ ಸಮಾರಂಭ, ಅರಸು ಮತ್ತು ಆಧುನಿಕ ಕರ್ನಾಟಕ, ರಾಜ್ಯ ಮಟ್ಟದ ಮಕ್ಕಳ ಸಮ್ಮೇಳನ, ಇನ್ವೆಸ್ಟ್ ಕರ್ನಾಟಕ, ಇತ್ಯಾದಿಗಳ ಕುರಿತು ವಿನೈಲ್/ಫ್ಲೆಕ್ಸ್ ಅಳವಡಿಸಿ ಸಾರ್ವಜನಿಕರಿಗೆ ಪ್ರಚುರಪಡಿಸಿದೆ. "ಬದುಕು – ಬೇಸಾಯ – ರೈತರಿಗೆ ನೆರವು ಕಾರ್ಯಕ್ರಮ"ದ ಕುರಿತು ವಿನೈಲ್/ಫ್ಲೆಕ್ಸ್ ಅಳವಡಿಸಿ ರೈತರಿಗೆ ಸರ್ಕಾರದ ಕಾರ್ಯಕ್ರಮಗಳ/ಯೋಜನೆಗಳ ಅರಿವು ಮೂಡಿಸಿ ರೈತರಲ್ಲಿ ಮನೋಸ್ಥೈರ್ಯ ಹೆಚ್ಚಿಸುವ ಕಾರ್ಯಕ್ಕೆ ನೆರವು ನೀಡಿದೆ. ಗಾಂಧೀ ಚಿಂತನೆಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಶ್ರಮಿಸಿದವರನ್ನು ಗುರುತಿಸಿ ಗೌರವಿಸಲು "ಗಾಂಧೀ ಸೇವಾ ಪ್ರಶಸ್ತಿ– ಕರ್ನಾಟಕ" ಸ್ಥಾಪಿಸಲಾಗಿದ್ದು, ಐದು ಲಕ್ಷ ರೂ.ಗಳ ನಗದು ಪ್ರಶಸ್ತಿಯನ್ನು ಖ್ಯಾತ ಗಾಂಧೀವಾದಿ ಶ್ರೀ ಹೋ. ಶ್ರೀನಿವಾಸಯ್ಯ ಅವರಿಗೆ ಈ ಸಾಲಿನಲ್ಲಿ ನೀಡಿ ಗೌರವಿಸಲಾಗಿದೆ. ರಾಜ್ಯದ ಎಲ್ಲಾ ೧೭೭ ತಾಲ್ಲೂಕುಗಳ ತಹಶೀಲ್ದಾರ್ ಕಚೇರಿಗಳಲ್ಲಿ ಎಲೆಕ್ಟ್ರಾನಿಕ್ ಡಿಜಿಟಲ್ ಡಿಸ್‌ಪ್ಲೇ ಯಂತ್ರಗಳನ್ನು ಅಳವಡಿಸುವ ಮೂಲಕ, ಸರ್ಕಾರದ ಯೋಜನೆಗಳು/ಜನಪರ ಕಾರ್ಯಕ್ರಮಗಳು/ ಸಾಮಾಜಿಕ ಸಂದೇಶಗಳನ್ನು ಆಡಿಯೋವುಳ್ಳ ದೃಶ್ಯ ಚಿತ್ರಗಳ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಕ್ರಮಕೈಗೊಂಡಿದೆ.

## ಕರ್ನಾಟಕ ಮಾಧ್ಯಮ ಅಕಾಡೆಮಿ

ಕನ್ನಡ ಪತ್ರಿಕೋದ್ಯಮ ೧೭೫ ವರ್ಷಗಳಿಗೂ ಹೆಚ್ಚಿನ ದೀರ್ಘವಾದ ವಿಶಿಷ್ಟ ಇತಿಹಾಸ ಹೊಂದಿದೆ. ಸ್ವಾತಂತ್ರ್ಯೋತ್ತರ ಕಾಲದಿಂದಲೂ ಅದು ಜನಪರ ಒಲವಿನಿಂದ ಸಾಮಾಜಿಕ ಬದ್ಧತೆಯಿಂದ ಗಳಿಸಿದ ನಿಲುವು ಬೆಳೆದ ಬಗೆ ಕುತೂಹಲಕಾರಿ. ಕನ್ನಡ ಪತ್ರಿಕೋದ್ಯಮದ ಬೆಳವಣಿಗೆಗೆ ನಿರ್ದಿಷ್ಟ ಆಯಾಮವನ್ನೊದಗಿಸುವ ಮತ್ತು ಇತರ ಭಾಷಾ ಪತ್ರಿಕೋದ್ಯಮಗಳ ಸಮಸಮಕ್ಕೆ ಸಾಗಬಲ್ಲ ಛಾತಿಯನ್ನು ತಂದುಕೊಡಲೆತ್ನಿಸುವ ಪ್ರಯತ್ನದ ಅವಶ್ಯಕತೆ ಇದ್ದೇ ಇತ್ತು. ಈ ಅಗತ್ಯತೆ ಹಿನ್ನೆಲೆಯಲ್ಲಿ ಜನ್ಮ ತಳೆದದ್ದು ಕರ್ನಾಟಕ ಪತ್ರಿಕಾ ಅಕಾಡೆಮಿ. ಅದು ಈಗ ಕರ್ನಾಟಕ ಮಾಧ್ಯಮ ಅಕಾಡೆಮಿ. ರಾಜ್ಯದಲ್ಲಿ ಪತ್ರಿಕೋದ್ಯಮ ಪರವಾದ ಒಂದು ಸಂಸ್ಥೆಯನ್ನು ಹುಟ್ಟುಹಾಕಿ ಕನ್ನಡ ಪತ್ರಿಕೋದ್ಯಮಕ್ಕೆ ವೃತ್ತಿಪರ ಕೌಶಲ್ಯವನ್ನು ಉತ್ತಮ ಗುಣಮಟ್ಟವನ್ನು ರೂಢಿಸುವ ಅವಶ್ಯಕತೆಯನ್ನು ಸರ್ಕಾರ ಮನಗಂಡು ಆಂಧ್ರ ಪ್ರದೇಶ ಮತ್ತು ಕೇರಳ ರಾಜ್ಯಗಳಲ್ಲಿ ಪ್ರವಾಸ ಮಾಡಿ ಅಲ್ಲಿಯ ಪತ್ರಿಕೋದ್ಯಮಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಹಾಗೂ ಸರ್ಕಾರದಿಂದ ದೊರೆಯುವ ಸೌಲಭ್ಯಗಳ ಬಗ್ಗೆ ಅಧ್ಯಯನ ಮಾಡಿ ಸರ್ಕಾರಕ್ಕೆ ಸಲ್ಲಿಸಿದ ವರದಿಯಲ್ಲಿ ಹಲವು ಶಿಫಾರಸ್ಸುಗಳೊಂದಿಗೆ ಕೇರಳದ ಪತ್ರಿಕಾ ಅಕಾಡೆಮಿ ಮಾದರಿಯಲ್ಲೇ ರಾಜ್ಯದಲ್ಲೂ ಪತ್ರಿಕಾ ಅಕಾಡೆಮಿಯನ್ನು ಸ್ಥಾಪಿಸಲಾಗಿದೆ.

**ಪತ್ರಿಕಾ ದಿನಾಚರಣೆ ಹಾಗೂ ರಾಷ್ಟ್ರೀಯ ಪತ್ರಿಕಾ ದಿನಾಚರಣೆ:** ಜುಲೈ ೧ ರಂದು ಕನ್ನಡ ಪತ್ರಿಕೆ ಆರಂಭವಾದ ದಿನವಾದ್ದರಿಂದ ಜುಲೈ ೧ ರಂದು ಪ್ರತಿವರ್ಷ ಪತ್ರಿಕಾ ದಿನಾಚರಣೆಯನ್ನು ಆಚರಣೆ ಮಾಡುತ್ತಾ ಬಂದಿದೆ. ಪ್ರಸಕ್ತ ವರ್ಷದ ಪತ್ರಿಕಾ ದಿನಾಚರಣೆಯನ್ನು ಮಡಿಕೇರಿಯಲ್ಲಿ ಯಶಸ್ವಿಯಾಗಿ ನಡೆಸಲಾಯಿತು. ನವೆಂಬರ್ ೧೬ ರಂದು ರಾಷ್ಟ್ರೀಯ ಪತ್ರಿಕಾ ದಿನಾಚರಣೆಯನ್ನು ಪ್ರತಿವರ್ಷದಂತೆ ಈ ವರ್ಷವೂ ಬೀದರ್ ಜಿಲ್ಲೆಯಲ್ಲಿ ಯಶಸ್ವಿಯಾಗಿ ನಡೆಸಲಾಗಿದೆ.
**ರಾಷ್ಟ್ರಮಟ್ಟದಲ್ಲಿ ಮಹಿಳಾ ವಿಚಾರ ಸಂಕಿರಣ:** ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಪತ್ರಿಕೋದ್ಯಮ ಮತ್ತು ಸಂವಹನ ಅಧ್ಯಾಪಕರ ಸಂಘ ಹಾಗೂ ಕರ್ನಾಟಕ ಲೇಖಕಿಯರ ಸಂಘದ ಸಹಯೋಗದಲ್ಲಿ "ಮಹಿಳೆ ಮತ್ತು ಮಾಧ್ಯಮದ" ವಿಚಾರ ಸಂಕಿರಣವನ್ನು ಏರ್ಪಡಿಸಲಾಯಿತು. ಈ ವಿಚಾರ ಸಂಕಿರಣಕ್ಕೆ ರಾಜ್ಯಾದ್ಯಂತ ಸಾರ್ವಜನಿಕರೂ ಭಾಗವಹಿಸಿದ್ದರು. **ಸಾಕ್ಷ್ಯಚಿತ್ರ:** ಅಕಾಡೆಮಿ ಪ್ರಶಸ್ತಿ ಪುರಸ್ಕೃತರ ಪರಿಚಯ ಕುರಿತು ಸಾಕ್ಷ್ಯಚಿತ್ರವನ್ನು ೧೯೯೫ ರವರೆಗೆ ನಿರ್ಮಿಸಲಾಗಿತ್ತು. ಮುಂದುವರೆದಂತೆ ೧೯೯೬ ರಿಂದ ೨೦೦೩ ರವರೆಗೆ ಒಟ್ಟು ೧೧೩ ಮಂದಿ ಪ್ರಶಸ್ತಿ ಪುರಸ್ಕೃತರ ಸಾಕ್ಷ್ಯಚಿತ್ರವನ್ನು ನಿರ್ಮಾಣ ಮಾಡಲಾಗಿದೆ.

**ರಾಷ್ಟ್ರೀಯ ವಿಚಾರ ಸಂಕಿರಣ:** ನ್ಯಾಯಾಲಯ ಕಲಾಪ ಕುರಿತು ನ್ಯಾಯಾಂಗ ಅಕಾಡೆಮಿ ಸಹಯೋಗದಲ್ಲಿ ಪತ್ರಕರ್ತರಿಗೆ ತರಬೇತಿ ಶಿಬಿರವನ್ನು ಯಶಸ್ವಿಯಾಗಿ ನಡೆಸಲಾಗಿದೆ. ಶಿಬಿರದಲ್ಲಿ ಹಿರಿಯ ನ್ಯಾಯಮೂರ್ತಿಗಳು ಉಪನ್ಯಾಸ ಮಂಡಿಸಿದರು. ಈ ತರಬೇತಿ ಶಿಬಿರಕ್ಕೆ ನ್ಯಾಯವಾದಿಗಳು, ನ್ಯಾಯಮೂರ್ತಿಗಳು, ಪತ್ರಕರ್ತರು, ಪತ್ರಿಕೋದ್ಯಮ ವಿದ್ಯಾರ್ಥಿಗಳು, ಸಾರ್ವಜನಿಕರೂ ಭಾಗವಹಿಸಿದ್ದರು. **ಪ್ರಶಸ್ತಿ ಪ್ರಧಾನ**: ೨೦೧೫ನೇ ಸಾಲಿನ ವಿಶೇಷ ಪ್ರಶಸ್ತಿ ಹಾಗೂ ಗೌರವ ಪ್ರಶಸ್ತಿಗಳನ್ನು ೪೪ ಮಂದಿ ಹಿರಿಯ ಪತ್ರಕರ್ತರು ಹಾಗೂ ಯುವ ಪತ್ರಕರ್ತರಿಗೆ ನೀಡಿ ಗೌರವಿಸಲಾಯಿತು. ಒಂದು ಪ್ರಶಸ್ತಿಗೆ ತಲಾ ರೂ. ೨೦,೦೦೦ ಗಳಂತೆ ಪ್ರಶಸ್ತಿಯು ಫಲಕ, ಶಾಲು, ಪ್ರಶಸ್ತಿ ಪತ್ರವನ್ನು ಒಳಗೊಂಡಿದ್ದು, ಪ್ರಶಸ್ತಿ ಪ್ರದಾನ ಸಮಾರಂಭವನ್ನು ನಡೆಸಲಾಯಿತು. **ಪುಸ್ತಕ ಪ್ರಕಟಣೆ:** ಪತ್ರಿಕೋದ್ಯಮದ ನಾನಾ ಪ್ರಕಾರಗಳಿಗೆ ಸಂಬಂಧಿಸಿದಂತೆ ಹಲವಾರು ಪುಸ್ತಕಗಳನ್ನು ಪ್ರಕಟಿಸಿದ್ದು. ಪ್ರಸಕ್ತ ವರ್ಷದಲ್ಲಿ ಪತ್ರಕರ್ತರು ಹಾಗೂ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ಪತ್ರಿಕೋದ್ಯಮದ ವಿವಿಧ ವಿಷಯಗಳ ಕುರಿತು ೩೦ ಪ್ರಕಟಣೆಗಳನ್ನು ಹೊರತಂದು. ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಲೋಕಾರ್ಪಣೆ ಮಾಡಲಾಗಿದೆ.

## ಕರ್ನಾಟಕ ಚಲನಚಿತ್ರ ಅಕಾಡೆಮಿ

**ಕಾರ್ಯಚಟುವಟಿಕೆಗಳು:** ಶ್ರೀ ಪ್ರಗತಿ ಅಶ್ವಥ್ ನಾರಾಯಣ್ ರವರು ತಮ್ಮ ಸ್ಥಿರ ಕ್ಯಾಮರಾದಲ್ಲಿ ಕನ್ನಡ ಚಿತ್ರ ರಂಗದ ಕುರಿತು ಚಿತ್ರೀಕರಿಸಿ, ಸಂಗ್ರಹಿಸಿದ ಅಪರೂಪದ ಛಾಯಾ ಚಿತ್ರಗಳನ್ನೊಳಗೊಂಡ "ಚಿತ್ರಪಥ" ಎಂಬ ಕಿರುಹೊತ್ತಿಗೆಯನ್ನು ಅಕಾಡೆಮಿ ವತಿಯಿಂದ ಪ್ರಕಟಿಸಲಾಗಿದೆ. ಖ್ಯಾತ ನಿರ್ದೇಶಕರಾದ "ದಿವಂಗತ ಪುಟ್ಟಣ್ಣ ಕಣಗಾಲ್ ರವರ ಸವಿನೆನಪು" ಕಾರ್ಯಕ್ರಮವನ್ನು ವಾರ್ತಾ ಮತ್ತು ಸಾರ್ವಜನಿಕರ ಸಂಪರ್ಕ ಇಲಾಖೆಯ ಸುಲೋಚನಾ ಸಭಾಂಗಣದಲ್ಲಿ ದಿನಾಂಕ: ೦೫–೦೬–೨೦೧೫ ರಂದು ನಡೆಸಲಾಯಿತು. ಕನ್ನಡದ ಕಥೆ, ಕಾದಂಬರಿ ಆಧಾರಿಸಿ ಚಲನಚಿತ್ರ ನಿರ್ಮಾಣ ಮಾಡುವ ನಿರ್ಮಾಪಕರಿಗೆ ಸಹಾಯ ಮಾಡಲು ಆಯಾ ಲೇಖಕರಿಂದ ಕಥೆಗಳನ್ನು ಸಂಗ್ರಹಿಸಿ, "ಜೇನುಗೂಡು–ಚಿತ್ರ ಕಥಾ ಕಣಜ" ಅನ್ನು ಆರಂಭಿಸಲಾಗಿದೆ. ಅಕಾಡೆಮಿಯು ಹೊಸದಾಗಿ ಪ್ರತಿ ಶನಿವಾರ "ಬೆಳ್ಳಿ ಸಿನಿಮಾ–ಬೆಳ್ಳಿ ಮಾತು" ಕಾರ್ಯಕ್ರಮಗಳನ್ನು ದಿನಾಂಕ: ೧೮–೦೭–೨೦೧೫ ರಂದು ಬೆಂಗಳೂರಿನ ಮಿಲ್ಲರ್‌ಟ್ಯಾಂಕ್ ರಸ್ತೆಯಲ್ಲಿರುವ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಪ್ರಾರಂಭಿಸಿದೆ. ಸದಭಿರುಚಿ ಸಿನಿಮಾಗಳನ್ನು ವೀಕ್ಷಿಸುವ ಪ್ರೇಕ್ಷಕ ವರ್ಗವನ್ನು ಹೆಚ್ಚಿಸುವ ದೃಷ್ಟಿಯಿಂದ ಪ್ರಾರಂಭಿಸಲಾದ ಈ ಕಾರ್ಯಕ್ರಮ ಯಶಸ್ವಿಗೊಂಡಿದ್ದು, ಮಾರ್ಚ್ ೨೦೧೬ರ ಅಂತ್ಯಕ್ಕೆ ೨೩ ಬೆಳ್ಳಿ ಸಿನಿಮಾ–ಬೆಳ್ಳಿ ಮಾತು ಕಾಯಕ್ರಮವನ್ನು ನಡೆಸಲಾಗಿದೆ.

ಕನ್ನಡ ಚಿತ್ರರಂಗದ ದಿಗ್ಗಜರ ಜೀವನವನ್ನು ಮುಖಾಮುಖಿ ಪರಿಚಯಿಸುವ "ಬೆಳ್ಳಿ ಹೆಜ್ಜೆ" ಕಾರ್ಯಕ್ರಮವನ್ನು ನಡೆಸುತ್ತಿದ್ದು, ದಿಗ್ಗಜರುಗಳ ಜೀವನ ಸಾಧನೆ ಕುರಿತಂತೆ ಸಾಕ್ಷ್ಯಚಿತ್ರ ಪ್ರದರ್ಶನ ಹಾಗೂ ಅಪರೂಪದ ಛಾಯಾ ಚಿತ್ರಗಳ ಪ್ರದರ್ಶನವನ್ನು ಈ ಸಂದರ್ಭದಲ್ಲಿ ಏರ್ಪಡಿಸಲಾಗುತ್ತಿದೆ. ೨೦೧೫–೧೬ನೇ ಸಾಲಿನಲ್ಲಿ ಕೆಳಕಂಡ ಬೆಳ್ಳಿ ಹೆಜ್ಜೆ ಕಾರ್ಯಕ್ರಮವನ್ನು ನಡೆಸಲಾಗಿದೆ. ೧) ಶ್ರೀ ಟಿ.ಎಸ್.ನಾಗಾಭರಣ–ಖ್ಯಾತ ಚಲನಚಿತ್ರ ನಿರ್ದೇಶಕರು. (ಮೈಸೂರು). ೨) ಶ್ರೀ ಕೆ.ಸಿ.ಎನ್.ಕುಮಾರ್–ಖ್ಯಾತ ಚಲನಚಿತ್ರ ನಿರ್ಮಾಪಕರು ಹಾಗೂ ಪ್ರದರ್ಶಕರು. (ಬೆಂಗಳೂರು). ೩) ಶ್ರೀ ದೊಡ್ಡಣ್ಣ – ಖ್ಯಾತ ಹಿರಿಯ ಕಲಾವಿದರು (ಬೆಂಗಳೂರು). ೪) ಶ್ರೀ ಶಿವರಾಜ್‌ಕುಮಾರ್ –ಖ್ಯಾತ ಚಲನಚಿತ್ರ ಕಲಾವಿದರು. (ಬೆಂಗಳೂರು). ೫) ಶ್ರೀ ಗಿರೀಶ್ ಕಾಸರವಳ್ಳಿ– ಖ್ಯಾತ ಚಲನಚಿತ್ರ ನಿರ್ದೇಶಕರು.(ಬೆಂಗಳೂರು). ೬) ಶ್ರೀ ಸಾ.ರಾ. ಗೋವಿಂದು– ಖ್ಯಾತ ಹಿರಿಯ ನಿರ್ಮಾಪಕರು. (ಕೆ.ಆರ್.ನಗರ, ಮೈಸೂರು).

## ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ

**ಪೀಠಿಕೆ**:–ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯನ್ನು ಸರ್ಕಾರವು ಮದ್ಯ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಸ್ಥಾಪಿತವಾಗಿದ್ದು, ೧೯೮೪ ರಿಂದ ಕಾರ್ಯನಿರ್ವಹಿಸುತ್ತಿದೆ. **ಮಂಡಳಿಯ ಸ್ವರೂಪ**:– ಮಂಡಳಿಗೆ ಅಧಿಕಾರಿ, ಸದಸ್ಯರುಗಳು ಹಾಗೂ ಅಧಿಕಾರೇತರ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಸರ್ಕಾರವು ನೇಮಿಸಿತ್ತದೆ. **ಆರ್ಥಿಕ ಸ್ವರೂಪ**:– ಮಂಡಳಿಗೆ ಪ್ರತಿ ವರ್ಷ ಯೋಜನೇತರ ಲೆಕ್ಕಶೀರ್ಷಿಕೆಯಡಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. ೨೦೧೫–೧೬ನೇ ಸಾಲಿನಲ್ಲಿ ಮಂಡಳಿಯ ಮದ್ಯ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿದೆ. ೧) ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳು ಅಧ್ಯಕ್ಷರಾಗಿರುವ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ, ಬೆಳ್ತಂಗಡಿ, ಜೊತೆಗೂಡಿ ೧೫೦ ಮದ್ಯವರ್ಜನ ಶಿಬಿರಗಳನ್ನು ಏರ್ಪಡಿಸಲಾಗಿದೆ. ೨) ನಂಜನಗೂಡಿನ ನಂಜುಂಡೇಶ್ವರ ಜಾತ್ರೆ, ಗುಬ್ಬಿ ತಾಲ್ಲೂಕು ಹುಚ್ಚವೀರನ ಹಳ್ಳಿಯ ಕಂಬದ ಲಕ್ಷ್ಮೀನರಸಿಂಹ ಜಾತ್ರೆ, ಮೈಸೂರು ದಸರಾದಲ್ಲಿ, ವಸ್ತು ಪ್ರದರ್ಶನ ಮಳಿಗೆ ತೆರೆದು ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿದೆ. ೩) "ವಿಶ್ವ ಮಾದಕ ವಸ್ತು ವಿರೋಧಿ ದಿನಾಚರಣೆ" ಅಂಗವಾಗಿ ಈಗಾಗಲೇ ಮಂಡಳಿಯಿಂದ ಸ್ಥಾಪಿಸಿರುವ ಹೆದ್ದಾರಿ ಫಲಕಗಳಲ್ಲಿ ಹೊಸ ಸಂದೇಶದೊಂದಿಗೆ ನವೀಕರಿಸಿ, ಜಾಗೃತಿ ಮೂಡಿಸಲಾಗಿದೆ. ೪) "ವಿಶ್ವ ಮಾದಕ ವಸ್ತು ವಿರೋಧಿ ದಿನಾಚರಣೆ" ಅಂಗವಾಗಿ ಮಂಡಳಿ ವತಿಯಿಂದ ತಯಾರಿಸಿದ ರೇಡಿಯೋ ಜಿಂಗಲ್ಸ್ ಮತ್ತು ರೇಡಿಯೋ ನಾಟಕಗಳನ್ನು ಆಕಾಶವಾಣಿ ಮೂಲಕ ಪ್ರಸಾರ ಮಾಡಿ ಜನಜಾಗೃತಿ ಮೂಡಿಸಲಾಗಿದೆ. ೫) ಬೀದಿ ನಾಟಕಗಳನ್ನು ವಿವಿಧ ಜಿಲ್ಲೆಗಳ ಆಯ್ದ ಜಿಲ್ಲೆಗಳಲ್ಲಿ ಪ್ರದರ್ಶಿಸುವುದರ ಮೂಲಕ ಹಾಗೂ ಪ್ರಚಾರ ಸಾಮಗ್ರಿಗಳನ್ನು ಮುದ್ರಿಸಿ, ವಿತರಿಸುವ ಮೂಲಕ ಮತ್ತು ತುಮಕೂರು ಬಾಪೂಜಿ ಕಾಲೇಜು ಆವರಣದಲ್ಲಿ ಪ್ರಚಾರ ಫಲಕಗಳನ್ನು ಪ್ರದರ್ಶಿಸುವುದರ ಮೂಲಕ ಜನಜಾಗೃತಿ ಮೂಡಿಸಲಾಗಿದೆ. ೬) ಅಕ್ಟೋಬರ್ ೦೨ ಮಹಾತ್ಮ ಗಾಂಧಿ ಜಯಂತಿಯಂದು ನಡೆಸಿದ ಜಾಗೃತಿ ಜಾಥಾದಲ್ಲಿ ಮತ್ತು ಗಾಂಧಿ ಭವನದಲ್ಲಿ ಏರ್ಪಡಿಸಿದ ಕಾರ್ಯಕ್ರಮದಲ್ಲಿ ಮದ್ಯ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಜನ ಜಾಗೃತಿ ಮೂಡಿಸಲಾಗಿದೆ. ೭) ಮದ್ಯ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮಗಳ ಸಂದೇಶವಿರುವ ೨೦೧೬ನೇ ಸಾಲಿನ ಪ್ಯಾಕೆಟ್ ಕ್ಯಾಲೆಂಡರ್ ಮುದ್ರಿಸಿ ಸರ್ಕಾರದ ಇಲಾಖೆಗಳಿಗೆ, ವಿವಿಧ ಸಂಘ ಸಂಸ್ಥೆಗಳಿಗೆ ಹಾಗೂ ಸಾರ್ವಜನಿಕರಿಗೆ ವಿತರಿಸಲಾಗಿದೆ.

**ವಾರ್ತಾ ಇಲಾಖೆಯ ಆಧುನೀಕರಣ/ಆಡಳಿತಾತ್ಮಕ ಕ್ರಮ:** ಇಲಾಖೆಯ ದೈನದಿಂದ ಕೆಲಸ ಕಾರ್ಯಗಳನ್ನು ಇ-ಕಚೇರಿ (ಕಾಗದರಹಿತ ಕಚೇರಿ) ಮೂಲಕ ಸಮರ್ಥವಾಗಿ ನಿರ್ವಹಿಸಲಾಗುತ್ತಿದೆ. **ವೆಬ್‌ಸೈಟ್(ಅಂತರ್ಜಾಲ):-** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ತನ್ನದೇ ಆದ ವೆಬ್‌ಸೈಟ್ www.karnatakainformation.gov.in ಹೊಂದಿದ್ದು. ದಿನಂಪ್ರತಿ ರಾಜ್ಯದಲ್ಲಿನ ಪ್ರಮುಖ ಸರ್ಕಾರಿ ಸುದ್ದಿಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತಿದೆ. **ಸಾಮಾಜಿಕ ಜಾಲತಾಣ:** ಇಲಾಖೆ ಹಮ್ಮಿಕೊಂಡಿರುವ ವಿವಿಧ ಪ್ರಚಾರ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಪ್ರಚಾರ ಕಾರ್ಯದಲ್ಲಿ ಉಂಟಾಗುವ ಬದಲಾವಣೆಗಳಿಗೆ ಅನುಗುಣವಾಗಿ ಇಲಾಖೆಯ ಪ್ರಚಾರ ಕಾರ್ಯದಲ್ಲಿ ಬದಲಾವಣೆ ತರಲು ಉದ್ದೇಶಿಸಿದ್ದು, ಇಲಾಖೆಯಲ್ಲಿ ಸಾಮಾಜಿಕ ಜಾಲತಾಣವನ್ನು ಆರಂಭಿಸಲಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಇಲಾಖೆಯು ವೆಬ್‌ಸೈಟ್, ಟ್ವಿಟರ್, ಯೂಟ್ಯೂಬ್, ಫೇಸ್‌ಬುಕ್ ಮೂಲಕ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಮಾಹಿತಿಯನ್ನು ಸಾರ್ವಜನಿಕರಿಗೆ ನೀಡುತ್ತಿದೆ.

**ಕರ್ನಾಟಕ ಗ್ಯಾಸೆಟಿಯರ್ ಇಲಾಖೆ:**ಸಾಮಾನ್ಯ ಜನರಲ್ಲಿ ಗೆಜೆಟ್ (ಸರ್ಕಾರ ಸಾಪ್ತಾಹಿಕವಾಗಿ ಪ್ರಕಟಿಸುವ) ಎಂಬ ಭಾವನೆ ಇದೆ. ಆದರೆ 'ಗೆಜೆಟ್' ಬೇರೆ 'ಗ್ಯಾಸೆಟಿಯರ್' ಬೇರೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಿದೆ. ಆಂಗ್ಲ ಭಾಷೆಯಲ್ಲಿ 'GAZA' ಎಂಬ ಪದವಿದ್ದು ಇದು ಗ್ರೀಕ್ ಮೂಲದ್ದಾಗಿದ್ದು, 'ವಾರ್ತೆಗಳ ಗಣಿ' ಎಂಬ ಅರ್ಥವಿದೆ. ಒಂದು ರೀತಿಯಲ್ಲಿ ಪ್ರದೇಶ ಪರಿಚಯ ಕೋಶವೆನ್ನಬಹುದು. ಒಂದು ಜಿಲ್ಲೆಯ ಎಲ್ಲಾ ಮಾಹಿತಿಗಳನ್ನು ಪರಿಚಯಿಸುವ ಕೃತಿಗೆ 'ಗ್ಯಾಸೆಟಿಯರ್' ಎಂದು ಹೆಸರು ಬಂದಿದೆ. ಇದನ್ನು ಸಂಪುಟ ಎಂಬ ಅರ್ಥದಲ್ಲಿ ಬಳಸಬಹುದು. ಭಾರತದಲ್ಲಿ ಬ್ರಿಟಿಷ್ ಕಾಲದಲ್ಲಿ ಮ್ಯಾನ್ಯುಯಲ್ ಎಂದೂ ಸಹ ಕರೆಯುತ್ತಿದ್ದರು. ೧೮೬೭ರಲ್ಲಿಯೇ ಬ್ರಿಟನ್‌ನಲ್ಲಿ ಮ್ಯಾನ್ಯುಯಲ್ ಪರಿಚಯವಾಗಿತ್ತು. ಭಾರತದಲ್ಲಿ ಬ್ರಿಟಿಷ್ ಆಡಳಿತ ಶುರುವಾದಾಗ ಅದರಂತೆಯೇ ಇಲ್ಲಿಯೂ ಅದನ್ನು ಪರಿಚಯಿಸಿದರು. ಮ್ಯಾನ್ಯುಯಲ್‌ಗಳು ಆಡಳಿತ ವ್ಯವಸ್ಥೆಯಲ್ಲಿ ಮಾರ್ಗಸೂಚಿಯಂತಿದ್ದುದರಿಂದ ಬಹಳಷ್ಟು ಉಪಯುಕ್ತತೆ ಕಂಡು ಬಂದಿತು.

ಮೈಸೂರು ಸಂಸ್ಥಾನದಲ್ಲಿ ಗ್ಯಾಸೆಟಿಯರ್ ಪ್ರಕಟವಾಗಿದ್ದು ೧೮೭೭-೭೮ರಲ್ಲಿ. ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರಥಮ ನಿರ್ದೇಶಕರಾಗಿದ್ದ ಬೆಂಜಮಿನ್ ಲೂಯಿಸ್‌ರೈಸ್‌ರವರು, ಮೈಸೂರು ಮತ್ತು ಕೂರ್ಗ್ ಪ್ರಾಂತ್ಯಗಳಿಗೆ ಸಂಬಂಧಿಸಿದಂತೆ ಮೂರು ಸಂಪುಟಗಳನ್ನು ಮೊದಲ ಬಾರಿಗೆ ಪ್ರಕಟಿಸುತ್ತಾರೆ. ಆದರೆ ೧೮೬೯ ರಲ್ಲಿಯೇ ಎಚ್.ವೆಲ್ಲೆಸ್ಲಿ ಹಾಗೂ ಕೃಷ್ಣ ಅಯ್ಯಂಗಾರ್ ಎಂಬುವವರು ಮೈಸೂರು ಮತ್ತು ಕೋಲಾರ ಜಿಲ್ಲೆಗಳಿಗೆ ಗ್ಯಾಸೆಟಿಯರ್ ತಯಾರಿಸುವ ಪ್ರಯತ್ನ ಮಾಡಿದ್ದರೆಂದು ತಿಳಿದು ಬರುತ್ತದೆ. ಉತ್ತರ ಕರ್ನಾಟಕ ಭಾಗವು ಆಗ ಮುಂಬೈ ಪ್ರೆಸಿಡೆನ್ಸಿ ಆಳ್ವಿಕೆಗೆ ಒಳಪಟ್ಟಿದ್ದು ೧೮೭೨ ರಲ್ಲಿ ಪ್ರಥಮ ಬಾರಿಗೆ ಬಳ್ಳಾರಿ ಜಿಲ್ಲಾ ಮ್ಯಾನ್ಯುಯಲ್‌ನ್ನು ಜಾನ್‌ಕೆಲ್‌ಸಾಲ್ ಎಂಬುವವರು ಪ್ರಕಟಿಸಿದ್ದರು. ನಂತರ ೧೯೦೪ರಲ್ಲಿ ಪುನಃ ಪರಿಷ್ಕರಿಸಿ ವಿಲಿಯಮ್ ಫ್ರಾನ್ಸಿಸ್ ಎಂಬುವವರು ಪ್ರಕಟಿಸಿದರು. ನಂತರ ೧೮೮೪ರಲ್ಲಿ ಜೇಮ್ಸ್ ಕ್ಯಾಂಪ್‌ಬೆಲ್ ಸಂಪಾದಕತ್ವದಲ್ಲಿ ವಿಜಯಪುರ, ಕೆನರಾ, ಧಾರವಾಡ, ಬೆಳಗಾವಿ ಜಿಲ್ಲೆಗಳು ಮತ್ತು ಸ್ಟ್ರೋಕ್ ಸಂಪಾದಕತ್ವದಲ್ಲಿ ದಕ್ಷಿಣ ಕೆನರಾ ಗ್ಯಾಸೆಟಿಯರ್‌ಗಳು ಪ್ರಕಟವಾದವು. ೧೯೩೧-೧೯೩೭ರ ಅವಧಿಯಲ್ಲಿ ಬೀದರ್, ಕಲಬುರಗಿ ಹಾಗೂ ರಾಯಚೂರುಗಳ ಗ್ಯಾಸೆಟಿಯರ್‌ಗಳು ಮನಾರ್ ಹುಸೇನ್ ಅವರ ಸಂಪಾದಕತ್ವದಲ್ಲಿ ಪ್ರಕಟವಾದವು. ೧೯೩೯ರ ವೇಳೆಗೆ ಮೈಸೂರು ರಾಜ್ಯದ ಆರು ಸಂಪುಟಗಳು ರಾವ್‌ಬಹದ್ದೂರ್ ಸಿ.ಹಯವದನರಾವ್ ಸಂಪಾದಕತ್ವದಲ್ಲಿ ಹೊರಬಂದವು. ವ್ಯಾಪಕ ಸರ್ವೇಕ್ಷಣೆ ನಡೆಸಿ ತಯಾರಿಸಿದ್ದರಿಂದ ಅಧಿಕೃತತೆ ಹೆಚ್ಚಾಯಿತೆನ್ನಬಹುದು. ಇಲ್ಲಿಂದ ಮುಂದೆ ರಾಜ್ಯದಲ್ಲಿ ಗ್ಯಾಸೆಟಿಯರ್‌ನ ಮಹತ್ವದ ಬಗ್ಗೆ ಹೆಚ್ಚಿನ ಅರಿವುಂಟಾಗಿ ಪ್ರತ್ಯೇಕ ಇಲಾಖೆ ಸಂಘಟಿಸುವತ್ತ ಯೋಚಿಸಿದರು.

೧೯೫೫ರಲ್ಲಿ ಕೇಂದ್ರ ಸರ್ಕಾರ ಒಂದು ಸಮಿತಿ ರಚಿಸಿ, ಸಮಿತಿಯ ಶಿಫಾರಸ್ಸಿನಂತೆ, ಪ್ರತೀ ರಾಜ್ಯವೂ ಗ್ಯಾಸೆಟಿಯರ್‌ಗಳ ಪ್ರಕಟಣಾ ಕಾರ್ಯ ಕೈಗೊಳ್ಳಬೇಕೆಂದು ನಿರ್ದೇಶಿಸಿದ್ದರ ಮೇರೆಗೆ ಎಲ್ಲಾ ರಾಜ್ಯಗಳೂ ಈ ಕಾರ್ಯ ಪ್ರಾರಂಭಿಸಿದವು. ೧೯೫೮ರಲ್ಲಿ ತಾತ್ಕಾಲಿಕ ಆಧಾರದ ಮೇಲೆ ಕರ್ನಾಟಕ ಗ್ಯಾಸೆಟಿಯರ್ ಇಲಾಖೆ ಅಸ್ತಿತ್ವಕ್ಕೆ ಬಂದಿತು. ಭಾರತದ ಗ್ಯಾಸೆಟಿಯರ್ ಘಟಕದ ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸಿ ಅದರಂತೆ ಗ್ಯಾಸೆಟಿಯರ್ ಪ್ರಕಟಿಸತೊಡಗಿತು. ಎಲ್ಲಾ ೨೦ ಜಿಲ್ಲೆಗಳ ಆಂಗ್ಲ ಸಂಪುಟಗಳು ೧೯೯೦ ರ ವೇಳೆಗೆ ಪ್ರಕಟಗೊಂಡವು. ೧೯೯೨ರ ನಂತರ ಗ್ಯಾಸೆಟಿಯರ್‌ನ ಪರಿಷ್ಕೃತ ಆವೃತ್ತಿ ಮತ್ತು ಕನ್ನಡ ಭಾಷೆಯಲ್ಲಿ ಪ್ರಕಟಿಸುವ ಯೋಜನೆ ಹಾಕಿಕೊಳ್ಳಲಾಯಿತು. ಅದರಂತೆ ಕೊಡಗು, ಧಾರವಾಡ, ಗುಲಬರ್ಗಾ, ಬಿಜಾಪುರ ಹಾಗೂ ಮಂಡ್ಯ ಜಿಲ್ಲಾ ಗ್ಯಾಸೆಟಿಯರ್ ಪ್ರಕಟಗೊಂಡವು. ಪ್ರತಿಯೊಂದು ಜಿಲ್ಲಾ ಗ್ಯಾಸೆಟಿಯರ್‌ನಲ್ಲಿ ಜಿಲ್ಲೆಯ ಭೌಗೋಳಿಕ ಚಿತ್ರಣವನ್ನೊಳಗೊಂಡ (೧) ಪ್ರಾಸ್ತಾವಿಕ, (೨) ಇತಿಹಾಸ, (೩) ಜನತೆ, (೪) ಕೃಷಿ ಮತ್ತು ನೀರಾವರಿ, (೫) ಕೈಗಾರಿಕೆಗಳು, (೬) ಬ್ಯಾಂಕಿಂಗ್ ಹಣಕಾಸು ವ್ಯವಹಾರ ವ್ಯಾಪಾರ ಮತ್ತು ವಾಣಿಜ್ಯ, (೭) ಸಾರಿಗೆ ಮತ್ತು ಸಂಪರ್ಕ, (೮) ಆರ್ಥಿಕ ಪ್ರವೃತ್ತಿಗಳು, (೯) ಆಡಳಿತ ಮತ್ತು ರಾಜಸ್ವ, (೧೦) ನ್ಯಾಯಾಡಳಿತ, (೧೧) ಇತರೆ ಇಲಾಖೆಗಳು, (೧೨) ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು, (೧೩) ಶಿಕ್ಷಣ ಮತ್ತು ಕ್ರೀಡೆ, (೧೪) ಸಾಹಿತ್ಯ ಮತ್ತು ಸಂಸ್ಕೃತಿ, (೧೫) ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ ಸೇವೆಗಳು, (೧೬) ಇತರ ಸಮಾಜಸೇವಾ ಸೌಲಭ್ಯಗಳು, (೧೭) ಪ್ರೇಕ್ಷಣೀಯ ಸ್ಥಳಗಳು, ಎಂಬುದಾಗಿ ೧೭ ಅಧ್ಯಾಯಗಳನ್ನೊಳ ಗೊಂಡಿರುತ್ತದೆ.

ಇದುವರೆಗೂ ಕರ್ನಾಟಕ ಕೈಪಿಡಿ (ವಿವಿಧ ಆವೃತ್ತಿ) ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಬಂದಿವೆ. ಕೋಲಾರ, ಮಂಡ್ಯ, ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ, ಮೈಸೂರು ಜಿಲ್ಲೆಯ ಏಳು ತಾಲೂಕು ಗ್ಯಾಸೆಟಿಯರ್‌ಗಳು ಪ್ರಕಟವಾಗಿವೆ. ಡಾ. ಫ್ರಾನ್ಸಿಸ್ ಬುಕಾನನ್‌ರ ಎ ಜರ್ನಿ ಫ್ರಂ ಮದ್ರಾಸ್ ಥ್ರೂ ಮೈಸೂರು, ಕೆನರಾ, ಮಲಬಾರ್, ಹಯವದನರಾವ್ ಸಂಪಾದಿಸಿದ ರಾಜ್ಯ ಗ್ಯಾಸೆಟಿಯರ್ ಮುಂತಾದವು ಪುನರ್ಮುದ್ರಣಗೊಂಡಿವೆ. ಈ ಗ್ರಂಥಗಳು ಬೆಂಗಳೂರು, ಮೈಸೂರು, ಕಲಬುರಗಿ ಮತ್ತು ಧಾರವಾಡಗಳಲ್ಲಿ ಸರ್ಕಾರಿ ಮುದ್ರಣಾಲಯದ ಕಾರ್ಯಾಲಯದಲ್ಲಿ ಮಾರಾಟಕ್ಕೆ ದೊರಕುತ್ತವೆ. 'ಕರ್ನಾಟಕ ಕೈಪಿಡಿ' ಕನ್ನಡ ಮತ್ತು ಆಂಗ್ಲ ಭಾಷೆಗಳೆರಡರಲ್ಲೂ ಪ್ರಕಟವಾಗಿದೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯುಕ್ತವಾಗಿದ್ದು ಹೆಚ್ಚಿನ ಬೇಡಿಕೆ ಇರುವ ಪುಸ್ತಕವಾಗಿದೆ. ಪುನರ್ಮುದ್ರಣ ಕಂಡಿವೆ. ಸಿ.ಡಿ.ಕೂಡ ಲಭ್ಯ. ಈ ಇಲಾಖೆಗಳಂತೆಯೇ ಇನ್ನೂ ಅನೇಕ ಇಲಾಖೆಗಳು, ಕಚೇರಿಗಳು, ಮಂಡಳಿಗಳು, ನಿರ್ದೇಶನಾಲಯಗಳು, ಪ್ರಾಧಿಕಾರಗಳು, ಕೇಂದ್ರ ಸರ್ಕಾರದ ಇಲಾಖಾ ಕಚೇರಿಗಳು, ಮುಂತಾದವುಗಳು

ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಅವೆಲ್ಲವುಗಳ ಕಾರ್ಯ ಚಟುವಟಿಕೆಗಳನ್ನು ಪೂರ್ಣ ಪ್ರಮಾಣದಲ್ಲಿ ವಿವರವಾಗಿ ನೀಡಲಾಗುತ್ತಿಲ್ಲ. ಬಹುಮುಖ್ಯವಾದ ಹಾಗೂ ವಿಶಿಷ್ಟವೆನಿಸುವ, ಜನರಿಗೆ ಹೆಚ್ಚು ಪರಿಚಿತವಿಲ್ಲದ ಆದರೆ ಅಗತ್ಯವಿರುವ ಅಂಶಗಳನ್ನು ಪರಿಗಣಿಸಿ ಮಾಹಿತಿ ನೀಡಲಾಗಿದೆ. ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಇಲಾಖೆಗಳು ಮತ್ತು ಇತರೆ ಕಚೇರಿಗಳ ಪಟ್ಟಿಯನ್ನಿಲ್ಲಿ ನೀಡಲಾಗಿದೆ.

**ಕ್ಷೇತ್ರ ಇಲಾಖೆಗಳ ವಿವರ**

| ಕ್ರ. ಸಂ | ಇಲಾಖೆ |
|---|---|
| | **ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ** |
| ೧ | ಕೈಗಾರಿಕಾಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು |
| ೨ | ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು |
| ೩ | ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು |
| ೪ | ಕಬ್ಬು ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಸಕ್ಕರೆ ಇಲಾಖೆ, ಬೆಂಗಳೂರು |
| | **ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ** |
| ೫ | ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು |
| | **ಸಮಾಜ ಕಲ್ಯಾಣ ಇಲಾಖೆ** |
| ೬ | ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ೫ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು |
| ೭ | ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಕೃಷಿ ಭವನ, ಹಡ್ಸನ್ ವೃತ್ತ, ಬೆಂಗಳೂರು |
| ೮ | ಕಾರ್ಯದರ್ಶಿಗಳು, ಕೇಂದ್ರ ಪರಿಹಾರ ಸಮಿತಿ, ಮಾಗಡಿ ರಸ್ತೆ, ಬೆಂಗಳೂರು |
| ೯ | ಡಿ.ಐ.ಜಿ. ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು |
| ೧೦ | ನಿರ್ದೇಶಕರು, ಗಿರಿಜನ ಸಂಶೋಧನಾ ಸಂಸ್ಥೆ, ಮೈಸೂರು |
| ೧೧ | ಪ್ರಿನ್ಸಿಪಾಲ್, ಪಿ.ಇ.ಟಿ.ಸಿ. ಅಂಬೇಡ್ಕರ್ ಭವನ, ಬೆಂಗಳೂರು |
| | **ವೈದ್ಯಕೀಯ ಶಿಕ್ಷಣ ಇಲಾಖೆ** |
| ೧೨ | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ |
| ೧೩ | ನಿರ್ದೇಶಕರು, ಸರ್ಕಾರಿ ದಂತ ಕಾಲೇಜು, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು |
| | **ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ** |
| ೧೪ | ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ, ವಿ.ವಿ.ಗೋಪುರ, ಬೆಂಗಳೂರು |
| | **ಪ್ರವಾಸೋದ್ಯಮ ಇಲಾಖೆ** |
| ೧೫ | ಪ್ರವಾಸೋದ್ಯಮ ನಿರ್ದೇಶನಾಲಯ, ಖನಿಜ ಭವನ, ಬೆಂಗಳೂರು |
| | **ಕಾರ್ಮಿಕ ಇಲಾಖೆ** |
| ೧೬ | ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು |
| ೧೭ | ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಕೌಶಲ್ಯ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು. |
| ೧೮ | ನಿರ್ದೇಶಕರು, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ನಿರ್ದೇಶನಾಲಯ, ರಾಜಾಜಿನಗರ, ಬೆಂಗಳೂರು |
| ೧೯ | ನಿರ್ದೇಶಕರು, ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಬೆಂಗಳೂರು |
| | **ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ** |
| ೨೦ | ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು |
| ೨೧ | ನಿರ್ದೇಶಕರು, ಮೀನುಗಾರಿಕೆ ಇಲಾಖೆ, ವಿ.ವಿ.ಗೋಪುರ, ಬೆಂಗಳೂರು |
| | **ಇಂಧನ ಇಲಾಖೆ** |
| ೨೨ | ವಿದ್ಯುತ್ ಪರಿವೀಕ್ಷಕರ ನಿರ್ದೇಶನಾಲಯ, ಬೆಂಗಳೂರು |
| | **ಕೃಷಿ ಇಲಾಖೆ** |
| ೨೩ | ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು |
| | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಹಿರಿಯ ನಾಗರೀಕರ ಸಬಲೀಕರನ ಇಲಾಖೆ** |
| ೨೪ | ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು |
| ೨೫ | ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು |
| | **ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ** |
| | **ತೋಟಗಾರಿಕೆ** |
| ೨೬ | ತೋಟಗಾರಿಕೆ ನಿರ್ದೇಶನಾಲಯ, ಬೆಂಗಳೂರು |

| | |
|---|---|
| | **ರೇಷ್ಮೆ** |
| ೨೭ | ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು, ಬೆಂಗಳೂರು |
| | **ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ** |
| ೨೮ | ಮಹಾ ವಿಲೇಖನಾಧಿಕಾರಿಯವರು, ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು |
| ೨೯ | ಅಡ್ವೋಕೇಟ್ ಜನರಲ್, ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು |
| | **ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ** |
| ೩೦ | ಭಾಷಾಂತರ ಇಲಾಖೆ, ಬೆಂಗಳೂರು |
| | **ಶಿಕ್ಷಣ ಇಲಾಖೆ** |
| | **ಉನ್ನತ ಶಿಕ್ಷಣ ಇಲಾಖೆ** |
| ೩೧ | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು |
| ೩೨ | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು |
| | **ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ** |
| ೩೩ | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು |
| ೩೪ | ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ |
| ೩೫ | ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ |
| ೩೬ | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು |
| ೩೭ | ನಿರ್ದೇಶಕರು, ಲೋಕ ಶಿಕ್ಷಣ ಇಲಾಖೆ, ಬೆಂಗಳೂರು |
| ೩೮ | ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು |
| ೩೯ | ನಿರ್ದೇಶಕರು, ಮುದ್ರಣ ಲೇಖನ ಸಾಮಾಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು |
| | **ಜಲಸಂಪನ್ಮೂಲ ಇಲಾಖೆ** |
| ೪೦ | ಕಾಡಾ, ನಿರ್ದೇಶನಾಲಯ, ಬೆಂಗಳೂರು |
| ೪೧ | ಮುಖ್ಯ ಇಂಜಿನೀಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು |
| | **ಸಾರಿಗೆ ಇಲಾಖೆ** |
| ೪೨ | ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇಲಾಖೆ, ಬೆಂಗಳೂರು |

| | |
|---|---|
| | **ಕಂದಾಯ ಇಲಾಖೆ** |
| ೪೩ | ಪ್ರಾದೇಶಿಕ ಆಯುಕ್ತರು, ಬೆಂಗಳೂರು, ಮೈಸೂರು, ಕಲಬುರಗಿ ಮತ್ತು ಬೆಳಗಾವಿ |
| ೪೪ | ಆಯುಕ್ತರು, ಭೂ ಮಾಪನಾ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ, ಬೆಂಗಳೂರು |
| ೪೫ | ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಚಾಮರಾಜಪೇಟೆ, ಬೆಂಗಳೂರು |
| ೪೬ | ನೋಂದಣಿ ಮಹಾ ಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು, ಬೆಂಗಳೂರು |
| ೪೭ | ನಿರ್ದೇಶಕರು, ಸಾಮಾಜಿಕ ಪಿಂಚಣಿ ನಿರ್ದೇಶನಾಲಯ, ಬೆಂಗಳೂರು |
| ೪೮ | ನಿರ್ದೇಶಕರು, (ಭೂಮಿ ಮತ್ತು ಯುಪಿಓಆರ್), ಬೆಂಗಳೂರು |
| ೪೯ | ನಿರ್ದೇಶಕರು, ಅಟಲ್ ಜೀ ಜನಸ್ನೇಹಿ ಕೇಂದ್ರಗಳು, ಬೆಂಗಳೂರು |
| | **ಒಳಾಡಳಿತ ಇಲಾಖೆ** |
| ೫೦ | ಪೋಲೀಸ್ ಮಹಾನಿರ್ದೇಶಕರು ಹಾಗೂ ಮಹಾ ಸಮಾದೇಷ್ಟರು, ಕರ್ನಾಟಕ ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳು, ಬೆಂಗಳೂರು |
| ೫೧ | ನಿರ್ದೇಶಕರು, ಸೈನಿಕ ಕಲ್ಯಾಣ ಇಲಾಖೆ ಮತ್ತು ಪುನರ್ವಸತಿ ಇಲಾಖೆ, ಬೆಂಗಳೂರು |
| ೫೨ | ಹೆಚ್ಚುವರಿ ಪೋಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಗೃಹಗಳ ಮಹಾನಿರೀಕ್ಷಕರು, ಬೆಂಗಳೂರು |
| ೫೩ | ನಿರ್ದೇಶಕರು, ಅಭಿಯೋಗಗಳ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶನಾಲಯ, ಬೆಂಗಳೂರು |
| ೫೪ | ಪೋಲೀಸ್ ಮಹಾನಿರ್ದೇಶಕರು ಹಾಗೂ ಮಹಾ ಸಮಾದೇಷ್ಟರು, ಗೃಹ ರಕ್ಷಕದಳ ಮತ್ತು ಪೌರ ರಕ್ಷಣೆ, ಬೆಂಗಳೂರು |
| ೫೫ | ಪೋಲೀಸ್ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು, ಪೋಲೀಸ್ ಇಲಾಖೆ, ಬೆಂಗಳೂರು |
| | **ಆರ್ಥಿಕ ಇಲಾಖೆ** |
| ೫೬ | ವಾಣಿಜ್ಯ ತೆರಿಗೆ ಆಯುಕ್ತರು, ಬೆಂಗಳೂರು |
| ೫೭ | ಅಬಕಾರಿ ಆಯುಕ್ತರು, ಬೆಂಗಳೂರು |
| ೫೮ | ಖಜಾನೆ ನಿರ್ದೇಶಕರು, ಬೆಂಗಳೂರು |
| ೫೯ | ನಿರ್ದೇಶಕರು, ಕರ್ನಾಟಕ ರಾಜ್ಯ ವಿಮಾ ಇಲಾಖೆ, ಬೆಂಗಳೂರು |
| ೬೦ | ನಿರ್ದೇಶಕರು, ಕರ್ನಾಟಕ ರಾಜ್ಯ ವಿಮಾ ಇಲಾಖೆ, ಬೆಂಗಳೂರು |

| | |
|---|---|
| ೬೧ | ನಿಯಂತ್ರಕರು, ರಾಜ್ಯ ಲೆಕ್ಕ ಪತ್ರ ಇಲಾಖೆ, ಶಾಂತಿನಗರ, ಬೆಂಗಳೂರು |
| | **ಸಹಕಾರ ಇಲಾಖೆ** |
| ೬೨ | ಸಹಕಾರ ಸಂಘ ನಿಬಂಧಕರು, ಬೆಂಗಳೂರು |
| ೬೩ | ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು |
| ೬೪ | ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಬೆಂಗಳೂರು |
| | **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ** |
| ೬೫ | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಆಯುಕ್ತಾಲಯ |
| ೬೬ | ಆಯುಕ್ತರು, ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ |
| ೬೭ | ನಿರ್ದೇಶಕರು, ಪಂಚಾಯತ್ ರಾಜ್–೧ |
| ೬೮ | ನಿರ್ದೇಶಕರು, ಪಂಚಾಯತ್ ರಾಜ್–೨ |
| ೬೯ | ನಿರ್ದೇಶಕರು, ಸುವರ್ಣ ಗ್ರಾಮೋದಯ |
| ೭೦ | ಉಪ ನಿರ್ದೇಶಕರು, ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ |
| ೭೧ | ಮುಖ್ಯ ಇಂಜಿನೀಯರ್, ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ, ಬೆಂಗಳೂರು |
| | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ** |
| ೭೨ | ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಆಯುಷ್ ಸೇವೆಗಳ ಆಯುಕ್ತಾಲಯ, ಬೆಂಗಳೂರು |
| ೭೩ | ಔಷಧ ನಿಯಂತ್ರಕರು, ಔಷಧ ನಿಯಂತ್ರಣಾ ಇಲಾಖೆ, ಬೆಂಗಳೂರು |
| ೭೪ | ನಿರ್ದೇಶಕರು, ಆಯುಷ್ ಇಲಾಖೆ, ಬೆಂಗಳೂರು |
| | **ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಇಲಾಖೆ** |
| ೭೫ | ಆಹಾರ ಆಯುಕ್ತರು, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು |
| ೭೬ | ನಿಯಂತ್ರಕರು, ಕಾನೂನು ಮಾಪನ ಶಾಸ್ತ್ರ ಇಲಾಖೆ, ಬೆಂಗಳೂರು |
| | **ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ** |
| ೭೭ | ಪ್ರಧಾನ ಮುಖ್ಯ ವಾಸ್ತುಶಿಲ್ಪಿ, ವಾಸ್ತುಶಿಲ್ಪ ಇಲಾಖೆ, ಬೆಂಗಳೂರು |
| ೭೮ | ಮುಖ್ಯ ಇಂಜಿನೀಯರ್, ಸಂಪರ್ಕ ಮತ್ತು ಕಟ್ಟಡ(ದಕ್ಷಿಣ), ಬೆಂಗಳೂರು |
| ೭೯ | ಮುಖ್ಯ ಇಂಜಿನೀಯರ್, ಸಂಪರ್ಕ ಮತ್ತು ಕಟ್ಟಡ(ಉತ್ತರ), ಧಾರವಾಡ |
| ೮೦ | ನಿರ್ದೇಶಕರು, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಕಾರವಾರ |
| | **ನಗರಾಭಿವೃದ್ಧಿ ಇಲಾಖೆ** |
| ೮೧ | ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು |
| ೮೨ | ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು |
| ೮೩ | ಆಯುಕ್ತರು, ನಗರ ಭೂ ಸಾರಿಗೆ ಇಲಾಖೆ, ಬೆಂಗಳೂರು |
| | **ಕನ್ನಡ ಮತ್ತು ಸಂಸ್ಕೃತಿ ಇಲಾಖೆ** |
| ೮೪ | ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು |
| ೮೫ | ಆಯುಕ್ತರು, ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ, ಮೈಸೂರು |
| ೮೬ | ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ವಾರ್ತಾ ಭವನ, ಬೆಂಗಳೂರು |
| ೮೭ | ಮುಖ್ಯ ಸಂಪಾದಕರು, ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು |
| ೮೮ | ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಕಾಸ ಸೌಧ, ಬೆಂಗಳೂರು |
| | **ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ** |
| ೮೯ | ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ |
| ೯೦ | ನಿರ್ದೇಶಕರು, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ಬೆಂಗಳೂರು |
| ೯೧ | ನಿರ್ದೇಶಕರು, ಜವಾಹರ್ ಲಾಲ್ ನೆಹರು ತಾರಾಲಯ, ಬೆಂಗಳೂರು |
| | **ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ** |
| ೯೨ | ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, ಬೆಂಗಳೂರು |
| ೯೩ | ಪ್ರಾದೇಶಿಕ ನಿರ್ದೇಶಕರ (ಪರಿಸರ) ಕಛೇರಿ, ಮಂಗಳೂರು. |
| ೯೪ | ಪ್ರಾದೇಶಿಕ ನಿರ್ದೇಶಕರ (ಪರಿಸರ) ಕಛೇರಿ, ಉಡುಪಿ. |
| ೯೫ | ಪ್ರಾದೇಶಿಕ ನಿರ್ದೇಶಕರ (ಪರಿಸರ) ಕಛೇರಿ, ಕಾರವಾರ. |

| | |
|---|---|
| ೯೬ | ಪ್ರಾದೇಶಿಕ ನಿರ್ದೇಶಕರ (ಪರಿಸರ) ಕಛೇರಿ, ಬಳ್ಳಾರಿ. |
| ೯೭ | ಪ್ರಾದೇಶಿಕ ನಿರ್ದೇಶಕರ (ಪರಿಸರ) ಕಛೇರಿ, ಕಲಬುರಗಿ. |
| ೯೮ | ಪ್ರಾದೇಶಿಕ ನಿರ್ದೇಶಕರ (ಪರಿಸರ) ಕಛೇರಿ, ಬೆಳಗಾವಿ. |
| | **ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ** |
| ೯೯ | ಯೋಜನಾ, ಆರ್ಥಿಕ ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು |
| | **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ** |
| ೧೦೦ | ಯುವ ಸಬಲೀಕರಣ ಮತ್ತು ಕ್ರೀಡಾ ನಿರ್ದೇಶನಾಲಯ |
| | **ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ** |
| | **ಸಾರ್ವಜನಿಕ ಉದ್ದಿಮೆ ಇಲಾಖೆ** |
| | **ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ** |
| ೧೦೧ | ಕರ್ನಾಟಕ ಲೋಕ ಸೇವಾ ಆಯೋಗ |
| ೧೦೨ | ಕರ್ನಾಟಕ ಲೋಕಾಯುಕ್ತ |
| ೧೦೩ | ಇ-ಆಡಳಿತ |
| ೧೦೪ | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಜನಸ್ಪಂದನ) |
| ೧೦೫ | ಆತಿಥ್ಯ ಸಂಸ್ಥೆ (ಕುಮಾರ ಕೃಪ ಅತಿಥಿ ಗೃಹ), ಬೆಂಗಳೂರು |
| ೧೦೬ | ನಿವಾಸಿ ಆಯುಕ್ತರ ಕಛೇರಿ, ನವದೆಹಲಿ |
| ೧೦೭ | ಕರ್ನಾಟಕ ಭವನ, ನವದೆಹಲಿ |
| ೧೦೮ | ಕರ್ನಾಟಕ ರಾಜ್ಯಪಾಲರ ಸಚಿವಾಲಯ |
| ೧೦೯ | ಕರ್ನಾಟಕ ವಿಧಾನ ಪರಿಷತ್ ಸಚಿವಾಲಯ |
| ೧೧೦ | ಕರ್ನಾಟಕ ವಿಧಾನ ಸಭೆ ಸಚಿವಾಲಯ |
| ೧೧೧ | ಕರ್ನಾಟಕ ಸರ್ಕಾರ ಸಚಿವಾಲಯ |
| ೧೧೨ | ನಿಗಮ, ಮಂಡಳಿ, ಸ್ಥಳೀಯ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು, ಸಂಘ ಸಂಸ್ಥೆಗಳು |
| | |

| ಕ್ರ.ಸಂ | ಇಲಾಖೆ |
|---|---|
| | **ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ** |
| ೧ | ವ್ಯವಸ್ಥಾಪಕ ನಿರ್ದೇಶಕರು, ಮೈಸೂರು ಸಕ್ಕರೆ ಕಾರ್ಖಾನೆ ನಿಗಮ |
| ೨ | ಕರ್ನಾಟಕ ಸಕ್ಕರೆ ಸಂಸ್ಥೆ, ಬೆಳಗಾವಿ |
| ೩ | ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ |
| ೪ | ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮ ನಿಯಮಿತ |
| ೫ | ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ |
| ೬ | ಮೈಸೂರು ಮಿನರಲ್ಸ್ ನಿಗಮ |
| ೭ | ಕೆ.ಐ.ಎ.ಡಿ.ಬಿ |
| ೮ | ಕರ್ನಾಟಕ ತೆಂಗಿನನಾರು ಅಭಿವೃದ್ಧಿ ನಿಗಮ |
| ೯ | ಎನ್.ಜಿ.ಇ.ಎಫ್(ಹುಬ್ಬಳ್ಳಿ) ಲಿಮಿಟೆಡ್ |
| ೧೦ | ಕರ್ನಾಟಕ ವಿದ್ಯುತ್ ಕಾರ್ಖಾನೆ |
| ೧೧ | ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ |
| ೧೨ | ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ |
| ೧೩ | ಮಾರ್ಕೆಟಿಂಗ್ ಕನ್ಸಲ್ಟೆಂಟ್ಸ್ ಮತ್ತು ಏಜನ್ಸೀಸ್ |
| ೧೪ | ಮೈಸೂರು ಸೇಲ್ಸ್ ಇಂಟರನ್ಯಾಷನಲ್ ಲಿಮಿಟೆಡ್ |
| ೧೫ | ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತ |
| ೧೬ | ಮೈಸೂರು ಎಲೆಕ್ಟ್ರಿಕಲ್ ಲಿಮಿಟೆಡ್ |
| ೧೭ | ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮ |
| ೧೮ | ಮೈಸೂರು ಪೇಪರ್ ಮಿಲ್ಸ್ ನಿಗಮ |
| ೧೯ | ಮೈಸೂರು ಬಣ್ಣ ಮತ್ತು ಅರಗು ನಿಗಮ |
| ೨೦ | ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ |
| ೨೧ | ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ |
| | **ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ** |
| ೨೧ | ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು |
| ೨೨ | ಕಾರ್ಯದರ್ಶಿ, ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗ, ಬೆಂಗಳೂರು |
| ೨೩ | ನಿರ್ದೇಶಕರು, ಡಿ.ದೇವರಾಜ ಅರಸು ಸಂಶೋಧನಾ ಸಂಸ್ಥೆ, ಬೆಂಗಳೂರು |
| ೨೪ | ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು |
| ೨೫ | ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ, ಬೆಂಗಳೂರು |
| | **ಸಮಾಜ ಕಲ್ಯಾಣ ಇಲಾಖೆ** |
| ೨೬ | ವ್ಯವಸ್ಥಾಪಕ ನಿರ್ದೇಶಕರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು. |

| | |
|---|---|
| ೨೭ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ವಸಂತನಗರ, ಬೆಂಗಳೂರು. |
| ೨೮ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ, ಶಿವಾಜಿನಗರ, ಬೆಂಗಳೂರು. |
| ೨೯ | ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಶೇಷಾದ್ರಿಪುರಂ, ಬೆಂಗಳೂರು. |
| ೩೦ | ವ್ಯವಸ್ಥಾಪಕ ನಿರ್ದೇಶಕರು, ಡಾ.ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ (ಲಿಡ್ಕರ್) ,ಬೆಂಗಳೂರು. |
| ೩೧ | ನಿರ್ದೇಶಕರು, ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಅಂಬೇಡ್ಕರ್ ಭವನ, ಬೆಂಗಳೂರು |
| ೩೨ | ಕಾರ್ಯದಶಿ, ಕರ್ನಾಟಕ ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ, ಬೆಂಗಳೂರು |
| ೩೩ | ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗ, ಬೆಂಗಳೂರು |
| | **ವಸತಿ ಇಲಾಖೆ** |
| ೩೪ | ಕರ್ನಾಟಕ ಗೃಹ ಮಂಡಳಿ |
| ೩೫ | ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ |
| ೩೬ | ರಾಜೀವಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ |
| | **ವೈದ್ಯಕೀಯ ಶಿಕ್ಷಣ ಇಲಾಖೆ** |
| ೩೭ | ನಿರ್ದೇಶಕರು ಹಾಗೂ ಡೀನ್, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು. |
| ೩೮ | ನಿರ್ದೇಶಕರು, ನೆಫ್ರೋ-ಯುರಾಲಜಿ ಸಂಸ್ಥೆ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು. |
| ೩೯ | ನಿರ್ದೇಶಕರು, ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಹಾಗೂ ಸಂಶೋಧನಾ ಸಂಸ್ಥೆ, ಬೆಂಗಳೂರು. |
| ೪೦ | ನಿರ್ದೇಶಕರು, ಎಸ್.ಡಿ.ಎಸ್.ರಾಜೀವ್ ಗಾಂಧಿ, ಎದೆರೋಗಗಳ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು |
| ೪೧ | ನಿರ್ದೇಶಕರು, ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ಬೆಂಗಳೂರು |
| ೪೨ | ನಿರ್ದೇಶಕರು, ಕರ್ನಾಟಕ ಮಧುಮೇಹ ಸಂಸ್ಥೆ, ಬೆಂಗಳೂರು |
| ೪೩ | ನಿರ್ದೇಶಕರು, ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ, ಬೆಂಗಳೂರು |
| ೪೪ | ನಿರ್ದೇಶಕರು ಹಾಗೂ ಡೀನ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು. |
| ೪೫ | ನಿರ್ದೇಶಕರು, ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ. |
| ೪೬ | ನಿರ್ದೇಶಕರು, ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಳ್ಳಾರಿ. |
| ೪೭ | ನಿರ್ದೇಶಕರು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ. |
| ೪೮ | ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. |
| ೪೯ | ನಿರ್ದೇಶಕರು, ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗ. |
| ೫೦ | ನಿರ್ದೇಶಕರು, ಬೆಳಗಾಂ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೆಳಗಾವಿ. |
| ೫೧ | ನಿರ್ದೇಶಕರು, ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್. |
| ೫೨ | ನಿರ್ದೇಶಕರು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು. |
| ೫೩ | ನಿರ್ದೇಶಕರು, ಧಾರವಾಡ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ಸಂಸ್ಥೆ, ಧಾರವಾಡ |
| ೫೪ | ನಿರ್ದೇಶಕರು, ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಡಿಕೇರಿ. |
| ೫೫ | ನಿರ್ದೇಶಕರು, ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, |
| ೫೬ | ನಿರ್ದೇಶಕರು, ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ. |
| ೫೭ | ನಿರ್ದೇಶಕರು, ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ. |
| ೫೮ | ನಿರ್ದೇಶಕರು, ಗುಲ್ಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ |
| ೫೯ | ನಿರ್ದೇಶಕರು, ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಾಮರಾಜನಗರ |
| ೬೦ | ವಿಶೇಷಾಧಿಕಾರಿ, ರಾಯಚೂರು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ. |
| | **ಅಲ್ಪಸಂಖ್ಯಾತರ ಕಲ್ಯಾಣ. ಹಜ್ ಮತ್ತು ವಕ್ಫ್ ಇಲಾಖೆ** |
| ೬೧ | ಮುಖ್ಯಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ವಕ್ಫ್, ಮಂಡಳಿ, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು. |
| ೬೨ | ವ್ಯವಸ್ಥಾಪಕ ನಿರ್ದೇಶಕರು, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಖನಿಜ ಭವನ, ಬೆಂಗಳೂರು. |
| ೬೩ | ನಿಬಂಧಕರು, ಕರ್ನಾಟಕ ಉರ್ದು ಅಕಾಡೆಮಿ, ಬೆಂಗಳೂರು. |
| ೬೪ | ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ಹಜ್ ಸಮಿತಿ, ಬೆಂಗಳೂರು. |
| ೬೫ | ಕಾರ್ಯದರ್ಶಿ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ, ಬೆಂಗಳೂರು. |

| | |
|---|---|
| | **ಪ್ರವಾಸೋದ್ಯಮ ಇಲಾಖೆ** |
| ೬೬ | ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, ಖನಿಜ ಭವನ. |
| ೬೭ | ಅರಣ್ಯ, ವಸತಿ ಹಾಗೂ ವಿಹಾರಧಾಮಗಳ ಸಂಸ್ಥೆ, ಖನಿಜ, ಭವನ. |
| | **ಕಾರ್ಮಿಕ ಇಲಾಖೆ** |
| ೬೮ | ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ನಿಗಮ ರಾಜಾಜಿನಗರ, ಬೆಂಗಳೂರು. |
| | **ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ** |
| ೬೯ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಹಾಲು ಉತ್ಪಾದಕರ ಮಹಾ ಮಂಡಳಿ, ಬೆಂಗಳೂರು. |
| ೭೦ | ನಿರ್ದೇಶಕರು, ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ, ಹೆಬ್ಬಾಳ, ಬೆಂಗಳೂರು. |
| ೭೧ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕುರಿ ಉತ್ಪನ್ನಗಳ ಮತ್ತು ಕುರಿ ಅಭಿವೃದ್ಧಿ ಮಂಡಳಿ. ಬೆಂಗಳೂರು. |
| ೭೨ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳಿ, ಬೆಂಗಳೂರು. |
| ೭೩ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರಿ ಮೀನುಗಾರಿಕಾ ಮಹಾ ಮಂಡಳಿ, ಮೈಸೂರು. |
| ೭೪ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ (ನಿ), ಮಂಗಳೂರು. |
| ೭೫ | ಜನರಲ್ ಮ್ಯಾನೇಜರ್, ದಕ್ಷಿಣ ಕನ್ನಡ ಮೀನು ಮಾರಾಟ ಮಹಾಮಂಡಳಿ, ಮಂಗಳೂರು. |
| ೭೬ | ಉತ್ತರ ಕನ್ನಡ ಜಿಲ್ಲಾ ಸಹಕಾರಿ ಮೀನು ಮಾರಾಟ ಫೆಡರೇಷನ್ ನಿಯಮಿತ, ಕಾರವಾರ. |
| ೭೭ | ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್. |
| | **ಇಂಧನ ಇಲಾಖೆ** |
| ೭೮ | ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಬೆಂಗಳೂರು. |
| ೭೯ | ವ್ಯವಸ್ಥಾಪಕ ನಿರ್ದೇಶಕರು, ಕಲಬುರಗಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಕಲಬುರಗಿ |
| ೮೦ | ವ್ಯವಸ್ಥಾಪಕರು ನಿದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿ. |
| ೮೧ | ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಮಂಗಳೂರು. |
| ೮೨ | ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಮೈಸೂರು. |

| | |
|---|---|
| ೮೩ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು. |
| ೮೪ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು. |
| ೮೫ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬೆಂಗಳೂರು. |
| | **ಕೃಷಿ ಇಲಾಖೆ** |
| ೮೬ | ಕುಲಸಚಿವರು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು |
| ೮೭ | ಕುಲಸಚಿವರು, ಕೃಷಿ ವಿಶ್ವವಿದ್ಯಾಲಯ, ಧಾರವಾಡ |
| ೮೮ | ಕುಲಸಚಿವರು, ಕೃಷಿ ವಿಶ್ವವಿದ್ಯಾಲಯ, ರಾಯಚೂರು |
| ೮೯ | ಕುಲಸಚಿವರು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ |
| ೯೦ | ಕರ್ನಾಟಕ ರಾಜ್ಯ ಉತ್ಪನ್ನಗಳ ಸಂಸ್ಕರಣ ಹಾಗೂ ರಫ್ತು ನಿಗಮ ನಿಯಮಿತ (ಕೆಪೆಕ್) |
| ೯೧ | ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ, ಬೆಂಗಳೂರು |
| ೯೨ | ಕರ್ನಾಟಕ ರಾಜ್ಯ ಬೀಜ ಪ್ರಮಾಣನ ಸಂಸ್ಥೆ, ಬೆಂಗಳೂರು |
| ೯೩ | ಕರ್ನಾಟಕ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮ, ಬೆಂಗಳೂರು |
| ೯೪ | ಕರ್ನಾಟಕ ತೊಗರಿ ಅಭಿವೃದ್ಧಿ ನಿಗಮ ನಿಯಮಿತ, ಕಲಬುರಗಿ |
| ೯೫ | ದಿ ಮೈಸೂರು ತಂಬಾಕು ಕಂಪನಿ, |
| ೯೬ | ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಲಿಮಿಟೆಡ್ |
| ೯೭ | ಕರ್ನಾಟಕ ಆಗ್ರೋ ಕಾರನ್ ಪ್ರಾಡಕ್ಟ್ ಲಿಮಿಟೆಡ್. |
| ೯೮ | ಆಹಾರ ಕರ್ನಾಟಕ ನಿಯಮಿತ, ಬೆಂಗಳೂರು. |
| | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ** |
| ೯೯ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು. |
| ೧೦೦ | ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು. |
| ೧೦೧ | ಕಾರ್ಯದರ್ಶಿ, ಜವಾಹರ ಬಾಲಭವನ, ಸೊಸೈಟಿ, ಬೆಂಗಳೂರು. |
| ೧೦೨ | ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿ, ಬೆಂಗಳೂರು. |
| ೧೦೩ | ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರು. |
| ೧೦೪ | ಆಯುಕ್ತರು, ಅಂಗವಿಕಲರ ಅಧಿನಿಯಮ, ಬೆಂಗಳೂರು |

| | |
|---|---|
| ೧೦೫ | ಯೋಜನಾಧಿಕಾರಿಗಳು, ಕರ್ನಾಟಕ ಬಾಲವಿಕಾಸ ಅಕಾಡೆಮಿ, ಧಾರವಾಡ |
| | **ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ** |
| | **ತೋಟಗಾರಿಕೆ** |
| ೧೦೬ | ಕರ್ನಾಟಕ ತೋಟಗಾರಿಕೆ ಮಹಾಮಂಡಳಿ, ಬೆಂಗಳೂರು. |
| ೧೦೭ | ಮೈಸೂರು ತೋಟಗಾರಕೆ ಸಂಘ |
| ೧೦೮ | ಹಾಪ್ ಕಾಮ್ಸ್, ಬೆಂಗಳೂರು |
| ೧೦೯ | ಕರ್ನಾಟಕ ತೋಟಗಾರಿಕೆ ಮಿಶನ್ |
| ೧೧೦ | ಕರ್ನಾಟಕ ವೈನ್ ಬೋರ್ಡ್ |
| ೧೧೧ | ಕರ್ನಾಟಕ ಸ್ಪೈಸ್ ಬೋರ್ಡ್ |
| ೧೧೨ | ಕರ್ನಾಟಕ ಮಾವು ಅಭಿವೃದ್ಧಿ ಮಂಡಳಿ |
| ೧೧೩ | ತೋಟಗಾರಿಕೆ ಮಿಶನ್ ಏಜೆನ್ಸಿ |
| ೧೧೪ | ಜೈವಿಕ ಸೊಸೈಟಿ |
| ೧೧೫ | ಬೆಂಗಳೂರು ನರ್ಸರಿಮೆನ್ ಕೋ-ಅಪರೇಟಿವ್ ಸೊಸೈಟಿ |
| ೧೧೬ | ಕರ್ನಾಟಕ ಸುವರ್ಣ ಉದ್ಯಾನವನಗಳ ಪ್ರತಿಷ್ಠಾನ, ಬೆಂಗಳೂರು |
| ೧೧೭ | ತೋಟಗಾರಿಕೆ ವಿಶ್ವವಿದ್ಯಾನಿಲಯ, ಬಾಗಲಕೋಟೆ |
| | **ರೇಷ್ಮೆ** |
| ೧೧೮ | ನಿರ್ದೇಶಕರು, ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ಬೆಂಗಳೂರು. |
| ೧೧೯ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ, ಬೆಂಗಳೂರು. |
| ೧೨೦ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತ, ಬೆಂಗಳೂರು. |
| | **ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ** |
| ೧೨೧ | ಉಪಕುಲಪತಿಯರು, ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ. |
| ೧೨೨ | ನಿರ್ದೇಶಕರು, ಕರ್ನಾಟಕ ನ್ಯಾಯಾಂಗ ಅಕಾಡೆಮಿ, ಬೆಂಗಳೂರು |
| ೧೨೩ | ಸದಸ್ಯ ಕಾರ್ಯದರ್ಶಿಯವರು, ಕರ್ನಾಟಕ ಕಾನೂನು ಆಯೋಗ, ವಿಧಾನಸೌಧ, ಬೆಂಗಳೂರು. |
| ೧೨೪ | ನಿರ್ದೇಶಕರು, ಕಾನೂನು, ಸಂಸದೀಯ ಸುಧಾರಣಾ ಸಂಸ್ಥೆ, ಬೆಂಗಳೂರು. |
| ೧೨೫ | ಕಾರ್ಯದರ್ಶಿಯವರು, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು. |
| ೧೨೬ | ಸದಸ್ಯ ಕಾರ್ಯದರ್ಶಿಯವರು, ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ, ಬೆಂಗಳೂರು. |

| | |
|---|---|
| | **ಶಿಕ್ಷಣ ಇಲಾಖೆ** |
| | **ಉನ್ನತ ಶಿಕ್ಷಣ ಇಲಾಖೆ** |
| ೧೨೭ | ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು. |
| ೧೨೮ | ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| ೧೨೯ | ಕುಲಸಚಿವರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು. |
| ೧೩೦ | ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ, ಹಂಪಿ. |
| ೧೩೧ | ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ೧೩೨ | ಕುಲಸಚಿವರು, ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ |
| ೧೩೩ | ಕುಲಸಚಿವರು, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು |
| ೧೩೪ | ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ |
| ೧೩೫ | ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು. |
| ೧೩೬ | ಕುಲಸಚಿವರು, ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ |
| ೧೩೭ | ಕುಲಸಚಿವರು, ತುಮಕೂರು ವಿಶ್ವವಿದ್ಯಾಲಯ, ತುಮಕೂರು |
| ೧೩೮ | ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ |
| ೧೩೯ | ಕುಲಸಚಿವರು, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ |
| ೧೪೦ | ಕುಲಸಚಿವರು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ |
| ೧೪೧ | ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ |
| ೧೪೨ | ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು |
| ೧೪೩ | ಕುಲಸಚಿವರು, ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು. |
| ೧೪೪ | ಕುಲಸಚಿವರು, ಜಾನಪದ ವಿಶ್ವವಿದ್ಯಾಲಯ, ಹಾವೇರಿ. |
| | **ಜಲಸಂಪನ್ಮೂಲ ಇಲಾಖೆ** |
| ೧೪೫ | ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು |
| ೧೪೬ | ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು |
| ೧೪೭ | ಕಾಡಾ, ಮುನಿರಾಬಾದ್ |
| ೧೪೮ | ಕಾಡಾ, ಭೀಮರಾಯನ ಗುಡಿ |
| ೧೪೯ | ಕಾಡಾ, ಕಲಬುರಗಿ |

| | |
|---|---|
| ೧೫೦ | ಜಲ ಮತ್ತು ಭೂ ನಿರ್ವಹಣೆ ಸಂಸ್ಥೆ. |
| | **ಸಾರಿಗೆ ಇಲಾಖೆ** |
| ೧೫೧ | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು |
| ೧೫೨ | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಬೆಂಗಳೂರು |
| ೧೫೩ | ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಹುಬ್ಬಳ್ಳಿ |
| ೧೫೪ | ಈಶಾನ್ಯ ರಸ್ತೆ ಸಾರಿಗೆ ಸಂಸ್ಥೆ, ಗುಲ್ಬರ್ಗಾ |
| ೧೫೫ | ಡಿ.ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್ (ಡಿಡಿಯುಟಿಟಿಎಲ್),ಬೆಂಗಳೂರು |
| | **ಕಂದಾಯ ಇಲಾಖೆ** |
| ೧೫೬ | ವ್ಯವಸ್ಥಾಪಕರು, ಸಾರ್ವಜನಿಕ ಜಮೀನುಗಳ ನಿಗಮ, ಕಂದಾಯಭವನ, ಬೆಂಗಳೂರು. |
| | **ಒಳಾಡಳಿತ ಇಲಾಖೆ** |
| ೧೫೭ | ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪೋಲಿಸ್ ಗೃಹ ನಿರ್ಮಾಣ ನಿಗಮ ನಿಯಮಿತ, ಬೆಂಗಳೂರು. |
| | **ಆರ್ಥಿಕ ಇಲಾಖೆ** |
| ೧೫೮ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ,ಬೆಂಗಳೂರು. |
| ೧೫೯ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ, ಬೆಂಗಳೂರು. |
| | **ಸಹಕಾರ ಇಲಾಖೆ** |
| ೧೬೦ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಉಗ್ರಾಣ ನಿಗಮ, ಬೆಂಗಳೂರು. |
| ೧೬೧ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳಿ ನಿಯಮಿತ |
| ೧೬೨ | ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ ನಿಯಮಿತ |
| | **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ** |
| ೧೬೩ | ವಿಶೇಷ ಆಯುಕ್ತರು, ಮ.ಗಾಂ.ರಾ.ಗ್ರಾ.ಉ.ಖಾ. ಯೋಜನೆ. |
| ೧೬೪ | ನಿರ್ದೇಶಕರು, ನಿರ್ಮಲ ಭಾರತ ಅಭಿಯಾನ |
| ೧೬೫ | ಮುಖ್ಯ ಕಾರ್ಯಾಚರಣೆ ಅಧಿಕಾರಿ, ಮ.ಗ್ರಾ. ರಾ.ಗ್ರಾ..ಉ.ಖಾ.ಯೋಜನೆ |
| ೧೬೬ | ಮಿಷನ್ ಡೈರೆಕ್ಟರ್, ಎನ್.ಆರ್.ಎಲ್.ಎಂ |
| ೧೬೭ | ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾ ತರಬೇತಿ ಸಂಸ್ಥೆ, ಮೈಸೂರು. |
| ೧೬೮ | ಮುಖ್ಯಸ್ಥರು ಗ್ರಾಮ ಸ್ವರಾಜ್ ಯೋಜನೆ |
| ೧೬೯ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ. |

| | |
|---|---|
| ೧೭೦ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಗಮ |
| | **ಆರೋಗ್ಯ ಮತ್ತು ಕುಟುಂಬ ಇಲಾಖೆ** |
| ೧೭೧ | ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು. |
| ೧೭೨ | ಯೋಜನಾ ನಿರ್ದೇಶಕರು, ಕರ್ನಾಟಕ ಆರೋಗ್ಯ ವ್ಯವಸ್ಥೆಯ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆ, ಬೆಂಗಳೂರು. |
| ೧೭೩ | ಯೋಜನಾ ನಿರ್ದೇಶಕರು, ಕರ್ನಾಟಕ ರಾಜ್ಯ ಏಡ್ಸ್ ನಿವಾರಣಾ ಸಂಸ್ಥೆ, ಬೆಂಗಳೂರು. |
| ೧೭೪ | ನಿರ್ದೇಶಕರು, ಕರ್ನಾಟಕ ರಾಜ್ಯ ಔಷಧಿಗಳ ಪೂರೈಕೆ ಮತ್ತು ಉಗ್ರಾಣ ಸಂಘ,ಬೆಂಗಳೂರು. |
| ೧೭೫ | ನಿರ್ದೇಶಕರು, ಕರ್ನಾಟಕ ಆರೋಗ್ಯ ಕುಟುಂಬ ಕಲ್ಯಾಣ ಸಂಸ್ಥೆ, ಬೆಂಗಳೂರು. |
| ೧೭೬ | ನಿರ್ದೇಶಕರು, ಸಂಜಯ ಗಾಂಧಿ ತುರ್ತು ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ |
| ೧೭೭ | ಕಾರ್ಯಾಕಾರಿ ನಿರ್ದೇಶಕರು, ಸುವರ್ಣ ಸುರಕ್ಷ ಟ್ರಸ್ಟ್, ಬೆಂಗಳೂರು. |
| | **ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಇಲಾಖೆ** |
| ೧೭೮ | ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬೆಂಗಳೂರು. |
| ೧೭೯ | ಕರ್ನಾಟಕ ಆಹಾರ ನಾಗರೀಕ ಸರಬರಾಜು ನಿಗಮ ನಿಯಮಿತ |
| | **ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ** |
| ೧೮೦ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು. |
| ೧೮೧ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ, ಬೆಂಗಳೂರು. |
| | **ನಗರಾಭಿವೃದ್ಧಿ ಇಲಾಖೆ** |
| ೧೮೨ | ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಹಾನಗರ ಆಯುಕ್ತರು ಕಛೇರಿ, ಬೆಂಗಳೂರು |
| ೧೮೩ | ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ, ಬೆಂಗಳೂರು. |
| ೧೮೪ | ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು. |
| ೧೮೫ | ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ನೈರ್ಮಲ್ಯ ಮಂಡಳಿ,ಬೆಂಗಳೂರು. |

| | |
|---|---|
| ೧೮೬ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು |
| ೧೮೭ | ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು. |
| ೧೮೮ | ವ್ಯವಸ್ಥಾಪಕ ನಿರ್ದೇಶಕರು, ಕೆ.ಯು.ಐ.ಡಿ.ಎಫ್.ಸಿ., ಬೆಂಗಳೂರು. |
| | **ಕನ್ನಡ ಮತ್ತು ಸಂಸ್ಕೃತಿ ಇಲಾಖೆ** |
| ೧೮೯ | ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನ ಸೌಧ, ಬೆಂಗಳೂರು. |
| ೧೯೦ | ಆಯುಕ್ತರು, ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ, ಹೊಸಪೇಟೆ |
| ೧೯೧ | ಡೀನ್, ಚಾಮರಾಜೇಂದ್ರ ದೃಶ್ಯಕಲಾ ಅಕಾಡಮಿ, ಸಯ್ಯಾಜಿರಾವ್ ರಸ್ತೆ, ಮೈಸೂರು |
| ೧೯೨ | ಕಾರ್ಯದರ್ಶಿ, ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ, ಬೆಂಗಳೂರು |
| ೧೯೩ | ಕಾರ್ಯದರ್ಶಿ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು. |
| ೧೯೪ | ವ್ಯವಸ್ಥಾಪಕ ನಿರ್ದೇಶಕರು, ಶ್ರೀ ಕಂಠೀರವ ಸ್ಟುಡಿಯೋ ನಿಗಮ, ಬೆಂಗಳೂರು. |
| | **ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ** |
| ೧೯೫ | ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ |
| ೧೯೬ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ(ಕ-ಸ್ಟೆಪ್ಸ್), ಬೆಂಗಳೂರು. |
| ೧೯೭ | ಸದಸ್ಯ ಕಾರ್ಯದರ್ಶಿ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ,ಬೆಂಗಳೂರು. |
| ೧೯೮ | ಗೌರವ ಕಾರ್ಯದರ್ಶಿ, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿ |
| ೧೯೯ | ಗೌರವ ಕಾರ್ಯದರ್ಶಿ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು. |
| ೨೦೦ | ಸಮಾಲೋಚಕರು, ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ, ಬೆಂಗಳೂರು. |
| | **ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ವಿಭಾಗ** |
| ೨೦೧ | ವ್ಯವಸ್ಥಾಪಕ ನಿರ್ದೇಶಕರು, ಕೆಬಿಟ್ಸ್ |

| | |
|---|---|
| ೨೦೨ | ವ್ಯವಸ್ಥಾಪಕ ನಿರ್ದೇಶಕರು, ಕಿಯೋನಿಕ್ಸ್ |
| ೨೦೩ | ಕ.ರಾ.ದೂ.ಸಂ. ಅನ್ವಯಿತ ಕೇಂದ್ರ |
| | **ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ** |
| ೨೦೪ | ಸದಸ್ಯ ಕಾರ್ಯದರ್ಶಿ, ಕರ್ನಾಟಕ ಮೃಗಾಲಯ ಪ್ರಾಧಿಕಾರ, ಮೈಸೂರು. |
| ೨೦೫ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕೆಗಳ ನಿಗಮ ನಿಯಮಿತ, ಬೆಂಗಳೂರು. |
| ೨೦೬ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ. ಬೆಂಗಳೂರು. |
| ೨೦೭ | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತ. ಬೆಂಗಳೂರು. |
| ೨೦೮ | ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ. ಬೆಂಗಳೂರು. |
| ೨೦೯ | ಸದಸ್ಯ ಕಾರ್ಯದರ್ಶಿ, ಕರ್ನಾಟಕ ಜೀವ ವೈವಿಧ್ಯ ಮಂಡಳಿ, ಬೆಂಗಳೂರು. |
| ೨೧೦ | ಪ್ರಧಾನ ನಿರ್ದೇಶಕರು, ಪಾರಿಸಾರಿಕ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಎಂಪ್ರಿ), ಬೆಂಗಳೂರು. |
| ೨೧೧ | ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕೆರೆ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು. |
| | **ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ** |
| ೨೧೨ | ಹೈದ್ರಾಬಾದ್- ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಕಲಬುರಗಿ |
| ೨೧೩ | ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ, ಶಿವಮೊಗ್ಗ |
| ೨೧೪ | ಬಯಲುಸೀಮೆ ಪ್ರದೇಶ ಅಭಿವೃದ್ಧಿ ಮಂಡಳಿ, ಚಿತ್ರದುರ್ಗ |
| ೨೧೫ | ಕರಾವಳಿ ಪ್ರದೇಶ ಅಭಿವೃದ್ಧಿ ಮಂಡಳಿ, ಮಂಗಳೂರು |
| | **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ** |
| ೨೧೬ | ಒಲಂಪಿಕ್ಸ್ ಪ್ರಾಧಿಕಾರ |
| ೨೧೭ | ಜಯಪ್ರಕಾಶ ನಾರಾಯಣ ಕ್ರೀಡಾ ಪ್ರಾಧಿಕಾರ |
| | **ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ** |
| ೨೧೮ | ಕೆ ರೈಡ್ |
| ೨೧೯ | ಹಾಸನ ಮಂಗಳೂರು ರೈಲು ಅಭಿವೃದ್ಧಿ ನಿಗಮ |




ಉದ್ಯೋಗ ಸೌಧ, ಬೆಂಗಳೂರು




ಪೊಲೀಸ್ ಆಯುಕ್ತರ ಕಚೇರಿ, ಬೆಂಗಳೂರು

* * * * *